# ಹಾಲುಮತೋತ್ತೇಜಕ ಪುರಾಣ

## ಕನ್ನಡವೇ ಸತ್ಯ, ಕನ್ನಡವೇ ನಿತ್ಯ

ವಿದ್ಯೆಯ ಸೃಷ್ಟಿ ಕನ್ನಡ ವಿಶ್ವವಿದ್ಯಾಲಯದ ಒಂದು ಪ್ರಮುಖ ಉದ್ದೇಶ. ವಿಶ್ವದ ಜ್ಞಾನವನ್ನು ಕನ್ನಡಿಗರಿಗೆ ಮುಟ್ಟಿಸುವ ಕನ್ನಡ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸುವ ಮಹತ್ವದ ಹೊಣೆಗಾರಿಕೆ ಕನ್ನಡ ವಿಶ್ವವಿದ್ಯಾಲಯಕ್ಕಿದೆ. ವಿದ್ಯೆಯ ಸೃಷ್ಟಿ ಮತ್ತು ಪ್ರಸರಣ ಎಂದರೆ ಅದು ಕೇವಲ ವಿಶ್ವವಿದ್ಯಾಲಯದಲ್ಲಿರುವ ಅಧ್ಯಾಪಕರಿಂದ ಮಾತ್ರ ಎಂಬ ಹಮ್ಮು ನಮ್ಮದಲ್ಲ. ಇಲ್ಲಿನ ವಿವಿಧ ವಿಭಾಗಗಳ ಒಳಗಿನ ಪ್ರತಿಭಾವಂತರ ಜೊತೆಗೆ ಕರ್ನಾಟಕದ ಎಲ್ಲ ಸಾಂಸ್ಕೃತಿಕ ಕ್ಷೇತ್ರದ ಪ್ರತಿಭಾ ಸಂಪನ್ನತೆಯನ್ನು ಬೆಸೆಯುವ ಕೊಂಡಿಯಂತೆ ಪ್ರತಿಯೊಂದು ವಿಭಾಗವೂ ಕೆಲಸ ಮಾಡುತ್ತದೆ. ಈ ಸುಂದರ ಬೆಸುಗೆ ಹೊಸ ಜ್ಞಾನದ ಸೃಷ್ಟಿಗೆ ಹಾಗೆಯೇ ಅರ್ಥಪೂರ್ಣ ಮೌಲ್ಯಗಳ ಪುನರ್ ಸ್ಥಾಪನೆಗೆ ಕಾರಣವಾಗಿದೆ. ವಿದ್ಯೆಯ ಸೃಷ್ಟಿಗೆ ಪೂರಕವಾದ ಹಲವು ಬಗೆಯ ಜ್ಞಾನವಾಹಿನಿಗಳ ತಿಳುವಳಿಕೆ ವಿಶ್ವವಿದ್ಯಾಲಯದ ಒಳಗೆ ರೂಪುಗೊಳ್ಳುತ್ತಿದೆ. ಕನ್ನಡ ಸಂಶೋಧನೆಯ ವಿಧಿವಿಧನಗಳನ್ನು ಸೃಷ್ಟಿಸುವ ಪ್ರಯತ್ನ ಇಲ್ಲಿ ನಡೆಯುತ್ತಿದೆ. ಇವುಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಅನೇಕ ಕಮ್ಮಟ, ತರಬೇತಿ ಮುಂತಾದಂತೆ ಹತ್ತಾರು ಶಿಬಿರಗಳು ಇಲ್ಲಿ ನಡೆಯುತ್ತಿವೆ. ಈ ಎಲ್ಲ ಕುಲುಮೆಗಳಲ್ಲಿ ಪಕ್ವಗೊಂಡ ಜ್ಞಾನ ಪುಸ್ತಕದ ರೂಪದಲ್ಲಿ ಪ್ರಸಾರಾಂಗದ ಮೂಲಕ ಆಕಾರ ಪಡೆಯುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ಜನಸಾಮಾನ್ಯರು, ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಂಶೋಧಕರನ್ನು ತನ್ನ ಗುರಿಯನ್ನಾಗಿಟ್ಟುಕೊಂಡು ಹಲವು ಬಗೆಯ ಕಾರ್ಯಯೋಜನೆಗಳನ್ನು ಜಾರಿಗೆ ತಂದಿದೆ. ಜನಸಾಮಾನ್ಯರ ತಿಳುವಳಿಗಾಗಿ ನವಸಾಕ್ಷರ ಮಾಲೆ ಮತ್ತು ಮಂಟಪ ಮಾಲೆ ಎಂಬ ಪುಸ್ತಕಗಳು, ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕಗಳು, ಸಂಶೋಧಕರಿಗೆ ಹಲವು ಬಗೆಯ ವಿಶ್ವಕೋಶಗಳು ಮುಂತಾದಂತೆ ವೈವಿಧ್ಯಮಯ ಜ್ಞಾನ ಸೃಷ್ಟಿ ಇಲ್ಲಿ ನಡೆಯುತ್ತಿದೆ. ಇವೆಲ್ಲವನ್ನೂ ಮೀರಿ ಮತ್ತೊಂದು ಗುರಿ ಕನ್ನಡ ವಿಶ್ವವಿದ್ಯಾಲಯಕ್ಕೆ ಇದೆ. ಅದೇನೆಂದರೆ ಕನ್ನಡ ಸಂಸ್ಕೃತಿಯ ಅಮೂಲಾಗ್ರ ಶೋಧ ನಡೆಸುವ ಮೂಲಕ ದೇಸಿ ಚಿಂತನಾಕ್ರಮವೊಂದನ್ನು ರೂಪಿಸುವುದು. ಭಾರತೀಯ ಸಂಸ್ಕೃತಿ ಎಂದು ಏಕಮುಖವಾಗಿ ಸಾರ್ವತ್ರೀಕರಿಸುವ ಭ್ರಮೆಯಿಂದ ಹೊರಬಂದು ಪ್ರತಿಯೊಂದು ನೆಲಕ್ಕೂ ತನ್ನದೇ ಆದ ವೈಶಿಷ್ಟ್ಯತೆ ಇದೆಯೆಂಬ ವಾಸ್ತವವಾದ ನೆಲೆಯಲ್ಲಿ ಕನ್ನಡ ನೆಲದ ಗುಣ ಹುಡುಕುವ ಕಾರ್ಯದಲ್ಲಿ ನಾವು ಈಗ ಮಗ್ನರಾಗಿದ್ದೇವೆ. ಆ ಮೂಲಕ ನಿರ್ಲಕ್ಷಿಸಲ್ಪಟ್ಟ ಕ್ಷೇತ್ರಗಳನ್ನು ಪ್ರಧಾನ ನೆಲೆಗೆ ತರುವ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಈ ದೇಶದ ಅಥವಾ ನಾಡಿನ ಅಂಚಿನ ಜನಕ್ಕೆ ಕೂಡ ಒಂದು ಶ್ರೀಮಂತ ಸಂಸ್ಕೃತಿ ಇದೆಯೆಂದು, ಆ ಸಂಸ್ಕೃತಿಗೆ ತನ್ನದೇ ವಿಶಿಷ್ಟ ಪರಂಪರೆಯಿಂದೆಯೆಂದು, ಆ ಪರಂಪರೆಯೇ ನಾಡಿನ ವಿವೇಕ ಮತ್ತು ಜ್ಞಾನವನ್ನು ಕಾಪಾಡಿಕೊಂಡು ಬಂದಿದೆಯೆಂದು ಸ್ಪಷ್ಟ ಮಾತುಗಳಿಂದ ನಿರ್ವಚಿಸಬೇಕಾದ ಕಾಲವೊಂದು ಈಗ ಬಂದಿದೆ. ಆ ಮೂಲಕ ಕನ್ನಡ ನಾಡಿನ ಸರ್ವತೋಮುಖ ಬೆಳವಣಿಗೆಯನ್ನು ಯಾವ ಯಾವ ದಿಸೆಯಲ್ಲಿ ಸಾಧಿಸಬೇಕೆಂಬ ದೂರದೃಷ್ಟಿ ಮತ್ತು ಆಶಾವಾದ ಕೂಡ ನಮ್ಮ ಅಧ್ಯಯಗಳ ಹಿಂದೆ ಇದೆ.

ಒಂದು ಕಡೆಯಿಂದ ವಸಾಹತಿಶಾಹಿ ಧೋರಣೆಯ ಪಾಶ್ಚಾತ್ಯ ಪ್ರಭಾವ, ಮತ್ತೊಂದು ಕಡೆ ವೈದಿಕಶಾಹಿಗಳ ವೈಭವೀಕರಣ ಇವುಗಳಿಂದ ಆವರಿಸಿದ ವಿಸ್ಮೃತಿಯಿಂದ ಬಿಡುಗಡೆಗೊಳ್ಳುವ ಮೂಲಕ ಕನ್ನಡ ಸಂಸ್ಕೃತಿಯೊಂದನ್ನು ಪ್ರತಿಷ್ಠಾಪಿಸುವ ಕೆಲಸ ಆಹಬೇಕಾಗಿದೆ. ಇಂದಿನ ಜಾಗತೀಕರಣ, ಕೋಮುವಾದ ಹಿಂಸೆಯ ವಾತಾವರಣದಲ್ಲಿ ನಲುಗುತ್ತಿರುವ ಮಾನವೀಯ ಮೌಲ್ಯಗಳನ್ನು ಹುಡುಕುವ ಮತ್ತು ಹುಟ್ಟು ಹಾಕುವ ಬರಹಗಳನ್ನು ಪ್ರೋತ್ಸಾಹಿಸುವ ಕೆಲಸವೂ ಆಗಬೇಕಾಗಿದೆ. ಒಟ್ಟಾರೆಯಾಗಿ ಆಲೋಚನೆಗಳ ಮತ್ತು ಸಿದ್ಧಾಂತಗಳ ಮೌಲ್ಯೀಕರಣದ ಅಗತ್ಯವನ್ನು ಮನಗಂಡಿರುವ ಕನ್ನಡ ವಿಶ್ವವಿದ್ಯಾಲಯ ದೇಸಿ ಮತ್ತು ಸಾಂಪ್ರದಾಯಿಕ ಮೌಲ್ಯಗಳ ನಡುವೆ ಮುಖಾಮುಖಿಯೊಂದನ್ನು ಹುಟ್ಟು ಹಾಕುವ ಮೂಲಕ ಸತ್ಯದ ಬೆಳಕಿನೆಡೆಗೆ ಕೊಂಡೊಯ್ಯುವ ಕೆಲಸವನ್ನು ಮಾಡುತ್ತಿದೆಯೆಂಬ ಆಶಯ ನಮ್ಮದಾಗಿದೆ.

ಕರ್ನಾಟಕದ ಪ್ರಮುಖ ಜನಸಮುದಾಯಗಳಲ್ಲಿ ಕುರುಬ ಸಮುದಾಯವೂ ಒಂದು. ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಹೊಂದಿರುವ ಈ ಸಮುದಾಯವನ್ನು ಕುರಿತಂತೆ ಮೌಖಿಕ ಮತ್ತು ಲಿಖಿತರೂಪದಲ್ಲಿ ಸಾಹಿತ್ಯ ರಚನೆಗೊಂಡಿದೆ. ಮೌಖಿಕ ರೂಪದಲ್ಲಿ ಯಂತೂ ಹಾಡು-ಕಥೆಗಳು ಅಧಿಕ ಪ್ರಮಾಣದಲ್ಲಿವೆ. ಇತ್ತೀಚೆಗೆ ಪ್ರಕಟವಾದ ಜನಪದ ಹಾಲುಮತ ಮಹಾಕಾವ್ಯ ಇದಕ್ಕೊಂದು ಉತ್ತಮ ನಿದರ್ಶನ. ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣವು ಸಾಂಸ್ಕೃತಿಕ ದೃಷ್ಟಿಯಿಂದ ಗಮನಾರ್ಹ ಕೃತಿಯಾಗಿದೆ. ರೇವಣಸಿದ್ಧ, ಬೀರೇಶ್ವರ, ಆದಿಗೊಂಡ, ಶಿವಪದ್ಮ, ಮಾಳಿಂಗರಾಯ, ವೀರಗೊಲ್ಲಾಳೇಶ್ವರ ಮೊದಲಾದ ಸಾಂಸ್ಕೃತಿಕ ನಾಯಕರ ಚರಿತ್ರೆಯನ್ನು ವಿವರವಾಗಿ ಚಿತ್ರಿಸುತ್ತದೆ. ಅಲ್ಲದೇ ಈ ಸಮುದಾಯದ ಕುಲ-ಕಸಬುಗಳಾದ ಕುರಿಸಾಕಣೆ, ಕಂಬಳಿ ತಯಾರಿಕೆ, ಕೃಷಿ ಕಾಯಕವನ್ನು ಸ್ಥೂಲವಾಗಿ ತಿಳಿಸುತ್ತದೆ. ಇಂತಹ ವಿಶಿಷ್ಟ ಕೃತಿಯನ್ನು ಗ್ರಂಥಸಂಪಾದನಾಶಾಸ್ತ್ರದ ಹಿನ್ನಲೆಯಲ್ಲಿ ವ್ಯವಸ್ಥಿತವಾಗಿ ಪರಿಷ್ಕರಿಸುವ ಹಾಲುಮತ ಅಧ್ಯಯನ ಪೀಠದ ಸಂಚಾಲಕ ಹಾಗೂ ಪ್ರಾಧ್ಯಾಪಕರಾದ ಡಾ. ಎಫ್.ಟಿ. ಹಳ್ಳಿಕೇರಿ ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಅಭಿನಂದನೆಗಳು ಸಲ್ಲುತ್ತವೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ಅಭಾರಿಯಾಗಿದ್ದೇನೆ.

**ಡಾ. ಹಿ.ಚಿ. ಬೋರಲಿಂಗಯ್ಯ**
ಕುಲಪತಿ

## ಸಂಚಾಲಕರ ಮಾತು

ಕರ್ನಾಟಕದ ಪ್ರಮುಖ ಜನಸಮುದಾಯಗಳಲ್ಲಿ ಹಾಲುಮತ ಸಮುದಾಯವೂ ಒಂದು. ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಹುದೊಡ್ಡ ಪರಂಪರೆಯನ್ನು ಹೊಂದಿದ ಇವರನ್ನು ಸಾಮಾನ್ಯವಾಗಿ ಕುರುಬರೆಂದು ಕರೆಯಲಾಗುತ್ತದೆ. ಪ್ರಾಚೀನ ಕಾಲದಿಂದಲೂ ಪಶುಪಾಲನೆ, ಕುರಿಸಾಗಣೆ, ಕಂಬಳಿ ತಯಾರಿಕೆ ಹಾಗೂ ಕೃಷಿಯನ್ನು ಪ್ರಧಾನ ಉದ್ಯೋಗವನ್ನಾಗಿ ಮಾಡಿಕೊಂಡು ಬಂದಿದ್ದಾರೆ. ತಮ್ಮ ಸಂಸ್ಕೃತಿಯ ಮೂಲ ಸೊಗಡನ್ನು, ಪರಂಪರಾಗತ ಜೀವನ ಪದ್ಧತಿಯನ್ನು ಯಥಾವತ್ತಾಗಿ ಉಳಿಸಿಕೊಂಡು ಬಮದ ಜನ ಸಮುದಾಯಗಳಲ್ಲಿ ಕುರುಬರು ಪ್ರಮುಖರೆನಿಸುತ್ತಾರೆ. ಇಂದಿಗೂ ನಡೆಯುವ ಹಬ್ಬಗಳು, ಆಚರಣೆಗಳು, ಉತ್ಸವಗಳು, ನಂಬಿಕೆಗಳು ಇದಕ್ಕೆ ನಿದರ್ಶನವಾಘಿವೆ. ಈ ಜನಸಮುದಾಯವೇ ದಕ್ಷಿಣ ಭಾರತದ ಮೂಲನಿವಾಸಿಗಳೆಂದು ಓಪರ್ಟ, ಥರ್ಸ್ಟನ್, ಸಾಂತ್ಯೆಮರ, ಶಂಬಾ ಜೋಷಿ, ಚಿಂತಾಮಣಿ ಢೇರೆಯವರಂಥ ಹಲವರು ವಿದ್ವಾಂಸರ ಅಭಿಪ್ರಾಯವಾಗಿದೆ.

ಕೊಲ್ಲಿಪಾಕಿಯ ರೇವಣಸಿದ್ಧೇಶ್ವರ, ಸೊನ್ನಲಾಪುರದ ಸಿದ್ಧರಾಮೇಶ್ವರ, ಅರಕೇರಿಯ ಅಮೋಘಸಿದ್ಧೇಶ್ವರ, ಶಿವಶರಣ ವೀರಗೊಲ್ಲಾಳ, ಹುಲಜಂತಿ ಮಾಳಿಂಗರಾಯ ಮುಂತಾದವರು ಹಾಲುಮತ ಸಮುದಾಯದ ಅರಾಧ್ಯ ದೈವವಾಗಿದ್ದಾರೆ. ಬೀರಲಿಂಗೇಶ್ವರ, ಮೈಲಾರಲಿಂಗೇಶ್ವರ, ಮಾಳಿಂಗೇಶ್ವರ, ಇಟ್ಟಪ್ಪ ಮೊದಲಾದವರು ಈ ಸಮುದಾಯದ ಸಾಂಸ್ಕೃತಿಕ ವೀರರಾಗಿದ್ದಾರೆ. ಕರ್ನಾಟಕದಾದ್ಯಂತ ಇಂಥ ಅನೇಕ ಮಹಾನುಭಾವರ, ವೀರನಾಯಕರ ಹೆಸರಿನಲ್ಲಿ ಮಠಮಾನ್ಯಗಳು ಗುಡಿಗುಂಡಾರಗಳಿವೆ. ನಿರ್ದಿಷ್ಟ ಅವಧಿಯಲ್ಲಿ ಜಾತ್ರೆ ಉತ್ಸವಗಳು ಇಲ್ಲಿ ನೆರವೇರುತ್ತವೆ. ಇಂಥ ವಿಶಿಷ್ಟ ಪರಂಪರೆಯನ್ನು ಹೊಂದಿದ ಈ ಜನಸಮುದಾಯದ ಸಾಹಿತ್ಯ ಸಂಸ್ಕೃತಿ, ಕಲೆಗಳ ಸರ್ವೇಕ್ಷಣೆ, ಸಂಗ್ರಹ ಸಂಶೋಧನೆ, ಅಧ್ಯಯನ ಮತ್ತು ಪ್ರಕಟಣೆಯ ಉದ್ದೇಶ ದಿಂದ ಕನ್ನಡ ವಿಶ್ವವಿದ್ಯಾಲಯದಲ್ಲಿ ಹಾಲುಮತ ಅಧ್ಯಯನ ಪೀಠವು ಸ್ಥಾಪನೆಗೊಂಡಿದೆ.

**ಪೀಠದ ಉದ್ದೇಶಗಳು**

**೧. ಸಂಶೋಧನೆ**

೧. ಹಾಲುಮತ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದಂತೆ ಶಾಸನಗಳು, ಕಾವ್ಯ ಪುರಾಣಗಳು, ಮೌಖಿಕ ಪರಂಪರೆಯನ್ನು ಕಥೆ ಹಾಡುಗಳು, ನಂಬಿಕೆಗಳು ಹೀಗೆ ಅಧಿಕ ಪ್ರಮಾಣದ ಆಕರ ಸಾಮಗ್ರಿಗಳಿವೆ. ಜನಪದ ಹಾಲುಮತ ಮಹಾಕಾವ್ಯ, ತಗರ ಪವಾಡ, ಸಿದ್ಧಮಂಕ ಚರಿತೆ, ಭೀಮಕವಿಯ ಹಾಲುಮತೋತ್ತೇಜಕ ಪುರಾಣ, ರೇವಣಸಿದ್ಧೇಶ್ವರ ಪುರಾಣ, ಗೊಲ್ಲಾಳಯ್ಯನ ಪುರಾಣ, ಮಾಳಿಂಗರಾಯನ ಕಾವ್ಯ, ಮೈಲಾರಲೀಂಗನ ಕಾವ್ಯ, ಅಮೋಘ ಸಿದ್ಧೇಶ್ವರ ಪುರಾಣ ಇಂಥ ಹತ್ತಾರು ಕಾವ್ಯ ಪುರಾಣಗಳನ್ನು ತೌಲನಿಕವಾಗಿ ಅಧ್ಯಯನಕ್ಕೊಳಪಡಿಸುವುದು.

೨. ಹಾಲುಮತ ಗುರುಪರಂಪರರಯಲ್ಲಿ ಬರುವ ರೇವಣಸಿದ್ಧೇಶ್ವರಮ ಅಮೋಘಸಿದ್ಧೇಶ್ವರ, ಸಿದ್ಧರಾಮೇಶ್ವರ, ಸಿದ್ಧಮಂಕ, ಶಾಂತಮುತ್ತುಯ್ಯ, ಬೀರಲಿಂಗೇಶ್ವರ, ಮೈಲಾರಲಿಂಗೇಶ್ವರ, ಮಾಳಿಂಗೇಶ್ವರರ ಹೆಸರಿನಲ್ಲಿ ಅನೇಕ ದೇವಾಲಯ, ಮಠಮಂದಿರ ಹಾಗೂ ಶಿಲ್ಪಗಳಿವೆ. ಕರ್ನಾಟಕದಲ್ಲಿಯೇ ಅಂದಾಜು ಒಂದು ಸಾವಿರದಷ್ಟು ದೇವಾಲಯ, ಮಠ ಮಂದಿರಗಳಿವೆ. ವ್ಯಾಪಕ ಕ್ಷೇತ್ರಕಾರ್ಯದ ಮೂಲಕ ಸರ್ವೇಕ್ಷಣೆ ಕೈಕೊಳ್ಳುವುದು.

೩. ಮೌಖಿಕ ಪರಂಪರೆಯಲ್ಲಿ ಈ ಸಮುದಾಯದ ಸಂಸ್ಕೃತಿ ಕಲೆ ಕುರಿತು ಹಾಡು ಕಥೆಗಳಿವೆ. ಅವುಗಳನ್ನು ದಾಖಲಿಸಿ ಪ್ರಕಟಿಸುವುದು. ಕುರುಬರ ವಿಶಿಷ್ಟ ಕಲೆ ಡೊಳ್ಳು. ಈ ಕಲೆಯ ಪ್ರದರ್ಶನ ಸಂದರ್ಭದಲ್ಲಿ ಹಾಡುವ ಹಾಡುಗಳಿಗೆ ಡೊಳ್ಳಿನ ಹಾಡುಗಳೆಂದು ಕರೆಯಲಾಗುತ್ತಿದೆ. ಹಾಗೆಯೇ ರ್‍ವಾಣಗಳು, ಚೌಡಿಕೆ ಹಾಡುಗಳು, ಕರಡಿ ಮಜಲಿನ ಹಾಡುಗಳು ಹೀಗೆ ಅನೇಕ ರೀತಿಯ ಹಾಡುಗಳನ್ನು ಸಂಗ್ರಹಿಸುವುದು. ಉದಾಹರಣೆಗೆ ಡೊಳ್ಳಿನ ಹಾಡುಗಳನ್ನೇ ಗಮನಿಸಿ ಹೇಳುವುದಾದರೆ ಕರ್ನಾಟಕದಾದ್ಯಂತ ಸರ್ವೇಕ್ಷಣೆ ನಡೆಸಿದರೆ ಅಂದಾಜು ಎರಡು ಸಾವಿರ ಹಾಡುಗಳು ಲಭ್ಯವಾಗುತ್ತವೆ, ಅವುಗಳನ್ನು ಸಂಪುಟಗಳ ರೂಪದಲ್ಲಿ ಪ್ರಕಟಿಸುವುದು.

೪. ಹಬ್ಬ ಹರಿದಿನ, ಉತ್ಸವ, ಜಾತ್ರೆಗಳಲ್ಲಿ ಈ ಸಮುದಾಯಕ್ಕೆ ಸಂಬಂಧಿಸಿದಂತೆ ಕೆಲವು ವಿಶಿಷ್ಟ ಆಚರಣೆ ಮತ್ತು ಸಂಪ್ರದಾಯಗಳಿವೆ. ಅವೆಲ್ಲವುಗಳು ದಾಖಲೀಕರಣಗೊಳ್ಳಬೇಕಿದೆ. ಹಾಗೆಯೇ ಕರ್ನಾಟಕ ಚಿಕ್ಕನಾಯಕನಹಳ್ಳಿ, ಸರೂರು, ಬಂಕಾಪುರ, ಶ್ರೀರಾಮಪುರ, ತಾಳಿಕಟ್ಟೆ, ಅರಕೇರಿ, ಮೈಲಾರ, ಚಿಂಚಲಿ, ಕೊಣ್ಣೂರು, ದೇವರಗುಡ್ಡ, ಮಹಾರಾಷ್ಟ್ರದ ಪಟ್ಟಣ ಕಡೋಲಿ, ಕೊಲ್ಲಾಪುರ, ಸೊಲ್ಲಾಪುರ ಹುಲಜಂತಿ, ಮೊದಲಾದವು ಈ ಸಮುದಾಯದ ಪ್ರಮುಖ ಧಾರ್ಮಿಕ ಕೇಂದ್ರಗಳಾಗಿವೆ. ಈ ಕೇಂದ್ರಗಳ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಕುರಿತು ಅಧ್ಯಯನ ನಡೆಸುವುದು.

೫. ನಾಡು ನುಡಿ ಸಮಾಜಕ್ಕಾಗಿ ಹಾಲುಮತ ಸಮುದಾಯದ ಅನೇಕ ಗಣ್ಯಮಾನ್ಯರು, ಮಹನೀಯರು, ಧಾರ್ಮಿಕ ವ್ಯಕ್ತಿಗಳು ದುಡಿದಿದ್ದಾರೆ. ಅವರ ಜೀವನ ಚರಿತ್ರೆ ಮತ್ತು ಸಾಧನೆಗಳನ್ನು ಕುರಿತು ಅಧ್ಯಯನ ಮಾಡಿ ಪುಸ್ತಕರೂಪದಲ್ಲಿ ಪ್ರಕಟಿಸುವುದು.

೬. ಹಾಲುಮತಕ್ಕೆ ಸಂಬಂಧಿಸಿದಂತೆ ಕೆಲವು ಪಾರಿಭಾಷಿಕ ಪದಗಳು ಪ್ರಾಚೀನ ಕಾಲದಿಂದಲೂ ಬಳಕೆಗೊಳ್ಳುತ್ತ ಬಂದಿವೆ. ಅವೆಲ್ಲಗಳನ್ನು ಕ್ರೋಢಿಕರಿಸಿ ಹಾಲುಮತ ಪದಕೋಶವನ್ನು ಸಿದ್ಧಪಡಿಸುವುದು. ಉದಾ. ಕರಿಯ ಕಂತೆ, ಭಂಡಾರಿ, ಕೋಲಕಾಕರು, ಹರಿವಾಣದವರು, ಕಟ್ಟೆಮನೆ, ಒಡೆಯರು, ಕಾಲಿಲ್ಲದ ಅಯ್ನೋರು, ಇತ್ಯಾದಿ.

೮. ಹಾಲುಮತ ವಿಶ್ವಕೋಶಗಳನ್ನು ಸಾಹಿತ್ಯ, ಕಲೆ, ಧರ್ಮ, ಸಮಾಜ, ಶಿಲ್ಪ ಇತ್ಯಾದಿ ವಿಷಯಾನುಸಾರ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು.

೯. ಹಾಲುಮತಕ್ಕೆ ಸಂಬಂಧಿಸಿದ ಪ್ರಾಚೀನ ಹಸ್ತಪ್ರತಿ, ಶಾಸನ, ಶಿಲ್ಪ, ಕಲೆ, ಜಾನಪದಗಳಿಗೆ ಸಂಬಂಧಿಸಿದ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸುವುದು. ಆ ಮೂಲಕ ಅವುಗಳನ್ನು ಸಂರಕ್ಷಿಸುವುದು.

೧೦. ಹಾಲುಮತ ಸಾಹಿತ್ಯ ಸಂಸ್ಕೃತಿ, ಕಲೆ, ಸಮುದಾಯ ಕುರಿತು ನಾಡಿನ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಸಮ್ಮೇಳನ, ವಿಚಾರ ಸಂಕಿರಣ ಹಾಗೂ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸುವುದು.

**೨. ದಾಖಲೀಕರಣ ಮತ್ತು ವಿಶ್ಲೇಷಣೆ**

ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದ ಸಂಪ್ರದಾಯ, ಆಚರಣೆ, ಜಾತ್ರೆ ಉತ್ಸವಗಳನ್ನು ಆಡಿಯೊ ವಿಡಿಯೊ ಮೂಲಕ ನೇರವಾಗಿ ಚಿತ್ರೀಕರಿಸಿ ಅಧ್ಯಯನಕ್ಕೆ ಅನುಕೂಲ ಮಾಡಿ ಕೊಡುವುದು.

**೩. ಪ್ರಕಟಣೆ**

ಹಾಲುಮತ ಸಾಹಿತ್ಯ, ಸಂಸ್ಕೃತಿ, ಕಲೆ, ಜಾನಪದ, ಆಚರಣೆ, ಸಂಪ್ರದಾಯಗಳನ್ನು ಅಧ್ಯಯನ ಮಾಡಿ ಅವುಗಳ ಫಲಿತಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು. ಹಾಗೆಯೇ ವಿಚಾರ ಸಂಕಿರಣ, ವಿಶೇಷ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು. ಇದಿಷ್ಟು ಹಾಲುಮತ ಅಧ್ಯಯನ ಪೀಠದ ಪ್ರಮುಖ ಉದ್ದೇಶಗಳು.

ಹೀಗೆ ಹಾಲುಮತ ಸಂಸ್ಕೃತಿಯ ಸಂಶೋಧನೆ, ದಾಖಲೀಕರಣ, ವಿಶ್ಲೇಷಣೆ ಮತ್ತು ಪ್ರಕಟಣೆಯನ್ನು ಉದ್ದೇಶವಾಗಿಟ್ಟುಕೊಂಡು ಸ್ಥಾಪಿತವಾದ ಹಾಲುಮತ ಅಧ್ಯಯನ ಪೀಠದಿಂದ ಪ್ರಸಕ್ತ ಶೈಕ್ಷಣಿಕ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಅವುಗಳಲ್ಲಿ ಹಾಲುಮತ ಸಂಸ್ಕೃತಿ ಸಮ್ಮೇಳನವನ್ನು ಏರ್ಪಡಿಸುವುದು, ಡೊಳ್ಳಿನ ಹಾಡುಗಳನ್ನು ಸಂಗ್ರಹಿಸುವುದು. ಹಾಲುಮತ ಕಾವ್ಯ ಪುರಾಣಗಳನ್ನು ಪರಿಷ್ಕರಿಸುವುದು. ಈ ಹಿನ್ನಲೆಯಲ್ಲಿ ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣವನ್ನು ಪರಿಷ್ಕರಿಸಿ ಈಗ ಪ್ರಕಟಿಸಲಾಗುತ್ತಿದೆ. ಇದು ಹಾಲುಮತ ಅಧ್ಯಯನ ಮಾಲೆಯ ಮೊದಲನೆಯ ಪ್ರಕಟನೆಯಾಗಿದೆ.

ಈ ಕೃತಿಯನ್ನು ಪರಿಶೀಲಿಸಿ ಪ್ರಕಟಣೆಗೆ ಅನುಮತಿ ನೀಡಿದ ಹಿಂದಿನ ಕುಲಪತಿಗಳಾದ ಡಾ. ಕೆ.ವಿ. ನಾರಾಯಣ, ಇಂದಿನ ಕುಲಪತಿಗಳಾದ ಡಾ. ಹಿ.ಚಿ. ಬೋರಲಿಂಗಯ್ಯ, ಕುಲಸಚಿವರಾದ ಶ್ರೀ ವಿ. ಶಂಕರ್, ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಮತ್ತು ಹಸ್ತಪ್ರತಿಯನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಪ್ರಕಟಣೆಗೆ ಶಿಫಾರಸ್ಸು ಮಾಡಿದ ಸಲಹಾ ಸಮಿತಿಯ ಸದಸ್ಯರಿಗೆ ನಾನು ಕೃತಜ್ಞನಾಗಿದ್ದೇನೆ.

ಹಾಲುಮತೋತ್ತೇಜಕ ಪುರಾಣವನ್ನು ಕಲ್ಲಚ್ಚಿನ ಪ್ರತಿಯಿಂದ ವ್ಯವಸ್ಥಿತವಾಗಿ ನಕಲು ಪ್ರತಿ ಮಾಡಿಕೊಂಡು ಸಂರಕ್ಷಣೆ ಮಾಡಿಕೊಂಡು ಬಂದವರು ಬಳ್ಳಾರಿ ಜಿಲ್ಲೆಯ ಸಂಜೀವ ರಾಯನಕೋಟೆ ಗ್ರಾಮದ ಶ್ರೀ ಕೆ. ಸಣ್ಣತಿಮ್ಮಪ್ಪನವರು. ಈ ಪ್ರತಿಯನ್ನು ದೊರಕಿಸಿ ಕೊಡುವಲ್ಲಿ ನನಗೆ ನೆರವಾದವರು ಹೊಸಪೇಟೆಯ ಹಾಲುಮತ ಸಾಂಸ್ಕೃತಿಕ ವೇದಿಕೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ವೈ.ಎಚ್. ಹಳ್ಳಿಕೇರಿಯವರು. ಇವರೀರ್ವರ ಸಾಹಿತ್ಯ ಸಂಸ್ಕೃತಿ ಪ್ರೀತಿಗೆ ಧನ್ಯವಾದಗಳು.

ಪುಟವಿನ್ಯಾಸಗೊಳಿಸಿದ ಪ್ರಸಾರಾಂಗದ ಸಹಾಯಕ ನಿರ್ದೇಶಕ ಶ್ರೀ ಬಿ. ಸುಜ್ಞಾನಮೂರ್ತಿ ಮತ್ತು ಅಂದವಾದ ಮುಖಪುಟ ರಚಿಸಿದ ಕಲಾವಿದ ಕೆ.ಕೆ. ಮಕಾಳಿ, ಪದ್ಯಗಳ ಅಕಾರಾದಿಯನ್ನು ಸಿದ್ಧಪಡಿಸುವಲ್ಲಿ ನೆರವು ನೀಡಿದ ಸೊಬಟಿ ಚಂದ್ರಪ್ಪ ಮತ್ತು ಸತ್ಯನಾರಾಯಣ ಅವರ ಸಹಕಾರವನ್ನು ಪ್ರೀತಿಯಿಂದ ನೆನೆಯುತ್ತೇನೆ.

# ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣಉಪೋದ್ಘಾತ

ಆರ್ಯರೇ, ಶ್ರೀ ರೇವಣಸಿದ್ಧೇಶ್ವರ ಸಾಂಪ್ರದಾಯಕರಾದ ಗೊಬ್ಬೂರು ಗುರುವಿನ ಬಸಮ್ಮನವರು ಧನಸಹಾಯಗೈದು ಪ್ರೋತ್ಸಾಹಿಸಿದರಿಂದ ನಾನು ಸಮುದ್ರದಲ್ಲಿರ್ಪ ಮೌಕ್ತಿಗಳನ್ನು ತಂದು ದಾರದಾಧಾರದಿಂದ ಹಾರವನ್ನುಗೈದಂತೆ ಪಂಡತಿರ ಸನ್ನಿಧಿಗೆ ಪೋಗಿ ಪೂರ್ವಕವಿಗಳಿಂದುಕ್ತಮಾದ ಉದ್ಗ್ರಂಥಗಳಲ್ಲಿರ್ಪ ಆಧಾರಗಳಿಂದಲೂ, ಕವಿಕುಲತಿಲಕರಾದ ಬೊಮ್ಮ ಕವಿಗಳಿಂದುಕ್ತಮಾದ ಶ್ರೀ ರೇವಣಸಿದ್ಧೇಶ್ವರನ ಕಥಾಶಕ್ತಿಯಿಂದಲೂ, ಶ್ರೀಗುರು ಶರಭೇಶ್ವರನ ಪ್ರಸಾದದಿಂದಲೂ ಆ ಬೊಮ್ಮಕವಿಗಳು ರಚಿಸಿದ ಲೀಲೆಗಳನ್ನು ಸಂಕ್ಷಿಪ್ತವಾಗಿ ವರ್ಣಿಸಿ, ಶ್ರೀ ಸಿದ್ಧೇಶ್ವರನು ಹಾಲ್ಮತದಲ್ಲಿ ತೋರಿದ ಸಲ್ಲೀಲೆಗಳನ್ನು ವಿಸ್ತಾರವಾಗಿ ಬಿಡಿಗನ್ನಡ ನುಡಿಗಳಿಂದಲೂ, ಸುಲಭ ಶೈಲಿಯಿಂದಲೂ ಸರ್ವರಿಗೂ ಗೋಚರವಾಗುವಂತೇ ಲೋಕೋಪಕಾರಕ್ಕೂ, ಮತೋದ್ಧಾರಕ್ಕೂ ವಿಸ್ತಾರವಾಗಿ ಹೇಳಿ ೯ ಅಧ್ಯಾಯವಾಗಿ ಅಲ್ಪಮತಿಗೆ ತೋಚಿದಷ್ಟು ರಚಿಸಿರುವೆನು. ಕಬ್ಬು ವಕ್ರವಿದ್ದಾಗ್ಯೂ ಅದರಲ್ಲಿರುವ ಸವಿರಸವನ್ನು ಪಾನಮಾಡಿ ಆನಂದಪಡುವ ಆಪೇಕ್ಷರಂತೆ ಈ ಕವಿತ್ವವು ಪದ ಬಂಧ ಯತಿ ಪ್ರಾಸಾದಿಗಳಿಂದ ವಕ್ರಮಾಗಿದ್ದಾಗ್ಯೂ ಅರ್ಥಾಂಶ ರಸವನ್ನು ಸ್ವೀಕರಿಸಿ ಆನಂದ ಪಡುವುದೇ ಸೂಜ್ಞರ ಸನ್ಮಾರ್ಗವು. ಯದ್ಯಾಪಿ ಇದರಲ್ಲಿ ಸ್ಖಾಲಿತ್ಯಗಳಿದ್ದರೂ ಇರಬಹುದು. ಪಂಡಿತರು ಅವುಗಳನ್ನು ತಿದ್ದಿ ತೋರಿದರೆ ೨ನೆಯಾವೃತ್ತಿ ಮುದ್ರಿಸುವಲ್ಲಿ ಸರಿಪಡಿಸಿ ತಮ್ಮ ಆಭಾರಿಯಾಗುವೆನು.

೫೦೦ ವರ್ಷಗಳ ವಳಗಡೆಯಲ್ಲಿ ಬರೆದು ಹಾಕಿದ ತಾಳವಾಲೆ ಲೇಖನಗಳು ದೊರೆತದರಿಂದ ಅವುಗಳನ್ನು ವಿಶದವಾಗಿ ನೋಡಿ ಬಲ್ಲ ಪಂಡಿತರಿಗೆ ತೋರಿಸಿ ಸಪ್ರಮಾಣವಾಗಿರುವವನ್ನೇ ಇದರಲ್ಲಿ ಕೂಡಿಸಲ್ಪಟ್ಟಿರುವೆನು. ಎಷ್ಟೋ ರೂಢಿಯಲ್ಲಿ ನಡೆಯತಕ್ಕ ಆಚಾರಗಳಿಗನುಕೂಲವಾದ ಆಧಾರ ಗ್ರಂಥಗಳು ಸಧ್ಯಕ್ಕೆ ಸಿಗದ ಮಟ್ಟಿಗೆ ಬಿಟ್ಟಿರುವೆನು. ಮುಂದೆ ದೈವಾನುಕೂಲದಿಂದೆ ದೊರೆತೆರೆ ಎರಡನೆಯ ವೇಳೆಯಲ್ಲಿ ಬರೆಯುವೆನು. ಮತಾಚಾರ ಗ್ರಂಥಗಳು ಯಾವ ಮಹನೀಯರಿಗಾದರೂ ದೊರೆಯಲ್ಪಟ್ಟಿದ್ದರೆ ಮತ್ತು ಇದರಲ್ಲಿಲ್ಲದ ಸಂಗತಿಗಳು ಕೂಡಿದ್ದರೆ ನನಗೆ ತಿಳಿಸಿರಿ ಅಥವಾ ಆ ಗ್ರಂಥಗಳನ್ನು ಕಳಿಸಿರಿ. ಅಂದರೆ ಆ ಗ್ರಂಥದ ಕ್ರಯವನ್ನು ಕೂಡಾ ಕಳಿಸಲಿಕ್ಕೆ ಸಿದ್ಧನಾಗಿರುವೆನು.

**ಸ್ವಮತೇಯರಿಗೆ ಸೂಚನೆ**

ಗುರುವಿನ ಬಸಮ್ಮನವರು ಸಹಾಯಕರಾಗದಿದ್ದರೆ ಈ ಪೂರಣ ಪುಟ್ಟುತ್ತಿದ್ದಿಲ್ಲ. ಮತಾಚಾರ ಗೊತ್ತಾಗುತ್ತಿದ್ದಿಲ್ಲ. ಅವರ ಮಹದುಪಕಾರವು ನಮ್ಮ ನಿಮ್ಮಗೂ ಹಗಲಿರುಳು ನೆನಿಸಲರ್ಹವಾಗಿದೆ, ಇದಿತ್ತಿರಲಿ.

ಮತಾಭಿಮಾನಿಗಳೇ, ಸುವಿವೇಕದಿಂದೆ ಸ್ವಲ್ಪ ವಿಚಾರಿಸಿ, ಮತಪುರಾಣವೆಂಬುವದನ್ನು ಕಣ್ಣಿನಿಂದ ನೋಡುವುದೂ, ಕರ್ಣದಿಂದ ಕೇಳುವುದೂ, ಅದತ್ತಿರಲಿ, ಮತಪುರಾಣವೆಂಬುವದನ್ನು ಕಣ್ಣಿನಿಂದ ನೋಡುವುದೂ, ಕರ್ಣದಿಂದ ಕೇಳುವುದೂ, ಅದತ್ತಿರಲಿ, ಸ್ವಪ್ನದಲ್ಲಿಯಾದರೂ ದರ್ಶನವಿದ್ದಿದ್ದಿಲ್ಲವು. ಇದಂತು ಸರ್ವರಿಗೂ ವಿದಿತವಾಗಿರುವ ಮಾತಷ್ಟೇ.

ಈಗ ನಿಮ್ಮ ಸುದೈವದಿಂದ ನೀವು ನೆನಸದೇಯಿದ್ದರೂ, ಅಪೇಕ್ಷೆ ಮಾಡದೇಯಿದ್ದರೂ ತನ್ನಷ್ಟಕ್ಕೆ ತಾನೇ ಮತಪುರಾಣ ತಯಾರಾಗಿರುವುದು. ಸ್ವಲ್ಪ ಖರ್ಚಿಗೆ ಹೇಸಿ ತರಿಸದೆ ಬಿಡಬೇಡಿರಿ.

ಈ ಇಡೀ ಹಿಂದುಸ್ಥಾನದಲ್ಲಿಯೂ ನೋಡಬೇಕಾದರೆ ಇದೆ ಈಗ ಹೊಸದಾಗಿರುವದೆಂದು ಹಾಲ್ಮತೇಯರಿಗೆ ಗೊತ್ತಾದ ಮಾತೇಯಿರುವುದು. ಸಧ್ಯಕ್ಕೆ ೧೦೦೦ ಪ್ರತಿಗಳು ತಯಾರಾಗಿದ್ದರೂ ತ್ವರೆಯಾಗಿ ತರಿಸುವವರಿಗೆ ಸಿಗಬಹುದು. ಹಿಂದುಳಿದ ಮತೇಯರಿಗೆ ದೊರೆಯುವುದು ಪ್ರಾಯಶಃ ದುರ್ಲಭವೇ ತೋರುವುದು.

ಆದುದರಿಂದ ಅವಕಾಶ ಮಾಡದೆ ತರಿಸಿಕೊಂಡು ಆದ್ಯಾಂತ ನೋಡಿದರೂ ಅಥವಾ ಅರ್ಧಾಂಶವನ್ನು ಕೇಳಿದರೂ, ತಸ್ಮಾತ್ ಮನೆಯಲ್ಲಿಟ್ಟು ಪೂಜಿಸಿದರೂ ಯೋಗ್ಯವೇ ಸರಿ. ನೀವು ತರಿಸುವದಲ್ಲದೇ ನಿಮ್ಮ ನಿಮ್ಮ ಆಪ್ತೇಷ್ಟರಿಗೆ ಹೇಳಿ ತರಿಸುವವರಿಗೆ ಸಿಗಬಹುದು. ಹಿಂದುಳಿದ ಮತೇಯರಿಗೆ ದೊರೆಯುವುದು ಪ್ರಾಯಶಃ ದುರ್ಲಭವೇ ತೋರುವುದು. ಆದುದರಿಂದ ಅವಕಾಶ ಮಾಡದೆ ತರಿಸಿಕೊಂಡು ಆದ್ಯಾಂತ ನೋಡಿದರೂ ಅಥವಾ ಅರ್ಧಾಂಶವನ್ನು ಕೇಳಿದರೂ, ತಸ್ಮಾತ್ ಮನೆಯಲ್ಲಿಟ್ಟು ಪೂಜಿಸಿದರೂ ಯೋಗ್ಯವೇ ಸರಿ. ನೀವು ತರಿಸುವದಲ್ಲದೇ ನಿಮ್ಮ ನಿಮ್ಮ ಆಪ್ತೇಷ್ಟರಿಗೆ ಹೇಳಿ ತರಿಸುವಂತೆ ಯತ್ನಿಸಿರಿ. ಇದು ನಿಮ್ಮ ಮನಯೆಲ್ಲಿದ್ದರೆ ಓರ್ವ ಮತವಿಚಾರ ಶಿಕ್ಷಕನು ನಿಮ್ಮಲ್ಲಿದ್ದಂತೆಯಾಗುತ್ತೆ.

**ಪುರಾಣೋತ್ಸವ ಸಮಾರಂಭವು**

ಇದೇ ಪುರಾಣವನ್ನು ಗುರುವಿನ ಬಸಮ್ಮನವರು ಗೊಬ್ಬೂರಲ್ಲಿ ಓದಿಸಿ ೧೦ ಸಾವಿರ ರೂಪಾಯಿ ಖರ್ಚು ಮಾಡಿ ಗಣತೃಪ್ತಿಗೈಸಿದರು. ಮತ್ತು ನನ್ನನ್ನು ಋಣಮುಕ್ತನನ್ನು ಮಾಡಿದರು. ಇದರ ಮೇಲಿಂದ ಅವರು ಸದ್ಗುಣಿಗಳು, ಸುವಿಚಾರಿಗಳೂ ಇರಬಹುದೆಂಬುವುದು ನೀವೇ ತಿಳಿಯಿರಿ. ೧೮೩೮ ಪ್ರಮಾದೀಚನಾಮ ಸಂವತ್ಸರದಲ್ಲಿ ಮತಸಮಾಜ ಕೂಡಿ ರಸ್ತಾಪುರದಲ್ಲಿ ಓದಿಸಿ ಗಣತೃಪ್ತಿಗೈಸಿ ಮೆರೆಸಿದರು. ೧೮೩೮ ರಾಕ್ಷಸನಾಮ ಸಂವತ್ಸರದಲ್ಲಿ ಗುರುವಿನ ಗುರುಸಿದ್ಧಯ್ಯನವರು ತಳ್ಳಹಳ್ಳಿಯಲ್ಲಿ ಓದಿಸಿ ಗಣಾರಾಧನಗೈಸಿ ಮೆರೆಸಿದರು. ೧೮೩೯ ನಳನಾಮ ಸಂವತ್ಸರದಲ್ಲಿ ಗುರುವಿನ ಹೊನ್ನಯ್ಯನವರು, ಭೀಮಯ್ಯನವರು, ರೇವಣಪ್ಪನವರು ಮತ್ತು ಬೀರೇದಾರಗೌಡ ಶರಣಪ್ಪನೇ ಮೊದಲಾದ ಭಕ್ತರ ಸಹಾಯದಿಂದ ಪುರಾಣೋತ್ಸಾಹ ಮಾಡಿದರು. ಇದೇ ಬುದ್ಧಿಯು ಸ್ವಮತಸ್ಥರಲ್ಲಿ ಉಂಟಾಗಲೆಂದು ದೇವರನ್ನು ಕುರಿತು ಕೋರುತ್ತಿರುವೆನು.

ತಮ್ಮ ಕೃಪಾಭಿಲಾಷಿ
**ಭೀಮಕವಿ ರಸ್ತಾಪುರ**

# ಪ್ರಸ್ತಾವನೆ

ಇತ್ತೀಚಿನ ವರ್ಷಗಳಲ್ಲಿ ಹಾಲುಮತ ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಕಾವ್ಯ ಪುರಾಣಗಳು ಪ್ರಕಟಗೊಂಡಿದೆ. ಇವುಗಳಲ್ಲಿ ಜನಪದ ಹಾಲುಮತ ಮಹಾಕಾವ್ಯ (ಸಂ. ವೀರಣ್ಣ ದಂಡೆ, ೨೦೦೦), ತಗರ ಪವಾಡ (ಸಂ. ಎಂ.ಎಂ. ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ, ಎಫ್.ಟಿ. ಹಳ್ಳಿಕೇರಿ, ೨೦೦೪), ಸಿದ್ಧಮಂಕ ಚರಿತೆ (ಸಂ. ಎಂ.ಎಂ. ಕಲಬುರ್ಗಿ, ವೈ.ಸಿ. ಭಾನುಮತಿ, ೨೦೦೪) ಬಹುಮುಖ್ಯವಾಗಿದೆ. ಈಗ ರಸ್ತಾಪುರ ಭೀಮಕವಿಯ 'ಹಾಲುಮತೋತ್ತೇಜಕ ಪುರಾಣ' ಪ್ರಕಟವಾಗುತ್ತಿದೆ. ಹಾಲುಮತ ಸಮುದಾಯದ ಪ್ರಾಚೀನ ಇತಿಹಾಸ, ಸಾಂಸ್ಕೃತಿಕ ನಾಯಕರ ಚರಿತ್ರೆ, ಕುಲಕಸಬು, ಸಂಪ್ರದಾಯ ಆಚರಣೆಗಳನ್ನು ತಿಳದುಕೊಳ್ಳುವಲ್ಲಿ ಇವು ತುಂಬ ಮಹತ್ವದ ಆಕರವೆನಿಸುತ್ತವೆ.

ರೇವಣಸಿದ್ಧೇಶ್ವರ, ಸಿದ್ಧರಾಮೇಶ್ವರ, ಶಾಂತಮುತ್ತಯ್ಯ, ಸಿದ್ಧಮಂಕ, ಆದಿಗೊಂಡ, ಶಿವಪದ್ಮ, ಬೀರೇಶ್ವರ, ವೀರ ಗೊಲ್ಲಾಳೇಶ್ವರ, ಮಾಳಿಂಗರಾಯರಂಥ ಅನೇಕ ಹಾಲುಮತ ಸಾಂಸ್ಕೃತಿಕ ನಾಯಕರ ಇತಿವೃತ್ತ, ಅವರು ಸಮುದಾಯದ ಏಳಿಗೆಗಾಗಿ ಹೋರಾಡಿದ ಸಂದರ್ಭಗಳನ್ನು ಇಂಥ ಕಾವ್ಯ ಪುರಾಣಗಳು ಚೆನ್ನಾಗಿ ಚಿತ್ರಿಸಿವೆ. ಮೌಖಿಕರೂಪದಲ್ಲಿದ್ದ ಕುರುಬರ ಚರಿತ್ರೆಯನ್ನು ಜನಪದ ಹಾಲುಮತ ಮಹಾಕಾವ್ಯವು ಸುದೀರ್ಘವಾಗಿ ಹೇಳುತ್ತದೆ. ಮಧ್ಯಕಾಲೀನ ಕನ್ನಡದ ಸಂದರ್ಭದಲ್ಲಿ ರಚನೆಗೊಂಡ ತಗರ ಪವಾಡ ಮತ್ತು ಸಿದ್ಧಮಂಕ ಚರಿತೆಗಳು ಕುರುಬರು ಕಲ್ಯಾಣದಲ್ಲಿ ಸತ್ತಕುರಿಯನ್ನು ಹಾಲಿನ ಕಂಬಿಯ ಮೇಲೆ ಹೊತ್ತು ತಂದ ವಿಷಯವನ್ನಾಧರಿಸಿದ ಕೃತಿಗಳಾಗಿವೆ. ಇವುಗಳ ಮುಂದುವರಿಕೆಯೆನ್ನುವಂತೆ ಕಳೆದ ಶತಮಾನದಲ್ಲಿ ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರ ಹಾಲುಮತದ ಪುರಾಣವು (೧೯೧೦), ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ (೧೯೧೭) ಮತ್ತು ಪಂಡಿತ ಚನ್ನಬಸವ ಕವಿಯ ಹಾಲುಮತದ ಪುರಾಣವು (೧೯೫೯) ಎಂಬ ಕೃತಿಗಳು ರಚನೆಗೊಂಡಿವೆ.

"ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪುರಾಣ ವಿಪುಲ, ಚರಿತ್ರೆ ವಿರಳ. ಈ ಚರಿತ್ರೆ ವಲಯದಲ್ಲಿಯೇ ಪುರಾಣದ ಚರಿತ್ರೀಕರಣ, ಚರಿತ್ರೆಯ ಪುರಾಣೀಕರಣ ಎಂಬ ಇನ್ನೆರಡು ಪ್ರಕಾರಗಳು ನಮ್ಮಲ್ಲಿ ಹುಟ್ಟಿಕೊಂಡಿವೆ." (ತಗರ ಪವಾಡ ಪ್ರಸ್ತಾವನೆ ಪುಟ. ೩) ಪ್ರಸ್ತುತ" "ಹಾಲುಮತೋತ್ತೇಜಕ ಪುರಾಣ""ವು ಚರಿತ್ರೆಯ ಪುರಾಣೀಕರಣ ವರ್ಗಕ್ಕೆ ಸೇರುವ ಕೃತಿಯಾಗಿದೆ.

ಈ ಕೃತಿಯ ನಾಯಕ ರೇವಣಸಿದ್ಧೇಶ್ವರ. ಈತನ ಸಮ್ಮುಖದಲ್ಲಿಯೇ ಎಲ್ಲ ಘಟನೆಗಳು ಜರುಗುತ್ತವೆ. ಈತನ ಸುತ್ತ ಶಾಂತಮುತ್ತಯ್ಯ, ಆದಿಗೊಂಡ, ಶಿವಪದ್ಮ, ಬೀರೇಶ್ವರ, ವೀರಗೊಲ್ಲಾಳೇಶ್ವರ, ಮಾಳಿಂಗರಾಯ ಮತ್ತವರ ಪರಿವಾರದವರ ಚರಿತ್ರೆ ರೂಪುಗೊಂಡಿದೆ. ಹೀಗಾಗಿ ಪರಂಪರಾನುಗತವಾಗಿ ಚಿತ್ರಿತಗೊಂಡಿರುವ ಈ ನಾಯಕರ ಚರಿತ್ರೆಯನ್ನು ಈ ಕೃತಿಯಲ್ಲಿ ಕಾಣಬಹುದು.

**೧. ಕವಿಯ ಇತಿವೃತ್ತ**

ರಸ್ತಾಪುರದ ಭೀಮಕವಿ ಈ ಕೃತಿಯ ಕರ್ತೃ. ಭೀಮಾಖ್ಯ (೧-೧೧, ៩-೧೬೨), ಭೀಮನಾಯಕ (ಪ್ರತಿಸಂಧಿಯ ಕೊನೆ) ಎಂದು ಕವಿ ತನ್ನನ್ನು ಕರೆದುಕೊಂಡಿದ್ದಾನೆ. "ರಸ್ತಾಪುರದ ಪತಿ ಶರಭಲಿಂಗನ ಪಾದದ್ವಯವನನುದಿನದಲಿ ಪಾಲ್ಮಜ ಜಂಬುಲಿಂಗನ ಪ್ರೇಮಾಸುತನಾದ ಭೀಮಾಖ್ಯ ರಚಿಸಿದಂ ಮುದದಿಂದ ಕ್ಷಿತಿಯೊಳಗೆ ಲಕನಾಪುರದ ಗೌಡ ಹನುಮಂತರೆಡ್ಡಿ ಗುರುವನ ದಯದಿಂದ" ಈ ಕೃತಿಯನ್ನು ರಚಿಸಿದ್ದೇನೆಂದು ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ. ಹೀಗಾಗಿ ಕವಿಯ ವಿಚಾರದಲ್ಲಿ ಯಾವುದೇ ಸಂದೇಹಗಳಿಗೆ ಆಸ್ಪದವಿಲ್ಲ. ಜನಮಾನಸದಲ್ಲಿ ಈತನ್ನು "ರಸ್ತಾಪುರ ಭೀಮಕಕವಿ" ಎಂದು ಕರೆಯಲಾಗುತ್ತಿದೆ. ರಸ್ತಾಪುರ ಕವಿಯ ಸ್ಥಳ. ಇದು ಗುಲಬರ್ಗಾ ಜಿಲ್ಲೆಯ ಶಹಪೂರ ತಾಲೂಕಿನ ಒಂದು ಗ್ರಾಮ. ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ.ಗಳ ಅಂತರದಲ್ಲಿದೆ. ತಂದೆ ಜಂಬುಲಿಂಗ, ತಾಯಿ ಭೀಮವ್ವ, ಗುರು ಲಕನಾಪುರದ ಗೌಡ ಹನುಮಂತರೆಡ್ಡಿ ಎಂಬುದು ಆತನ ಕೃತಿಗಳಿಂದ ತಿಳಿದುಬರುತ್ತದೆ. ಎಂ.ಎಸ್. ಲಠ್ಠೆ ಅವರು ಈತನ ಕಾಲವನ್ನು ಕ್ರಿ.ಶ. ೧೮೭೭ ಎಂದು ತಮ್ಮ ಜನಪದ ಕವಿಚರಿತೆಯಲ್ಲಿ ದಾಖಲಿಸಿದ್ದಾರೆ. ಹಾಲುಮತೋತ್ತೇಜಕ ಪುರಾಣವನ್ನು ಮುಕ್ತಾಯಗೊಳಿಸಿದ ಕಾಲವನ್ನು ಕವಿ ಕೊನೆಯ ಭಾಗದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ. "ಶಾಲಿವಾಹನ ಶಕದ ಪದಿನೆಂಟುನೂರ ಮೂವತ್ತು ನಾಲ್ಕನೆಯ ಸೇರಿದ ಮಹಾಪರಿಧಾವಿ ನಾಮಸಂವತ್ಸರಾಶ್ವೀಜ ಶುಕ್ಲಪಕ್ಷ ದಶಮಿ ಸದಮಲಾದಿತ್ಯವಾರಕ್ಕೆ ಬಹುಸಾಂಗದಿಂದಿದು ಪೇಳಿ ಮುಗಿಸಿದಂ" (៩-೧೬೨) ಎಂದಿರುವುದರಿಂದ ಈ ಕೃತಿಯ ಕಾಲ ಕ್ರಿ.ಶ. ೧៩೧೨. ಹೀಗಾಗಿ ೧៩ನೆಯ ಶತಮಾನದ ಕೊನೆಯ ಭಾಗದಿಂದ ೨೦ನೆಯ ಶತಮಾನದ ಮಧ್ಯಭಾಗದವರೆಗೆ ಕವಿ ಬದುಕಿದ್ದನೆಂದು ಹೇಳಬಹುದು. ಶರಭಲಿಂಗೇಶ್ವರ ಪುರಾಣ, ಮಹಾಂತೇಶ್ವರ ಪುರಾಣ, ಚರಬಸವೇಶ್ವರ ಪುರಾಣ, ಶಂಕರ ಕೈವಲ್ಯ ಕಲ್ಪದ್ರುಮ ಮುಂತಾದವು ಕವಿಯ ಇತರೆ ಕೃತಿಗಳು. ಕರಿಭಂಟ ಕಮಲಾಕ್ಷಿ, ಕುಶಲವರ ಕಾಳಗ, ರಾಮರಾಜ್ಯ ವಿಯೋಗ, ಸತ್ಯಶೀಲ ಕಲ್ಪಿತಕಥಾ ಇತ್ಯಾದಿ ಬಯಲಾಟಗಳನ್ನು ಸಹ ಭೀಮಕವಿ ರಚಿಸಿದ್ದಾನೆ.

**೨. ಕೃತಿ ಸ್ವರೂಪ**

ಈ ಕೃತಿಯನ್ನು ಹಾಲುಮತೋತ್ಪತ್ಯ ಚಾರಿತ್ಯ, ಹಾಲುಮೋತ್ತೇಜಕ ಪುರಾಣ, ಶ್ರೀ ರೇವಣಸಿದ್ಧೇಶ್ವರ ಲೀಲಾಸಂಯುಕ್ತ ಹಾಲ್ಮತೋತ್ತೇಜಕ ಪುರಾಣ ಎಂದು ಕವಿಯು ಕರೆದಿದ್ದಾನೆ. ಇಲ್ಲಿ ಪುರಾಣ ಮತ್ತು ಚರಿತ್ರೆಯ ಅಂಶಗಳು ಸಮಾವೇಶಗೊಂಡಿರುವುದರಿಂದ ಕವಿಯು ಎರಡು ರೀತಿಯಾಗಿ ಕರೆದಿರಬಹುದು. ಅದೇನೆ ಇದ್ದರೂ ಸಾಮಾನ್ಯವಾಗಿ ಎಲ್ಲ ಜನರು "ಹಾಲುಮತೋತ್ತೇಜಕ ಪುರಾಣ" ಎಂದು ಕರೆಯುತ್ತಿರುವುದರಿಂದ ಅದೇ ಶೀರ್ಷಿಕೆಯನ್ನು ಇಲ್ಲಿ ಉಳಿಸಿಕೊಳ್ಳಲಾಗಿದೆ. ៩ ಸಂಧಿ, ೫៩೮ ವಾರ್ಧಕ ಷಟ್ಪದಿಯನ್ನೊಳಗೊಂಡ ಈ ಕೃತಿಯು ರೇವಣಸಿದ್ಧೇಶ್ವರ, ಶಿವಪದ್ಮ, ಶಿವಸಿದ್ಧ ಬೀರೇಶ್ವರ, ವೀರಗೊಲ್ಲಾಳೇಶ್ವರ ಮತ್ತು ಮಾಳಿಂಗರಾಯರ ವೃತ್ತಾಂತವನ್ನು ಸಾದ್ಯಂತವಾಗಿ ನಿರೂಪಿಸುತ್ತದೆ. ಪ್ರತಿ ಸಂಧಿಯ ಆರಂಭದ ಅರ್ಧ ವಾರ್ಧಕ ಷಟ್ಪದಿ 'ಸೂಚನೆ" ಯಲ್ಲಿ ಆಯಾ' ಸಂಧಿಯ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ. ಹಾಗೆಯೇ ಪ್ರತಿ ಸಂಧಿಯ ಮೊದಲನೆಯ ಪದ್ಯದಲ್ಲಿ ಕವಿಯು ಶಿವನನ್ನು ನಾನಾ ರೀತಿಯಾಗಿ ಸ್ತುತಿಸಿದ್ದಾನೆ. ಉದಾಹರಣೆಗೆ ಒಂದು ಪದ್ಯವನ್ನು ಇಲ್ಲಿ ಗಮನಿಸಬಹುದು.

ವರದೇವದೇವ ಶಂಕರ ಸದಾಶಿವ ದಿಶಾಂ
ಬರ ಸೋಮನಾಮ ಸುಖದಾತ ರಜತಾದ್ರಿ ಮಂ
ದಿರ ಕಾಲಕಾಲದುರಿತೌಘತಿಮಿರ ಪ್ರಭಾಕರ ಪಂಚಸುಂದರಾಸ್ಯ
ಸುರಪಾಲ ಫಾಲನಯನಾಬ್ಧಿಸಂಜಾತ ಶೇ
ಖರ ರಾಜರಾಜ ಶುಕಸನಕಾದಿ ಮುನಿನುತ್ಯ
ಸಿರಿನಾಥನಾಥನೀ ಕೃತಿಗೆ ಜಯವಿತ್ತು ಸಲಹಲಿಯೆನ್ನನತಿ ಮುದದೊಳು (೪-೧)

ಹಾಗೆಯೇ ಕೃತಿ ಬರೆದವರಿಗೆ ಓದಿದವರಿಗೆ ಕೇಳಿದವರಿಗೆ ಪಠಿಸಿದವರಿಗೆ ದೊರೆಯುವ ಪ್ರತಿಫಲಗಳನ್ನು ಕವಿಯು ಪ್ರತಿ ಸಂಧಿಯ ಕೊನೆಯಲ್ಲಿ ಪುನರಾವರ್ತನೆ ಮಾಡಿದ್ದಾನೆ.

ಈ ಸುಚಾರಿತ್ರಮಂ ಬರದೋದಿದರ್ಗೆ ಮೇಣ್
ಲೇಸಾಗಿಯಿದರರ್ಥವಾಧ್ಯಾಂತ ಪೇಳ್ದರ್ಗೆ
ಬೇಸರಿಯದುರೆ ಭಕ್ತಿಯಿಂದ ಕೇಳಿದವರ್ಗೆ ಪದುಳದಿಂ ಪಠಿಸಿದರ್ಗೆ
ಭಾಸಿತ ಸಕಲ ಭೋಗಭಾಗ್ಯಮೋಕ್ಷಂಗಳ ವಿ
ಲಾಸದಿಂದಿತ್ತು ದುರಿತೌಘಮಂ ಸಂಹರಿಸಿ
ವಾಸ ರಸ್ತಾಪುರ ಶ್ರೀ ಶರಭಲಿಂಗೇಂದ್ರ ರಕ್ಷಿಸುವನಿಹಪರದೊಳು

ಕೆಲವು ಕಡೆ ಆದಿಪ್ರಾಸ ದೋಷದಿಂದ ಕೂಡಿದ್ದು, ವಾರ್ಧಕ ಷಟ್ಪದಿ ಛಂದಸ್ಸು ಅಲ್ಲಲ್ಲಿ ನಿಯಮವನ್ನು ಮೀರಿ ಬಳಕೆಗೊಂಡಿದೆ.

**೩. ಕಥಾಸಾರ**

**ಸಂಧಿ: ಒಂದು**

ಗಂಗಾಧರ, ನಂದಿಕೇಶ, ವಿಘ್ನರಾಜ, ಷಣ್ಮುಖರಿಗೆ ಶರಣು. ಶಿವನ ರೂಪವಾಗಿ ಬಂದು ಅಮಿತ ಮಹಿಮೆಗಳನ್ನು ತೋರುವ ಶಿವಯೋಗಿ ಸಿದ್ಧರ ಸಿದ್ಧ ಸೊನ್ನಲಿಗೆ ಗುರು ಸಿದ್ಧರಾಮೇಶ್ವರನನ್ನು ಸ್ತುತಿಸುವೆ. ವರಕಾಳಿದಾಸ, ಭವಭೂತಿ, ಮಲುಹಣ, ಬಾಣ, ಕೆರೆಯ ಪದ್ಮರಸ, ಮೊಗ್ಗೆಯ ಮಾಯಿದೇವ, ಪಾಲ್ಕುರಿಕೆ ಸೋಮಾರಾಧ್ಯ, ಹಂಪೆಯ ಹರಿಹರ, ಭೀಮಕವಿ, ಗುರುಪಂಡಿತೇಶ, ರಾಘವಾಂಕ, ಚಾಮರಸ, ಉದ್ಧಟ, ನಿಜಗುಣ ಶಿವಯೋಗಿ, ಮಲ್ಲಣಾರ್ಯ ಮೊದಲಾದ ಶಿವಕವಿಗಳಿಗೆ ವಂದಿಸುವೆನು (೧-೯).

ಕೃತಿಯ ಹೆಸರು ಹಾಲ್ಮತೋತ್ಪತ್ಯ ಚಾರಿತ್ರ, ಕೃತಿಯ ಕರ್ತೃ ಜಗದ್ಗುರು ರೇವಣಸಿದ್ಧ, ಈ ಕೃತಿಯನ್ನು ರಸ್ತಾಪುರದ ಆರಾಧ್ಯದೈವ ಶರಭಲಿಂಗೇಶ್ವರನ ಪಾದದ್ವಯದಲ್ಲಿ ಅನುದಿನವೂ ಸ್ತುತಿಗೈವ ಜಂಬುಲಿಂಗನ ಪ್ರೀತಿಯ ಮಗನಾದ ಭೀಮಾಖ್ಯನು ಲಕನಾಪುರದ ಗೌಡ ಹನುಮಂತರೆಡ್ಡಿ ಗುರುವರನ ದಯದಿಂದ ರಚಿಸಿದ್ದಾನೆ. ಪ್ರಾಚೀನ ಕವಿಗಳು ಹೇಳಿದ ಶಬ್ದಾರ್ಥಗಳನ್ನು ಯೋಚಿಸಿ ಕಾವ್ಯವನ್ನು ಸಕಲರಿಗೂ ತಿಳಿಯುವಂತೆ ರಚಿಸುವೆನು. ಒಂದು ವೇಳೆ ದೋಷಗಳಿದ್ದರೆ ತಾವೆ ತಿದ್ದಿ ತೀಡಿ ಶುದ್ಧವಾಗುವಂತೆ ಮಾಡಿರಿಯೆಂದು ಪಂಡಿತರಿಗೆ ನಮಿಸುವೆನು. ಲೋಕದಲ್ಲಿ ಕವಿಯೆನಿಸಬೇಕೆಂಬ ಹಂಬಲದಿಂದ ಕಾವ್ಯವನ್ನು ರಚಿಸಿದವನಲ್ಲ. ಆದ್ದರಿಂದ ನನ್ನನ್ನು ನಿರಾಕರಿಸಿ ವಿವೇಕ ಗುಣಗಳನ್ನು ಅವಲೋಕಿಸಿ ಸುಗುಣಗಳನ್ನು ಸಾಕಾರದಿಂದ ಸ್ವೀಕರಿಸಬೇಕೆಂದು ಸುವಿವೇಕಿಗಳಿಗೆ ಎರಗಿ ಶಿವನ ದಯದಿಂದ ಈ ಕೃತಿಯನ್ನು ರಚಿಸಿದ್ದೇನೆ. ಈ ಭೂಮಿಯಲ್ಲಿ ಮೆರೆವ ರಸ್ತಾಪುರದ ವೀರಮಹೇಶ ಶಾಂತೇಶನ ಅರ್ಧಾಂಗಿ ಸುವಿಚಾರಿ ಚನ್ನಮ್ಮ ಒಡಲಲ್ಲಿ ಹುಟ್ಟಿ ಬಾಲಲೀಲೆಯನ್ನು ಕಳೆದು ಸಿದ್ಧರಾಮನ ಉಪದೇಶದಿಂದ ಪಾರಮಾರ್ಥವನ್ನು ತಿಳಿದು ಶಿವನನ್ನು ಪಾಲಿಸಿದ ಧೀರ ಶರಭೇಂದ್ರನು ಈ ಕೃತಿಗೆ ಮಂಗಲವಿತ್ತು ಕಾಪಾಡಲಿ (೧೦-೧೪).

**ಸಂಧಿ: ಎರಡು**

ಕೊಲ್ಲಿಪಾಕಿಯ ಸೋಮಲಿಂಗದಿಂದ ಉದ್ಭವಿಸಿದ ರೇವಣಸಿದ್ಧನು ಭಕ್ತರನ್ನು ಉಲ್ಲಾಸದಿಂದ ರಕ್ಷಿಸಿ ಶಾಂತಮುತ್ತಯ್ಯನಿಗೆ ಲಿಂಗದೀಕ್ಷೆ ಮಾಡಿದನು. ಇಂದ್ರ ಮುಂತಾದ ದಿಕ್ಪಾಲಕರು, ಭಾರದ್ವಜ, ಭೃಗು, ಕಶ್ಯಪ, ವಶಿಷ್ಟ ಮೊದಲಾದ ಮುನಿಗಳಿಂದ, ಗುಹಗಣಪ ರುದ್ರ ಭೈರವ ಇತ್ಯಾದಿ ಗಣಂಗಳ ಮಧ್ಯೆ ಶಿವನು ಭೃಂಗಿ ನಾಟ್ಯವನ್ನು ನೋಡುತ್ತ ಸರಸದಿಂದ ಇರುತಿರಲು ಸಭೆಗೆ ರೇವಣಸಿದ್ಧ ಭರದಿಂದ ಆಗಮಿಸಿ ದಾರುಕನ ದಾಟಿ ಮನದಲ್ಲಿ ಮರಗಿಕೊಂಡನು. ಗಣಗಳಲ್ಲಿ ಒಬ್ಬನಾದ ದಾರುಕನನ್ನು ಸಂತೈಸಿ ಶಿವನು ರೇವಣಸಿದ್ಧನಿಗೆ ನಿನಗೊಂದು ಜನ್ಮ ಬಂದಿತು. ಇಂದು ಬೇಗನೇ ಹೋಗಿ ಮರ್ತ್ಯದಲ್ಲಿ ಜನಿಸಿ ಬಾಳು ಎಂದನು. ಈ ಮಾತನ್ನು ಕೇಳಿದ ರೇವಣಸಿದ್ಧ ಕಾರುಣ್ಯವಿತ್ತು ಪರಿಪಾಲಿಸು ಎಂದು ಶಿವನ ಪಾದಗಳಿಗೆ ಎರಗಿದನು. ಅಂಜದಿರು ಕಂಗೆಡದಿರು ಬಾಲಕ ಎಂದು ಹರುಷದಿಂದ ಶಿವನು ಭೂಮಿಯಲ್ಲಿ ನಿರಂತರ ಪವಾಡ ಮಾಡುತ್ತಿರು. ನಿನಗೆ ಮಂಗಲವನ್ನುಂಟು ಮಾಡುತ್ತೇನೆಂದು ಹೇಳಿ ರೇವಣಸಿದ್ಧನನ್ನು ಸಂತೋಷದಿಂದ ಕಳುಹಿಸಿದನು (೧-೪).

ಕೊಲ್ಲಿಪಾಕಿಯ ಸೋಮೇಶ್ವರ ದೇವಾಲಯದ ಭಕ್ತರೆಲ್ಲ ಸೋಮವಾರ ಶಿವನ ಭಜಿಸುತ್ತಿದ್ದರು. ಆಗ ಮೆಲ್ಲಗೆ ಲಿಂಗ ಬಿರಿಯಲು ನೆಲ ಅದುರಿತು. ಇದನ್ನು ನೋಡಿದ ಭಕ್ತರು ಕುಣಿದಾಡಿದರು. ಸೂರ್ಯ ಚಂದ್ರ ಮೊದಲಾದ ದಿಕ್ಪಾಲಕರು ತಲ್ಲಣಗೊಂಡರು. ತಕ್ಷಣದಲ್ಲಿ ಸಮುದ್ರ ಕದಡಿ ಆದಿಶೇಷನ ಪಡೆಯು ಅಲ್ಲಿಂದ ಹಿಂತೆಗೆಯಿತು. ದೇವಗಣ ಕೊಂಡಾಡುತ ಮಳೆಗರಿಸಿ ಶವಿನ ವೇಷದಿಂದ ರೇಣುಕರು ರೇವಣಾಚಾರ್ಯನೆಂಬ ಹೆಸರಿನಿಂದ ಸರ್ವಾಂಗಕ್ಕೆಲ್ಲ ವಿಭೂತಿಯನ್ನು ಧರಿಸಿ, ರುದ್ರಾಕ್ಷಿಗಳನ್ನು ಹಾಕಿಕೊಂಡು, ಪ್ರಾಣಿಗಳ ಕಾಯುವ ರೂಪದಲ್ಲಿ, ದಂಡ ಲಾಕುಳ ಹಿಡಿದು ಆನಂದದಿಂದ ಸಜ್ಜಾದನು. ಅಷ್ಟಾಂಗಯೋಗ, ಚತುರಾಶ್ರಮ, ಷಟ್ಚಕ್ರ, ಷಟ್ಸ್ಥಲದೀಕ್ಷಾ ಮಂತ್ರ. ಮುದ್ರಾಭೇದ ಎಂಬವುಗಳನ್ನು ಮುನಿಗೆ ತಿಳಿಸಿ ಇಷ್ಟಲಿಂಗ ಪೂಜಿಸುತಲಿ ರೇವಣಸಿದ್ಧ ಆತುರಗೊಂಡು ಆಕಾಶಮಾರ್ಗದಿಂದ ನೇರವಾಗಿ ಅಗಸ್ತ್ಯಾಶ್ರಮಕೆ ಬಂದನು. ಆ ಆಶ್ರಮದಲ್ಲಿ ಕೆಲ ದಿವಸವಿದ್ದು ನಂತರ ಕಾಂಚೀಪುರಕ್ಕೆ ಆಗಮಿಸಿ ಒಲವಿನಿಂದ ಏಕಾಮ್ರನಾಥನನ್ನು ಕಂಡು ಸಲ್ಲೀಲೆಯಿಂದ ಸಂಚರಿಸಿದನು (೫-೮).

ಆ ಪುರಕ್ಕೆ ಅರಸನಾದ ಚೋಳನೃಪ ವಿಷ್ಣು ಪ್ರತಿಮೆಗೆ ಹದಿನಾರು ಬಗೆಯ ಉಪಚಾರಗಳಿಂದ ಪೂಜಿಸುತಿದ್ದನು. ಆ ಪ್ರತಿಮೆಯ ಅಲ್ಲಾಡುತ ನಿಂತಿರಲು ಪುಳಕಗೊಂಡು ಭೂಪತಿ ಸಂತೈಸುತ್ತ ಪಿಣ್ಣಾಂಕ ಸಿದ್ಧಗಿರಿ ಚಾಪನೊರ ಮಗ ಮರುಳೇಶನು ದೀಪರಿಮ ಹೆಸರು ಪಡೆದು ನಮಸ್ಕರಿಸಿ ಉತ್ತರ ಭಾಗಕ್ಕೆ ನಡೆದನು. ಯತಿಯ ಶಾಪದಿಂದ ಮಾಸನೂರಿನ ಅಕ್ಷಯಾತ್ಮಕನ ಮಂದಿರದ ಮುಂದಿನ ಭಾಗದಲ್ಲಿರುವ ವೃಕ್ಷದಲ್ಲಿ ಕುಣಿಗಳಾಗಿ ವಾಸಿಸುತ್ತ ನಿದ್ರಿಸುತ್ತಿರುವ ಮಾನವರನ್ನು ಯಕ್ಷ ಮಿಥುನವು ಭಕ್ಷಿಸುತ್ತಿದ್ದವು. ಸಿದ್ದೇಂದ್ರ ಅವುಗಳನ್ನು ಕೊಂದು ಕಮ್ಮಾರನಿಂದ ತಕ್ಷಣದಲ್ಲಿ ಸುರಗಿ ಹಾಗೂ ಕರಕಠಾರಿಗಳೆಂಬ ಎರಡು ಆಯುಧಗಳನ್ನು ವಿರಚಿಸಿದನು. ಮಾಸನೂರು ಎಂಬ ಪುರದ ಹೆಮ್ಮೆಡುವಿನಲ್ಲಿ ಮಿಸುಕದಂತೆ ಆಯುಧಗಳೆರಡನ್ನು ಜೋಪಾನವಾಗಿಟ್ಟು ಅವುಗಳನ್ನು ಆಕಾಶಕ್ಕೆ ನೆಗೆದು ವೇಗದಿಂದ ಉಜ್ಜೈನಿಗೆ ತಂದನು. ಅಲ್ಲಿ ಧರಣೇಂದ್ರ ವಿಕ್ರಮಾರ್ಕನಿಗೆ ಆ ಆಯುಧಗಳ ಮಹಿಮೆಯನ್ನು ಹೇಳಿ ರಾಜಾಚರಣೆಯನ್ನು ತಿಳಿಸಿ ನೀತಿಯುತನ ಮಾಡಿದನು. ಕೆಲವು ದಿವಸ ಅಲ್ಲಿದ್ದು ಆಕಾಶಕ್ಕೆ ನೆಗೆದು ಶಿವನಿಲಯಗಳ ನೋಡುತ್ತ ಬರುತ್ತಿರಲು ಅತ್ತ ಪ್ರಜ್ವಲಿಸುತ್ತಿರುವ ಸರೂರು ಎಂಬ ಪುರದಿ ಹಿಂಡಿನ ಶಾಂತಮುತ್ತಯ್ಯನಿದ್ದನು. ಆತನಿಗೆ ಸುವ್ವಿಮುತ್ತಯ್ಯ, ಜಗಮುತ್ತಯ್ಯ, ಲಲಿತಶಾಂತಯ್ಯರೆಂಬ ಚಲುವಾದ ಮಕ್ಕಳಿದ್ದರು. ಅವರು ಕೆಲವು ದಿವಸ ಗೋವುಗಳನ್ನು ಸಾಕುತ್ತ ಸಂತೋಷದಿಂದ ಸಂಚರಿಸಿ ಕಲ್ಲಿನ ಕೆರೆಯ ಒಂದು ಭಾಗದಲ್ಲಿ ಮನೆಯನ್ನು ಕಟ್ಟಿಕೊಂಡು ಪ್ರೇಮದಿಂದ ಜನರಿಗೆ ಸತತವಾಗಿ ಹನ್ನೆರಡು ವರ್ಷ ಕಂಬಿ ಹಾಲನ್ನು ಕೊಟ್ಟು ಉಲ್ಲಾಸದಿಂದ ಇದ್ದರು. ಹೀಗಿರುವಾಗ ಒಂದು ದಿನ ಅಲ್ಲಿಗೆ ಸಿದ್ದೇಂದ್ರನು ಬಂದು ಅಮೃತವನ್ನು ನೀಡೆಂದು ಕೇಳಿದನು. ಆಗ ಶಾಂತಮುತ್ತಯ್ಯನು ಸಿದ್ದೇಂದ್ರನನ್ನು ಬರಮಾಡಿಕೊಂಡು ಪಾದಪದ್ಮಗಳಿಗೆ ನಮಸ್ಕರಿಸಿದನು (೯-೧೪).

ಸಿದ್ಧಗುರುವರನು ಶಾಂತಮುತ್ತಯ್ಯನ ಪಿಡಿದೆತ್ತಿ ಸಮಾಧಾನ ಮಾಡಿ "ಸಿದ್ಧಿಸಲಿ ನೀನಂದ ನುಡಿಗಳವನಿಯೊಳು'" ಎಂದು ಉದ್ಧರಿಸಿ ಲಿಂಗದೀಕ್ಷೆಯನ್ನು ನೀಡಿ "ಕ್ಷೀರಕುಲಕಧ್ಯಕ್ಷನಂಗೊಳಿಸಿ ಗುರುಕಂಕಣವ ಧರಿಸಿ ಕರಕೆ ಘನ ಕಂಗೊಳಿಪ ತೆರದಿ ಪಟ್ಟವಗಟ್ಟಿ ಗುರುನಾಮಶಾಸನವಗೈದು'" ಹಾಲನ್ನು ಸೇವಿಸಿ ಮುನ್ನಡೆದನು. ಅಲ್ಲಿಂದ ಗಾಣಿಗ ವೃತ್ತಿಯಲ್ಲಿದ್ದ ಕಲ್ಲಿಶೆಟ್ಟಿಯ ಮನೆಗೆ ಹೋಗಿ

ಸಂಪದವನಿತ್ತು ರೇವಣಸಿದ್ಧ ಪೊರಮಟ್ಟು ಮಂಗಲವಾಡ ನಗರಕ್ಕೆ ಬಂದು ಮಾಯಕ್ಕನ ಮನೆಯನ್ನು ಪ್ರವೇಶಿಸಿದನು. ಇತ್ತ ಲಂಕಾಪುರದಲ್ಲಿ ವಿಭೀಷಣ ಯತಿವೇಷವನ್ನು ಧರಿಸಿ ಆಕಾಶಮಾರ್ಗದಿಂದ ಮಂಗಳವೇಢೆ ನಗರವನ್ನು ಪ್ರವೇಶಿಸಿ, ಮೂರು ಕೋಟಿ ಲಿಂಗಗಳ ಪ್ರತಿಷ್ಠಾಪನ ಕಾರ್ಯ ನಿಮ್ಮಿಂದ ನೆರವೇರಬೇಕಾಗಿದೆ. ಬಹುಬೇಗ ಲಂಕಾಪುರಕ್ಕೆ ಆಗಮಿಸಿ ಲಿಂಗಪ್ರತಿಷ್ಠಾಪಿಸು ಎಂದು ಬಿನ್ನವಿಸಿದನು. ಅಸುರನಾಡಿನ ಆ ಮಾತಿಗೆ ಮನಃಪೂರ್ವಕವಾಗಿ ಒಪ್ಪಿ ರೇವಣಸಿದ್ಧನು ಲಂಕಾಪುರಿಗೆ ತೆರಳಿದನು. ಅಲ್ಲಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಾಪಿಸಿ ಅಲ್ಲಿರದೆ ಸಮುದ್ರವನ್ನು ದಾಟಿ ವಾಯುಮಾರ್ಗವಾಗಿ ಅತಿವೇಗವಾಗಿ ಕಲ್ಯಾಣ ಪಟ್ಟಣಕ್ಕೆ ಬಂದನು (೧೫-೧೯).

ಬಿಜ್ಜಳರಾಯನ ಅರಮನೆಯನ್ನು ಪ್ರವೇಶಿಸಿ ನಿರ್ಲಜ್ಜೆಯಿಂದ ಏರುಧ್ವನಿಯಲ್ಲಿ ದೇಹಿ ಎಂದು ಕೂಗಿದನು. ಆಗ ಅರಸನು ಎನ್ನ ಅಪರಾಧವನ್ನು ಮನ್ನಿಸು ಎಂದು ಬೇಡಿಕೊಂಡನು. ರೇಣಸಿದ್ಧನು ಕೃಪೆದೋರಿ ಅಗ್ನಿಜ್ವಾಲೆಯನ್ನು ನಂದಿಸಿ ಅರಸನಿಗೆ ರಾಜನೀತಿಯನ್ನು ತಿಳಿಸಿ ಅತ್ಯಂತ ಸಂತೋಷಭರಿತನಾಗಿ ಆಕಾಶ ಮಾರ್ಗವಾಗಿ ಕೊಲ್ಲಾಪುರಕ್ಕೆ ಆಗಮಿಸಿದನು. ಅಲ್ಲಿದ್ದ ಕುಟಿಲ ಸಿದ್ಧರನ್ನು ಜಯಿಸಿ, ಗೋರಕ್ಷಕನನ್ನು ಕಾಪಾಡಿದನು. ಇತ್ತ ಬಿಜ್ಜಳನು ಮಾಸನೂರಿನ ಮಡುವಿನಲ್ಲಿ ಅತ್ಯುತ್ತಮವಾದ ಸುರಗಿಯನ್ನು ಹೊರತೆಗೆಯಲು ಹನ್ನೆರಡು ಸಾವಿರ ಬಾಲೆಯರನ್ನು ಬಲಿಕೊಡಲು ಸಿದ್ಧನಾದನು. ಆಗ ರೇವಣಸಿದ್ಧ ಆಗಮಿಸಿ ತನ್ನ ಕರುಣಕಟಾಕ್ಷದಿಂದ ಆ ಬಾಲೆಯರನ್ನು ಬಂಧನದಿಂದ ಮುಕ್ತಗೊಳಿಸಿ ಬಿಜ್ಜಳನ ಮಗಳನ್ನು ಮದುವೆಯಾದನು. ಅಲ್ಲಿ ಕೆಲದಿನವಿದ್ದು ಬಿಜ್ಜಳನಿಂದ ಸತ್ಕಾರವನ್ನು ಸ್ವೀಕರಿಸಿ ರೇವಣಸಿದ್ಧ ಕೇರಳ ವಿದರ್ಭ ಮುಂತಾದ ದೇಶಗಳನ್ನು, ಅಲ್ಲಿಯ ಪುಣ್ಯಕ್ಷೇತ್ರಗಳನ್ನು ಬೇಸರವಿಲ್ಲದೇ ನೋಡುತ್ತ ಶಿವದೇವಾಲಯಗಳನ್ನು ನಿರ್ಮಿಸಿದನು. ಜಪತಪ ನೀತಿ ನೇಮಗಳನ್ನು ಬಿಡದೆ ಆಚರಿಸುತ್ತ ಅರವಟ್ಟಿಗೆಗಳನ್ನು ಸ್ಥಾಪಿಸಿ ರಾಜಪುತ್ರಿಯೊಂದಿಗೆ ಕಲ್ಯಾಣ ಪಟ್ಟಣಕ್ಕೆ ಆಗಮಿಸಿದನು (೨೦-೨೮).

ಲೋಕಕಲ್ಯಾಣಕ್ಕಾಗಿ ಕೆರೆಯನ್ನು ನಿರ್ಮಿಸಬೇಕೆಂದು ಯೋಚಿಸಿ, ವಿಸ್ತಾರವಾದ ಸ್ಥಳವನ್ನು ಗುರುತಿಸಿ, ತಾನೆ ಗುದ್ದಲಿ ಪಿಕಾಸಿಗಳನ್ನು ತೆಗೆದುಕೊಂಡು ನೆಲವನ್ನು ಅಗೆದು ಕೆರೆಯ ಕಾರ್ಯವನ್ನು ಕೆಲ ದಿನಗಳವರೆಗೆ ನಡೆಸಿದನು. ಅಷ್ಟರಲ್ಲಿ ಚೋಳರಾಜನ ಮಗಳು ಗರ್ಭವತಿಯಾದಳು. ಆಗ ರೇವಣಸಿದ್ದ ಅವಳನ್ನು ಕರೆದು "ನನ್ನ ಒಡವೆಯನ್ನು ನನಗೆ ಕೊಟ್ಟು ನೀನು ತವರಿಗೆ ಹೋಗಿ ಸಂತೋಷದಿಂದ ವಿಶ್ರಾಂತಿ ಪಡೆ' ಎಂದು ಪ್ರೀತಿಯಿಂದ ಹೇಳಿ ಅವಳ ಗರ್ಭವನ್ನು ಸೀಳಿ ಮೂರು ತಿಂಗಳ ಪಿಂಡ ತೆಗೆದು ಅದನ್ನು ಕೆರೆಯ ದಂಡೆಯಲ್ಲಿ ಹೂಳಿಟ್ಟು ತನ್ನ ಕಾಯಕವನ್ನು ಮುಂದುವರಿಸಿದನು. ಆಗ ಆರು ತಿಂಗಳೊಳಗೆ ಕೆರೆಯನ್ನು ನಿರ್ಮಿಸಿ, ಹೂಳಿಟ್ಟ ಪಿಂಡವನ್ನು ತೆಗೆಯಲು ಗುರು ರೇವಣಸಿದ್ಧನ ಪ್ರತಿರೂಪದಂತಿರುವ ಆ ಶಿಶುವಿಗೆ ರುದ್ರಮುನಿ ಎಂದು ಹೆಸರಿಟ್ಟು ಸತಿಯಾದ ಬಿಜ್ಜಳರಾಯನ ಮಗಳಿಗೆ ಒಪ್ಪಿಸಿದನು. ಅವಳು ಸಂತೋಷದಿಂದ ಆ ಶಿಶುವನ್ನು ಆರೈಕೆ ಮಾಡುತ್ತಿದ್ದಳು. ಕೆಲದಿನಕೆ ಆ ಮಗು ಬೆಳೆದು ಎಂಟು ವರುಷದವನಾಗಲು ಜನ ನೋಡಿ ಆಶ್ಚರ್ಯಚಕಿತರಾದರು. ತನ್ನ ಅನುರೂಪದಂತಿರುವ ರುದ್ರಮುನಿಯನ್ನು ಕರೆದು ರೇವಣಸಿದ್ಧನು ದೀಕ್ಷೆಯನ್ನು ಕೊಟ್ಟು, ತತ್ವಗಳನ್ನು ಬೋಧಿಸಿದನು. ನಂತರ ಅಲ್ಲಿಂದ ಸತಿಸುತರೊಡಗೂಡಿ ಸಂತೋಷದಿಂದ ನಂಬಿದ ಭಕ್ತಸಮೂಹವನ್ನು ರಕ್ಷಿಸುತ್ತ ಹಾವಿನಹಾಳು ಗ್ರಾಮಕ್ಕೆ ಆಗಮಿಸಿದನು. ಆ ಗ್ರಾಮದಲ್ಲಿರುವ ಕಲ್ಲಯ್ಯನು ರೇವಣಸಿದ್ಧನನ್ನು ಸದ್ಭಕ್ತಿಯಿಂದ ಸತ್ಕರಿಸಿದನು. ಆಗ ನಿಜಶಿಷ್ಯನಾದ ಕಲ್ಲಯ್ಯನ ಅಪೇಕ್ಷೆಯಂತೆ ರುದ್ರಮುನಿಯಿಂದ ಶಿವದೀಕ್ಷೆಯನ್ನು ಕೊಡಿಸಿ, ಶ್ರೀ ಕಲ್ಲಿನಾಥನ ದರ್ಶನವನ್ನು ಮಾಡಿಸಿ ರೇವಣಸಿದ್ಧ ಭರದಿಂದ ಸೊನ್ನಲಾಪುರದತ್ತ ಹೊರಟನು (೨೭-೪೨).

ಅಲ್ಲಿ ಸಿದ್ಧರಾಮ ಜನಿಸುವ ವಿಷಯವನ್ನು ಸುಗ್ಗಲೆಗೆ ಪರಿಪರಿಯಿಂದ ತಿಳಿಸಿ, ನೇರವಾಗಿ ಶಾಂತಮುತ್ತಯ್ಯನಿರುವ ಸರೂರು ಕ್ಷೇತ್ರಕ್ಕೆ ಬಂದನು. ಶಿಷ್ಯನಾದ ಶಾಂತಮುತ್ತಯ್ಯನೊಡನೆ ರೇವಣಸಿದ್ಧನು ಹರಭವನಗಳನ್ನು ನೋಡುತ್ತ ಕೊಲ್ಲಾಪುರಕ್ಕೆ ನಡೆದನು. ಶಿಷ್ಯನನ್ನು ಊರೊಳಗೆ ಕಳುಹಿಸಲಾಗಿ ಅಲ್ಲಿಯ ಸಿದ್ಧರು ಆತನೊಡನೆ ವಾದಕ್ಕಿಳಿದರು. ಆ ವಾದದಲ್ಲಿ ಗೆದ್ದು ಶಾಪ ಕೊಟ್ಟು ಅವರನ್ನೆಲ್ಲ ನರಕುರಿಗಳನ್ನಾಗಿ ಮಾಡಿ ಬೇಗದಿಂದ ಬರುತ್ತಿರಲು ಮುಂಡಾಸುರನು ಕೋಪಗೊಂಡು ಅಡ್ಡಗಟ್ಟಿದನು. ಆ ರಕ್ಕಸನನ್ನು ಮೂರು ಭಾಗ ಸೀಳಿ ಧೈರ್ಯದಿಂದ ಬರುತ್ತಿರು ಶಾಂತಮುತ್ತಯ್ಯನ ನಿಜಚಾರಿತ್ರವನ್ನು ನೋಡಿ, ರೇವಣಸಿದ್ಧನು ಮೂರಡಿಯ ಕಂತೆಯನ್ನು ಮಾಡಿ ಧರಿಸೆಂದನು. ಆಗ ಶಿಷ್ಯನು ಗುರುವಿನ ಆಜ್ಞೆಯನ್ನು ಮೀರದೇ ಮೂರಡಿಯ ಕಂತೆಯನ್ನು ಧರಿಸಿ ಜಗದೊಳು ಪ್ರಖ್ಯಾತನಾದನು.

ಸಚ್ಚರಿತನಾದ ರೇವಣಸಿದ್ಧನು ನರಕುರಿಗಳನ್ನು ನೋಡಿ, ಆಶ್ಚರ್ಯಚಕಿತನಾಗಿ ಶಿಷ್ಯನ ಪರಾಕ್ರಮಕ್ಕೆ ಮೆಚ್ಚಿದನು. ಈ ಕುರಿಗಳ ಕೂದಲು ಕಂಬಳಿ ಗದ್ದುಗೆಗೆ, ಚರ್ಮವು ಗುರುಪಾದ ಪೂಜೆಗೆ ಉಪಯೋಗವಾಗುವ ಘನ (ಡೊಳ್ಳು) ವಾದ್ಯಗಳಿಗಾಗಲಿ ಎಂದು ಹೇಳುತ್ತ ಶಾಂತಮುತ್ತಯ್ಯನನ್ನು ಆಶೀರ್ವದಿಸಿ ಆಕಾಶಕ್ಕೆ ಜಿಗಿದನು (೪೩-೪೭).

**ಸಂಧಿ: ಮೂರು**

ಒಂದು ದಿನ ಕೈಲಾಸಪುರದಲ್ಲಿ ಶಿವನ ಎಡಬಲದಲ್ಲಿದ್ದ ಇಬ್ಬರು ಗಂಧರ್ವರು ಕುರೂಪಿಯಾದ ಮುನಿಯೊಬ್ಬನನ್ನು ನೋಡಿ ಹಾಸ್ಯದಿಂದ ನಕ್ಕರು. ಇದರಿಂದ ಕೋಪಗೊಂಡ ಶಿವನು ನರಲೋಕದ ಕುಡುವಕ್ಕಲಿಗರಲ್ಲಿ ಸತಿಪತಿಗಳಾಗಿ ಜನಿಸಿರೆಂದು ಶಾಪವಿತ್ತನು. ಆಗ ಗಂಧರ್ವರು ಮುನಿವರನ ಪಾದಗಳಿಗೆ ನಮಸ್ಕರಿಸುತ್ತ, ಇದಕ್ಕೆ ನಿಶ್ಯಾಪ ನೀಡೆಂದು ಧನ್ಯತೆಯಿಂದ ಬೇಡಿಕೊಂಡರು. ಆಗ ಮುನಿವರನು ನಿಮಗೆ ನಿಶ್ಯಾಪ ಕಾಲವನ್ನು ಹೇಳುವೆನು ಗಂಧರ್ವರೇ ಕೇಳಿರಿ. ನೀವಿಬ್ಬರೂ ಸತಿಪತಿಗಳಾಗಿ ಭೂಲೋಕದಲ್ಲಿ ಹುಟ್ಟುವಿರಿ. ಒಂದು ಶುಭ ದಿನದೊಳು ಬಾಲಕನೋರ್ವನು ತಮಗೆ ಜನಿಸುವನು. ಆಗ ನಿಶ್ಯಾಪವನ್ನು ಪರಿಪಾಲಿಸುವೆನೆಂದು ಅಭಯವಿತ್ತನು. ಮುನಿನಾಥನು ಆಡಿದ ಭಯದ ಮಾತಿಗೆ ಗಂಧರ್ವರು "ನಮಗೆ ಮಗು ಹುಟ್ಟುವ ಸುದಿನ ಯಾವಾಗ ಬರುತ್ತದೆ? ಮೇಲಾಗಿ ಆ ಮಗುವಿನ ಲಕ್ಷಣಗಳನ್ನು ತಿಳಿಸಿರಿ' ಎಂದು ವಿನೀತರಾಗಿ ಕೇಳಿಕೊಂಡರು. ಆಗ ಮುನಿವರನು ಭವಿಷ್ಯ ವಾಣಿಯನ್ನು ನುಡಿದು ರಕ್ಷಿಸುವ ಶಿವನನ್ನು ಭಕ್ತಿಯಿಂದ ಪ್ರಾರ್ಥಿಸಿರಿ ಎಂದು ಗಂಧರ್ವರುಗಳಿಗೆ ಹೇಳಿದನು. ಶಿವನು ಗಂಧರ್ವರನ್ನು ಮೆಚ್ಚಿ ನಿಮಗೇಕ್ಕೆ ಈ ಗತಿ ಬಂದಿತೆಂದು ಕೇಳಿದನು. ಆಗ ಅವರೀರ್ವರೂ ತಮ್ಮ ಪುರಾವೃತ್ತವನ್ನು ಶಂಕರನ ಸನ್ನಿಧಿಯೊಳು ಅರುಹಿದರು. ಮುನಿಯೊಬ್ಬನನ್ನು ಕಂಡು ಹಾಸ್ಯಗೈದಿದ್ದಕ್ಕೆ ಕೋಪಗೊಂಡು ನರಕಕ್ಕೆ ಹೋಗಿರೆಂದು ಹೇಳಿದನು. ಅದಕ್ಕೆ ಶಾಪಮುಕ್ತರನ್ನಾಗಿ ಮಾಡಿ ಎಂದು ನಾವು ಕೇಳಿಕೊಂಡರೆ ತಮ್ಮಡಿಗೆ ಹೋಗಿರೆಂದು ಹೇಳಿದನು. ಅದಕ್ಕಾಗಿ ತಮ್ಮಲ್ಲಿಗೆ ಬಂದಿದ್ದೇವೆಂದು ಗಂಧರ್ವರೀರ್ವರೂ ಹೇಳಿದರು (೧-೧೦).

ಯೋಗೀಶ ನಿಮ್ಮನ್ನು ಶಪಿಸಿದನೇ ಎನ್ನುತ್ತ ಶಿವನು "ಚಿಂತೆಯನ್ನು ಬಿಟ್ಟು ಏಕಚಿತ್ತದಿಂದ ಕೇಳಿರಿ, ಸಂತೋಷದಿಂದ ನಿಶ್ಯಾಪವನ್ನು ಹೇಳುವೆನು. ನೀವು ನರರಲ್ಲಿ ಸತಿಪತಿಗಳಾಗಿ ಹುಟ್ಟುವಿರಿ. ಆಗ ಮನ್ಮಥನನ್ನು ಮೀರಿಸುವಂಥ ಮಗ ನಿಮಗೆ ಜನಿಸುವನು. ಇದರಿಂದ ನಿಮ್ಮ ಶಾಪ ಪರಿಹಾರವಾಗುವುದು' ಎಂದು ಹೇಳಿದನು. ಲೋಕರೂಢಿಯಂತೆ ನವಮಾಸ ಕಾಲ ತೆಗೆದುಕೊಳ್ಳದೆ ಶಿಶುವು ಐದನೆಯ ತಿಂಗಳ ಕೊನೆಗೆ ಜನಿಸಿ ಹುಣ್ಣಿಮೆಯ ಚಂದ್ರನಂತೆ ಬೆಳೆಯುವನು. ಈ ನುಡಿಗಳನ್ನು ಕೇಳಿ ಗಂಧರ್ವರು ನಮಿಸಿದಾಗ, ಶಿವನು ಅವರಿರ್ವರಿಗೆ ಅಪ್ಪಣೆ ನೀಡಿ ನರಲೋಕಕ್ಕೆ ಕಳುಹಿಸಿದನು. ಇತ್ತ ಮಧ್ಯಭಾಗದೊಳಿರುವ ಕೀರ್ತಿವೆತ್ತ ಜಾಗ್ರತಪುರದಲ್ಲಿ ಗಂಧರ್ವರೀರ್ವರು ಮುದ್ದುಗೊಂಡ ಮುದ್ದಾಯಿ ಎಂಬ ದಂಪತಿಗಳಾಗಿ ಹುಟ್ಟಿದರು. ಮುದ್ದಾಯಿ ಗರ್ಭದಿಂದ ಅವತರಿಸಿ ಬಂದ ಮಗುವನ್ನು ನೋಡಿ ತಾಯಿ ಕೆಲಸ ಯುವತಿಯರಿಗೆ ಬಾಲಕನನ್ನು ತೋರಿಸುತ್ತ ಮನದಲ್ಲಿ ಸಂತೋಷಗೊಂಡಳು. ಈ ದಂಪತಿಗಳು ತಮ್ಮ ಮಗುವಿಗೆ ಹನ್ನೆರಡನೆಯ ದಿನಕೆ ನಾಮಕರಣವನ್ನು ಮಾಡಿ ಪ್ರೀತಿಯಿಂದ ಆದಿಗೊಂಡ ಎಂಬ ಹೆಸರನ್ನಿಟ್ಟರು. ಆದಿಗೊಂಡನು ಬಾಲಲೀಲೆಗಳನ್ನು ಕಳೆದು ದೊಡ್ಡವನಾದನು. ಇತ್ತ ಮುದ್ದುಗೊಂಡನ ಸಹೋದರಿಯ ಗರ್ಭದಿಂದ ಶುಭಮುಹೂರ್ತದಲ್ಲಿ ಹೆಣ್ಣು ಕೂಸು ಹುಟ್ಟಿತು. ಅದಕ್ಕೆ ಚುಂಚಲೆ ಎಂದು ಹೆಸರಿಟ್ಟು ಕೊಂಡಾಡಿದರು. ಇದನ್ನೆಲ್ಲ ನೋಡಿದ ಮುದ್ದುಗೊಂಡನು ತನ್ನ ಮಗನಿಗೆ ಸರಿಯಾದ ಜೋಡಿಯೆಂದು ಸಂತೋಷಪಟ್ಟನು. ಕೆಲಕಾಲ ಕಳೆದ ನಂತರ ಆದಿಗೊಂಡನಿಗೆ ಚುಂಚಲೆಯನ್ನು ತೆಗೆದು ಸಂಭ್ರಮದಿಂದ ಮದುವೆ ಮಾಡಿದರು. ಶಿವನ ಕರುಣದಿಂದ ವಧುವರರು ಸಂಪ್ರೀತಿಯಿಂದ ಇರಲು, ಚೆಲುವಾದ ಆಯಗೊಂಡ, ಪಾಯ್ಗೊಂಡ, ಅಮರಗೊಂಡ ಮತ್ತ ಜಾಯ್ಗೊಂಡ ಎಂಬ ನಾಲ್ಕು ಮಕ್ಕಳನ್ನು ಪಡೆದರು. ಆದಗೊಂಡನು ಕೆಟ್ಟ ಮಕ್ಕಳು ಹುಟ್ಟಿರುವುದಕ್ಕೆ ಶಪಥವನು ತಾಳಿ ಧರೆಗುರುಳಲು ಚುಂಚಲೆ ಕೈಯನ್ನು ಚಾಚಿ ಪ್ರೀತಿಯಿಂದ ಪ್ರಿಯನನ್ನು ಹಿಡಿದೆತ್ತಿ, ಶ್ರೀಮಂತ ಗುಣಗಳನ್ನು ಹೊಂದಿದ ನೀನು ಚಿಂತೆಯನ್ನು ಬಿಡು. ಮತಿಹೀನನಾಗಿ ಚಿಂತಿಸಬೇಡ. ಶಾಪ ಪರಿಹಾರವಾಗುವ ಕೊನೆಯ ಕಾಲದಲ್ಲಿ ಸತ್ಪುತ್ರ ಹುಟ್ಟದಿಹನೇ ಎಂದು ವಲ್ಲಭನನ್ನು ಸಂತೈಸಿದಳು. ಅಷ್ಟರಲ್ಲಿ ಗುರು ರೇವಣಸಿದ್ಧ ಶಿವನನ್ನು ಸ್ತುತಿಸುತ್ತ ಬಹುಪರಾಕೆನ್ನುತ್ತ ತನ್ನ ಶಿಷ್ಯರೊಂದಿಗೆ ಜಾಗ್ರತಿ ಪಟ್ಟಣಕೆ ಬಂದನು (೧೧-೨೨).

ರೇವಣಸಿದ್ಧ ತಾಂಡವನಾಡಿ ಪುರವನ್ನು ನೋಡುತ್ತ ಬೀದಿಯಲ್ಲಿ ಸಂತಸದಿಂದ ನಲಿದಾಡಿ ಶಿವನನ್ನು ಸ್ಮರಿಸುತ್ತಲಿದ್ದನು. ಆಗ ಬಂದ ಶಿಷ್ಯಸಮೂಹಕ್ಕೆ ರೇವಣಸಿದ್ಧನು 'ಇದು ಶಿವಕ್ಷೇತ್ರ, ಶಿವನಿಲಯವಿದು" ಎಂದು ಅತ್ಯಂತ ಪ್ರೀತಿಯಿಂದ ಈ ಪುಣ್ಯಸ್ಥಳದ ಮಹಿಮೆಯನ್ನು ವಿವರಿಸಿದನು. ಈ ಪುರದಲ್ಲಿ ಸತ್ಯಯುತನಾದ ಆದಿಗೊಂಡನ ಅರ್ಧಾಂಗಿಯು ಮನೆಕೆಲಸಗಳನ್ನು ಮಾಡಿಕೊಂಡು ಸುಖದಿಂದಿರುವಳು. ಆಕೆಯ ಹೊಟ್ಟೆಯಲ್ಲಿ ಶಿವಯೋಗಿಯೊಬ್ಬ ಜನಿಸುವನು. ಆತನಿಂದ ಈ ಜಾಗ್ರತಪುರವು ನಿತ್ಯವೈಭವದಿಂದ ಮೆರೆಯುವುದು ಎಂದು ಶಿಷ್ಯರಿಗೆ ಹೇಳಿದನು. ವರಗುರು ರೇವಣಸಿದ್ಧನ ನುಡಿಗಳನ್ನು ಕೇಳಿದ ಶಿಷ್ಯರು "ಎಲೆ ಗುರುವೆ ಭುವನ ಪ್ರಸಿದ್ಧಮಾದ ದಂಪತಿಗಳೆಮಗೆ ತೋರಬೇಕು" ಎಂದು ಬಿನ್ನವಿಸಿಕೊಂಡರು. ಆಗ ರೇವಣಸಿದ್ಧನು ಶಿಷ್ಯಸಮೂಹದೊಡನೆ ಕೂಡಿಕೊಂಡು ಕುಡು ವಕ್ಕಲಿಗರ ಸಾಲುಮನೆಗಳತ್ತ ಬಂದನು. ಅಲ್ಲಿದ್ದ ಚುಂಚಲೆಯ ರಕ್ಷಿಪುದೆಂದು ಸಿದ್ಧನ ಪಾದಕೆರಗಿದಳು. ಮುನಿವರನು ಪುಳಕದಿಂದ ಆ ದೇವಿಯನ್ನು ಸಂತೈಸುತ್ತ ನಿನ್ನ ಪೂರ್ವ ಪುಣ್ಯದ ಫಲದಿಂದ ನಿನ್ನ ಉದರದಲ್ಲಿ ಐದು ತಿಂಗಳೊಳಗಾಗಿ ಪ್ರಜ್ವಲಿಸು ಸುಪುತ್ರನು ಜನಿಸುವನು ಎಂದು ಹರಸಿದನು. ಆಗ ಚುಂಚಲೆ ಸಂತೋಷದಿಂದ ಆ ಶಿಶುವಿಗೆ ಯಾವ ಹೆಸರನ್ನಿಡಬೇಕೆಂದು ಕೇಳಲು, ಪರಮೇಶ್ವರನ ಅನುಗ್ರಹದಿಂದ ಅವತರಿಸಿದ ಆ ಚಲುವಾದ ಕೂಸಿಗೆ "ಶಿವಪದ್ಮ' ಎಂಬ ಹೆಸರು ಸರಿಯಾದುದು ಎಂದು ಮುದದಿಂದ ಚುಂಚಲೆಗೆ ತಿಳಿಸಿದನು (೧೩-೩೧).

ಆದಿಗೊಂಡನು ಅವಿರಳ ಜ್ಞಾನಿಯಾದ ರೇವಣಸಿದ್ಧನವರ ಪಾದಕ್ಕೆರಗಿ ಭಕ್ತಿಭಾವದಿಂದ "ಮಹಿಮೋತ್ತಮನೇ, ನಿನ್ನ ನುಡಿ ಕೇಳಲು ಹಿತವಾಗಿದೆ. ನನ್ನ ಸತಿಗೆ ಗರ್ಭೋತ್ಪತ್ತಿಯಿಲ್ಲ, ಇನ್ನು ಸುತನೆಲ್ಲಿ ಬರುತ್ತಾನೆ. ಸುಳ್ಳು ಮಾತನಾಡದಿರಿ" ಎಂದು ಕೈಮುಗಿದನು. ವನಿತೆ ಚುಂಚಲೆಯ ಬಸುರಿಂದ ವರ ಶಿವಯೋಗಿ ಜನಿಸುವುದು ಸತ್ಯ ಎನ್ನಲು, ಆದಿಗೊಂಡನು ನಮಸ್ಕರಿಸಿ ವಿನಯದಿಂದ ಸ್ತುತಿಸುತ್ತ ರೇವಣಸಿದ್ಧನನ್ನು ಭಕ್ತಿಭಾವದಿಂದ ಕಳಿಸಿ ಸತಿಯೊಡನೆ ಸುಖಿಯಾಗಿದ್ದನು. ಹೀಗಿರಲು ಅಂಗನಾಮಣಿ ಚುಂಚಲೆಯು ಗರ್ಭವನ್ನು ಧರಿಸಿದುದನ್ನು ಮಂಗಲಾತ್ಮಕನಾದ ಪತಿಯು ನೋಡಿ ಪ್ರೀತಿಯಿಂದ ಎಲೆ ಕಾಂತೆ, ನಿನ್ನ ವೃದ್ಧಾಪ್ಯದ ಲಕ್ಷಣಗಳು ಮಾಯವಾಗಿ ತಾರುಣ್ಯತ್ವದ ಕಳೆ ಕಂಗೊಳಿಸುವುದು. ಚಕ್ರೇಶನಾದ ರೇವಣ ಸಿದ್ಧೇಶ್ವರನು ಹೇಳಿದ ಗರ್ಭೋತ್ಪತ್ಯದ ಮಾತು ಸತ್ಯವಾದುದು ಎಂದು ಮೋಹದಿಂದ ಅಬಲೆಗೆ ಹೇಳಿದನು. ಪತಿಯ ಮಾತಿಗೆ ತಲೆ ತಗ್ಗಿಸಿ ಸಡಗರದಿಂದಿರುವ ಚುಂಚಲೆಯ ಕಡುಚೆಲುವನಾದ ಪುತ್ರನನ್ನು ಅಪೇಕ್ಷಿಸಿದಳು. ಐದು ತಿಂಗಳು ತುಂಬಲು ಒಂದು ದಿನ ರಾತ್ರಿಯಲ್ಲಿ ತನ್ನ ಗೆಳತಿ ನಾಗಲೆಯೊಂದಿಗೆ ನಿಜಮಂದಿರದಿ ಮಲಗಿಕೊಂಡಳು. ಆಗ ಶಿವನ ಚಿತ್ಕಳೆಯ ರೂಪದಲ್ಲಿರುವ ಮಗುವೊಂದು ತಂದೆತಾಯಿಗಳನ್ನು ಸದ್ಗತಿಗೆ ಕಳಿಸಬೇಕೆನ್ನುವಂತೆ ಚುಂಚಲೆಯ ಮಗ್ಗುಲಲ್ಲಿ ಕಾಣಿಸಿಕೊಂಡಿತು. ಶಿವನ ರೂಪವನ್ನು ಹೊಂದಿದ ಆ ಮಗುವು ಕಡುಚೆಲುವನ್ನು ಹೊಂದಿದ್ದಿತು. ಸಿರಿ ಸರಸ್ವತಿ ರುದ್ರಕನ್ಯೆಯರು ಚನ್ನೆಯರು ಸಂತೋಷದಿಂದ ಗಿರಿಜೆಯೊಡನೆ ಕೂಡಿ ಬಾಲಕನಿಹ ಸ್ಥಳಕೆ ಆಗಮಿಸಿದಳು. ಗಿರಿಜೆಯು ಕೂಸನ್ನು, ಹಿಡಿದೆತ್ತಿ ಮುದ್ದಾಡಿಸಿ "ಹರನ ಸಕಲೈಶ್ವರ್ಯ ಸಚ್ಚಕ್ತಿ ಮನೋನಿಗ್ರಹ ಇಂದ್ರಿಯನಿಗ್ರಹ ನಿನಗೆ ಸದಾಕಾಲಕ್ಕೂ ದೊರೆಯಲಿ" ಎಂದು ಪ್ರೀತಿಯಿಂದ ಹರಸಿ ಬಾಗಿನವ ಕೊಟ್ಟು ಕೈಲಾಸಪುರಕೆ ತೆರಳಿದಳು (೩೩-೪೯).

**ಸಂಧಿ: ನಾಲ್ಕು**

ಆದಿಗೊಂಡನು ನಿದ್ರೆಯಿಂದ ಎದ್ದು ಸುವಿವೇಕದಿಂದ ಸಂತೋಷದಿಂದ ಮುಸುಕಿನಲ್ಲಿ ಮರೆಯಾದ ಬಾಲಕನ್ನು ತನ್ನ ಸತಿಯ ಸಮ್ಮುಖದಲ್ಲಿ ದಿಟ್ಟಿಸುತ್ತ, ಈತ ನನಗೆ ಯೋಗ್ಯವಾಗಿಹ ಪುತ್ರ ಎಂದು ಹೇಳಿದನು. ಆಶ್ಚರ್ಯದಿಂದ ಈ ಮಾತನ್ನು ಕೇಳಿದ ಚುಂಚಲೆಯು ಮೃದುವಾದ ತನ್ನ ಕೈಗಳಿಂದ ತನ್ನ ಹೊಟ್ಟೆಯ ಭಾಗವನ್ನು ಮುಟ್ಟಿಕೊಂಡು ನೋಡಲು ಬಸುರಿಲ್ಲವಾಯಿತು. ಶಿವನ ಕಳೆಯನ್ನು ತುಂಬಿಕೊಂಡು ಪರಿಸೂಸುವ ಕಂದನನ್ನು ಹಿಡಿದೆತ್ತಿ ಗಂಡನಿಗೆ ತೋರಿಸಿ "ನೀನಂದ ನುಡಿ ಸತ್ಯ, ಸತ್ಪುತ್ರನಹುದು' ಎಂದು ಇಬ್ಬರೂ ಆಡಿಕೊಂಡರು. ಅಷ್ಟರೊಳಗೆ ಮಲಗಿದ್ದ ನಾಗಲೆಯು ಅವಸರದಿಂದ ಎದ್ದು ನನ್ನ ಕನಸಿನಲ್ಲಿ ಸಿರಿಸರಸ್ವತಿ ಗೌರಿಯರು ಬಂದು ಜೋಗುಳವನ್ನು ಹಾಡಿ ಶಿವಪದ್ಮನೆಂದು ಹೆಸರಿಟ್ಟು ಪುಷ್ಪವೃಷ್ಟಿಯಗರಿಸಿ, ಪರಶಿವನ ಸಕಲ ಸಾಮರ್ಥ್ಯವು ನಿನಗಾಗಲೆಂದು ಹಾರೈಸಿ ಸ್ವರ್ಗಕ್ಕೆ ಪಯಣಿಸಿದರು. ಅಷ್ಟರಲ್ಲಿ ನನಗೆ ಎಚ್ಚರವಾಯಿತು ಎಂದಳು. ಇದನ್ನು ಕೇಳಿದ ಆದಿಗೊಂಡನು ಆನಂದದಿಂದ ಮಗನ ಹಸನ್ಮುಖವನ್ನು ನೋಡಿ ಸದಮಲಜ್ಞಾನಿಯಾಗುವನೆಂದು ನಿರ್ಧರಿಸಿದನು (೧-೧೦).

ಮಗು ಜನಿಸಿದ ಹನ್ನೆರಡನೆಯ ದಿನದಿ ಮನೆಯನ್ನು ಚನ್ನಾಗಿ ಶೃಂಗರಿಸಿ ಮುತ್ತೈದೆಯರನ್ನು ಕರೆಸಿ, ರನ್ನತೊಟ್ಟಿಲಲ್ಲಿಟ್ಟು ಜೋಗುಳವ ಹಾಡಿ ಸಂತೋಷ ಸಂಭ್ರಮದಿಂದ ಶಿವಪದ್ಮನೆಂದು ನಾಮಕರಣವ ಮಾಡಿದರು. ಮಗನ ಬಾಲಲೀಲೆಗಳನ್ನು ಕಂಡು ತಾಯಿ ಚುಂಚಲೆಯು ಹಿರಿಹಿರಿ ಹಿಗ್ಗಿದಳು. ಸಿದ್ಧನ ದಯದಿಂದ ಶಿವಪದ್ಮನು ದಿನದಿನಕೆ ಬೆಳೆಯುತ್ತ ಐದು ವರ್ಷಗಳನ್ನು ಪೂರೈಸಿದನು. ಪದ್ಮಾಸನದಲ್ಲಿ ಕುಳಿತು ಭಕ್ತಿಯಿಂದ ಶಿವನನ್ನು ಸದಾ ಸ್ಮರಣೆ ಮಾಡುತ್ತಿರುವ ಮಗನು ಎಂಟು ವರ್ಷದವನಾದಾಗ ಮದುವೆ ಮಾಡಬೇಕೆಂದು ತಂದೆತಾಯಿಗಳು ಮನದೊಳಗೆ ಯೋಚಿಸಿದರು. ಆದಿಗೊಂಡನು ತನ್ನ ಸಹೋದರಿಯ ಮಗಳಾದ ಜಿಂಕಾದೇವಿಯೊಂದಿಗೆ ಶಿವಪದ್ಮನ ಮದುವೆಯನ್ನು ವೈಭವಯುತವಾಗಿ ನೆರವೇರಿಸಿದನು (೧೧-೩೧).

ಇತ್ತ ರೇವಣಸಿದ್ಧನು ಶಿವಪದ್ಮನನ್ನು ನೋಡಬೇಕೆಂದು ಜಾಗ್ರತಿಪುರಕ್ಕೆ ಆಗಮಿಸಿದನು. ಪುರವನ್ನು ಪ್ರವೇಶಿಸುವಾಗ ಗಂಗಮ್ಮನೆಂಬ ಕಡುಬಡವಿಯ ಮನೆಗೆ ತೆರಳಿದನು. ಆ ಬಡವಿ ತಡಮಾಡದೆ ಸಿದ್ಧನ ಪಾದಗಳಿಗೆ ವಂದಿಸಿದಳು. ಆಗ ರೇವಣಸಿದ್ಧ ಆಕೆಯ ಸುಭಕ್ತಿ ಸದ್ಭಾವಕ್ಕೆ ಮೆಚ್ಚಿ "ಭಾವೆ ನಿನ್ನಯ ಗುಣಕೆ ಬೆಲೆಯಿಲ್ಲ, ಬಡತನಮಿದಾವ ಕರ್ಮದಿ ನಿನಗೆ ಪ್ರಾಪ್ತಿಸಿತೊ ನಾನರಿಯೆ" ಎಂದು ಅಲ್ಲಿಯೇ ಭೋಜನ ಮುಗಿಸಿಕೊಂಡು ಹೊರಡಲನುವಾದನು. ಗಂಗಮ್ಮ ಗದ್ದುಗೆಯ ಕೆಳಗಿರಿಸಿ ವಿಸ್ಮರಣದಿ ಇಲ್ಲಿಟ್ಟು ಪೋಗುವದಿದುತ್ತಮವೇ, ಗುರುವರನೇ ಸಲ್ಲದೆನಗೀ ಹೊನ್ನು ತೆಗೆದುಕೊಳ್ಳಿರಿ ಬೇಗ ವಲ್ಲೆ ನಿಮ್ಮಯ ಪದಾರ್ಥವ" ಎಂದು ಬಿನ್ನೈವಿಸಿಕೊಂಡಳು. 'ಪರರಿತ್ತ ಧನಮೆಲ್ಲ ಮೇಣೆನ್ನದಲ್ಲ' ಎನ್ನುತ್ತ ರೇವಣಸಿದ್ಧನು ಶಿವನು ನಿನ್ನ ಭಕ್ತಿಗೆ ಮೆಚ್ಚಿ ಕೊಟ್ಟಿರುವನು. ಇದು ನಿನಗೆ ಸಲ್ಲತಕ್ಕದೆಂದು ಹೇಳಿ ಆಶೀರ್ವದಿಸಿ ಅಲ್ಲಿಂದ ಆದಿಗೊಂಡನ ಮನೆಗೆ ಬಂದು ಆದರಾತಿಥ್ಯವನ್ನು ಸ್ವೀಕರಿಸಿ ಶಿವಪದ್ಮನನ್ನು ಮನದಣಿವಂತೆ ಮುದ್ದಿಸಿದನು. ಚುಂಚಲೆಯು ಗುರುಪಾದಕೆರಗಿದಾಗ ರೇವಣಸಿದ್ಧನು ಪಂಚಾಕ್ಷರವ ಜಪಿಸಿ ಜಯಶೀಲಳಾಗೆಂದು ಹರಸಿದನು. ಶಿವಪದ್ಮನು "ದೀನರಕ್ಷಕ, ದೇವ ಯನಗಿಷ್ಟಲಿಂಗಮಂ ಧರಿಸಿ ಶಿವಮಂತ್ರವನ್ನು ಸಾನುರಾಗದಿ ಬೋಧಿಸು" ಎಂದನು. ಆಗ ಶಿವಪದ್ಮನಿಗೆ ಶಿವ ಪಂಚಾಕ್ಷರಿ ಮಂತ್ರವನ್ನು ಬೋಧಿಸಿ 'ಕುರಿಗಳಂ ಸಲಹು ಸತತ, ನೀನೀ ಕುರಿಗಳನ್ನು ಕಾಯುತ ಚಂದಮಾಗಿಹ ಶ್ರೀಗಿರಿಯ ಸಮೀಪಕ್ಕೆ ನಡಿ ಹಿಂದೆ ನಾನು ಬಂದು ನಿನ್ನನ್ನು ರಕ್ಷಿಸುವೆನು' ಎಂದು ಆಶೀರ್ವದಿಸಿ ರೇವಣಸಿದ್ಧನು ತೆರಳಿದನು (೩೨-೫೧).

**ಸಂಧಿ: ಐದು**

ಗುರು ರೇವಣಸಿದ್ಧನ ಧ್ಯಾನಿಸುತ್ತ ನ್ಯಾಯ ನೀತಿ ಧರ್ಮದಿಂದ ಕೈಯಲ್ಲಿ ಕೋಲು, ತಲೆಯ ಮೇಲೆ ಕಂಬಳಿ ಹೊದ್ದುಕೊಂಡು ಬೆಟ್ಟದ ಬುಡದಲ್ಲಿ ಗುಡಿಸಲನ್ನು ನಿರ್ಮಿಸಿಕೊಂಡು ಶಿವಪದ್ಮನು ಕುರಿಕಾಯುತ ಸಂತೋಷದಿಂದಿದ್ದನು. ಹೀಗಿರಲು ಇತ್ತ ಕೈಲಾಸದಲ್ಲಿ ಒಬ್ಬ ಖೇಚರನು ಬಂದು ಪರಮೇಶ್ವರನಿಗೆ ನಮಸ್ಕರಿಸಿ ಥಟ್ಟನೆ ಹಿಂದಕ್ಕೆ ಸರಿದನು. ಆಗ ಹಿಂದೆ ನಿಂತಿದ್ದ ಯತಿಯೊಬ್ಬನಿಗೆ ಆ ಖೇಚರನ ಕಾಲು ತಗುಲಲು, ಭೂಲೋಕದಲ್ಲಿ ನರನಾಗಿ ಹುಟ್ಟು ಎಂದು ಶಾಪವಿತ್ತನು. ಆ ಶಾಪ ಪರಿಹಾರಕ್ಕಾಗಿ ಶಿವನಲ್ಲಿ ಖೇಚರನು ಬೇಡಿಕೊಂಡನು. ಆಗ ಶಿವನು "ನೀಂ ಧರೆಗೆ ಪೋಗಿ ಜಾಬಾಲಮುನಿಯಾಗಿ ಪುಟ್ಟು, ಸದುಗುಣದಿ ಕೂಡಿ ಯೋಗಾಭ್ಯಾಸವ ಮಾಡು ಘನಮುದದಿಂದ ನಿನ್ನ ಕಾರ್ಯಕ್ಕಾಗಿ ನೂತನ ಪುರದ ಭೂಪ ಗಂಗಾಧರಂಗೆ ಸುತನಾಗೆನ್ನ ಚಿತ್ಕಲಾಂಶವು ಜನಿಪುದು' ಎಂದು ಅಭಯವಿತ್ತನು. ಆಗ ಖೇಚರನು ವಿರಕ್ತನಾಗಿ ಭೂಮಿಯೊಳುದ್ಭವಿಸಿ ಗಿರಿ ತಟದಿ ಯೋಗಾಭ್ಯಾಸದಲ್ಲಿ ನಿರತನಾದನು (೧-೬).

ಗಂಡುಮಗುವೊಂದು ಜನಿಸಿದ್ದರಿಂದ ರಾಜ ಗಂಗಾಧರ ರಾಣಿ ಚಂಗಲಾದೇವಿಯರು ಸಂತೋಷದಿಂದಿದ್ದರು. ಮಹೇಶ್ವರನು ಮೃತ್ಯದೇವಿಯ ಕರೆದು, ಭೂಲೋಕಕ್ಕೆ ಹೋಗಿ ನೂತನಪುರದ ರಾಜಕುಮಾರನ ರುಂಡವನ್ನು ಕತ್ತರಿಸಿಕೊಂಡು ತಪಸ್ಸಿನಲ್ಲಿ ಕುಳಿತಿರುವ ಜಾಬಾಲ ಮುನಿಯ ಸನ್ನಿಧಿಯಲ್ಲಿಟ್ಟು ಬಾ ಎಂದನು. ಅದರಂತೆ ಮೃತ್ಯುದೇವತೆಯು ಆ ಕಾರ್ಯವನ್ನು ಮಾಡಿದಳು. ಚಂಗಲೆಯು ಎಚ್ಚರಗೊಂಡು ಕೂಸಿನ ಮೇಲಿರುವ ಬಟ್ಟೆಯನ್ನು ತೆಗೆದು ನೋಡಿ "'ಈಗಲೀ ಸುತನುತ್ತಮಾಂಗಮಂ ಕತ್ತರಿಸಿ ಪೋಗಿರ್ಪರಯ್ಯಯ್ಯೊ ಮಾಡಲಿನ್ನೇನು" ಎಂದು ರೋಧಿಸತೊಡಗಿದಳು. ಆಗ ರಾಜನು ಮಂತ್ರಿಯನ್ನು ಕರೆದು ಮಗನ ರುಂಡವನ್ನು ಕತ್ತರಿಸಿದ ದುಷ್ಟರನ್ನು ಹುಡುಕಿ ತಲೆಗತ್ತರಿಸಬೇಕೆಂದು ಆದೇಶಿಸಿದನು. ರಾಜನ ಅಪ್ಪಣೆಯನ್ನು ಒಪ್ಪಿ ಮಂತ್ರಿಯು ಶೂರರನ್ನು ಕಳುಹಿಸಿದನು. ಆ ಶೂರರು ಕಾಡು ಗುಡ್ಡ ಬೆಟ್ಟಗಳನ್ನು ತಿರುಗಿ ಗಿಡದಡಿಯಲ್ಲಿ ಕುಳಿತಿದ್ದ ಮುನಿಯ ಮುಂದಿದ್ದ ರುಂಡವನ್ನು ನೋಡಿ ಕಣ್ಣೀರಿಡುತ್ತ ರಾಜನಲ್ಲಿಗೆ ಬಂದು ತಿಳಿಸಿದರು. ಕೋಪದಿಂದಿದ್ದ ರಾಜನು ಹಲ್ಗಿರಿಯುತ್ತ ಚಂದ್ರಾಯುಧದಿಂದ ಜಾಬಾಲ ಮುನಿಯ

ರುಂಡವನ್ನು ಕತ್ತರಿಸಿ ಹಾಕಿದನು. ಭೂಮಿಯ ಮೇಲೆ ಬಿದ್ದ ಆ ಮುನಿಯ ರಕ್ತದಲ್ಲಿ ಬಗೆಬಗೆಯಾದ ಅಸಂಖ್ಯಾತ ಕುರಿಗಳು ಉದ್ಭವಿಸಿದವು. ರಾಜನು ಆಶ್ಚರ್ಯಚಕಿತನಾಗಿ ರಾಹುತರು ಮಂತ್ರಿಗಳಿಗೆ ಆ ಕುರಿಗಳನ್ನು ಕಾಯಲು ಹೇಳಿದನು. ಇತ್ತ ಶಾಪ ವಿಮುಕ್ತನಾದ ಜಾಬಾಲಮುನಿಯು ಖೇಚರರೂಪವನ್ನು ಪಡೆದು ಶಿವಧ್ಯಾನ ಮಾಡುತ್ತ ಸಂತೋಷದಿಮದ ಶಿವಸಭೆಗೆ ಹೋದನು (೧೮-೩೩).

ರಾಹುತರು ಮಂತ್ರಿಗಳು ಕುರಿಗಳನ್ನು ಕಾಯ್ದು ಸಾಕಾಗಿದೆ ಎನ್ನಲು, ಸ್ವತಃ ರಾಜನೇ ಕಾಯಲು ಪ್ರಾರಂಭಿಸಿದನು. ಆತನೂ ಬೇಸತ್ತು ಶಿವನನ್ನು ಧ್ಯಾನಿಸಿದನು. ಇದನ್ನು ಕಂಡ ಶಿವನು ಮನಸಿನ ವ್ಯಸನ ಬಿಟ್ಟು ನೀವು ಮನೆಗೆ ನಡೆಯಿರಿ ಎಂದು ಹೇಳಿ ಬರ್ಮನಿಗೆ ಈ ಕೆಲಸವನ್ನು ಒಪ್ಪಿಸಿದನು. ಆತನೂ ಕೈಯಲ್ಲಿ ಕೋಲನ್ನು ಹಿಡಿದುಕೊಂಡು ಹೊಳೆ ಹಳ್ಳಗಳ ದಂಡೆಯಲ್ಲಿ ಹಲವು ದಿನ ಕುರಿಗಳನ್ನು ಕಾಯ್ದು ಬೇಸತ್ತಾಗ ಶ್ರೀ ಹರಿಯನ್ನು ನಿಯಮಿಸಿದನು. ಆತನೂ ಕಂಬಳಿಯ ಧರಿಸಿ ಕುರಿಗಳನ್ನು ಸಂರಕ್ಷಿಸುತ ಗುಡ್ಡಗಾಡುಗಳನ್ನು ತಿರುಗಿ ಬೇಸರಗೊಂಡಾಗ, ಕೊನೆಗೆ ಶಿವನೇ ಕುರಿಗಳನ್ನು ಕಾಯಲು ಪ್ರಾರಂಭಿಸಿದನು. ಚಿಗುರೆಲೆಗಳನ್ನು ಕತ್ತರಿಸಿ ಹಾಕುತ್ತ ತಿಳಿ ನೀರನ್ನು ಕುಡಿಸುತ್ತ ಕುರಿಮರಿಗಳನ್ನು ಬಗಲೊಳಗೆ ಹಿಡಿದು ಕೊಂಡು ಅತೀ ಪ್ರೀತಿಯಿಂದ ಅವುಗಳನ್ನು ರಕ್ಷಿಸಿಹತ್ತಿದನು. ನಡೆದೂ ನಡೆದೂ ಸಾಕಾಗಿ ಕುರಿಗಳನ್ನು ಬಿಟ್ಟು ಶಿವನು ಕೈಲಾಸಕ್ಕೆ ಬಂದನು. ಆಗ ಪಾರ್ವತಿಗೆ ಎಲ್ಲ ವೃತ್ತಾಂತವನ್ನು ವಿವರಿಸಿದನು. ಎಲ್ಲ ವೃತ್ತಾಂತವನ್ನು ಕೇಳಿಸ ಪಾರ್ವತಿಯು ಕುರಿಗಳನ್ನು ಕಾಯಲು ಆರಂಭಿಸಿದಳು. ಆಕೆಯೂ ಮಗ ಗಣಪನನ್ನು ಕಂಕುಳಲ್ಲಿಟ್ಟುಕೊಂಡು ಕುರಿಕಾಯುತ್ತ ಕಾಡು ಗುಡ್ಡಗಳನ್ನು ಅಲೆಯುತ್ತ ಜಾಗ್ರತಿಪುರ ಪ್ರದೇಶಕ್ಕೆ ಬಂದಳು. ಆ ಪ್ರದೇಶದ ಎಡಬಲದ ಗುಡ್ಡಗಳಲ್ಲಿ ಮೂರು ಕಣ್ಣುಳ್ಳ ಹುತ್ತವನ್ನು ಹುಡುಕಿ ಶಿವಪಂಚಾಕ್ಷರಿ ಮಂತ್ರವನ್ನು ಜಪಿಸುತ್ತ, ಆ ಹುತ್ತದೊಳಗೆ ಎಲ್ಲ ಕುರಿಗಳನ್ನು ನೂಕಿದಳು. ಕುರಿಗಳಿಗೆ ತೊಂದರೆಯಾಗದಂತೆ ತನ್ನ ಮೊಲೆಯ ಹಾಲಿನಿಂದ ಮಣ್ಣನ್ನು ಹದಮಾಡಿ ಮುಚ್ಚಿ ಮುತ್ತಿನ ಮೂಗುತಿಯ ಮುದ್ರೆಯನ್ನೊತ್ತಿದಳು. ಅದಕ್ಕೆ ವೀರಭದ್ರನನ್ನು ಕಾವಲಿಟ್ಟು ಆ ಮೂಗುತಿ ಮುತ್ತುಗದ ಮರವಾಗಿ ಬೆಳೆಯಲೆಂದು ಹರಿಸಿ ಹೋದಳು (೧೮-೩೩).

ಇತ್ತ ಜಾಗ್ರತಿ ಪಟ್ಟಣದಲ್ಲಿ ಶಿವಪದ್ಮನು ಶುದ್ಧಮನದಿಂದ ನಿತ್ಯ ಕುರಿಗಳನ್ನು ಕಾಯುತ್ತ ಸುಖದಿಂದಿರಲು, ಹೆಂಡತಿ ಜಿಂಕಾದೇವಿಯು ಗರ್ಭವತಿಯಾದ ಸುದ್ಧಿ ಕೇಳಿ ಆನಂದಭರಿತನಾಗಿ ಗುರುವನ್ನು ಧ್ಯಾನಿಸಿದನು. ರೇವಣಸಿದ್ಧನು ಪ್ರತ್ಯಕ್ಷನಾಗಿ ಜಿಂಕಾದೇವಿಯ ಹೊಟ್ಟೆಯನ್ನು ಅಮೃತ ಹಸ್ತದಿಂದ ಮುಟ್ಟಿ, ಅನುರೂಪನಾದ ಮಗನು ಜನಿಸುವನು. ಅವನಿಗೆ ನನ್ನ ಹೆಸರನ್ನಿಡಿರಿ ಎಂದು ಹಾರೈಸಿದನು. ಅದರಂತೆ ಜನಿಸಿದ ಮಗುವಿಗೆ ರೇವಣ್ಣನೆಂದು ನಾಮಕರಣ ಮಾಡಿ ಕಾಲ ಕಳೆಯುತಿದ್ದರು. ಒಂದು ದಿನ ಆದಿಗೊಂಡನು ತನ್ನ ಎಲ್ಲ ಮಕ್ಕಳನ್ನು ಹತ್ತಿರಕ್ಕೆ ಕರೆದು "ಎಲೆ ಸುತರೆ ಎಮ್ಮ ಹಿರಿಯರ್ಮಾಡುತಿರ್ದ ಹೊಲನೆಲಗಳಂ ಬಿಟ್ಟು ಕುರಿಗಳಂ ಕಾಯ್ದುದೊಂದೆ ಘನಕೆಲಸಮಂ ಮಾಡುತ್ತ ಸೋಮಾರಿತನದಿಂದ ವರ್ತಿಸುವದುಚಿತವಲ್ಲ", ನೇಗಿಲ ಹೂಡಿ ಹೊಲ ಹಸನು ಮಾಡಿದರೆ ಮಂದೆ ಸೊಗಸಾದ ಬೆಳೆ ಬಂದು ಪಶುಪಕ್ಷಿಗಳು ಬದುಕುವವಲ್ಲದೆ ನಮಗೂ ಸುಖ ಸಿಗುವುದು ಎಂದು ತಿಳಿ ಹೇಳಿದನು. ಈ ಮಾತುಗಳನ್ನು ಕೇಳಿದ ಜಾಯ್ಗೊಂಡ ಪಾಯ್ಗೊಂಡರು ವ್ಯವಸಾಯ ಮಾಡಲು ತಮ್ಮಿಂದ ಸಾಧ್ಯವಿಲ್ಲವೆಂದರು. ಆದರೆ ಶಿವಪದ್ಮನು ತಂದೆಯ ಮಾತಿಗೆ ಮರುನುಡಿಯದೆ ನೇಗಿಲ ತೆಗೆದುಕೊಂಡು ಎತ್ತುಗಳನ್ನು ಹೂಡಿಕೊಂಡು ಹೊಲದತ್ತ ನಡೆದನು. ಮನದಲ್ಲಿ ಗುರು ರೇವಣಸಿದ್ಧನನ್ನು ನೆನೆದು, ಹೊಲ ಊಳಲು ಆರಂಭಿಸಿದನು. ಮಧ್ಯಾಹ್ನದ ಹೊತ್ತಿಗೆ ತಾಯಿಯ ಮಗನಿಗೆ ಬುತ್ತಿಯನ್ನು ತಂದು ಊಟಕ್ಕೆ ಕರೆದಳು. ಅಷ್ಟರಲ್ಲಿ ಇನ್ನುಳಿದ ಮಕ್ಕಳು, ಶಿವಪದ್ಮನ ಮೇಲೆ ಇಷ್ಟೇಕೆ ಮಮತೆ ಎಂದು ಪ್ರಶ್ನಿಸಿದರು. ತಂದ ಬುತ್ತಿಯನ್ನು ಎಲ್ಲರೂ ಸೇರಿ ಉಂಡು ಉಳಿದುದನ್ನು ಚಲ್ಲಾಡಿ ಹಾಸ್ಯಮಾಡಿದರು. ನಂತರ ಶಿವಪದ್ಮನು ಗುರುವಿನ ಧ್ಯಾನದಿಂದ ಪರಮಾನ್ನವನ್ನು ಸೇವಿಸಿದನು. ಇದನ್ನೆಲ್ಲ ಕಣ್ಣಾರೆ ಕಂಡ ತಾಯಿ ಚುಂಚಲೆಯು ನಿಜವಾಗಿ ಈತ ಗುರುಪುತ್ರನೆಂದು ಕೊಂಡಾಡಿದಳು. ಸಂತೃಪ್ತಿಗೊಂಡ ಶಿವಪದ್ಮನು ಮತ್ತೆ ಹೊಲವನ್ನು ಊಳುತ್ತಿರುವಾಗ ಮೂರು ಕಣ್ಣಿನ ಹುತ್ತ ನೇಗಿಲಿಗೆ ತಾಕಿತು. ನೆಲವು ಬೀರಿ ಎಲ್ಲ ಕಡೆ ಅಗ್ನಿಯು ಹೊತ್ತಿಕೊಂಡು ಹುಲ್ಲು ಗಿಡಕಂಠಿತಗಳು ನಾಶವಾದವು. ಅಗ್ನಿಯ ಶಾಖದಿಂದ ಎತ್ತುಗಳು, ಪಶುಪಕ್ಷಿಗಳು ನೆಲಕ್ಕೆ ಉರುಳಿಬಿದ್ದು ನರಳಿದವು. ಇದನ್ನೆಲ್ಲ ಶಿವಪದ್ಮನು ನೋಡಿ ಕಣ್ಣೀರು ಸುರಿಸುತ್ತ ಗುರು ರೇವಣಸಿದ್ಧನನ್ನು ಧ್ಯಾನಿಸಿದನು. ಆಗ ಭಸ್ಮವನ್ನು ಎರಚಲು ಅಗ್ನಿಯು ನಂದಿತು. ಎತ್ತುಗಳನ್ನು ಎಬ್ಬಿಸಿಕೊಂಡು ಹಿಂದೆ ನೋಡಿದಾಗ ಹೊಸ ಬಣ್ಣದಿಂದ ಕಂಗೊಳಿಸುವ ಕುರಿಗಳ ಗುಂಪು

ಕಾಣಿಸಿಕೊಂಡಿತು. ಅವುಗಳನ್ನು ನೋಡಿ ಆಶ್ಚರ್ಯಚಕಿತನಾದ ಶಿವಪದ್ಮ ಇವು ಎಲ್ಲಿಂದ ಹುಟ್ಟಿ ಬಂದವು ಎನ್ನುತ್ತ, ನೇಗಿಲು ಈಸುಗಳನ್ನು ಹೊತ್ತುಕೊಂಡು ಅವುಗಳನ್ನು ಸಲಹುತ್ತ ನಡೆದನು (೩೪-೫೭).

**ಸಂಧಿ: ಆರು**

ಶಿವಪದ್ಮನು ತನ್ನ ಮಾತಾಪಿತರನ್ನು ಮರೆತು ಕುರಿಗಳನ್ನು ಕಾಯುತ್ತ ಸಂತೋಷದಿಂದ ಕೊಳಲನೂದುತ್ತ ಭುವನವೆಲ್ಲವ ತಿರುಗಿ ಬೇಸತ್ತನು. ಭಾವಶುದ್ಧದಿ ಧ್ಯಾನಿಸಲಾಗಿ ಶಿವ ಪ್ರತ್ಯಕ್ಷನಾಗಿ "ನಿನಗಾ ವಿಧದ ತೊಂದರೆಗಳಾವರಿಸಿದವು ಪೇಳ್" ಎನಲಾಗಿ ಶಿವಪದ್ಮನು 'ಕುರಿಗಳಂ ಕಾಯ್ದು ನಾಂ ಕೊರಗಿದೆ ಸೊರಗಿದೆ ವರಗಿರಿಗಳಂ ಸುತ್ತಿ ತವೆ ತೆರಳಿದೆ ಹೊರಳಿದೆ ಎಳೆಮರಿಗಳಂ ಹೊತ್ತು ಬಲುಬಳಲಿದೆ ತೊಳಲಿದೆ ಹೆಗ್ಗಾಡಿನೊಳ್ವಾಸಮಾದೇ ಕುರಿಗಳಂ ಕಂಡು ಕಂಡಳಕಿದೆ ಬಳಕಿದೆನತಿ ಕೆರೆಗಳಂ ಹುಡುಕಿ ನೀರ್ಗುಡಿಸಿದೆ ಪಡಿಸಿದೆ ಸುಖಹರಿಗಳಂ ನೋಡಿ ಭಯಧರಿಸಿದೆ ನಿನ್ನಯ ಪಾದವನುಜಗಳೆನಲೂ' ಎಂದು ವಿನಮ್ರವಾಗಿ ಹೇಳಿಕೊಂಡನು. ನೀನು ಬಳಲಬೇಡ, ನಿನ್ನ ಜೊತೆಯಲ್ಲಿ ವೀರೇಶನನ್ನು ಕಳುಹಿಸುವೆ, ಕುರಿಗಳನ್ನು ಸಲಹುತ್ತ ಸುಖಿಯಾಗಿರೆಂದು ಕೈಲಾಸದತ್ತ ಹೊರಟನು. ಇತ್ತ ಶಿವನ ಒಡ್ಡೋಲಗದಲ್ಲಿ ಪರಿವಾರದೊಡನೆ ಸಂತೋಷದಿಂದಿರುವಾಗ ಒಬ್ಬ ಮುನಿಯನ್ನು ಕಂಡು ಮೂವರು ಗಂಧರ್ವರು ಪರಿಹಾಸ್ಯ ಮಾಡಿದರು. ಆಗ ಮುನಿಯು ಕೋಪದಿಂದ ಮೂವರು ಭೂಲೋಕಕ್ಕೆ ತೆರಳಿ ಬಂಕಾಪುರದ ಸೀಮೆಯಲ್ಲಿ ಕಾಂಚಾಲಮರ, ಕಾಗೆ ಮತ್ತು ಕುದಯರಕ್ಕಸಿಗಳಾಗಿ ಜನಿಸಿ ಕಷ್ಟದಿಂದ ಹಲವು ದಿನ ಜೀವಿಸಿರಿ ಎಂದು ಶಾಪವಿತ್ತನು. ಅಲ್ಲದೇ ಗುರು ರೇವಣಸಿದ್ಧನ ಶಿಷ್ಯ ಶಿವಪದ್ಮ ನಿಮಗೆ ಮುಕ್ತಿ ಕೊಟ್ಟು ಪಾಲಿಸುವನೆಂದು ತಿಳಿಸಿದನು. ಮುನಿಯ ಶಾಪದಂತೆ ಮೂವರು ಗಂಧರ್ವರು ಕಾಗೆ ಕಾಂಚಾಲ ಮತ್ತು ಕುದಯರಕ್ಕಸಿಗಳಾಗಿ ಹುಟ್ಟಿ ಕೆಲಕಾಲ ಸುಮ್ಮನಿರಲು ಒಂದು ದಿನ ರಕ್ಕಸಿಯು ಜಾಗ್ರತಾಪುರಕ್ಕೆ ಆಗಮಿಸಿದಳು. ನಿನ್ನ ಮಗಳಾದ ಚುಮಲೆಯನ್ನು ನನಗೆ ಆಹಾರವಾಗಿ ಕೊಡು ಎಂದು ಅರಸನಲ್ಲಿ ಆರ್ಭಟಿಸಿದಾಗ, ಅರಸನ ಪರಿವಾರದವರು ಒಂದೊಂದು ಮನೆಯಿಂದ ಒಬ್ಬೊಬ್ಬರನ್ನು ದಿನನಿತ್ಯ ಕಳುಹಿಸುವುದಾಗಿ ಒಪ್ಪಿಕೊಂಡರು. ಹೀಗಿರಲು ಒಂದು ದಿನ ರಾಜಕುವರಿಯ ಸರದಿ ಬಂದಾಗ, ರಾಜರಾಣಿಯರು ಬಹುದುಃಖದಿಂದ ಮಗಳು ಚುಮಲೆಯನ್ನು ಆಹಾರವಾಗಿ ಕಳುಹಿಸಿದರು. ಸುಂದರಳಾದ ರಾಜಕುವರಿಯನ್ನು ನೋಡಿದ ರಕ್ಕಸಿಯು ಮಾನವ ರೂಪವನ್ನು ಧಾರಣಮಾಡಿ 'ಈಗೆನಗೆ ಪುತ್ರಿಯಾಗಿ ಸುಖದಿಂದಿರು' ಎಂದಳು (೧-೧೭).

ಹೀಗೆ ಹನ್ನೆರಡು ವರುಷಗಳು ಕಳೆಯಲಾಗಿ, ಒಂದು ದಿನ ಶಿವಪದ್ಮನು ಗಣತರಪ್ತಿಗೈಯಲು ಒಪ್ಪಕೊಂಡು ಬೆಂಕಿಯನ್ನು ತರಲು ಕಾಡಿಗೆ ತೆರಳಿದನು. ದೂರದ ಮನೆಯೊಂದರಲ್ಲಿ ಹೊಗೆ ಬರುವುದನ್ನು ಕಂಡು, ಇಂಥ ದಟ್ಟ ಅರಣ್ಯದ ಮಧ್ಯದಲ್ಲಿ ಮನೆಯನ್ನು ನಿರ್ಮಿಸಿದವರಾರು ಎಂದು ಯೋಚಿಸಿಹತ್ತಿದನು. ಮನೆಯ ಹತ್ತಿರ ಹೋಗಿ ಬೆಂಕಿಯನ್ನು ಕೊಡಬೇಕೆಂದು ಏರುಧ್ವನಿಯಲ್ಲಿ ಕೇಳಿದನು. ಆಗ ಮನೆಯೊಳಗಿರು ಚಲುವೆ ಚುಮಲಾದೇವಿ ಶಿವಪದ್ಮನನ್ನು ನೋಡಿ ಮನುಷ್ಯನಾದರೆ ಇಲ್ಲಿಗೆ ಬರುವುದು ಸಾಧ್ಯವೆ? ಎಂದು ಮನದಲ್ಲಿ ಅಂದುಕೊಂಡು, ನೀನಾರು, ನಿನ್ನ ಹೆಸರೇನು? ಎಂದು ಕೇಳಿದಳು. ನಾನು ಗುರು ರೇವಣಸಿದ್ಧನ ಶಿಷ್ಯನೆಂದು ಶಿವಪದ್ಮ ಮಾರುತ್ತರ ನೀಡಿದಾಗ, ಚುಮಲಾದೇವಿಯು ತನ್ನ ವೃತ್ತಾಂತವನ್ನು ಹೇಳಿ ಇಲ್ಲಿಗೆ ಬಂದ ಕಾರಣವನ್ನು ತಿಳಿಸಿದನು. ಆಗ ಶಿವಪದ್ಮ ಗಣತೃಪ್ತಿಗೊಳಿಸಿ ಮತ್ತೆ ಮರಳಿ ಬರುವೆನೆಂದು ವಚನವಿತ್ತು ಬೆಂಕಿಯನ್ನು ತೆಗೆದುಕೊಂಡು ಹೊರಟನು (೧೮-೨೭).

ಗಣಸಮೂಹದೊಂದಿಗೆ ಭೋಜನ ಸ್ವೀಕರಿಸಿದ ರೇವಣಸಿದ್ಧನು ಶಿವಪದ್ಮನಿಗೆ ಆಶೀರ್ವದಿಸಿ ನಡೆದನು. ವಚನಕೊಟ್ಟಂತೆ ಶಿವಪದ್ಮ ಉಳಿದ ಪ್ರಸಾದವನ್ನು ತೆಗೆದುಕೊಂಡು ಚುಮಲಾದೇವಿಯತ್ತ ನಡೆದನು. ಪ್ರಸಾದವನ್ನು ಸ್ವೀಕರಿಸಿದ ಆಕೆ ಕೈಮುಗಿದು ನನ್ನನ್ನು ವರಿಸಬೇಕೆಂದು ಬಿನ್ನೈಸಿಕೊಂಡಳು. ಹೀನ ಕುಲದವಳಾದ ರಕ್ಕಸಿಯಲ್ಲಿ ಅನುದಿನವೂ ಬಾಳುವ ನಿನ್ನನ್ನು ವರಿಸುವುದಾಗುವುದಿಲ್ಲ. ನಿನ್ನ ಮನದಾಸೆಯನ್ನು ಬಿಟ್ಟುಬಿಡು ಎಂದನು. ಆ ಮಾತಿಗೆ ಚುಮಲೆಯು "ಮನಸೋತ ಮಾನುನಿಯ ಬಿಟ್ಟು ಬಳಲಿಸುವದಿದು ಘನತರವೆ ನೀಡೆನ್ನಭಯ ಬಹಬೇಗದಿ ಮುನಿಸ್ಯಾಕೆ ಸಾಕು ಸೈರಿಸು ಶಾಂತನಾಗು ಕುಂದಿಟ್ಟು ಪೋಗುವುದು ಚಿತವೇ, ಜಾತಿದೋಷವೆನಿಸಬೇಡ" ಎಂದರುಹಿ ತೂಗುಮಂಚದ ಮೇಲೆ ಶಿವಪದ್ಮನನ್ನು ಕೂಡ್ರಿಸಿ ಪಂಚಾಮೃತವ ಉಣಬಡಿಸಿ ರತಿಕೇಳಿಯಲ್ಲಿ ಮಗ್ನರಾದರು. ಹೀಗಿರಲು ಮಧ್ಯರಾತ್ರಿ ರಕ್ಕಸಿಯು ಬಂದು ಆರ್ಭಟಿಸಹತ್ತಿದಳು. ಆಗ ಚುಮಲೆಯು ನಿನಗೆ ಬೇಸರವಾದರೆ ನನ್ನನ್ನು

ಈಗಲೇ ತಿಂದುಬಿಡು ಎಂದಾಗ ರಕ್ಕಸಿಯು, ಮಗಳೇ, ನಿನಗೆ ವೃಥಾ ಕಷ್ಟಕೊಡುವೆನೇ, ಮನೆಯಲ್ಲಿ ಹಾಯಾಗಿರು ಎಂದು ಹೇಳಿ ಆಹಾರ ಹುಡುಕುತ್ತ ಹೊರಟಳು. ಹೋಗುವಾಗ ಚುಮಲೆಯು ಹೀಗೆ ಹೊರಗೆ ಹೋದಾಗ ವೈರಿಗಳು ನಿನ್ನನ್ನು ಕೊಂದರೆ ನಾನಿಲ್ಲಿ ಒಬ್ಬಳೆ ಹೇಗಿರುವುದು ಎಂದಳು. ಈ ಮಾತಿಗೆ ರಕ್ಕಸಿಯು ಈ ಭೂಮಿಯಲ್ಲಿ ನನ್ನನ್ನು ಕೊಲ್ಲುವರುಂಟೆ, ಒಂದು ವೇಳೆ ಕೊಂದರೆ ಮನೆಯ ಮುಂದಿರುವ ಕಾಂಚಾಲ ಮರದಲ್ಲಿರುವ ಕಾಗೆಯನ್ನು ಕೊಲ್ಲಲು ಆ ಮರವು ನೆಲಕ್ಕುರುಳುವುದು. ಆಗ ನಾನು ನೆಲಕ್ಕುರುಳಿ ಸಾಯುವೆನು ಎಂಬ ಸಂಗತಿಯನ್ನು ಹೇಳಿ ಹೋದಳು. ಶಿವಪದ್ಮನು ಕಾಗೆಯನ್ನು ಕೊಲ್ಲುವ ಉಪಾಯನ್ನು ಹುಡುಕಿ ಗುರು ರೇವಣಸಿದ್ಧನನ್ನು ಸ್ಮರಿಸಿ ಕ್ಷಣಾರ್ಧದಲ್ಲಿಯೇ ಕಾಗೆಯನ್ನು ಕತ್ತರಿಸಿದಾಗ ರಕ್ಕಸಿಯು ನೆಲಕ್ಕೆ ಬಿದ್ದು ಸಾವನ್ನಪ್ಪಿತು. ಹೀಗೆ ಯತಿವರನ ಶಾಪು ಮುಗಿದು ಶಿವಪದ್ಮನಿಂದ ಮುಕ್ತಿಯನ್ನು ಹೊಂದಿ ಮೂವರು ಗಂಧರ್ವರು ಕೈಲಾಸಕ್ಕೆ ತೆರಳಿದರು (೧೮-೭೧).

**ಸಂಧಿ: ಏಳು**

ಇತ್ತ ಶಿವಪದ್ಮ ರಕ್ಕಸಿಯ ಅವಯವಗಳಿಂದ ಐವತ್ತೆರಡು ಬಿರುದಾವಳಿಗಳನ್ನು ಮಾಡಿ ಬಂಕಾಪುರದೊಳಿಟ್ಟು ಚುಮಲೆಯ ಜೊತೆಗೂಡಿ ಕುರಿಕಾಯುತ್ತ ಸುಖದಿಂದಿದ್ದನು. ಈ ವಿಷಯವನ್ನು ನಾರದನು ಕೈಲಾಸದಿ ಶಿವನಿಗೆ ತಿಳಿಸಲಾಗಿ, ಬಿರುದಾವಳಿಗಳನ್ನು ಕಾಯಲು ಬಾಗಿ ಬಂಕಣ್ಣನನ್ನು ಕರೆದು "ಹಾಳು ಬಂಕಾಪುರಕ್ಕೆ ಪೋಗಿ ಪದ್ಮನ ಬಿರಿದ ಮೇಳದಿಂದಿಟ್ಟು ಪಾಲಿಸು ಮುಂದೆ ಶಿವಸಿದ್ಧ ಬೀರನುದ್ಭವಿಸುತಿಹನು' ಎಂದು ಭೂಲೋಕಕ್ಕೆ ಕಳುಹಿಸಿದನು. ಇತ್ತ ಚುಮಲಾದೇವಿಯೊಂದಿಗೆ ಶಿವಪದ್ಮ ಕುರಿಗಳನ್ನು ಸಲಹುತ್ತಿರಲು ಆಕಾಶ ಮಾರ್ಗದಿಂದ ರೇವಣಸಿದ್ಧನು ಆಗಮಿಸಿದನು. ಶಿಷ್ಯನ ಭಕ್ತಿ ಮೆಚ್ಚಿ ದೇವಗನ್ನೆಯರನ್ನು ಕರೆದು ಚುಮಲಾದೇವಿಯೊಂದಿಗೆ ಶಿವಪದ್ಮನ ಮದುವೆಯನ್ನು ಮಾಡಿ, ಆಶೀರ್ವದಿಸಿ ಭುವನದತ್ತ ತೆರಳಿದನು (೧-೮).

ಗುರುನಾಮವನ್ನು ನೆನೆಯುತ್ತ ಕುರಿಗಳ ಹಿಂಡಿನೊಂದಿಗೆ ಪದ್ಮನು ಜಾಗ್ರತಿಪುರದ ಸೀಮೆಯೊಳಗಿರು ಆದಿಗೊಂಡನ ಹೊಲಕ್ಕೆ ಬಂದನು. ಕುರಿಗಳು ಆ ಹೊಲದಲ್ಲಿ ಮೇಯ್ದು ಬೆಳೆಗಳನ್ನು ನಾಶಮಾಡುತ್ತಿರುವುದನ್ನು ನೋಡಿ ಜಾಯ್ಗೊಂಡ ಪಾಯ್ಗೊಂಡ ಅಮರಗೊಂಡರೆಲ್ಲರೂ ಕೋಪಗೊಂಡು "ಭಂಡ ನೀನಾವವನೆಲೊ ಭರದಿಂದ ಬಂದು ಕುರಿಹಿಮಡುಗಳೆಮ್ಮ ಹೊಲಮಂ ಪೊಗಿಸಿ ಭುವನದೊಳು ಪುಂಡನಂತ್ಯೆ ತರುವಿ ನಿನಗೆ ನಾಚಿಕಿಲ್ಲವೆ ನೀಚ ದುರ್ನೀಚನೆ ದಂಡಿಸುವೆವೀಗ' ಎಂದು ಬೈದು ನೂಕಾಡಿದರು. ಬಂಧುಬಳಗದವರಂತೆ ಸುಮ್ಮನಿದ್ದ ಶಿವಪದ್ಮನ ಮುಖವನ್ನು ನೋಡಿ ಮಮ್ಮಲ ಮರುಗಿ, ಮನೆಗೆ ಹೋಗೋಣ ನಡೆ, ತಾಯಿ ನಿನಗಾಗಿ ಕೊರಗಿ ಕೊರಗಿ ದುಃಖಿತಳಾಗಿದ್ದಾಳೆ ಎಂದು ಸಹೋದರರು ಪರಿಪರಿಯಿಂದ ಬೇಡಿಕೊಂಡರೂ, ಕಿವಿಗೊಡದೆ ಕುರಿಗಳೊಂದಿಗೆ ಎಂದು ಸಹೋದರರು ಪರಿಪರಿಯಿಂದ ಬೇಡಿಕೊಂಡರೂ, ಕಿವಿಗೊಡದೆ ಕುರಿಗಳೊಂದಿಗೆ ಮುಂದಕ್ಕೆ ನಡೆದನು. ಮಗ ಬಂದ ಸುದ್ಧಿಯನ್ನು ತಿಳಿದು ತಾಯಿ ಬಂದು ಪುತ್ರನನ್ನು ಬಿಗಿದಪ್ಪಿ ಗದ್ದ ತುಟಿ ಹಿಡಿದು ಚಿಕ್ಕಮಗುವಿನಂತೆ ಮಾತನಾಡಿಸಿ ಮನೆಗೆ ನಡೆ ಎಂದಳು. ಆಗ ಪದ್ಮನು 'ಈ ಲೌಕಿಕದ ಸುಖದಾಪೇಕ್ಷೆ ಯನಗಿಲ್ಲಭವಜಾಲಮಂ ಪರಿದು ಮುಕ್ತನ ಮಾಡ್ದ ಗುರುಸಿದ್ಧಂ ಪಾಲಿಸುವೆ" ಎಂದು ಹೇಳಿದನು. ಇದನ್ನರಿತ ಶಿವ ಜಂಗಮವೇಷಧಾರಿಯಾಗಿ ಬಂದು 'ಪಿತಮಾತೆಯರ ಬಿಟ್ಟು ನಿನಗಿಷ್ಟ ದೈವತಮುಂಟೆ ಸಾಕು ನಡಿನಡಿ ಜಗದಿ ದುಷ್ಟನೆಂಬದೆ ಬಿಡರು ಕೇಳಿದ ಸುಜನರೆಲ್ಲ ಜನನಿಯಂ ಮನ್ನಿಸು' ಎಂದಾಗ ಚುಮಲೆಯನ್ನು ಕರೆದುಕೊಂಡು ಪದ್ಮನು ಮಾತಾಪಿತರ ಮನೆಗೆ ತೆರಳಿದನು. ಮಾತೆಪಿತ ಸಹೋದರರೊಂದಿಗೆ ಸುಖದಿದಿರಲು ಶಿವಪದ್ಮ ಮತ್ತು ಚುಮಲಾದೇವಿಯರಿಗೆ ರೇವಣ ಎಂಬ ಮಗ, ಕೆಲವು ದಿನಗಳ ನಂತರ ಒಬ್ಬ ಮಗಳು ಜನಿಸುವರು. ಹೀಗಿರಲು ಒಂದು ದಿನ ಗುರು ರೇವಣಸಿದ್ಧೇಶ್ವರನು ಆಗಮಿಸಿ 'ಈಗಲೀ ಲೌಕಿಕದ ವಿಷಯದಾಪೇಕ್ಷೆಯಂ ಬಿಟ್ಟು ಕೈಲಾಸಪುರಕೆ ಬೇಗದಿ ನಡೆ ಶಿವವಲ್ಲಭನನುಜ್ಞೆ ನಿನಗಾಗಿಹುದು ಪುಸಿಯಲ್ಲ" ಎನಲು ಶಿವಪದ್ಮನು ನಮಸ್ಕರಿಸಿ ಕೈಲಾಸಕ್ಕೆ ನಡೆದನು. ಶಿವಪದ್ಮನ ಮಹಿಮೆಗಳನ್ನು ಮನಸಾರೆ ಮೆಚ್ಚಿದ ಶಿವನು ಚಂದ್ರಗಿರಿ ಅರಸ ನಿಲಂಕಾರ ಮಹಾರಾಜನ ಮಗ ಬರ್ಮದೇವನ ಪುತ್ರನಾಗಿ ಜನಿಸಿ ಭೂಮಿಯಲ್ಲಿ ಅಪರಿಮಿತ ಮಹಿಮೆಗಳನ್ನು ತೋರು ಎಂದು ಹರಸಿ ಕಳುಹಿಸಿದನು (೯-೧೪).

ಒಂದು ದಿನ ಪುಷ್ಪದತ್ತನು ಶಿವಪೂಜೆಗೈದು ಕೃತಕೃತ್ಯನಾಗಬೇಕೆಂದು ಸಹಸ್ರದಳದ ಕಮಲವನ್ನು ಕೀಳಲು ಒಂದೊಂದು ಕಮಲಗಳು ಉದ್ಭವಿಸಲಾಗಿ ತನಗೆ ಬೇಕಾಗುವಷ್ಟನ್ನೇ ತಂದು ಶಿವಪೂಜೆಗೈದನು. ಆ ಶಿವಲಿಂಗವನ್ನೇ ನಿತ್ಯ ಪೂಜಿಸುವ ಹರಿದೇವ ಎಂಬ

ಅರಸನು ಶಿವವಾಣಿಯನ್ನು ಆಲಿಸಿ, ಗಂಗಾಜಲವನ್ನು ತಲರು ಕಾಶಿಗೆ ಹೊರಡುವಾಗ ಶಿವಲಿಂಗವನ್ನು ಪೂಜಿಸಲು ಚಂದ್ರಗಿರಿ ಅರಸ ನಿಲಂಕಾರ ಮಹಾರಾಜನ ಮಗ ಧರ್ಮಭೂಪಾಲನನ್ನು ನಿಯಮಿಸಿದನು. ಹಾಗೆಯೇ ಅವನಿಗೆ ತನ್ನ ತಂಗಿ ಸುರಾವತಿಯನ್ನು ಮದುವೆ ಮಾಡಿದನು. ವಿಧವಿಧದ ಹೂಗಳನ್ನು ತಂದು ಭಕ್ತಿಯಿಂದ ಪೂಜೆ ಮಾಡುತ್ತಿದ್ದ ಬರ್ಮದೇವನನ್ನು ಮೆಚ್ಚಿ ಶಿವನು ಹರಿದೇವನು ಬಂದರೆ ಒಳಗೆ ಬಿಡಬಾರದು ಎಂದು ದ್ವಾರಪಾಲಕರಿಗೆ ಆದೇಶವಿತ್ತನು. ಶಿವಪೂಜೆಗಾಗಿ ಒಳಗೆ ಬರಲು ದ್ವಾರಪಾಲಕರು ಶಿವನಾಜ್ಞೆಯನ್ನು ತಿಳಿಸಿದರು. ಬಹು ಕಷ್ಟಪಟ್ಟು ಹರಿದೇವನು ತನ್ನ ಕಾರ್ಯಸಾಧಿಸಿಕೊಳ್ಳಲು ಶಿವಪೂಜೆ ಮಾಡುತ್ತ 'ಪುತ್ರನಿಲ್ಲದವನಂ ಪೂಜೆಗೊಂಬುವುದು ಯೋಗ್ಯಮೇ' ಎಂದು ಕಪಟತನದಿಂದ ಕೇಳಿದನು. ದಿನಂಪ್ರತಿ ಬರ್ಮದೇವನು ಪೂಜೆ ಮಾಡಲು ಬಂದಾಗ ನಿನ್ನ ಪೂಜೆ ಸಾಕು ತಿರುಗಿ ನೀನು ಪಟ್ಟಣಕ್ಕೆ ನಡೆ ಎಂದು ಶಂಕರನು ಬಿರುನುಡಿಗಳನ್ನಾಡಿದನು. ಇದರಿಂದ ಚಿಂತಾಕ್ರಾಂತನಾದ ಬರ್ಮದೇವನನ್ನು ಸುರಾವತಿಯು ಕೇಳಿದಾಗ 'ನಿನ್ನ ಅಣ್ಣ ನಿನಗೆ ಬಂಜೆ ಎಂದು ಕರೆದನು. ಅದನ್ನು ಬಿನ್ನೈಸಿಕೊಳ್ಳಲು "ಹೊನ್ನುಹೊಕ್ಕುಳ ಸುವರ್ನದ ಜಡೆಯ ಭಸ್ತಿಯಲಿ ಉಡುಪನಂ ಧಿಕ್ಕರಿಪ ಬಾಲನುದ್ಭವಿಸುವನು ನಿನ್ನುದರದಿ' ಎಂದು ಹೇಳಿ, ಆ ಮಗುವಿಗೆ ಶಿವಸಿದ್ಧ ಬೀರನೆಂದು ಕರೆಯಬೇಕೆಂದು ಹಾರೈಸಿ ತೆರಳಿದನು (೧೫-೪೫).

ಇತ್ತ ಶಿವನ ಆಜ್ಞೆಯಂತೆ ಗುರು ರೇವಣಸಿದ್ಧನನ್ನು ಸ್ಮರಿಸುತ್ತ ಶಿವಪದ್ಮನು ಸಹೋದರರನನ್ನು ಕರೆದು ಸತಿಪುತ್ರರನ್ನು ಸಂತೈಸಿ 'ಅವನಿಯೊಳ್ಸುಖರೂಪರಾಗಿರಿ ಗುರುಲಿಂಗ ಜಂಗಮಕ್ಕಭಿನಮಿಸಿರಿ ತವೆ ಶೋಭಿಸುವ ಪಾಲ್ಮತವನುದ್ಧರಿಸಿರಿ ದುರ್ಭವದೂರ ರೇವಣಾರಾಧ್ಯನ ಸುಪಾದ ಸರೋಜವ ನಿರಂತರದಿ ಸ್ಮರಿಸಿರಿ ಸತ್ತ ಕುರಿಗಳಂ ಹೊತ್ತ ವಿಕ್ರೈಸಿರಿ" ಎಂದು ಹೇಳಿ ಕೈಲಾಸಕ್ಕೆ ನಡೆದನು. ಶಿವನು ನೀನೀಗ ಬರ್ಮದೇವನ ಮಡದಿಯ ಮಗನಾಗಿ ಜನ್ಮವ ಪಡೆದು ಈ ಲೋಕವನ್ನುದ್ಧರಿಸು ಎಂದು ಹರಸಿದನು. ಆಗ ಆಗ ಶಿವಪದ್ಮನು ಶಿವನಾಡಿದ ನುಡಿಗಳನ್ನು ಕೇಳಿ ನಮಸ್ಕಾರ ಮಾಡಿ ನನಗೊಬ್ಬ ಶಿಷ್ಯನನ್ನು ಕೊಡು ಎಂದು ಬೇಡಿಕೊಂಡನು. ಬಿಲ್ವಾಡಪುರದ ಸೋಮರಾಯನ ಸುಪುತ್ರ ಮಾಳಿಂಗರಾಯನನ್ನು ನಿನ್ನೊಂದಿಗೆ ಕಳುಹಿಸುತ್ತೇನೆ ಹೆದರಬೇಡ ಎಂದು ಶಿವನು ಹೇಳುತ್ತ 'ನೀನಂದ ನುಡಿಯೆ ನಿಜಮಂತ್ರನಿಂದೆದ್ದ ಸುಕ್ಷೇತ್ರ ಮೇಣ್ ಪಿಡಿದ ಮೃತ್ತಿಕೆ ನಿನಗೆ ಹೊನ್ನಾಗಲೆಂದು ಪಂಚಾಕ್ಷರಿಯ' ಬೋಧಿಸಿದನು. ಸುರಾವತಿಯು ಗರ್ಭಿಣಿಯಾಗಿ ಮಧುರಾನ್ನವನು ಬಯಸಿ ಅಣ್ಣನಾದ ಹರಿದೇವನಿಗೆ ಹೇಳಿಕಳುಹಿಸಿದಳು. ಸಹೋದರಿಯ ಗರ್ಭದಲ್ಲಿ ಜನಿಸುವವನು ಮುಂದೆ ತನ್ನ ಮಗಳ ಗಂಡನಾಗಿ ಬಂದು ನನ್ನನ್ನು ಪರಿಹಾಸ್ಯ ಮಾಡುವನೆಂದು ಭಾವಿಸಿ ಹರಿದೇವನು ವಿಷ ಬೆರಸಿದ ಮಧುರಾನ್ನವನ್ನು ತಂದನು. ಆದರೆ ಸುರಾವತಿಯು ಆ ಮಧುರಾನ್ನವನ್ನು ಸೇವಿಸದೆ, ಶುಭಮುಹೂರ್ತದಲ್ಲಿ ಸುವರ್ಣ ಜಡೆಯುಳ್ಳ ಸುಪುತ್ರನಿಗೆ ಜನ್ಮ ನೀಡಿದಳು. ಈ ಸುದ್ದಿಯನ್ನು ತಿಳಿದ ಹರಿದೇವನು ಜ್ಯೋತಿಷಿಯ ವೇಷಧಾರಿಯಾಗಿ ತಂಗಿಯ ಮನೆಗೆ ಬಂದು 'ಶಿಶು ಪುಟ್ಟಿದ ಮುಹೂರ್ತವು ಹೀನವು ಒಂದು ಮಾಸಕ್ಕೆ ನಿನ್ನಾಗ್ರಜೆಗೆ ಮರಣವು, ಪುಲಿಗಳಿಹ ಗಿರಿಗಂಹರದ ಮಧ್ಯ ಕಾಂತಾರದಲಿ ಬಿಡಲ್ಕಾ ಮರಣ ತಪ್ಪುವದು' ಎಂದು ಹೇಳಿದನು. ಈ ಮಾತನ್ನು ನಂಬಿದ ಸುರಾವತಿಯು ಮಗುವನ್ನು ಕೊದಲಿಬನದ ಹಾಲಹೇವಲಿ ಹಳ್ಳದ ವಟವೃಕ್ಷದ ಕೆಳಗೆ ಬಿಟ್ಟು ಬಂದಳು. ಪಾರ್ವತಿ ಸಹಿತ ಶಿವನು ಹಾಲಹೇವಲಿ ಹಳ್ಳಕ್ಕೆ ಧಾವಿಸಿ ಬಂದು ಸುಪ್ರೇಮದಿಂದ ಆ ಮಗುವಿಗೆ ಶಿವಸಿದ್ಧಬೀರ ಎಂದು ಹೆಸರಿಟ್ಟು 'ಭೂಮಂಡಲದಿ ಘನಾರ್ಭಟದಿ ರಿಪುಗಳ ಗೆದ್ದು ಭುವನದೊಳ್ಬಾಳು' ಎಂದು ಹರಸಿ ಕೊಲ್ಲಿಪಾಕಿಗೆ ಬಂದನು. ಆ ಪುರದಲ್ಲಿರುವ ಮಾದಾರ ಚನ್ನಯ್ಯನ ಮನೆಗೆ ಹೋಗಿ ಆತನೊಂದಿಗೆ ಅಂಬಲಿಯನ್ನು ಕುಡಿದು ಆನಂದ ಹೊಂದಿದನು. ಮಾರ್ಗ ಮಧ್ಯದಲ್ಲಿರುವ ವಟವೃಕ್ಷವನ್ನು ನೋಡಿ, ಈ ವೃಕ್ಷದ ಕೆಳಗೆ ವಿಶ್ರಮಿಸಿಕೊಳ್ಳುವ ಸುರಕನ್ಯೆಯರು ಗರ್ಭವತಿಯಾಗಲೆಂದು ಹರಸಿ ಮುಂದೆ ನಡೆದನು. ದೇವಗನ್ಯೆಯರು ಗರ್ಭವತಿಯರಾಗಿ ಲಕ್ಷ್ಮಮ್ಮ, ಮಾಯಮ್ಮ, ಮಂಕಮ್ಮ, ಮಕಾಳೆಮ್ಮ ಮತ್ತು ಅಕ್ಕಮ್ಮ ಎಂಬ ಮಕ್ಕಳಿಗೆ ಜನ್ಮ ನೀಡಿದರು. ಇವರೆಲ್ಲ ದೊಡ್ಡವರಾಗಿ ಕುರಿ ಮೇಯಿಸುತ್ತ ಹಾಲಹೇವಲಿ ಹಳ್ಳದತ್ತ ಬಂದರು. ಅಲ್ಲಿ ಮಗುವಿನ ಚೀತ್ಕಾರ ಧ್ವನಿಯನ್ನು ಕೇಳಿ, ಆ ಮಗು ನನಗೆ ಬೇಕು, ತನಗೆ ಬೇಕು ಎಂದು ಅಕ್ಕತಂಗಿಯರು ಜಗಳಕ್ಕೆ ನಿಂತರು. ಆಗ ಅಕ್ಕಮ್ಮ ಒಂದು ಉಪಾಯವನ್ನು ಹೇಳಿ ಮರದ ಅಡಿಯಲ್ಲಿ ನಾವೆಲ್ಲರೂ ಉಡಿ ಒಡ್ಡಿಕೊಂಡು ನಿಲ್ಲೋಣ, ಆ ಮಗು ಯಾರ ಉಡಿಯಲ್ಲಿ ಬೀಳುತ್ತದೆಯೋ ಅವರಿಗೆ ಆ ಮಗು ಸಲ್ಲತಕ್ಕದ್ದು ಎಂಬ ತೀರ್ಮಾನಕ್ಕೆ ಬಂದರು. ಮಗುವು ಅಕ್ಕಮ್ಮನ ಉಡಿಯಲ್ಲಿ ಬಿತ್ತು. ಮಗುವಿನ ಸುಲಕ್ಷಣಗಳನ್ನು ನೋಡಿ ಶಿವನು ನಿಜರೂಪದಲ್ಲಿ ಕಾಣಿಸಿಕೊಮಡು ಸಿದ್ಧಬೀರನ ಶಿರದೊಳಭವ ಕರವಿಟ್ಟು 'ಭವನೋದ್ಧಾರವಾಗಲಿ ಸಕಲ ಯಂತ್ರಮಂತ್ರಗಳು ಸಿದ್ಧಿಯಾಗಲಿ ಪೇಳಿದನ್ನೃತ ವಚನಗಳೆಲ್ಲ

ಭೂವಲಯದೊಳಗೆ ನಿರುತ ಬದ್ಧವಾಗಲಿ ರಿಪುಗಳಂ ಜೋಡುವದಕೆ ಸನ್ನುದ್ಧರಾಗಲಿ ಮುಂದೆ ಶ್ರೀ ರೇವಣಾರಾಧ್ಯಂ ಸಿದ್ಧಗುರು ನಿನಗಾಗಲೆಂದು' ಆಶೀರ್ವದಿಸಿ ಕೈಲಾಸಕ್ಕೆ ತೆರಳಿದನು (೪೭-೯೦).

**ಸಂಧಿ: ಎಂಟು**

ಅಕ್ಕಮ್ಮ ಪ್ರತಿದಿನ ಶಿವನ ಅನುಜ್ಞೆಯಂತೆ ಶಿವಿಸಿದ್ಧಬೀರನಿಗೆ ಕಂಚುಬೋಳಿ ಸುಗುಡಿಯ ಕೊರಳ ಮೊಲೆಯ ಹಾಲನ್ನು ಕುಡಿಸುತ್ತ, ಆ ಪರಮ ಕುರಿಯನ್ನು ಪೂಜಿಸುತ್ತಿದ್ದಳು. ಓರಿಗೆಯ ಹುಡುಗರೊಂದಿಗೆ ಚೆಂಡಿನಾಟವಾಡಲು ಹೋಗುವ ಇಚ್ಛೆಯನ್ನು ಶಿವಸಿದ್ಧ ಬೀರ ಅಕ್ಕಮ್ಮನಿಗೆ ತಿಳಿಸಿದನು. ಪುಂಡ ಹುಡುಗರೊಡನೆ ಆಟಕ್ಕೆ ಹೋಗಿ ಪ್ರಚಂಡನೆನಿಸಿಕೊಳ್ಳಬೇಡವೆಂದು ಹೇಳಿದರೂ ಆತ ಕೇಳಲಿಲ್ಲ. ಒಂದು ದಿನ ನಡುಬೀದಿಯಲ್ಲಿ ಆಟವಾಡುತ್ತಿರುವಾಗ ಸಂಗನ ಬಸವನೆಂಬ ಶ್ರೀಮಂತನ ಮಗ ಲಿಂಗಬಸಪ್ಪನಿಗೆ ಚಂಡು ತಾಕಿ ಸತ್ತುಬಿದ್ದ. ಆಗ ಲಿಂಗಬಸಪ್ಪನ ತಂದೆತಾಯಿಯರು ತಕ್ಷಣ ಬಡಿಗೆ ಕೋಲು ಕೊತ್ವಾಲಗಳೊಂದಿಗೆ ಥಳಿಸಲು ಬಂದರು. ಆಗ ಶಿವಸಿದ್ಧ ಬೀರನು ಗುರು ರೇವಣಸಿದ್ಧನನ್ನು ಮನದಲ್ಲಿ ಸ್ಮರಿಸಿ ವಿಭೂತಿಯನ್ನು ಲಿಂಗಬಸಪ್ಪನಿಗೆ ಲೇಪಿಸಿದನು. ಆಗ ಲಿಂಗಬಸಪ್ಪ ಎಚ್ಚರಗೊಂಡನು. ಮುಂದೆ ಅಕ್ಕಮ್ಮನೊಂದಿಗೆ ಶಿವಸಿದ್ಧ ಬೀರ ದಾರಿಯಲ್ಲಿ ಬರುವಾಗ ಇಬ್ಬರೂ ಮನುಷ್ಯಾಕೃತಿಗಳಾಗಿ ಹೊರಬಂದು ಇಲ್ಲಿ ನಾಗಠಾಣ ಗ್ರಾಮವಾಗಲಿ ಎಂದು ಹರಸಿ ಬೆಳ್ಳಿಗುತ್ತಿ ಗ್ರಾಮಕ್ಕೆ ಬಂದರು. ಅಲ್ಲಿ ಸತ್ತ ಕುರಿಗಳನ್ನು ಬದುಕಿಸಿದ ಅವರಿಗೆ ಆ ಗ್ರಾಮದ ಹಿರಿಕುರುಬನಾದ ಹೇಮಣ್ಣನು ಮನೆಯೊಂದನ್ನು ಕಟ್ಟಿಸಿಕೊಟ್ಟನು (೧-೨೮).

ಹೀಗೆ ಬೆಳ್ಳಿಗುತ್ತಿ ಗ್ರಾಮದಲ್ಲಿ ಶಿವಸಿದ್ಧ ಬೀರನು ಆಟವಾಡುತ್ತಿರುವಾಗ ಬಿಲ್ಲಿನಿಂದ ಬಾಣವನ್ನು ಎಸೆಯುತ್ತಿರುವಾಗ ನೀರು ತರುವ ಏಳ್ನೂರು ತರುಣಿಯರ ತುಂಬಿದ ಕೊಡಗಳಿಗೆ ತಾಗುತ್ತದೆ. ಆ ಬಾಣದ ಏಟಿನಿಂದ ಕೊಡಗಳಿಗೆ ಒಮ್ಮೆಲೆ ತೂತು ಬಿದ್ದವು. ಆ ತರುಣಿಯರು ಕೋಪಗೊಂಡು 'ಜನನಿ ಜನಕರ ಕಾಣದ ಪರಮ ನೀಚನೆ' ಎಂದು ನಿಂದಿಸಿದರು. ಮನದಲ್ಲಿ ಬಹು ನೊಂದುಕೊಂಡ ಶಿವಸಿದ್ಧ ಬೀರನು ಅಕ್ಕಮ್ಮನಲ್ಲಿ ಬಂದು ನನ್ನ ತಂದೆ ತಾಯಿಗಳಾರು ಎಂಬುದನ್ನು ತಿಳಿಸಬೇಕೆಂದು ಹಟವಿಡಿದನು. ನಿನ್ನ ತಂದೆ ಭರ್ಮದೇವ, ನಿನ್ನ ತಾಯಿ ಹರಿದೇವನ ಸಹೋದರಿ ಸುರಾವತಿ, ನಿನ್ನ ಜನ್ಮಸ್ಥಳ ಇಂದುಗಿರಿ ಎಂದು ವಿವರವಾಗಿ ಹೇಳಿದಳು. ಹರಿದೇವನ ಮಗಳಾದ ಕನ್ನಿಕಾಮಾಲೆಯನ್ನು ತರುವೆನೆಂದು ಶಪಥ ಮಾಡಿ ಗುರು ರೇವಣಸಿದ್ಧನನ್ನು ಸ್ಮರಿಸುತ್ತ, ಅಕ್ಕಮ್ಮನಿಗೆ ನಮಸ್ಕರಿಸಿ ವೈಕುಂಠಪುರಕ್ಕೆ ಹೊರಟನು. ಬಳೆಗಾರನ ವೇಷತೊಟ್ಟು ಹೆಗಲ ಮೇಲೆ ಬಳೆಗಳನ್ನು ಹೊತ್ತುಕೊಂಡು ರಾಜಬೀದಿಯಲ್ಲಿ ನಡೆದು ಅರಮನೆಯನ್ನು ಪ್ರವೇಶಿಸಿದನು. ಕನ್ನಿಕಾಮಾಲೆಗೆ ಬಳೆಗಳನ್ನು ತೊಡಿಸುತ್ತ 'ಫುಲ್ಲನೇತ್ರಿಯೇ ನಿನ್ನಗಿದು ತವರ್ಮನೆಯೋ ಮೇಣೊಲ್ಲಭನ ಮನೆಯೋ ಮತ್ತೀಖಳರ ಕಾವಲಿಯೊಳಿಟ್ಟರೇಕೆ' ಎಂದು ಪ್ರಶ್ನಿಸಿದನು. ಅದಕ್ಕೆ ಅವಳು ಶಿವಸಿದ್ಧ ಬೀರೇಶನು ನನ್ನನ್ನು ಒಯ್ಯುತ್ತಾನೆಂಬ ಭೀತಿಯಿಂದ ನನ್ನನ್ನು ಬಂಧನದಲ್ಲಿಟ್ಟಿದ್ದಾರೆ ಎಂದು ಕಣ್ಣೀರು ಸುರಿಸ ಹತ್ತಿದಳು. ಕುಮಾರಿಯೇ ಮನದಲ್ಲಿ ನೀನು ಕೊರಗಬೇಡ. ಬೆಳ್ಳಿಗುತ್ತಿಗೆ ನಾನು ಹೋಗಿ ಶಿವಸಿದ್ಧ ಬೀರೇಶನನ್ನು ಕರೆತರುವೆ ಎನ್ನುತ್ತ ಅರಮನೆಯಿಂದ ಹೊರನಡೆದನು (೨೯-೪೫).

ಮಾರನೆಯ ದಿನ ಸಿಂಪಿಗನ ವೇಷಧಾರಿಯಾಗಿ ತರತರದ ಬಣ್ಣದ ಕುಪ್ಪಸಗಳನ್ನು ಹೊತ್ತುಕೊಂಡು ರಾಜಬೀದಿಯಲ್ಲಿ ಹೋಗುವಾಗ ದಾಸಿಯರು ರಾಜಪುತ್ರಿ ಕನ್ನಿಕಾಮಾಲೆಯ ಹತ್ತಿರ ಕರೆದುಕೊಂಡು ಹೋದರು. ಅಲ್ಲಿಯೂ ಕನ್ನಿಕಾಮಾಲೆಯು ನೀನಾರು ಎಂದು ಪ್ರಶ್ನಿಸಲಾಗಿ 'ಇಂದುಗಿರಿ ಪುರದ ಬರ್ಮಭೂಪನ ಸತಿ ಸುರಾವತಿಯ ಸುಪುತ್ರನು ನಾನು, ಹರಿದೇವನ ಅಳಿಯ, ಗುರು ರೇವಣಸಿದ್ಧನ ಪರಮ ಶಿಷ್ಯನಾದ ಶಿವಸಿದ್ಧ ಬೀರೇಶ, ನಿನ್ನನ್ನು ಒಯ್ಯಬೇಕೆಂದು ಬಂದಿಹೆನು" ಎಂದನು. ಸಂತೋಷಗೊಂಡ ರಾಜಪುತ್ರಿಯನ್ನು ಕುದುರೆಯ ಮೇಲೆ ಕೂಡ್ರಿಸಿಕೊಮಡು ಶಿವಸಿದ್ಧ ಬೀರನು ಅಂತರಮಾರ್ಗವಾಗಿ ಶಿವಪುರಕ್ಕೆ ನಡೆದನು (೪೭-೬೫).

**ಸಂಧಿ: ಒಂಭತ್ತು**

ಶಿವಸಿದ್ಧ ಬೀರೇಶನು ಶಿವನ ಪಾದಗಳಿಗೆ ನಮಸ್ಕರಿಸುತ್ತ ನನ್ನ ಸೇವೆಗೆ ಒಬ್ಬ ಶಿಷ್ಯನನ್ನು ಕರುಣಿಸಿ ಎಂದು ಬೇಡಿಕೊಳ್ಳಲಾಗಿ, ವೀರಮಾಳಿಂಗ ನಿನ್ನ ಶಿಷ್ಯನೆಂದು ಹೇಳಿ ಬ್ರಾಹ್ಮಿ ದೇವಿಯಲ್ಲಿ ಮೊರೆಯಿಡು ಅವಳು ಆ ಶಿಷ್ಯನನ್ನು ತೋರಿಸುವಳು ಎಂದನು. ಅದರಂತೆ ಬೀರೇಶನು ಸಪ್ತಸಮುದ್ರವನ್ನು ದಾಟಿ ಬ್ರಾಹ್ಮಿದೇವಿಯಲ್ಲಿ ಭಕ್ತಿಯಿಂದ ಬೇಡಿಕೊಂಡನು. ಪ್ರಸನ್ನಳಾದ ಆಕೆ ವೀರಮಾಳಿಂಗರಾಯನ ಪೂರ್ಣ ಇತಿಹಾಸವನ್ನು ಹೀಗೆ ಅರುಹಿದಳು. ಬಿಲ್ವಾಡಪುರದ ಅರಸ ತುಕ್ಕಪ್ಪರಾಯನು ಸಹೋದರ ಸೋಮರಾಯನಿಗೆ ಕುದುರೆ ಆನೆಗಳನ್ನು ಕಾಯ್ದುಕೊಂಡಿರಲು ಒಪ್ಪಿ ಸುಖದಿಂದಿರಲು, ಒಂದು ದಿನ ಗೌಳಿಗರ ಎಮ್ಮೆ ಕೋಣಗಳು ಮಲಗಿದ್ದ ಸೋಮರಾಯನನ್ನು ಎಬ್ಬಿಸಿದವು. ಅವುಗಳನ್ನು ಹಿಂಬಾಲಿಸುತ್ತ ಹೋಗಲು ಕುಲದೇವತೆಗಳಿಗೆ ಬಲಿಕೊಟ್ಟು ಪೂಜಿಸುತಲಿದ್ದ ಗೌಳಿಗರಿಂದ ವೀಳ್ಯವ ತೆಗೆದುಕೊಂಡನು. ಇದರಿಂದ ಕುಪಿತಗೊಂಡ ಗೌಳಿಗರ ಕುಲದೇವತೆ ಅರಮನೆಯನ್ನು ಪ್ರವೇಶಿಸಿ ಸಕಲ ಸಂಪತ್ತುಗಳನ್ನು ನಾಶ ಮಾಡಿ ತುಕ್ಕಪ್ಪರಾಯನಿಗೆ ಕಷ್ಟವಕೊಟ್ಟಳು. ಆಗ ಸೋಮರಾಯನು ಸಹೋದರನ ಹುಡುಕುತ್ತಲಿರುವಾಗ ಅಡವಿಯಲ್ಲಿದ್ದ ಶವವನ್ನು ನೋಡಿ ದುಃಖಿಸಿದನು. ಕೊಳಲನೂದಲು ಹಟ್ಟಿಯಿಂದ ದನಕರುಗಳು ಹೊರಬಂದವು. ಮನೆದೇವ ಗೋರಖನಾಥ, ಸೊನ್ನಲಿಗೆ ಸಿದ್ಧಭೈರವನು ಕೂಡಿ ಅಲ್ಲಿಗೆ ಬಂದು ಸಂತೈಸುತ್ತ ದೇವಿಯ ಪೂಜೆ ಮಾಡೆಂದು ತಿಳಿಸಿದರು. ಅದರಂತೆ ಶಿವನಾಮ ಜಪಿಸುತ್ತ ಪೂಜೆ ಮಾಡಿದಾಗ ತುಕ್ಕಪ್ಪನು ಎದ್ದು ಕುಳಿತನು. ಗೋರಖನಾಥನು ತುಕ್ಕಪ್ಪನ ಮಡದಿ ಕಾನಕಾಬಾಯಿಗೆ ಮಾಣಿಕ್ಯವೊಂದನ್ನು ಕೊಟ್ಟು "ನಿನಗೋರ್ವ ಕುಲದೀಪ ಸುತನುದಯಿಸುವ ನಿನ್ನ ಮನದೊಳಗಿಹ ನಿಜಾಪೇಕ್ಷೆ ತೀರಿಸಿದೆನಾ ಬಾಲಕಗೆ ವೀರಮಾಳಿಂಗ"ನೆಂಬ ಹೆಸರನ್ನಿಡು ಎಂದನು. ಹಾಗೆಯೇ ಸೋಮರಾಯನ ಸತಿಗೆ ಜಪಮಣಿಯೊಂದನ್ನು ನೀಡಿ, ನಿತ್ಯ ಸೇವಿಸು, ನಿನಗೂ ಸಹ ಪುತ್ರನು ಜನಿಸುವನು. ಆತನಿಗೆ ಜಕ್ಕಪ್ಪ ಎಂದು ಹೆಸರಿಡಬೇಕೆಂದನು. ಹೀಗೆ ಬ್ರಾಹ್ಮಿದೇವಿಯಿಂದ ಮಾಳಿಂಗರಾಯನ ಪೂರ್ಣ ವಿವರಗಳನ್ನು ತಿಳಿದ ಶಿವಸಿದ್ಧ ಬೀರೇಶನು ಶಿವಧ್ಯಾನ ಮಾಡುತ್ತ ಬಿಲ್ವಾಡಪುರದ ಜಲಮಾಯಿ ಕೆರೆಯ ದಡದಲ್ಲಿರುತ್ತಿದ್ದನು. ಅಲ್ಲಿಗೆ ಬಂದ ವೀರಮಾಳಿಂಗನನ್ನು ಕರೆದೊಯ್ದು ಶಿವನಿಗೆ ತೋರಿಸಿದಾಗ 'ಸುಜ್ಞಾನಿಯುತನಾಗು ಮೇಣಾಳುಗಳಿಗರಸನಾಗು ವರಸಿದ್ಧ ಬೀರಂಗೆ ಸಚ್ಛಿಷ್ಯನಾಗು ನೀನೊರೆದದ್ದು ದಿಟವಾಗಲಿ' ಎಂದು ಶಿರದ ಮೇಲೆ ಹಸ್ತವನ್ನಿಟ್ಟು ಹಾರೈಸಿ ಇಬ್ಬರನ್ನೂ ಭೂಲೋಕಕ್ಕೆ ಕಳುಹಿಸಿದನು. ಇವರೀರ್ವರೂ ಭೂಲೋಕಕ್ಕೆ ಬರುವಾಗ ದಾರಿಯಲ್ಲಿ ಮದವೇರಿದ ಕೋಣವೊಂದು ಶಿವಸಿದ್ಧ ಬೀರೇಶನ ಮೇಲೆರಗಲು ಕ್ಷಣಾರ್ಧದಲ್ಲಿ ಅದನ್ನು ಕೊಂದು ಹಾಕಿದನು. ಕೋಣ ಬಿದ್ದಲ್ಲಿ ಕೋಣಗನೂರು ಆಗಲೆಂದೂ, ಮುಂಡ ಬಿದ್ದಲ್ಲಿ ಮುಂಡಗನೂರು ಆಗಲೆಂದು ಹರಸಿ ಮುಂದೆ ನಡೆದನು. ಆಗ ರೇವಣಸಿದ್ಧ ಪ್ರತ್ಯಕ್ಷನಾಗಿ ಇಬ್ಬರನ್ನು ಆಶೀರ್ವದಿಸಿ ಅಪಾರ ಮಹಿಮೆಯನ್ನು ತೋರಿ ಕೈಲಾಸಕ್ಕೆ ಬನ್ನಿರಿ ಎಂದು ಹೇಳಲು, ಶಿವಸಿದ್ಧ ಬೀರೇಶನು 'ಸದ್ಗುರುವೆಯನ್ನಂನುದ್ಧರಿಸಿದಿರಿ ಪಾಲ್ಮತೋತ್ಪತ್ಯ ಪರಿಯನೆಲ್ಲವನು ಮತ್ತೀ ಮತೋದ್ಭವರ ಸಚ್ಚರಿತಮಂ ಪೇಳೆಂದನು". ಆತನ ಕೋರಿಕೆಯಂತೆ ಬ್ರಹ್ಮಾಂಡ ಪುರಾಣ, ವ್ಯಾಸಪುರಾಣ ಮತ್ತು ವೇದೋಪನಿಷತ್ತುಗಳ ಆಧಾರದಿಂದ ಕುರುಬರ ಇತಿಹಾಸವನ್ನು ವಿವರಿಸಿದನು. ಕಾಂಪಿಲ್ಯ, ಪೃಥಕ, ಶೃಣಿ, ಮಹಬಲ, ಗಣಕ, ಮೃತಿ, ಕುಶಲ, ಪ್ರಭಾವ, ಕರುಣ, ಸುವರ್ಣ, ವಿಭಾಗ ಹೀಗೆ ಅನೇಕ ಗೋತ್ರಗಳ ಬಗ್ಗೆ ತಿಳಿಹೇಳಿದನು. ಬೀರೇಶ್ವರನು ತನ್ನ ಶಿಷ್ಯರಿಗೆ ಪಾರಮಾರ್ಥವನ್ನು ಉಪದೇಶಿಸಿ ಭೂಲೋಕದ ಸುಖವನ್ನು ತ್ಯಜಿಸಿ ಮಾಘಮಾಸ ಶುಕ್ಲಪಕ್ಷದ ತ್ರಯೋದಶಿ ಭಾನುವಾರ ದಿವಸ ಕೈಲಾಸಕ್ಕೆ ತೆರಳಿದನು (೧-೮೭).

ಆದ್ದರಿಂದ ಹಾಲುಮತದವರಿಗೆ ಭಾನುವಾರವೇ ಮುಖ್ಯವಾದ ಸುದಿನವಾಗಿದೆ. ಸೃಷ್ಟಿಯಲ್ಲಿ ಹಾಲುಮತದವರು ಭಸ್ಮರುದ್ರಾಕ್ಷಿಗಳನ್ನು ಧರಿಸುತ್ತ ಶಿವನನ್ನು ಧ್ಯಾನಿಸುತ್ತ ಅಹಿಂಸಾ ಪರರಾಗಿ ಬಾಳಿರೆಂದು ಹರಸಿದನು. ಮತ್ತೂ ರೇವಣಸಿದ್ಧ ಮೇಕೆ ಕುರಿಗಳ ತುಪ್ಪಟದಿಂದ ವಸ್ತ್ರಗಳನ್ನು ತಯಾರಿಸಿ ಜನರಿಗೆ ಕೊಡುತ್ತ ಕುರಿಗಳನ್ನು ಸಲಹುತ್ತ ಇರಿ ಎಂದು ತಿಳಿಸಿದನು. ಅಲ್ಲದೇ ಕುರಿಯ ಹಿಕ್ಕೆಗಳನ್ನೇ ಲಿಂಗಗಳನ್ನಾಗಿ ಮಾಡಿ ಪೂಜೆ ಮಾಡಿಕೊಂಡು ಶ್ರೀಶೈಲ ಮಲ್ಲಿಕಾರ್ಜುನನ್ನು ಕಂಡುಕೊಂಡವನು ಶಿವಶರಣ ವೀರಗೊಲ್ಲಾಳ. ಆತನ ಭಕ್ತಿಯ ಪರಾಕಾಷ್ಠೆಯನ್ನು ರೇವಣಸಿದ್ಧ ಬೀರೇಶ್ವನಿಗೆ ತಿಳಿಸಿದನು. ಹೀಗೆ ಭಕ್ತಿಪರವಶನಾಗಿ ಕೇಳುತ್ತಿದ್ದ ಬೀರೇಶ್ವರನಿಗೆ ರೇವಣಸಿದ್ಧ ವೀರಮಾಳಿಂಗರಾಯನೊಂದಿಗೆ ನೀನು ಅನಂತ ಮಹಿಮೆಗಳನ್ನು ತೋರು ಎಂದನು. ಆನಂದಭರಿತನಾದ ಬೀರೇಶ್ವರನು ಅನಂತ

ಪ್ರಣಾಮಗಳನ್ನು ಸಲ್ಲಿಸಿ ಕರಮುಗಿದು ನಿಂತನು. ಆಗ ರೇವಣಸಿದ್ಧನು ಗುರುಶಿಷ್ಯರಿಬ್ಬರೂ ಸಂತೋಷದಿಂದ ಬಾಳಿರಿ ಎಂದು ಹರಸಿ ಕೊಲ್ಲಿಪಾಕಿಗೆ ಬಂದು ಸೋಮೇಶ್ವರ ಲಿಂಗದಲ್ಲಿ ಐಕ್ಯನಾದನು (೮೭-೧೦೭).

ಇತ್ತ ಬೀರೇಶ್ವರ ಮತ್ತು ಮಾಳಿಂಗರಾಯರಿಬ್ಬರು ದೇಶ ಸಂಚರಿಸುತ್ತ ಹಾಲ್ಭಾವಿ ಗ್ರಾಮಕ್ಕೆ ಬಂದರು. ಗುರುವಿನ ಆಜ್ಞೆಯಂತೆ ಮಾಳಿಂಗರಾಯ ಬಡವಿಯಾದ ಹೆಂಡದ ದೇವಮ್ಮನ ಮನೆಗೆ ಭಿಕ್ಷಕ್ಕೆ ಹೋದನು. ಆಕೆ ನೀಡಿದ ಅಂಬಲಿಯನ್ನು ಸವಿದು ಸಂತುಷ್ಟನಾಗಿ ಹೊನ್ನಿನ ದೇವಮ್ಮನಾಗು ಎಂದು ವರವಿತ್ತನು. ಮತ್ತೆ ಸಂಚಾರ ಮಾಡಿ ಮರಳಿ ಹಾಲಭಾವಿಗೆ ಬಂದರು. ಮತ್ತೆ ಎಂದಿನಂತೆ ದೇವಮ್ಮನ ಮನೆಗೆ ಭಿಕ್ಷಕ್ಕೆ ಹೋದಾಗ ಆಕೆ ಭಿಕ್ಷೆ ನೀಡಲಿಲ್ಲ. ಇದನ್ನರಿತ ಬೀರೇಶನು ಆಕೆಯ ಸಂಪತ್ತು ಹಾಳಾಗಿ ಹೋಗಲಿ ಎಂದು ಶಾಪವಿತ್ತನು. ಐಶ್ವರ್ಯವನ್ನು ಕಳೆದುಕೊಮಡ ದೇವಮ್ಮ ಮೊದಲಿನಂತೆ ಹೆಂಡದ ದೇವಮ್ಮನಾದಳು. ನಂತರ ಬಂಕಾಪುರಕ್ಕೆ ಆಗಮಿಸಿ ಬಾಗಿ ಬಂಕಣ್ಣನಿಗೆ ಆಶೀರ್ವಾದ ಮಾಡಲಾಗಿ ಆತ ಕೈಲಾಸಕ್ಕೆ ತೆರಳಿದ. ಬೀರೇಶ ನಂತರ ಕೊಲ್ಲಿಪಾಕಿ, ಹೂವಿನೂರಿಗೆ ಹೋದನು. ವೀರಮಾಳಿಂಗನ ಭಕ್ತಿಗೆ ಮೆಚ್ಚಿದ ಬೀರೇಶ ಆತನ ಪ್ರಬುದ್ಧ ಶಕ್ತಿಯನ್ನು ಪ್ರಪಂಚಕ್ಕೆ ತೋರಿಸಬೇಕೆಂದು ಕಪ್ಪೆ ಕಲಕದ ಜಲ, ಪುಳಮುಟ್ಟದ ಪುಷ್ಪಗಳನ್ನು ತಂದು ಪೂಜಿಸಬೇಕೆಂದು ಅಜ್ಞಾಪಿಸಿದನು. ಗುರುವನ್ನು ಸ್ಮರಿಸುತ್ತ ಮಾಳಿಂಗರಾಯ ಪಾಂಡ್ರಕೋಟೆಗೆ ಹೋಗಿ ಬಂದ ಆಪತ್ತುಗಳನ್ನು ಎದುರಿಸಿ ಅವುಗಳನ್ನು ತಂದು ಪೂಜಿಸಿದನು. ಶಿಷ್ಯನ ನಿಷ್ಠಾ ಭಕ್ತಿಗೆ ಮೆಚ್ಚಿದ ಬೀರೇಶನು ಮಾಳಿಂಗರಾಯನನ್ನು ದೇಶ ಸಂಚಾರಕ್ಕೆ ಕಳುಹಿಸಿದನು. ಕಲ್ಯಾಣನಗರ ಕೋಣನೂರುಗಳಿಗೆ ಹೋಗಿ ತನ್ನ ಮಹಿಮೆಗಳನ್ನು ತೋರ್ಪಡಿಸಿದನು. ಶಿಷ್ಯನ ಮಹಿಮೆಗಳನ್ನು ಅರಿತುಕೊಂಡ ಶಿವಸಿದ್ಧ ಬೀರೇಶನು 'ಪೊಡವಿಯೊಳ್ನಿನ್ನ ಸಮ ಸೇವಕನು ಪುಟ್ಟುವುದು ದೌರ್ಲಭವೆಂದು ನುಡಿದ, ತನಯ ಕೇಳ್ಭೂಲೋಕ ಸುಖಸಾಕು ಸತಿಪುತ್ರರನು ಕೂಡಿ ನಾವೀರ್ವರೊಂದಾಗಿ ಶಿವಪುರಿಗೆ ಘನಮೋದದಿಂದ ಪೋಗುವ' ಎಂದನು. ಆಗ ಭಕ್ತಸಮೂಹ ನಮ್ಮನ್ನು ಸಲಹುವವರಾರು ಎಂದಿತು. ಆಗ ಶಿವಸಿದ್ಧ ಬೀರೇಶ 'ಎನ್ನನುಂ ಧ್ಯಾನಿಸಿರಿ ಮಿನುಗುತಿಹ ಬಿರ್ದಾವಳಿಗಳನ್ನು ಧರಿಸಿ ಅನುದಿನ ಸೇವಿಪರ್ಗೆ ನಾನು ಬಯಸಿದ ಫಲಗಳನ್ನು ಕೊಟ್ಟು ಪಾಲಿಸುವೆ, ಭಯಭರಿತ ಭಕ್ತಿಯಿಂ ಬಾಳ್ ಮನುಜರ್ಗೆ ಗುರು ದಯವಿಟ್ಟು ಪೋಷಿಸುವನು' ಎಂದು ಹರಸಿ ಶಿವನಾಜ್ಞೆಯಂತೆ ನಾಲ್ವರೂ ಕೂಡಿ ಕೈಲಾಸಕ್ಕೆ ಹೋದರು (೧೦೮-೧೬೩). ಇದು ಹಾಲುಮತೋತ್ತೇಜಕ ಪುರಾಣದ ಸ್ಥೂಲವಾದ ಕಥೆ.

**೪. ಕೃತಿ ವಿಶೇಷತೆ**

೧. ಹಾಲುಮತ ಇತಿಹಾಸ ಮತ್ತು ಸಂಸ್ಕೃತಿಯನ್ನು ವಿವರವಾಗಿ ತಿಳಿಸುವ ಕೃತಿ ಇದಾಗಿದೆ.

೨. ರೇವಣಸಿದ್ಧೇಶ್ವರ ಈ ಕೃತಿಯ ಪ್ರಮುಖ ನಾಯಕ. ಜೊತೆಗೆ ಶಾಂತಮುತ್ತಯ್ಯ, ಆದಿಗೊಂಡ, ಶಿವಪದ್ಮ, ಸಿದ್ಧಬೀರೇಶ್ವರ, ವೀರಮಾಳಿಂಗರಾಯ ಮತ್ತು ಗೊಲ್ಲಾಳೇಶ್ವರ ಮುಂತಾದವರ ಸಾಧನೆ ಸಾಹಸಗಳನ್ನು ತಿಳಿಸುವ ಕಥೆಗಳು ಇಲ್ಲಿವೆ.

೩. ಇಲ್ಲಿ ಉಲ್ಲೇಖಗೊಂಡ ಸರೂರು, ಜಾಗ್ರತಪುರ, ಬಂಕಾಪುರ, ಕೊಲ್ಲಿಪಾಕಿ, ಸೊನ್ನಲಾಪುರ, ಕೋಣಗನೂರು, ಮುಂಡಗನೂರು ಮುಂತಾದವುಗಳು ಹಾಲುಮತ ಸಾಂಸ್ಕೃತಿಕ ಪ್ರಾಚೀನ ನೆಲೆಗಳು. ಈಗಲೂ ಸಹಿತ ಇಲ್ಲಿ ಕುರುಬರ ಸಂಖ್ಯೆ ಅಧಿಕ ಪ್ರಮಾಣದಲ್ಲಿದ್ದು ರೇವಣಸಿದ್ಧೇಶ್ವರ, ಸಿದ್ಧಬೀರೇಶ್ವರ ಸಿದ್ಧರಾಮೇಶ್ವರ ಇತ್ಯಾದಿ ದೈವಗಳ ಆರಾಧನೆ ನಡೆಯುತ್ತದೆ.

೪. ಈ ಕೃತಿಯ ಮೇಲೆ ಜನಪದ ಹಾಲುಮತ ಮಹಾಕಾವ್ಯದ ಪ್ರಭಾವ ಸಾಕಷ್ಟಾಗಿದೆ. ಇದಕ್ಕೆ ಇಲ್ಲಿ ಬರುವ ಉಪಕಥೆಗಳು, ಸನ್ನಿವೇಸಗಳು, ಸಾಂಸ್ಕೃತಿಕ ನಾಯಕರ ವಿವರಗಳು ನಿದರ್ಶನವಾಗಿವೆ. ಶಿವನ ಅನುಗ್ರಹ ಹಾಗೂ ರೇವಣಸಿದ್ಧೇಶ್ವರರ ಆಶೀರ್ವಾದದಿಂದ ಆದಿಗೊಂಡ, ಶಿವಪದ್ಮ, ಸಿದ್ಧಬೀರೇಶ್ವರರು ಜನಿಸುವುದು. ವೀರಮಾಳಿಂಗನನ್ನು ಶಿಷ್ಯನನ್ನಾಗಿ ಪಡೆದುಕೊಂಡದ್ದು, ಭರಮದೇವ ಮತ್ತು ಸುರಾವತಿ (ಸೂರಮ್ಮದೇವಿ) ಬೀರಪ್ಪನ ತಂದೆತಾಯಿಗಳು. ಈ ವಿಷಯದಲ್ಲಿ ಎರಡೂ ಕೃತಿಗಳಲ್ಲಿ ಸಾಮ್ಯತೆಗಳಿವೆ. ಹೀಗಾಗಿ ಇದನ್ನು ಜನಪದ ಹಾಲುಮತ ಮಹಾಕಾವ್ಯದ ಸಂಕ್ಷಿಪ್ತವಾದ ಕೃತಿಯೆಂದೂ ಹೇಳಬಹುದು. ಈ ಎರಡೂ ಪಠ್ಯಗಳನ್ನು ತೌಲನಿಕ ಅಧ್ಯಯನ ಮಾಡಬೇಕಾಗಿದೆ.

೫. ಆದಿಗೊಂಡನು ಕುರಿಕಾಯುತ್ತಿದ್ದ ತನ್ನ ಮಕ್ಕಳನ್ನು ಕರೆದು ನೇಗಿಲು ಹೂಡಿ ಹೊಲವನ್ನು ಉತ್ತಿಬಿತ್ತಿ ಬೆಳೆಯನ್ನು ತೆಗೆಯಿರಿ ಎಂದು ಹೇಳುವುದರ ಮೂಲಕ ಕುರುಬರು ಪಶುಪಾಲನೆಯಿಂದ ಕೃಷಿ ಸಂಸ್ಕೃತಿಯತ್ತ ಹೊರಳಿದುದನ್ನು ಈ ಕೃತಿ ಸೂಚ್ಯವಾಗಿ ಹೇಳುತ್ತದೆ. ಶಿವಪದ್ಮ ಎತ್ತುಗಳಿಗೆ ನೇಗಿಲ ಹೂಡಿ ಹೊಲ ಉಳುವುದು, ತಾಯಿ ಮಗನಿಗೆ ಮಧ್ಯಾಹ್ನದ ಊಟಕ್ಕೆ ಬುತ್ತಿಯನ್ನು ತರುವುದು. ಮಿಣಿ, ಮುಂಜಣ, ಎತ್ತು, ನೊಗ ಇತ್ಯಾದಿ ಕೃಷಿ ಪರಿಕರಗಳನ್ನು ಸೂಚಿಸಿರುವುದು. ಇಂಥ ಸಂಗತಿಗಳನ್ನು ಕವಿ ಚೆನ್ನಾಗಿ ದಾಖಲಿಸಲು ಪ್ರಯತ್ನಿಸಿದ್ದಾನೆ.

೬. ಪಂಡಿತ ಚನ್ನಬಸವನ ಹಾಲುಮತ ಪುರಾಣದ ಮೇಲೆ ಹಾಲುಮತೋತ್ತೇಜಕ ಪುರಾಣದ ಪ್ರಭಾವ ದಟ್ಟವಾಗಿದೆ. ಕಥೆ, ಪಾತ್ರ ಮತ್ತು ಸನ್ನಿವೇಶಗಳಲ್ಲಿ ಯಾವುದೇ ಬದಲಾವಣೆಯಿಲ್ಲ. ಭೀಮಕವಿ ವಾರ್ಧಕ ಷಟ್ಪದಿಯಲ್ಲಿ ಕೃತಿ ರಚಿಸಿದರೆ, ಪಂಡಿತ ಚನ್ನಬಸವನು ಸಾಂಗತ್ಯದಲ್ಲಿ ಬರೆದಿದ್ದಾನೆ.

೭. ರೇವಣಸಿದ್ಧನು ಶಾಂತಮುತ್ತಯ್ಯನಿಗೆ ಲಿಂಗದೀಕ್ಷೆಯನ್ನು ನೀಡಿ, ಗುರುತನದ ಪಟ್ಟವನ್ನು ಕಟ್ಟಿ ಕುರುಹಿಗಾಗಿ ಮೂರೇಣಿನ ಕರಿಯ ಕಂಥೆಯನ್ನು ನೀಡಿದ ವಿಚಾರ ತಗರ ಪವಾಡ ಮತ್ತಿತರೆ ಕೃತಿಗಳಲ್ಲಿದೆ. ಈಗಲೂ ಕುರುಬರು ರೇವಣಸಿದ್ಧನಿಗೆ ಕಂಥೆ ತೊಡಿಸುವ ಸಂಪ್ರದಾಯವನ್ನು ಚಾಚೂತಪ್ಪದೇ ಆಚರಿಸಿಕೊಂಡು ಬರುತ್ತಿದ್ದಾರೆ. ಇಂಥ ಕೆಲವು ಸಾಂಸ್ಕೃತಿಕ ಸಂಗತಿಗಳನ್ನು ಈ ಕೃತಿ ಸ್ಥೂಲವಾಗಿ ಪರಿಚಯಿಸುತ್ತದೆ.

೮. ಕುರಿಯ ಉಣ್ಣೆ ಕಂಬಳಿ ತಯಾರಿಕೆಗೆ, ಕುರಿಯ ಚರ್ಮ ಗುರುವಿನ ಗದ್ದುಗೆಗೆ, ಗುರು ಪೂಜೆಗೆ ಮತ್ತು ಡೊಳ್ಳು ತಯಾರಿಕೆಗೆ ಎಂದು ಹೇಳುವುದರ ಮೂಲಕ ಕುರುಬರ ಕುಲಕಸುಬುಗಳ ಬಗ್ಗೆ ಸೂಚ್ಯವಾಗಿ ಹೇಳಿದ್ದಾನೆ.

೯. ಈ ಕೃತಿಯಲ್ಲಿ ಅನೇಕ ಪವಾಡಮಯ ಉಪಕಥೆಗಳಿವೆ. ಉದಾ. ರೇವಣಸಿದ್ಧೇಶ್ವರ ಬಡವಿ ಗಂಗಮ್ಮನಿಗೆ ಭಾಗ್ಯವಿತ್ತದ್ದು, ಶಿವಪದ್ಮನು ರಕ್ಕಸಿಯನ್ನು ಕೊಂದದ್ದು, ಸತ್ತ ಕುರಿಗಳಿಗೆ ಪ್ರಾಣ ನೀಡಿದುದು, ಸಿದ್ಧಬೀರೇಶ್ವರನು ಸಿಂಪಿಗನಾಗಿ ಬಳೆಗಾರನಾಗಿ ಬಂದು ಕನ್ನಿಕಾಮಾಲೆಯನ್ನು ಕರೆದುಕೊಂಡು ಹೋಗಿದ್ದು, ಹೀಗೆ ಅನೇಕ ಉಪಕಥೆಗಳಿಂದಾಗಿ ಕೆಲವು ಕಡೆ ಕಥಾನಿರೂಪಣೆಯಲ್ಲಿ ಕ್ರಮಬದ್ಧತೆ ಕಂಡುಬರುವುದಿಲ್ಲ.

೧೦. ಇದು ಚರಿತ್ರೆಯ ಪುರಾಣೀಕರಣವಾಗಿದ್ದರಿಂದ ಸಹಜವಾಗಿ ಕವಿ ವರ್ಣನೆಗೆ ಹೆಚ್ಚು ಆಸಕ್ತಿ ವಹಿಸಿದ್ದಾನೆನ್ನುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಪುರ, ಸ್ತ್ರೀ, ಹೂದೋಟ, ವನ, ಶಿಶು ಇತ್ಯಾದಿಗಳನ್ನು ಕವಿ ಕಾವ್ಯಾತ್ಮಕವಾಗಿ ಮನದುಂಬಿ ವರ್ಣಿಸಿದ್ದಾನೆ. ಉದಾಹರಣೆಗಾಗಿ ಚುಮುಲಾದೇವಿಯ ವರ್ಣನೆಯ ಒಂದು ಪದ್ಯವನ್ನು ಇಲ್ಲಿ ಗಮನಿಸಬಹುದು.

ನಾರಿಯೋ ಮದನ ಕಠಾರಿಯೋ ಮೋಹದನು
ಸಾರಿಯೋ ಎನ್ನಮನಸೂರಿಯೋ ಸ್ಮರಯುದ್ಧ
ಧೀರೆಯೋ ವಿಟಮನೋಹಾರಿಯೋ ಪರಮಶೃಂಗಾರಿಯೋ ಭೂಸತಿಯರ
ಮೇರೆಯೋ ನವರಸಸುಪೋರಿಯೋ ಎನಗೆ ಹಿತ
ಗಾರಿಯೋ ಸೊಬಗಿನೊಯ್ಯಾರಿಯೋ ಕಡುಚಲ್ವ
ನೀರೆಯೋ ರತಿಯಾವತಾರಿಯೋ ರಂಜಿಸುವ ಜಾರಿಯೋ ಶಿವನೆ ಬಲ್ಲಾ (೬-೧೫)

೧೧. ಸಂದರ್ಭಾನುಸಾರ ಉಪಮೆಗಳನ್ನು ಕವಿ ಯಥೇಚ್ಛವಾಗಿ ಬಳಸಿದ್ದಾನೆ. ಉದಾ. ಜಲಧರನೊಳಡಗಿದ ಸರೋವರಜಸಖನಂತೆ, ನೆಲದ ಮರೆಗಿರ್ಪ ಘನನಿಧಿಯಂತೆ ಕಾಷ್ಠದೊಳ್ನೆಲೆಯಾದ ನರನಂತೆ, ಶಿಲೆಗಳೊಳ್ನೆಲಸಿದ ಪರುಷದಂತೆ (೧-೮), ಸಾಗರದಿ ಹಿಮಕರನುದಿಸಿ ಬಂದಂತೇ (೩-೧೯), ಪೆಳವನ ಬಳಿಗೆ ಗಂಗೆಯಿಳಿದು ಬಂದಂತೆ (೪-೪೬).

**೫. ಕೃತಿ ಪರಿಷ್ಕರಣೆ**

ಪ್ರಸ್ತುತ ಕೃತಿಯನ್ನು ಸಂಜೀವರಾಯನ ಕೋಟೆಯ ಶ್ರೀ ಕೆ. ಸಣ್ಣತಿಮ್ಮಪ್ಪನವರ ಕೈಬರಹದ ಪ್ರತಿಯಿಂದ ಪರಿಷ್ಕರಿಸಲಾಗಿದೆ. ೮ x ೬.೫' ಆಕಾರದ ಆಧುನಿಕ ಕಾಗದರೂಪದ ಹಸ್ತಪ್ರತಿ. ಅಕ್ಷರಗಳು ದುಂಡಾಗಿದ್ದು ಕೃತಿ ಸಮಗ್ರವಾಗಿದೆ. ಕಲ್ಲಚ್ಚಿನ ಪ್ರತಿಯನ್ನು ಯಥಾವತ್ತಾಗಿ ನಕಲು ಮಾಡಲಾಗಿದೆ. ಇದು ೧೯೧೬ರಲ್ಲಿ ಮುದ್ರಣಗೊಂಡಿದೆ. ಹೀಗಾಗಿ ಕವಿಯು ಬದುಕಿದ್ದಾಗಲೇ ಈ ಕೃತಿ ಮುದ್ರಣಗೊಂಡಿದ್ದರಿಂದ ಮುದ್ರಣದ ವಿವರ, ಕವಿಯ ಉಪೋದ್ಘಾತ, ಗ್ರಂಥ ಪ್ರಕಟಣೆಗೆ ಧನಸಹಾಯ ಸಲ್ಲಿಸಿದವರ ಮಾಹಿತಿ ಇತ್ಯಾದಿ ವಿವರಗಳಿವೆ.

ಆರಂಭದಲ್ಲಿ

"ಓಂ ಶ್ರೀಗಣೇಶಾಯನಮಃ | ಶ್ರೀಶಾರದಾದೇವಿಯೇನಮಃ | ಶ್ರೀ ರೇವಣ
ಸಿದ್ಧೇಶ್ವರಾಯನಮಃ | ಶ್ರೀ ಗುರುಭ್ಯೋನಮಃ | ಶ್ರೀಶರಭ ಲಿಂಗಾಯ
ನಮಃ | ನೈಜಾಮ ಇಲಾಖಾ ಜಿಲ್ಲಾ ಗುಲಬರ್ಗಾ ತಾ.ಶಾಹಾಪುರ ಪೈಕಿ
ರಸ್ತಾಪುರದ ಭೀಮಕವಿಯಿಂದ ರಚಿಸಲ್ಪಟ್ಟ ಶ್ರೀ ರೇವಣಸಿದ್ಧೇಶ್ವರ ಲೀಲಾ
ಸಂಯುಕ್ತ ಹಾಲ್ಮತೋತ್ತೇಜಕ ಪುರಾಣವು | ಇದು ಬಳ್ಳಾರಿ ಶಂಕರ
ವಿಲಾಸ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತ್ತು | ಇಸವಿ
೧೯೧೬, ಸನ್ ೧೩೨೫"|

ಎಂದು ಆರಂಭವಾಗುವ ಈ ಕೃತಿಯನ್ನು ಶ್ರೀ ಕೆ. ಸಣ್ಣತಿಮ್ಮಪ್ಪನವರು ಅಚ್ಚುಕಟ್ಟಾಗಿ ಪ್ರತಿ ಮಾಡಿಕೊಂಡಿದ್ದಾರೆ. ಈ ಪ್ರತಿಯನ್ನು ಮೂಲ ಆಕರವಾಗಿ ಬಳಸಿಕೊಂಡು ಪರಿಷ್ಕರಿಸಲಾಗಿದೆ.

## ಸಂಧಿ ೧- ಪೀಠಿಕೆ

**ವಾರ್ಧಕ ಷಟ್ಪದಿ**

ಶ್ರೀವಾಗ್ವೀನುತೆಯ ಹೃತ್ಕುಮುದ ಕಳೆ ಪೊಳೆಯೆ ಮುದ
ವಾವರಿಸಿ ಕುಚ ಚಕೋರದ್ವಂದ್ವನಲಿಯೆ
ಸದ್ಭಾವದುಗ್ಧಾಬ್ಧಿಯತ್ತಿಂದತ್ತ ಬೆಳಿಯೆನಾಸಾನಿಲನ ಕಂಪು ಸುಳಿಯೆ
ಆವಗುಂ ನಿಡುಗುರುಳ ಘನ ತಿಮಿರಕಳೆಯೆ ಸಲೆ
ತೀವಿಸಿ ತಮಂಸದಾಸತ್ವಾತಿಶಯ ತಳೆದು
ದೇವ ಗಂಗಾಧರನ ಮುಖಶಶಿಯು ಪರತರಾನಂದಮಂಯಮಗೀಯಲೀ ||೧||

ದೇವಾಂಗ ನಾಮದಿಂ ಕೃತಯುಗದಿ ನಾಲ್ಕು ಪಾದ
ಪಾವನ ಶ್ರೀನೀಲಕಂಠನೆಂಬ;ಭಿದಾನ
ವಾವರಿಸಿ ತ್ರೈತಾಯುಗದಿ ತ್ರೀಪಾದ ದ್ವಾಪರದಿ ವೃಷಭನಾಗುತ ದ್ವಿಪಾದ
ಭಾವಶುದ್ಧದಿ ಬಸವನಾಗಿ ಕಲಿಯುಗದೋಳ್ಮ

ಹಾ ವಿಲಾಸದೊಳೇಕಪಾದ ಧರ್ಮವನು ನಡಿಸಿ
ಭೂವಳೆಯ ಪಾಲಿಸಿದ ನಂದಿಕೇಶಂಗೆ ನಾ ನಮಿಸುವೆನು ಭಕ್ತಿಯಿಂದ ||೨||

ಸಾಮಜಾನನ ವಿಘ್ನರಾಜ ಶುಭತೇಜ ಗುಣ
ಧಾಮ ದುರ್ಗುಣ ಕುಜ ಕುಠಾರಭಯದೂರ ಸತ
ತಾಮರಾರ್ಚಿತ ಗಣಾಧೀಶಮಘನಾಶಕರ ಪಾಶಾಂಕುಶವಿಧಾರಣ
ಕೋಮಲ ಶರೀರ ಸುಖದಾಯಕ ವಿನಾಯಕ ವಿ
ರಾಮವೆನಿಸುವ ವಿಬುಧಸೇವ್ಯ ಸುಶ್ರಾವ್ಯಮಂ
ಪ್ರೇಮದಿಂದಿತ್ತು ಕೃತಿಯಂ ಪಾಲಿಸಿಂಪಾಗಿ ಭೂತಲದೊಳನುದಿನದಲಿ ||೩||

ಜಂಭದಲಖಿಳರನಿಕುರುಂಬಮೊಂದಾಗಿವರ
ದಂಭೋಳಿಧರನ ಪುರತುಂಬಿ ಸುರಪತಿ ಮುಖ್ಯ
ರಂಭರದೆ ಪಿಡಿದಮರರಂ ಬಿಡದೆ ಬಡಿದು ಶರೆಯಂ ಬಿಗಿದು ಬಾಧಿಸಲ್ಕೆ
ಅಂಭೋಜ ಭವಕೃಷ್ಣರಿಂಬುಗಾಣದೆ ಬಂದು
ಶಂಭುವಿನ ಸತಿಯೇ ಪೊರೆ ನಂಬಿದೆವೆನಲ್ಕಾಗ
ಶುಂಭಾದಿಗಳ ತರಿದ ಶಾಂಭವೀ ಸುಶಂಕರಿಯೇ ಕುಂಭಿನಿಯೊಳೆನ್ನ ಪೊರೆಯೇ ||೪||

ವಾಣಿಫಣಿವೇಣಿ ಕಮಲೋದ್ಭವನ ಪಟ್ಟದರಸು
ರಾಣಿ ಮೃದುವಾಣಿ ಚೌಷಷ್ಟಿ ವಿದ್ಯಾಧಿ ಪ್ರ
ವೇಣಿ ಕಲ್ಯಾಣಿ ಕುವಲಯಪರಾಜಿತನಯನೆ ಸುಂದರನವಿಲ್ವಾಹಿನಿ
ಜಾಣೆಗುಣ ಶ್ರೇಣಿ ಇಚ್ಛಿತ ಫಲವಿಧಾತೆ ಬಹು
ತ್ರಾಣೆ ಕರವೀಣೆರಾಕಾಸುಧಾಕರಮುಖಿಯೆ
ಮಾಣದೀಕ್ಷೋಣಿಯೋಳೀಕೃತಿಯನಹುದೆನಿಸು ಸಕಲ ಸತ್ಕವಿಗಳಿಂದ ||೫||

ಕಟ್ಟುಗ್ರದಿಂದ ಫಣತೊಟ್ಟು ಸುರರನು ಪಿಡಿದು
ಕಟ್ಟಿ ಬಾಧಿಸುತಿರಲ್ತಟ್ಟನೇ ಸುರೇಂದ್ರ ತಾ
ಬಿಟ್ಟೋಡಿ ಹರಿಗೆ ಮೊರೆಯಿಟ್ಟು ಭಜಿಸಲ್ಕಭಯ ಕೊಟ್ಟು ತನ್ನಾತ್ಮಭವನ
ಅಟ್ಟಲೀಶನ ಬಳಿಗೆ ದಿಟ್ಟಿಸಿ ಸ್ಮರಂಬಾಣ
ತೊಟ್ಟು ಪೊಡಿಯಲ್ಕೆ ಶಿವ ನೆಟ್ಟನೆ ನಯನದಿಂದ
ಸುಟ್ಟು ಬಿಡಲಗ್ನಿಯೋಳ್ಪುಟ್ಟಿ ತಾರಕನ ಕಡಿದಿಟ್ಟ ಷಣ್ಮುಖಿಗೆ ಶರಣು ||೬||

ಖಂಡ ಶಶಿಧರನ ಬೀಳ್ಕೊಂಡು ಭರದಿಂದಳಾ
ಮಂಡಲಕಿಳಿದು ಮಹೋದ್ಧಂಡ ಲಿಂಗದಿ ಜನಿಸಿ
ದಂಡಲಾಕುಳ ಪಿಡಿದು ಪುಂಡತನದಲಿ ಭುವನತಂಡಮಂ ಚರಿಸುತಿರಲು
ಕಂಡೆ ಕಡೆ ಕೋವಿದರು ಹಿಂಡುಗೂಡುತ್ತ ಪದ
ಪುಂಡರೀಕಕ್ಕೆರಗೆ ಮಂಡೆಯಂ ಪಿಡಿದು ಮುದ
ಗೊಂಡಿತ್ತು ರಕ್ಷಿಸಿ ಪ್ರಚಂಡರಂ ಶಿಕ್ಷಿಸಿದ ರೇವಣನೇ ಪಾಲಿಸೆನ್ನ ||೭||

ಮಾಪತಿ ಚತುರ್ಮುಖ ಪ್ರಮುಖ ಸುರರಂ ಬಿಡದೆ
ರೂಪುಗೆಡಿಸಿದಿ ಮತ್ತೆ ನಳ ಹರಿಶ್ಚಂದ್ರರಂ
ಕೋಪದಿಂದನ್ಯ ಗೃಹ ಸೇರಿಸಿದಿ ಮಿಕ್ಕಸುರ ನರರ ನೀ ಬಿಡುವದೆಂತು
ಭಾಪುರ ಶನೈಶ್ಚರನೆ ನಿನ್ನ ಸಮರಿಲ್ಲೆನ್ನ ತಾ'
ಪತ್ರಯಂಗಳಂ ಕಳೆದು ಸುಪ್ರೇಮದಿಂ
ನೀ ಪೊರೆವದಂದುಭಯ ಕರಮುಗಿದು ನಿರುತದಲಿ ಬೇಡಿಕೊಂಬುವೆನು ನಾನು ||೮||

ಶ್ರೀಗಿರೀಶನ ಫಾಲನಯನದಿಂ ವಿರೇಶ
ಬೇಗದಿ ಅವತರಿಸಿ ಬಂದಂತೆ ಕಂಗೊಳಿಪ
ಸಾಗರದಿ ಹಿಮಕರನು ಪುಟ್ಟಿ ಬಂದಂತೆ ಸುಗ್ಗವ್ವೆಯ ಸುಗರ್ಭದಿಂದ
ನಾಗಪತಿ ಭೂಷಣನ ಚಿತ್ಕಲಾಂಶವೆ ರೂಪ
ಮಾಗಿ ಬಂದಮಿತ ಮಹಿಮೆಗಳನ್ನು ತೋರ್ದ ಶಿವ
ಯೋಗಿ ಸಿದ್ಧರ ಸಿದ್ಧ ಸೊನ್ನಲಿಗೆ ಗುರುಸಿದ್ಧರಾಮೇಶ್ವರನ ಸ್ತುತಿಸುವೆ ||೯||

ವರಕಾಳಿದಾಸ ಭವಭೂತಿ ಮಲುಹಣ ಬಾಣ
ಕೆರೆಯ ಪದ್ಮರಸ ಮೊಗ್ಗೆಯ ಮಾಯಿದೇವ ಪಾ
ಲ್ಕುರಿಕೆ ಸೋಮಾರಾಧ್ಯ ಹಂಪೆಯ ಹರೀಶ ಭೀಮರಸ ಗುರು ಪಂಡಿತೇಶ
ಬಿರಿದಂಕ ಕೇಶವ ಶ್ರೀ ರಾಘವಾಂಕ ಚಾ
ಮರಸನುದ್ಭಟ ನಿಜಗುಣಾರಾಧ್ಯ ಪರಮ ಭಾ
ಸುರ ಶಂಕರಾಚಾರ್ಯ ಮಲ್ಲಣಾರ್ಯಾದಿ ಶಿವಕವಿಗಳೊಂದಿಸುವೆನು ||೧೦||

ಕೃತಿವೆಸರು ಹಾಲ್ಮತೋತ್ಪತ್ಯ ಚಾರಿತ್ರವೀ
ಕೃತಿಕರ್ತನಾ ಜಗದ್ಗುರು ಸಿದ್ಧರೇವಣಂ
ಕೃತಿಯು ರಸ್ತಾಪುರದ ಪತಿ ಶರಭಲಿಂಗನ ಪಾದದ್ವಯವನನುದಿನದಲಿ
ಸ್ತುತಿಗೈವ ಪಾಲ್ಮಜ ಜಂಬುಲಿಂಗನ ಪ್ರೇಮ
ಸ್ತುತನಾದ ಭೀಮಾಖ್ಯ ರಚಿಸಿದಂ ಮುದದಿಂದ
ಕ್ಷಿತಿಯೊಳಗೆ ಲಕನಾಪುರದ ಗೌಡ ಹನುಮಂತರೆಡ್ಡಿ ಗುರುವರನ ದಯದಿ ||೧೧||

ಪ್ರಾಚೀನ ಕಬ್ಬಿಗರ್ಪೇಳ್ದದ ಶಬ್ದಾರ್ಥಮಂ
ಯೋಚಿಸಿ ಕವಿತೆಯಂ ಸಕಲರರಿವಂತೆ ನಾಂ
ಸೂಚಿಸಿದೆಲ್ಲದೆನ್ನಾತ್ಮರಸಿಕತೆಯಿಂದ ರಚಿಸಲಾನೆನಿತರವನು
ವಾಚಾಪ್ರದೋಷದಿಂ ತಪ್ಪಿರ್ದ ನುಡಿಗಳಾ
ಲೋಚನೆಗೆ ತಂದು ತಾವೆ ತಾವೆ ಕೃಪೆಯಿಂ ತಿದ್ದಿ
ಭೂಚಕ್ರದೊಳ್ ಶುದ್ಧಮಪ್ಪಂತೆ ಮಾಳ್ಪುದೆಂದುರೆ ನಮಿಪೆ ಪಂಡಿತರ್ಗೆ ||೧೨||

ಲೋಕದೊಳ್ ಕವಿಯೆನಿಸಬೇಕೆಂಬ ಕಕ್ಕುಲತೆ
ಗೇಕೀ ಕವಿತ್ವಮಂ ತಾ ಕಲ್ಪಿಸಿದನೆಂದ

ನೇಕ ವಿಧದಿಂದಲಿ ನಿರಾಕರಿಸಿಯನ್ನಯ ವಿವೇಕತ್ವ ಗುಣವೆನಿಸದೆ
ಯೇಕ ಮಾನಸದೊಳವಲೋಕಿಸಿ ಸುಗುಣಗಳನು
ಸಾಕಾರದಿಂದಲೇ ಸ್ವೀಕರಿಪುದೆಂದು ಸುವಿ
ವೇಕಿಯರ್ಗೆರಗಿ ಕೃತಿಪ್ರಾಕೃತದಿ ರಚಿಸಿದೆ ಸುಖಕರ ಶಿವನ ದಯದೊಳು ||೧೩||

ಧಾರಣಿಯೋಳುರೆ ಮೆರೆವ ರಸ್ತಾಪುರ ನಿವಾಸ
ವೀರಮಹೇಶ ಶಾಂತೇಶನಾರ್ಧಾಂಗಿ ಸುವಿ
ಚಾರಿ ಚನ್ನಮ್ಮನೋಡಲಾರ್ಣವದೊಳುದ್ಭವಿಸಿ ಬಾಲಲೀಲೆಯನು ಕಳೆದು
ಸಾರಸದ್ಗುರು ಸಿದ್ಧರಾಮನುಪದೇಶದಿಂ
ಪಾರಮಾರ್ಥವ ತಿಳಿದು ಭಜಕರಂ ಪಾಲಿಸಿದ
ಧೀರ ಶರಭೇಂದ್ರನೀ ಕೃತಿಗೆ ಮನ್ಮತಿಗೆ ಮಂಗಲವಿತ್ತು ಕಾಪಾಡಲಿ ||೧೪||

ಇಂತೆಬಲ್ಲಿಗೆ ಶರಭೇಶ್ವರ ಪಾದಾಬ್ಜಭೃಂಗನು ವಿಶಿಷ್ಠ
ವಿದ್ವಜ್ಜನ ವಿಧೇಯನು ಆದ ಭೀಮನಾಯಕ
ಕವಿಯಿಂ ಪ್ರಣೀತಮಪ್ಪ ಹಾಲ್ಮತೋತ್ತೇಜಕ
ಪುರಾಣದಲ್ಲಿ ಅಂತು ಸಂಧಿ ೧ಕ್ಕಂ ಪದನು ೧೪ಕ್ಕೆ ಮಂಗಲಂ
ಮಹಾಶ್ರೀಶ್ರೀಶ್ರೀ

## ಸಂಧಿ ೨-[ರೇವಣ]ಸಿದ್ಧೇಶ್ವರ ಚರಿತ್ರೆ

ಸೂಚನೆ ||
ಕೊಲ್ಲಿಪಾಕಿಯ ಸೋಮಲಿಂಗದಿಂದುದ್ಭವಿಸಿ
ಸಲ್ಲಲಿತ ರೇವಣನಗಸ್ತ್ಯಾದಿ ಭಕ್ತರಂ
ನುಲ್ಲಾಸದಿಂ ಪೊರೆದು ಶಾಂತಮುತ್ತಯ್ಯಂಗೆ ಲಿಂಗದೀಕ್ಷೆಯನಿತ್ತನು ||

ಶ್ರೀಕಂಠಶಂಕರಪಿನಾಕಿ ಮೃತ್ಯುಂಜಯ ಸು
ಧಾಕರ ಸುಮೌಳಿ ಮೃಡಲೋಕೇಶನಮಿತ ಪಾದ
ನಾಕನುತ ಪರಮ ಮಹಿಮಾಕರ ಸುಖಾಳಿ ರತ್ನಾಕರದುರಿತ ಸಂಹಾರ
ಶ್ರೀಕರಂ ಕೋಟಿ ಪ್ರಭಾಕರದ್ಯುತಿಗಿರೀಶ
ಮಾಕುಮಾರಾಂತಕ ಶಿವಕಾಂತಭೀಮಂ ಸ
ದಾ ಕರುಣದಿಂ ಪೊರೆಯಲೀ ಕುವಲಯದೊಳೆನ್ನಕಾಕ ಗುಣಗಳಳಿದು ||೧||

ಸುರಪಾವಕ ಮುಖ್ಯ ದಿಕ್ಪತಿಗಳಿಂದ ತ್ರಿ
ವರ ಭಾರಧ್ವಾಜ ಭೃಗುಕಶ್ಯಪ ವಶಿಷ್ಠಾದಿ
ಪರಮುನಿವೃಂದದಿಂ ಗುಹಗಣಪ ರುದ್ರ ಭೈರವರೆಂಬ ಗಣಮಧ್ಯದಿ
ಪರಮೇಶ್ವರಂ ಭೃಂಗಿನಾಂಟ್ಯಮಂ ನೋಡುತ್ತ

ಸರಸದಿಂದಿರುತಿರಲ್ಕಾ ಸಭೆಗೆ ರೇಣುಕಂ
ಭರದೊಳೈತಂದು ದಾರುಕನ ದಾಂಟವಲ್ಕವಂ ಮನದೊಳತಿ ಮರುಗಿಕೊಂಡ ||೨||

ದಾರುಕನ ಸಂತೈಸಿ ರೇಣುಕಗೆ ಶಶಿಮೌಳಿ
ಸಾರಿದಂ ನಿನಗೊಂದು ಜನ್ಮಬಂದಿತುಯಿಂದು
ಭೂರಿಬೇಗದಿ ಪೋಗಿ ಮರ್ತ್ಯದೊಳಗುದ್ಭವಿಸಿ ಬಾಳೆಂದ ಸಂಮುದದೊಳು
ಮಾರಹರನೊರೆದ ನುಡಿಗೇಳಿ ರೇಣುಕ ಶಿವ ಪಾ
ದಾರವಿಂದಕ್ಕೆರಗಿ ನುಡಿದ ನರರೂಪದಿ
ಸರೋರುಹ ಭವಾಂಡದೊಳಗಿರಲೆಂತು ಕಾರಣ್ಯವಿತ್ತು ಪರಿಪಾಲಿಸೆಂದ ||೩||

ಪರಿಮಳದರಳನಳಿಯು ತನಿವಣ್ಣಗಿಳಿಯು ಬಂ
ಧುರದ ಜವ್ವನದ ತರುಣಿಯಂ ಪುರುಷ ಬಿಡದಂತೆ
ನಿರುತದಲಿ ನಾ ನಿನ್ನೊಳಿರ್ಪೆನಂಜದಿರು ಕಂಗೆಡದಿರು ಬರಿದೆ ಬಾಲನೆ
ಹರುಷದಿಂ ಧರೆಗಿಳಿದು ಅನವರತ ಪವಾಡಗಳ
ವಿರಚಿಸುತ್ತಿರು ನಿನಗೆ ಮಂಗಲಂ ಮಾಳ್ಪನೆಂ
ದರವಿಂದ ಶರಹರಂ ಪೇಳ್ದು ಸುಮ್ಮಾನದಿಂ ಕಳಿಸಿದಂ ರೇಣುಕನನು ||೪||

ಕೊಲ್ಲಿಪಾಕಿಯ ಪುರದಿ ಸೋಮೇಶ್ವರಾಲಯ
ದೊಳೆಲ್ಲ ಭಕ್ತರು ಸೋಮವಾರದಿ ಹರನ ಭಜಿ
ಸಲಲ್ಲಿ ಲಿಂಗದೊಳು ಘನರವದಿಂದಲಂಕರಿಸುತತಿವೆಳಗುವೆಚ್ಚುತಾಗ
ಮೆಲ್ಲಮೆಲ್ಲನೆ ಲಿಂಗಬಿರಿಯೆ ನೆಲವದಿರಲಾಗ
ಮೆಲ್ಲಕುಣಿದಾಡೆ ರವಿಶಶಿದಿಕ್ಪತಿಗಳು ಮನ
ತಲ್ಲಣಿಸಿದರು ಜಲಧಿಕದಡಲಹಿಪನ ಪಡೆಯುತಗಿದುದು ತಕ್ಷಣದಲಿ ||೫||

ದೇವಗಣ ಕೊಂಡಾಡುತರಳೆ ಮಳೆಗರಿಸಲ್ಕೆ
ಭಾವಜಾಂತಕನ ಪ್ರತಿವೇಷದಿಂ ರೇಣುಕಂ
ರೇಣಾಚಾರ್ಯನೆಂಬಭಿದಾನವೆತ್ತು ಭಸಿತವ ತಳೆದು ಸರ್ವಾಂಗಕೆ
ಪಾವನ ಶ್ರೀದೇವರುದ್ರಾಕ್ಷಿಗಳನಾಂತು
ಭೂವಲಯ ಪ್ರಾಣಿಗಳ ಕಾವುದಕ್ಕೈತಂದ
ನೇವೇಳ್ವೆನಚ್ಚರಿಯ ದಂಡಲಾಕುಳ ಪಿಡಿದು ರಾರಾಜಿಸಿದ ಮುದದೊಳು ||೬||

ಗುರುಸಿದ್ಧನಲ್ಲಿಂದಗಸ್ತ್ಯಾಶ್ರಮಕೆ ಬಂದು
ಮರುಕದಿಂದಷ್ಟಾಂಗ ಯೋಗ ಚತುರಾಶ್ರಮ ಸು
ಚರಿತ ಷಟ್ಚಕ್ರ ಷಟ್ಸ್ಥಲದೀಕ್ಷಮಂತ್ರ ಮುದ್ರಾಭೇವೆಂಬವುಗಳಂ
ಕರುಣದಿಂದಾ ಮುನಿಗೆ ತಿಳಿಸಿ ಸಂಶಯ ಗಳಿಸಿ
ತೆರಳಿದಂ ತವಕದೆ ನಭೋ ಮಾರ್ಗದಿಂದ
ಪರತರ ರಾಮನಾಥನ ಸುದರ್ಶನವಗೊಂಡಿಷ್ಟಲಿಂಗಮಂ ಪೂಜಿಸುತಲಿ ||೭||

ಕೆಲವು ದಿನಮಲ್ಲಿರ್ದು ಮರಳಾಗಮಿಸಿದ ಜವದಿ
ಸಲೆ ರಂಜಿಸುವ ಮಹಾ ಕಾಂಚೀಪುರಕ್ಕೆ ಬಂ
ದೊಲವಿಂದಲೇಕಾಮ್ರನಾಥನಂ ಕಾಣ್ದು ಸಲ್ಲೀಲೆಯಿಂ ಸಂಚರಿಸುತ
ಜಲಧರನೊಳಡಗಿದ ಸರೋವರಜಸಖನಂತೆ
ನೆಲದ ಮರೆಗಿರ್ಪ ಘನನಿಧಿಯಂತೆ ಕಾಷ್ಠದೋ
ಳ್ನೆಲೆಯಾದ ನರನಂತೆ ಶಿಲೆಗಳೊಳ್ನೆಲಸಿದ ಪರುಷದಂತೆ ರಂಜಿಸಿದನು ‖೮‖

ಆ ಪುರಕ್ಕರಸಾದ ಚೋಳನೃಪವರ ಷೋಡ
ಶೋಪಚಾರದಿ ವಿಷ್ಣುಪ್ರತಿಮೆಯಂ ಪೂಜಿಸುತ
ಸ್ಥಾಪನವಗಯ್ಯಲಲ್ಲಾಡುತ ನಿಂತಿರಲದಂ ನಿಲಿಸಿ ಪುಳಕದಿಂದ
ಭೂಪ ಸಂತೈಸಿ ಪಿಣ್ಣಾಂಕ ಸಿದ್ಧಗಿರಿ
ಚಾಪನೊರ ಸೂನು ತತ್ವರುದಿ ಮರುಳೇಶನಂ
ದೀಪರಿಮ ನಾಮದಿಂ ಜಸ ಪಡೆದು ಪೊಡಮೊಟ್ಟು ನಡೆದನುತ್ತರ ಭಾಗಕ್ಕೆ ‖೯‖

ಯಕ್ಷಮಿಥನವು ಯತಿಯ ಶಾಪದಿಂದ ಮಾಸನೂ
ರಕ್ಷಯಾತ್ಮಕನ ಮಂದಿರದ ಮುಂದೆಸೆಯೊಳಿಹ
ವೃಕ್ಷದೊಳ್ಮತ್ಕುಣಿಗಳಾಗಿ ವಾಸಿಸುತಲ್ಲಿ ನಿದ್ರಿಸಿದ ಮಾನವರನು
ಭಕ್ಷಿಸುತಿರಲ್ಕಲ್ಲಿಗೈ ತಂದು ಸಿದ್ಧೇಂದ್ರ
ದಕ್ಷದಿಂದವುಗಳಂ ಕೊಲ್ಲಿಕಮ್ಮಾರನಿಂ
ತಕ್ಷಣದಿ ಸುರಗಿ ಮೇಣ್ ಕರಕಠಾರಿಗಳೆಂಬುಭಯ ಪೆಸರಿನಾಯುಧವನು ‖೧೦‖

ವಿರಚಿಸುತ್ತಾ ಸುರಗಿಯಂ ಮಾಸನೂರೆಂಬ
ಪುರದನದಿ ಹೆಮ್ಮಡುವಿನೊಳ್ಮಿಸುಕದಂತೆ ಬಂ
ಧುರದಿಂದಲಲ್ಲಿಟ್ಟು ಕರಕಠಾರಿಯನಾಂತು ಬಾಂದಳಾಂತರಕೆ ನೆಗೆದು
ವರವಾಯುವೇಗದಿಂದುಜ್ಜೈನಿಗೈತಂದು
ಧರಣೀಂದ್ರ ವಿಕ್ರಮಾರ್ಕಗೆ ಕಠಾರಿಯನಿ
ತ್ತದರ ಮಹಿಮ ಪೇಳಿ ರಾಜಾಚರಣೆಯಂ ತಿಳಿಸಿ ನೀತಿಯುತನಮ್ಮಾಡ್ದನು ‖೧೧‖

ಕೆಲವು ದಿನಮಲ್ಲಿರ್ದು ಬಾಂದಳಕೆ ನೆಗೆದು ಶಿವ
ನಿಲಯಗಳ ನೋಡುತ್ತ ಬರುತಿರಲ್ಕತ್ತ
ಪ್ರಜ್ವಲಿಸುವ ಸರೂರೆಂಬ ಪುರದಿ ಹಿಂಡಿನ ಶಾಂತಮುತ್ತಯ್ಯನಿರಲಾತಗೆ
ಚಲುವೆತ್ತ ಸುವ್ವಿಮುತ್ತಯ್ಯ ಜಗಮುತ್ತಯ್ಯ
ಲಲಿತಶಾಂತಯ್ಯಂಗಳೆಂಬ ಸುತರುದ್ಭವಿಸಿ
ಕೆಲದಿನಕ್ಕಪರಮಿತ ತುರುಗಳಂ ಸಲಹಿ ಸುಕ್ಷೇಮದಿಂದಿರುತಿರ್ದರು ‖೧೨‖

ತುರುಗಳ ಪಾಲಿಸುತ್ತುಲ್ಲಾಸದಿಂದ ಸಂ
ಚರಿಸಿ ಕಲ್ಲಿನ ಕೆರೆಯ ಭಾಗದಲಿ ನಿಲಯಮಂ

ವಿರಚಿಸುತ ಪ್ರೇಮದಿಂ ಚಚರಿಂಗೆ ಪನ್ನೆರಡು ಕಂಬಿ ಪಾಲ್ಗೊಟ್ಟು ಸತತ
ಹರುಷದಿಂದಿರಲಲ್ಲಿಗೆ ಭವಸುತ ಸಿದ್ಧೇಂದ್ರ
ನಿರದೆ ಬಂದಮೃತಮಂ ನೀಡೆಂದು ಸನ್ಮೋಹ
ವೆರಸಿ ನಿಲ್ಲಲು ಶಾಂತಮುತ್ತಯ್ಯ ಕಂಡು ಪಾದಪದ್ಮಕಭಿವಂದಿಸಿದನು ||೧೩||

ಸಿದ್ಧಗುರುವರನವನ ಪಿಡಿದೆತ್ತಿ ಬೋಳೈಸಿ
ಸಿದ್ಧಿಸಲಿ ನೀನಂದ ನುಡಿಗಳವನಿಯೊಳೆಂದು
ಉದ್ಧರಿಸಲವನೆದ್ದು ಧ್ಯಾನಮಂಗೈದು ಮಹಾದಾನಂದದೋಳ್ಕೂಡ್ದನು
ವೃದ್ಧನಾದಾಯೋಗಿ ಶಿವನ ಸದ್ಭಕ್ತಿಯ ಪ್ರ
ಸಿದ್ಧವಾದ ಭವನ ಸುಲೀಲೆಗಳನೆಲ್ಲ ತಾ
ಬದ್ಧದಿಂ ಪೇಳಲವುಗಳ ಕೇಳಿ ಶಾಂತಯ್ಯ ಲಿಂಗೇಚ್ಛೆಯಾಗಿ ಮಗುಳಿ ||೧೪||

ತಂದೆ ಕೇಳೆನಗಿಷ್ಟ ಲಿಂಗಮಂ ಧರಿಸಿ ಮುದ
ದಿಂದೀ ಧರಾತಳದಿ ಪಾಲಿಸೆನ್ನಂ ಬಿಡದೆ
ವಂದಿಸುವೇನೀಗ ನಿಮ್ಮಡಿದಾವರಿಗೆ ನಾನು ತನು ಮನಧನವನೊಪ್ಪಿಸಿ
ಯಂದು ನುಡಿಯಲು ಮುನಿಯು ಅಭಯಮಂ ನೀಡಿ ಆ
ನಂದದಿಂದಾ ಶಾಂತಮುತ್ತಯ್ಯನಿಗೆ ಕ್ಷಿಪ್ರ
ದಿಂದಾಗಮೋಕ್ತಿಯಂತಾಗ ಸುಮಹೂರ್ತಮಂ ತೆಗೆದು ತತ್ಕಾಲದಲ್ಲಿ ||೧೫||

ಲಿಂಗದೀಕ್ಷೆಯನಿತ್ತು ಕ್ಷೀರಕುಲಕಧ್ಯಕ್ಷ
ನಂಗೊಳಿಸಿ ಗುರುಕಂಕಣವ ಧರಿಸಿ ಕರಕೆ ಘನ
ಕಂಗೊಳಿಪ ತೆರದಿ ಪಟ್ಟವಗಟ್ಟೆ ಗುರುನಾಮಶಾಸನವಗೈದು ಮತ್ತಂ
ತುಂಗ ರೇವಣಸಿದ್ಧ ಶಾಂತಮುತ್ತಯ್ಯಂಗೆ
ಪಿಂಗದೆ ಕುತೂಹಲದೊಳಾಶೀರ್ವದಿಸಿ ದಯಾ
ಪಾಂಗದಿಂ ನೋಡಿ ಪಾಲ್ಸವಿದು ಬಳಿಕಲ್ಲಿಂದ ನಡೆದ ಬಾಂದಳ ಮಾರ್ಗಕೆ ||೧೬||

ಕೆದರಿದ ಜಡೆಯು ಹರಿದ ಕಂತೆಯು ಬರಿತ ಬಸುರು
ಚದುರತ್ಕಲೆಗಳೊಂದಿಲ್ಲದೆ ದರಿದ್ರನಂದದಿ
ಕಲ್ಲಿಶೆಟ್ಟೆ ಮಂದಿರದೊಳಗೆ ಕೆಲಕಾಲ ಗಾಣವನೊಡೆದುಕೊಂಡು
ಮುದದೊಳಿರುತಿರಲು ತತ್ತಿಲ ಘಾತಕನಿಗೆ ಮೇಣಾ
ಸುದತಿಯಳಿಗೆತ್ತಿಗೊಂದಕ್ಷಿಯಿರುವುದ ಕಂಡು
ಮದನಾರಿಪುತ್ರನಿಕ್ಕಣ್ಣಗೈದಖಿಲ ಸಂಪದವಿತ್ತು ಪಾಲಿಸಿದನು ||೧೭||

ಮಂಗಲಾತ್ಮಕ ಸಿದ್ಧನಲ್ಲಿಂದ ಪೊರಮಟ್ಟು
ತುಂಗ ಮಂಗಲವಾಡ ನಗರಿಗೈತಂದಂತೆ
ರಂಗದೋಳ್ವೆಣ್ಣಿಸಿದನಾ ಪುರದ ವೈಭವಂ ಪೇಳಲಚ್ಚರಿಯಾದುದು
ಅಂಗಜಾಂತಕನ ಸದ್ಭಕ್ತಿ ಸಾಗರವೋ ಘನ

ಸಿಂಗಾರದಿಂಪಿನ ಮಹಾನಿಧಿಯೋ ನೇತ್ರ ಯು
ಗ್ಮಂಗಳ್ಗೆ ರಂಜಿಸುವ ಜಯಸಿರಿಯ ಲಾವಣ್ಯದಿರವೊ ನಾನರಿಯನೆಂದ ||೧೮||

ಲಲಿತದುರ್ಗಾಬಲೆಯ ಮುಖದ ನಾಸಿಕವೋ ಭುಜ
ಬಲದಿಂದೆಸೆವ ನೃಪಂಗೆಸಗಿದ ಸುಪೀಠವೋ
ಬಲಜಭವನುತ್ಪತ್ತಿಗಿದೆ ಮಹಾಚೆಲುವೆನುತ್ತಂಕಿಸುತ್ತಿರ್ದ ಕರವೊ
ತೊಳೆತೊಳೆವ ನವರತ್ನಗಳ ನಿಜಸ್ಥಾನವೋ
ಹುಲಿವದನ ಕೊತ್ತಳಸುಡೆಂಕಣಿ ಸರೋಜಾಪ್ತ
ಲಲಿತಶಶಿವೀಧಿಗಳ್ನೆರೆ ನೋಡುತಾ ಸಿದ್ಧ ವಾರಗೇರಿಯ ಪೊಕ್ಕನು ||೧೯||

ಮೃಡನವೈರಿಯ ಪೆರ್ಬಲವೋ ತಪೋವೃತರ ನೆರೆ
ಕೆಡಿಸಲೋಸುಗ ವಿರಂಚಿಯು ಸೃಷ್ಟಿಸಿದಪ್ರತಿಮ
ಪಡೆಗಳೋ ತಿಳಿಯದೆಂದೆಡಬಲದ ವೇಶ್ಯಾಂಗನೆಯರನೀಕ್ಷಿಸುತ ಬಂದು
ಉಡುಪನಂ ಧಿಕ್ಕರಿಪ ಸುಂದರಾನನದಿಂದ
ಕಡುಚೆಲ್ವಿನಿಂದೆಸೆವ ಮಾಯಾವಿದೇವಿ ಮನೆ
ಗಡಿಯಿಟ್ಟವಳ ರೂಪುರೇಖೆಗಳನೀಕ್ಷಿಸಿ ಬೆರಗುವಟ್ಟ ಗುರುಸಿದ್ಧನು ||೨೦||

ಲಿಂಗಧಾರಿಗಳಲ್ಲದನ್ಯಭವಿಜಾತಿಯರ
ಸಂಗಕ್ಕೆ ಮನವನೆಳೆಸದೆ ಸದಾಭಕ್ತಿಯಿಂ
ಗಂಗಾಧರನ ಭಜಿಸಿ ಪೂಜಿಸುತ್ತಿರೆ ರೇವಣಾರಾಧ್ಯ ಮಾಯಕ್ಕನ
ಸಿಂಗರದ ತಾಣಮಂ ತಿಳಿದು ಯೋಚಿಸಿದ ತ್ರಿದ
ಶಾಂಗನೆಯರೋಳ್ಮೆರೆವ ರಂಭೆಯೋ ಭುವನಕಿಳಿದ
ನಂಗನರಗಿಳಿಯೋಯಂದಮಿತನಿಭವದಿ ಕೂಡಿ ಮಂದಿರವನೊಳಪೊಕ್ಕನು ||೨೧||

ಮಾಯಾವಿದೇವಿಯ ಮನಿಯೊಳಿರ್ದು ಸಂತತ ಸ
ಹಾಯದಿಂ ಕಾವಡಿಯ ಕಂಬಿಯಂ ಪೊತ್ತು ಗುರು
ರಾಯ ಜಲತರುವದಿಂನ್ನೇನು ವರ್ಣಿಸಲೀಗ ಪೊತ್ತಕಾವಡಿಯಾತನ
ಕಾಯಮಂ ಸೋಂಕದಂತರದ ದೆಶೆಯೊಳಿರ್ಪುದಿದ
ರಾಯತವ ತಿಳಿಯದಿವ ನರನಲ್ಲ ಸುರನೆಂದು
ಶ್ರೇಯಸ್ಕರದಿ ಸಿದ್ಧರೇವಣನ ಕೊಂಡಾಡಿದರ್ಕೆಲರು ವಿಭವದಿಂದ ||೨೨||

ಇತ್ತ ಲಂಕಾಪುರದೊಳು ವಿಭಿಷಣನು ತನ್ನ
ಚಿತ್ತದೊಳಾಲೋಚಿಸಿದ ರಾವಣಾಸುರಂ
ಗಿತ್ತೆನಭಯವ ಮೂರುಕೋಟಿ ಲಿಂಗಸ್ಥಾಪನೆಯಗೈಸಲೆಂತು ನಾನು
ಮತ್ತಿದಕ್ಕಾಚಾರ್ಯನೆಲ್ಲಿಹನೋ ತಿಳಿಯದೆಂ
ದುತ್ತುಂಗ ತಪದೊಳಭವನ ಮೆಚ್ಚಿಸುತ ಕೇಳ್ದೊ
ಡುತ್ತರವನಿತ್ತು ರೇವಣನಿರುವ ತಾಣಕ್ಕೆ ಸತ್ವರದಿ ಪೋಗೆಂದನು ||೨೩||

ಆಗಲಾ ದಾನವಂ ಯತಿವೇಷ ತಾಳುತ ನಾ
ಜಾಗರವ ಬಿಟ್ಟು ನಭೋಮಾರ್ಗದಿ ಚರಿಸಿದಿ
ಗ್ಭಾಗದೋಳ್ಸಿದ್ಧನಂ ಹುಡುಕುತ್ತ ಮೆರೆವ ಮಂಗಳವಾಡ ನಗರಿಗಿಳಿದು
ನಾಗಭೂಷಣನ ನಾಮಸ್ಮರಣೆಯಿಂ ಪುರದ
ಬಾಗಿಲದೆಡೆಯೊಳೈದೆ ಕಾದುಕೊಂಡಿರುತಿರ
ಲ್ಯಾಗ ಕಂಬಿಯು ಭುಜಕೆ ಸೋಂಕದೆ ಬರುತ್ತಿರುವ ಮರುಳಾಳನಂ ಕಂಡನು ||೧೪||

ದನುಜನತಿ ಭರದಿಂದ ಸಿದ್ಧನಿವನೆಂದರಿದು
ಘನಮೋದವೆರಸಿ ಹಿಂಬಾಲಿಸಿ ನಡೆದ ವಾರವನಿತೆ
ಮಣಿಮಾಯಾವಿದೇವಿ ಮನಿಗೈತಂದು ಪೊಕ್ಕನತಿ ಸಂಭ್ರಮದೊಳು
ಮನಸಿಜನ ಮಂತ್ರದೇವತೆಯಂತೆ ತೋರ್ಪ ತ್ರಿಭು
ವನ ಸುಂದರಿಯಳಾದ ವೇಶ್ಯೆಗೆ ಮನಗೊಡುತ
ಮುನಿನಾಥ ರೇವಣಂ ಮರೆತು ರತಿಕೇಳಿಯೊಳ್ಮುದದಿಂದಿರುತಿರ್ದನು ||೧೫||

ಇರುತಿರುತ್ತಸುರ ಕೆಲದಿನಗಳೆದು ಸಿದ್ಧಗುರು
ವರನ ಸ್ತುತಿಸಲ್ಕಾಗ ರೇವಣನು ಮೆಚ್ಚೆಲವೋ
ಸ್ಮರಣಗೈದಿಹ ಕಜ್ಜಮೇನು ನಿನ್ನಭಿದಾನವಾವುದು ನಿವಾಸಮೆತ್ತ
ವರೆಯಬೇಕೆಂದುಸರಲಸುರ ತನ್ನಯ ಸ್ಥಿತಿಯ
ಮರೆಮಾಜದಂತೆ ಪೇಳ್ದನು ವಿಭೀಷಣನು ನಾನು
ಸುರಚಿರ ತ್ರಿಕೋಟಿಲಿಂಗಗಳ ಸ್ಥಾಪನೆಗೆ ನೀನಾಚಾರ್ಯನೆಂದು ತಿಳಿದು ||೧೬||

ಯತಿವೇಷ ಧರಿಸುತ ವಿರೂಪಾಕ್ಷ ಸಿದ್ಧನೆಂ
ದತಿಶಯದ ನಾಮಮಂ ಪೇಳುತ್ತ ಮೋಸದಿಂ
ಪತಿಕರಿಸಿ ಬಂದೆ ತಮ್ಮಡಿದಾವರೆಗೆ ದೇವ ಮುದವೆತ್ತು ಅನುದಿನದೊಳು
ಸುತನ ದೋಷಂಗಳೆಣಿಸದೆ ಕೃತಾರ್ಥನಗೈದು
ಕ್ಷಿತಿಯೊಳೆನ್ನಿಚ್ಛೆಯಂದದಲಿ ಲಂಕಾಪುರ
ಕ್ಕತಿತ್ವರದೊಳೈತಂದು ಲಿಂಗಪ್ರತಿಷ್ಠಮಂ ಮಾಳ್ಪುದೆಂದೋಲೈಸಿದಂ ||೧೭||

ಅಸುರನಾಡಿದ ನುಡಿಗೆ ಮನವಪ್ಪಿ ರೇವಣಂ
ಬಿಸಿಗದಿರನುದಯದೊಳು ಬರ್ಪೆನೆಂದಭಯಮಂ
ಮುಸುರಲನಿತರೊಳು ಮಾಯ್ದೇವಿಯದ್ದಾ ಸಿದ್ಧಗುರುವರನ ವಿಮಲಚರಣ
ಬಿಸಜಗಳಿಗೆರಗಿಯೆನ್ನಪರಾಧ ಕ್ಷಮಿಸೆನ
ಲ್ಕಸಮಾಕ್ಷನವಳ ಮನ್ನಿಸುತಭಯ ಕರಗಳಿಂ
ವಸುಮತಿಯು ಮುಟ್ಟಲ್ಕೆಸ್ಯಾತ ಲಿಂಗಗಳೆರಡು ಜನಿಸಿದವು ತಕ್ಷಣದಲಿ ||೧೮||

ವೇಶ್ಯೆಯಳಿಗುಭಯ ಲಿಂಗಾರ್ಚನೆಯಗೈದತಿ ವಿ
ಲಾಸದಿಂದಿರು ನಿನಗೆ ಗತಿ ದೊರೆವದೆಂದುಸುರಿ

ಶಾಸನವಗೈದಸುರನೊಡನೆ ಲಂಕಾಪುರಿಗೆ ತೆರಳಿದ ಮನೋವೇಗದಿ
ಭಾಸುರ ತ್ರಿಕೋಟಿಲಿಂಗಗಳಂ ಪ್ರತಿಷ್ಠಗೈ
ದಾ ಸಿದ್ಧನಿರದೆ ಕಡಲುದಾಂಟಿ ಕಡುಭರದಿ
ಲೇಸಿನಾ ಕಲ್ಯಾಣ ಪಟ್ಟಣಕ್ಕಿಳಿದನಾಕಾಶದಿಂದತಿ ವೇಗದಿ ॥೧೯॥

ಬಿಜ್ಜಳನೃಪಾಲನ ಹಜಾರಮಂ ಪೊಕ್ಕು ನಿ
ರ್ಲಜ್ಜೆಯಿಂ ಸ್ವರವೆತ್ತಿ ಕೂಗಿದಂ ದೇಹಿಯಂ
ದುಜ್ಜಗಿಸಲರಸನವನಂ ಕಂಡು ಕಪಟದಿಂ ಸುಡುವಾನ್ನ ನೀಡಿಸಲ್ಕೆ
ಸಜ್ಜನೋದ್ಧಾರ ಗುರುಸಿದ್ಧನದು ಸ್ವೀಕರಿಸಿ
ಹೆಜ್ಜೆ ಮುಂದಿಡದೆಂಜಲದ ಕರಗಳಿಂದ ತಾಂ
ಬಜ್ಜರದಿ ಕೆತ್ತಿದರಮನೆಯ ಕಂಬವ ಪಿಡಿಯಲುದಿಸಿತಾಗಳೆ ದಳ್ಳುರಿ ॥೨೦॥

ನೃಪವರನು ಬೆರಗಾಗಿ ಸಿದ್ಧನಂ ಸ್ಮರಿಸುತೆ
ನ್ನಪರಾಧ ಕ್ಷಮಿಸೆನಲ್ಕಾಗಲಾ ರೇವಣಂ
ಕೃಪೆಯಿಂದುರಿಯ ನಂದಿಸುತ್ತೈದು ಪಡಿಯಕ್ಕಿಯಂ ತರಸಿ ಪಾಕಗೊಳಿಸಿ
ಅಪರಮಿತ ಸೇನಾಸಮೇತಕುಣಬಡಿಸಿ ನಿ
ಷ್ಕಪಟದಿಂ ರಾಜನೀತಿಯ ತಿಳಿಸಿ ದೃಢಪಡಿಸಿ
ವಿಪುಲ ಮಾನಸನಾಗಿ ಗಗನಕ್ಕೆ ಹಾರಿ ಕೋಲಾರಪುರಕ್ಕಿಳಿದನಾಗ ॥೨೧॥

ಅಲ್ಲಿರ್ಪ ಕುಟಿಲ ನಾಟಕ ಸಿದ್ಧರಂ ಜೈಸು
ತೆಲ್ಲರ್ಗೊಡೆಯನಾಗಿ ಜಸವಡೆದ ಗೋರಕ್ಷ
ನಲ್ಲಿಗೈತಂದು ಭಿಕ್ಷಾಯೆಂದು ಕೂಗಲಾತನು ಕಠಾರಿಯನು ತಂದು
ಕುಲ್ಲತನದಿಂದ ಗುರುವರನ ಕರಕಿರಿಯಲದು
ಮೆಲ್ಲನೆ ಕರಗಿ ಸಿದ್ಧರಸಮಾಗಿ ಸ್ವೀಕರಿಸ
ಲಲ್ಲಿ ಗೋರಕ್ಷನೆದೆಯಲಿ ಕಠಾರಿಯು ಪೊಕ್ಕು ಬೆನ್ನನೋಳ್ಮೂಡಿತಾಗ ॥೨೧॥

ಗೋರಕ್ಷ ರೋಧಿಸುತ ಸತಿಯ ಕರದೊರೆದನೀ
ಘೋರಕಷ್ಟವ ಬಿಡಿಪ ಬಲ್ಲಿದರು ಭುವನದೋ
ಳಾರನಂ ಕಾಣೆ ನೀಂ ಪೋಗಿ ಕೋಲಾಪುರ ಮಹಾಲಕ್ಷ್ಮಿಯಡಿಗೆರಗುತ
ತಾರತಮ್ಯದಿ ತಿಳಿಸಿ ಬಾರೆನೆಲ್ಕವಳು ಗಂ
ಭೀರದಿಂ ತೆರಳಿಸಿಗರುಹಲ್ಕೆತ್ವರದಿಂದ
ಧೀರ ರೇವಣನಡಿಗವಳು ಬಂದು ನಮಿಸಲ್ಕೆ ಗೋರಕ್ಷಣಂ ಪೊರೆದನು ॥೨೨॥

ಇತ್ತ ಬಿಜ್ಜಳ ಮಾಸನೂರಿನ ಮಡುವಿನೊಳ
ತ್ಯುತ್ತಮ ಸುರಗಿಯುಂಟೆನ್ನುತ್ತ ಚರರಿಂದರಿದು
ಮತ್ತದಂ ಕಡೆಗೆ ತಗಿವದಕೆ ಪನ್ನೆರಡು ಸಾಸಿರ ವಧುಗಳನ್ನು ತಂದು
ಚಿತ್ತಶುದ್ಧದಿ ಬಲಿಯನೀಯಲನುವಾಗಿರ

ಳ್ಳುತ್ತುಂಗ ಸಿದ್ಧ ಬಂದಬಲೆಯರ ಶರೆ ಪಾಶ
ಕತ್ತರಿಸಿ ಕರುಣದಿಂ ಕಾಪಾಡಿ ಬಿಜ್ಜಳನ ಸುತೆಯಳಂ ಮದುವೆಯಾದ ||೩೪||

ಅಲ್ಲಿ ಕೆಲದಿನವಿರ್ದು ಬಿಜ್ಜಳನರೇಂದ್ರನಿಂ
ದುಲ್ಲಸಿತ ಸತ್ಕಾರ ಸ್ವೀಕರಿಸಿ ಚರಿಸುತ್ತ
ಮೆಲ್ಲಮೆಲ್ಲನೆ ಚೋಳದೇಶಮಂ ಪೊಕ್ಕು ಶಿವನಿಲಯಗಳ ನೋಡುತಿರಲು
ಪುಲ್ಲಶರವೈರಿಯ ಮಗಂ ಬಂದನೆಂದು ವಿಭ
ವೋಲ್ಲಾಸದಿಂದಿರ್ಗೊಂಡು ಚೋಳನೃಪಾಲ
ನಿಲ್ಲದರಮನೆಗೆ ಕರೆದೊಯ್ದು ತನ್ನಯ ಸುತೆಯನಿತ್ತು ಸನ್ಮಾನಿಸಿದನು ||೩೫||

ಆ ಸುಕನ್ಯಾರತ್ನಮಂ ಪರಿಗ್ರಹಿಸುತ ವಿ
ಲಾಸದಿಂ ಕೇರಳವಿದರ್ಭಾದಿ ದೇಶಗಳ
ಬೇಸರಿಲ್ಲದೆ ನೋಡಿ ಶಿವನಿಲಯ ರಚಿಸುತ್ತ ಪುಣ್ಯಕ್ಷೇತ್ರಂಗಳನ್ನು
ಆಸನಗಳಿಂದ ಜಪತಪನೇಮನಡಿಸುತ್ತ
ಭಾಸಗೊಳ್ಳದೆ ಚರಿಸುತರವಟ್ಟಿಗೆಯನಿಡಿಸಿ
ವಾಸಗೈಯುತ ರಾಜಪುತ್ರಿಯರ ಕೂಡಿ ಕಲ್ಯಾಣಪುರಿಗೈತಂದನು ||೩೬||

ಲೋಕೋಪಕಾರಾರ್ಥಮಾಗಿ ಕೆರೆಯಂ ರಚಿಸ
ಬೇಕೆಂದು ವಿಸ್ತೀರ್ಣವಾದ ಸ್ಥಲಮಂ ಹುಡುಕುತ
ಕಪರ್ದಿಯ ಸುತಂಕುದ್ದಾಲ ಕೈಕೊಂಡು ನೆಲನಗಿದು ಸತಿಯರನ್ನು
ತಾ ಕರೆದವರನೆತ್ತಿಯೊಳು ಮಹಾದುರಿತಮಂ
ಜೋಕೆಯಿಂ ಬುಟ್ಟಿಯನು ತುಂಬಿ ಹೊರೆಸಿದನೆನೆ ನಿ
ರಾಕರಿಸಿ ಮಣ್ಣು ಹೊರಿಸುತ್ತ ಕೆಲದಿನವರೆಗೆ ನಡೆದುದಾ ಕೆರೆಕೆಲಸವು ||೩೭||

ಅನಿತರಲಿ ಸಿದ್ಧನ ಸತಿಯರೊಳಗೆ ಚೋಳಭೂ ಪನ
ಸುತೆಯು ಗರ್ಭವತಿಯಾಗಿ ಮಣ್ಣಿನ ಕೆಲಸ ವನು
ಬಿಟ್ಟು ಬೇಸರವ ಕಳೆದುಕೊಳಲೋಸುಗಂ ಕೂತಿರಲು ಗುರುಸಿದ್ಧನು
ವನಿತೆಯಂ ಕರೆದುಯನ್ನೊಡಿವೆಯನ್ನನಗೆ ಕೊ
ಟ್ಟನುಮಾನಗೊಳದೆ ನೀನಿಲ್ಲಿಂದ ನಿನ್ನ ನಿಜ
ಜನಕರಮನೆಗೆ ಪೋಗೆಂದವಳಗಡುತರೋದರವನೀಕ್ಷಿಸಿದ ಮುದದಿ ||೩೮||

ಕರದಿಂದ ಗರ್ಭವಂ ತರಿದು ಪಿಂಡವ ತೆಗೆದು
ತರುಣಿಗಪ್ಪಣೆಯನಿತ್ತಾ ಮೂರು ತಿಂಗಳದ
ವರಪಿಂಡಮಂ ಕೆರೆಯ ತಟದೊಳಗೆ ಹೂಳಿಟ್ಟು ಕೆಲಸಕನುವಾದನಾಗ
ಸರಸದಿಂದಾರು ತಿಂಗಳಿಗೆ ಕೆರೆಯಂ ಮುಗಿಸಿ
ಧರಣಿಯೊಳ್ಮಡಗಿರ್ಪ ಪಿಂಡಮಂ ತೆಗಿಸಲ್ಕೆ
ಗುರುವರನ ಪ್ರತಿಬಿಂಬದಂತೆಸೆವ ತರುಳನಿರೆ ನೋಡಿ ಜನ ಬೆರಗಾದರು ||೩೯||

ಆ ತರುಳನಿಗೆ ರುದ್ರಮುನಿಯೆಂದು ಪೆಸರಿಟ್ಟು
ಭೂತೇಶ ಪುತ್ರನಾ ಶಿಶುವಿನಂ ತನ್ನ ಸತಿ
ಭೂತಲಾಧಿಪ ಬಿಜ್ಜಳನ ಕುವರಿಗೊಪ್ಪಿಸಲ್ಕವಳು ಸಂಪ್ರೀತಿಯಿಂದ
ಜಾತನಂ ಪರಿಪಾಲಿಸುತ್ತಿರಲ್ಕೆಲದಿನಕೆ
ಸೀತ ಕಿರಣನು ಶುಕ್ಲಪಕ್ಷದೊಳಗಭಿವೃದ್ಧಿ
ಪಾತೆರದಿ ಬೆಳೆದಷ್ಟವರುಷದವನಾಗಲ್ಕೆ ನೋಡಿ ಜನ ಬೆರಗಾದರು ॥೪೦॥

ರೇವಣನು ತನ್ನ ರೂಪಂ ಮೆರೆವ ರುದ್ರಮುನಿ
ದೇವನಂ ಕರೆದಾಗ ಮೋಕ್ತಿಯಂದದಿ ವೀರ
ಶೈವ ದೀಕ್ಷೆಯನಿತ್ತು ತತ್ವಮಂ ತಿಳಿಸಿ ಮತ್ತಲಿಂದ ಸತಿಸುತರನು
ಸಾವಧಾನದಿ ಕೂಡಿಕೊಂಡು ಸಂಭ್ರಮದೊಡನೆ
ಕಾವಿಲಾಂಛನ ತಳೆದು ನಂಬಿನುತಿಸುವ ಭ
ಕ್ತಾವಳಿಯ ಪಾಲಿಸುತ್ತೆಸೆವ ಹಾವಿನಹಾಳು ಗ್ರಾಮದೆಡೆಗೈತಂದನು ॥೪೧॥

ಆ ಪುರದೊಳಿರುವ ಕಲ್ಲಯ್ಯ ಸಿದ್ಧೇಂದ್ರನ ಸ
ಮೀಪಕ್ಕೆ ಬಂದು ಪಾದಕೆರಗಿದಿರ್ಗೊಂಡು ಚಿ
ದ್ರೂಪ ನೀ ಬಾರೆಂದು ಮನೆಗೆ ಕರೆದೊಯ್ದು ಸದ್ಭಕ್ತಿಯಿಂ ಧ್ಯಾನಿಸಲ್ಕೆ
ತಾಪಸೇಂದ್ರಂ ರುದ್ರಮುನಿಯಿಂದ ನಿಜಶಿಷ್ಯ
ನಾಪೇಕ್ಷೆಯಂತೆ ಶಿವದೀಕ್ಷೆಯಂ ಕೊಡಿಸಿ ಸಂ
ತಾಪಮಂ ಕಳಿಸಿ ಶ್ರೀಕಲ್ಲಿನಾಥನ ಸುದರ್ಶನಗೊಂಡು ಪೊರಮಟ್ಟನು ॥೪೨॥

ಭರದಿಂದ ಸೊನ್ನಲಾಪುರಕಿಳಿದು ಪದುಳದಿಂ
ಹರಸಿದ್ಧರಾಮನುದಿಯಿಸುವದಂ ಸುಗ್ಗಲಗೆ
ಪರಿಪರಿಯೊಳೊರೆದು ಮತ್ತಲ್ಲಿಂದ ಶಾಂತಮುತ್ತಯ್ಯನ ಬಳಿಗೆ ಬಂದನು
ಗುರುಮೂರ್ತಿಯಂ ಕಂಡು ಪರಮ ಸಂತೋಷದಿಂ
ದೆರಗಿ ಪಾದಕಾಶೀರ್ವಚನಗೊಂಡು ತನ್ನ ಸ್ಥಿತಿ
ಯೊರದು ದೇಶಕ್ಷೇಮ ಶಿವನಿಲಯ ತಾಣಮಂ ಕೇಳಿ ಕೃತಕೃತ್ಯನಾದ ॥೪೩॥

ಅವಸರದೊಳು ಶಿಷ್ಯನಂ ಕೂಡಿಕೊಂಡು ಹರ
ಭವನಗಳ ನೋಡ್ದು ಕೋಲಾಪುರದೆಡೆಗೆ ಬಂದು
ಸುವಿಲಾಸದಿಂದ ತಚ್ಛಿಷ್ಯನಂ ಪುರದೊಳಗೆ ಕಳಿಸಲಲ್ಲಿಯ ಸಿದ್ಧರು
ಹವಣ ತಿಳಿಯದೆ ಬಂದು ತಡೆದು ತರ್ಕಿಸುತಿರ
ಲ್ಕವರೆಲ್ಲರಂ ಗೆದ್ದು ಶಪಿಸಿ ನರಗುರಿಗೈದು
ಜವದಿಂದ ಬರುತಿರಲ್ಕುಂಡಾಸುರನು ಬಂದು ಕೋಪದಿಂದಡ್ಡಾದನು ॥೪೪॥

ಆ ರಕ್ಕಸನಂ ಕೊಂದು ಮೂರು ಭಾಗವ ಸೀಳಿ
ಧೀರತನದಿಂ ಸಿದ್ಧನೆಡೆಗೆ ಬರಲವನ ನಿಜ

ಚಾರಿತ್ರಮಂ ನೋಡಿದನು ಜನಶರೀರ ಮೂರಡಿಯ ಕಂತೆಯನ್ನು ಮಾಡಿ
ತಾರತಮ್ಯದಿ ಧರಿಸೆನಲ್ಕೆಗುರ್ವಾಜ್ಞೆಯಂ
ಮೀರಿದವರಂದಂತೆ
ಮೂರಡಿಯ ಕಂತೆಯಂಗೈದು ಪ್ರಖ್ಯಾತಿಗೊಂಡನು ಧರೆಯೊಳು ॥೪೫॥

ಸಚ್ಚಿದಾನಂದ ಸಿದ್ಧೇಂದ್ರ ನರಗುರಿಯ ನೋ
ಡ್ಡಚ್ಚರಮಿದೇನೆಂದು ಶಿಷ್ಯನ ಪರಾಕ್ರಮಕೆ
ಮೆಚ್ಚಿ ಮನದೇಳ್ಗಿಯಿಂ ಪೇಳ್ದನೀ ಮೇಷಗಳ ರೋಮಗುರ್ವಾಸನಕ್ಕೆ
ನಿಚ್ಚಳದ ಗದ್ದುಗೆಯ ಚರ್ಮ ಗುರುಪಾದ ಪೂಜೆ
ಗುಚ್ಚಿತಂಗೊಡುವ ಘನವಾದ್ಯಂಗಳಾಗಲೆಂ
ದುಚ್ಚರಿಸಿ ಶಾಂತಮುತ್ತಯ್ಯಗಾಶೀರ್ವಚಿಸಿ ಮೇಘಮಾರ್ಗಕೆ ಜಿಗಿದನು ॥೪೬॥

ಈ ಸುಚಾರಿತ್ರಮಂ ಬರದೋದಿದರ್ಗೆ ಮೇಣ್
ಲೇಸಾಗಿ ಯಿದರರ್ಥವಾಧ್ಯಾಂತ ಪೇಳ್ದರ್ಗೆ
ಬೇಸರಿಯದುರೆ ಭಕ್ತಿಯಿಂದ ಕೇಳಿದವರ್ಗೆ ಪದುಳದಿಂದ ಪಠಿಸಿದರ್ಗೆ
ಭಾಸಿತ ಸಕಲ ಭೋಗಭಾಗ್ಯಮೋಕ್ಷಂಗಳ ವಿ
ಲಾಸದಿಂದಿತ್ತು ದುರಿತೌಘಮಂ ಸಂಹರಿಸಿ
ವಾಸ ರಸ್ತಾಪುರ ಶ್ರೀ ಶರಭಲಿಂಗೇಂದ್ರ ರಕ್ಷಿಸುವನಿಹಪರದೊಳು ॥೪೭॥

ಇಂತೆಬಲ್ಲಿಗೆ ಶರಭೇಶ್ವರ ಪಾದಾಬ್ಜಭೃಂಗನು
ವಿಶಿಷ್ಠವಿದ್ವಜ್ಜನ ವಿಧೇಯನು ಆದ ಭೀಮನಾಯಕ
ಕವಿಯಿಂ ಪ್ರಣೀತಮಪ್ಪ ಹಾಲ್ಮತೋತ್ತೇಜಕ ಪುರಾಣದಲ್ಲಿ
ಅಂತು ಸಂದಿ ೨ಕ್ಕಂ ಪದನು ೬೧ಕ್ಕೆ ಮಂಗಲಂ ಮಹಾಶ್ರೀಶ್ರೀಶ್ರೀ

## ಸಂಧಿ ೩-ಶಿವಪದ್ಮನ ಚರಿತ್ರೆ

ಸೂಚನೆ ॥

ಗಂಧರ್ವರಿಗೆ ಮುನಿಯ ಶಾಪ ಬರಲವರೀವ
ಸುಂದರಿಯೊಳುದ್ಭವಿಸಿದರ್ದಂಪತಿಗಳಾಗಿ
ಇಂದುಧರ ಪೇಳ್ದಂತೆ ನಿಶ್ಶಾಪಕಾಗಿ ಶಿವಪದ್ಮನಭ್ಯುದಯನಾಗ್ವಂ

ಕೈಲಾಸಪುಟಭೇದನಾಲಯ ಸ್ಥಿತಹೈಮ
ಶೈಲಜಾಪತಿ ತ್ರಿದಶ ಪಾಲಾರ್ಚಿತಾಂಘ್ರಿಯುಗ
ತ್ರೈಲೋಕರಕ್ಷಮಣಿಮೂಲ ಮಹಿಮಾಕರನುಶೀಲ ಹಿಮಕರ ಶೇಖರ
ನೀಲಲೋಹಿತದುರಿತ ಜಾತಿನಾಶನರುದ್ರ

ಕಾಲಾಂಕಧರ ಮುಕ್ತಿಮೂಲ ಮುಪ್ಪುರಹರ ಕ
ಪಾಲಧೃತಶರ್ವಕರಶೂಲದೇವಂ ಸದಾ ಪೊರೆಯಲೆನ್ನನು ಮುದದೊಳು ‖೧‖

ಒಂದುದಿನ ಹರನು ಕೈಲಾಸಪುರ ಮಂದಿರದಿ
ಇಂದಿರಾಪತಿ ಮುಖ್ಯಸುರರ ಸಮ್ಮೇಳದಲಿ
ನಂದಿನಾರದ ಗರುಡಗಂಧರ್ವರಿಂ ಕೂಡಿ ಪರಮ ಸಂತಸದಿರುತಿರೆ
ಬಂದರಲ್ಲಿಗೆ ಸಕಲ ಮುನಿಗಳೊಂದಾಗುತಾ
ನಂದದಿಂ ನಾಟ್ಯವನಾಡುತ್ತ ಸ್ತುತಿಮಾಡುತ್ತ
ಇಂದುಶೇಖರನ ಪಾದಕೊಂದಿಸಿದರಖಿಳ ನೆರದಿರ್ದಸುರರುಘೇಯೆನುತಿರೆ ‖೨‖

ಹರನಯಡಬಲದಿರ್ದ ಉಭಯ ಗಂಧರ್ವರಾ
ವರಮುನಿಯ ತಂಡದಿ ಕುರೂಪಿಯಾದೋರ್ವ
ಪರ ತರ ತಾಪಸೋತ್ತಮನ ಮಹಿಮವರಿಯದೆ ಮೂಢರಂತೆ ಪರಿಹಾಸದಿಂದ
ನೆರೆನಕ್ಕು ಕರಬಡಿಯೆ ಮುನಿನಾಥ ಕೋಪದಿಂ
ನರಲೋಕಕಿಳಿದು ಕುಡುವಕ್ಕಲಿಗರುದರದೋಳ್
ಸರಸದಿಂದ್ಭವಿಸಿ ಸತಿಪತಿಗಳಾರೆಂದತಿ ಕೋಪದಿಂ ಶಪಿಸಿದಂ ‖೩‖

ನೋಡಿದರು ಗಂಧರ್ವರಾಗ ಮುನಿವರನ ಕೊಂ
ಡಾಡಿದರು ಪಾದಸರೋಜಂಗಳ್ಗೆ ವಂದನೆಯ
ಮಾಡಿದರು ಧೃತಿಗುಂದಿ ಧೃಡಭಕ್ತಿಯಿಂ ಭಜಿಸುತಡಿಗಡಿಗೆ ಕರಮುಗಿಯುತ
ಬೇಡಿರು ಬೇಗದಿಂ ನಿಶ್ಶಾಪ ನೀಡೆಂದು
ಪಾಡಿದರು ಸದ್ಗನ ಸ್ವರವೆತ್ತಿ ಪ್ರೌಢಿಯಂ
ಕೂಡಿದರು ವೆಸನದೊಳ್ನರಜನ್ಮಬಂತಿದಕ್ಕೇನು ಗತಿ ಪೇಳೆಂದರು ‖೪‖

ತಾಪಸೋತ್ತಮರಂ ನಿಂದಿಸಿ ನಕ್ಕದಕೆ ಮಹಾ
ಕೋಪದಿಂದೆಮಗೆ ನರಜನ್ಮಕ್ಕೆ ಪೋಗೆಂದು
ಶಾಪವಿತ್ತಪರೆ ತಪ ಮಹಿಮಗಳನರಿಯದೀ ದೀನರಿಗೆ ನಿಶ್ಶಾಪಂ
ತಾಪಗೊಳ್ಳದೆ ಪೇಳಿ ರಕ್ಷಿಪುದನಾರತಂ
ಕಾಪಟ್ಯಮೆಮ್ಮೊಳಿಲ್ಲದೆ ನಕ್ಕವುದಕ್ಕೆ ಸಂ
ತಾಪಗೊಂಬುವದುಚಿತವೇ ಸುತರ ತಪ್ಪು ಪಿತನೆನಿಸಬಹುದೇ ವಿರಸದಿ ‖೫‖

ನೊಂದರುಭಯರು ನಿಟ್ಟುಸುರ್ಬಿಡುತ ಮನದೊಳಗೆ
ಬೆಂದರು ತರುವೆಸನವೆಂಬಗ್ನಿ ತಾಪಕ್ಕೆ
ತಂದರಕ್ಷಿಗೆ ಜಲವ ನರಜನ್ಮ ಬಂತೆಂದು ದುಃಖದಿಂ ಮುನಿಪಾದದೊಳು
ಬಂದರತಿ ದುಗುಡದಿಂ ಸರಿಸಕ್ಕೆ ಸಲೆಸಾರ್ದು
ನಿಂದರಾಗುಭಯ ಗಂಧರ್ವರೀಕ್ಷಣದಿ ಪೇ
ಳೆಂದರು ವಿಶ್ಶಾಪಮಂ ಮುನಿಕುಲೇಂದ್ರಮಂ ಕೋಪಬಿಟ್ಟು ಪೇಳುತಲಿರ್ದನು ‖೬‖

ಆಲಿಸಿರೀ ಗಂಧರ್ವರುಗಳೆ ನಿಮಗೆ ವಿಶ್ಯಾಪ
ಕಾಲಮಂ ಪೇಳುವೆನು ಪ್ರೇಮಮಾನಸರಾಗಿ
ಭೂಲೋಕದಲಿ ಪುಟ್ಟಿ ಸತಿಪತಿಗಳಾಗಿರಲ್ ಬಳಿಕೊಂದು ಶುಭದಿನದೊಳು
ಬಾಲನೋರ್ವನು ಜನಿಸುವುದಂದಿಗೆ ವಿಶ್ಯಾಪ ಪರಿ
ಪಾಲಿಸುವೆನೆಂದಭಯ ಕೊಟ್ಟನವರಿಗೆ ಸತ್ಯ
ಶೀಲಜಿತಮಾಯ ಬಡಕಾಯ ಮುನಿರಾಯ ತನ್ನಾತ್ಮದೊಳು ಪ್ರೇಮತಳೆದು ॥೭॥

ಮುನಿನಾಥನಾಡಿದ ಭಯದ ನುಡಿಗೆ ಗಂಧರ್ವ
ರನಿತರೋಳ್ವಿನಯೋಕ್ತಿಯಿಂದ ಕೇಳಿದರೆಮಗೆ
ತನಯನುದಿಸುವ ಸುದಿನಮೆಂದು ಮೇಣಾಸುತನ ಲಕ್ಷಣಗಳೆಮ್ಮಗರುಹಿ
ಘನಕರುಣದಿಂ ಪಾಲಿಸೆಂದೆನಲ್ಕಾ ಮುನಿವ
ರನು ಮಗುಳಿ ಪೇಳ್ದನೆಲೋ ಗಂಧರ್ವರುಗಳೆ
ಶಿವನನು ಸ್ತುತಿಸಿ ಕೇಳ್ದೊಡೆ ಭವಿಷ್ಯಸೂಚನೆ ಪೇಳಿ ರಕ್ಷಿಸುವ ಸಮ್ಮುದದೊಳು ॥೮॥

ನಮಿಸಿದರು ಮುನಿವರನ ಪಾದಕೆ ಸದ್ಭಕ್ತಿಯಿಂ
ನಮಿಸಿದರು ತ್ವರದಿಂದ ತಮ್ಮ ಸತ್ಕಾರ್ಯಕಾ
ಕ್ರಮಿಸಿದರು ಗಂಧರ್ವರಾಗ ಮನದೊಳು ಮರುಗಿ ಸೊರಗಿ ಸುಖರಹಿತರಾಗಿ
ಭ್ರಮಿಸಿದರು ಗತಿಗೆ ಯೋಗ್ಯಾತ್ಮಜನ ನೆನೆದು ವಿ
ಶ್ರಮಿಸಿದರು ಹರಸಭೆಯೊಳಂತರಂಗದವೆಸನ
ಕ್ಷಮಿಸಿದರು ಶಂಕರನ ಸನ್ನುತಿಯಗೈದುತಾವೇಕಾಗ್ರ ಚಿತ್ತರಾಗಿ ॥೯॥

ನುತಿಗೆ ಜಗದೀಶ್ವರಂ ಮೆಚ್ಚಿ ನಿಮಗೇಕಿಂಥ
ಗತಿ ಬಂದಿತೆಂದು ಗಂಧರ್ವರಿಗೆ ಕೇಳಲವರತಿ
ತ್ವರದಿ ಪೇಳಿದರು ತಮ್ಮಯ ಪುರಾವೃತ್ತಮಂ ಶಂಕರನ ಸನ್ನಿಧಿಯೊಳು
ಯತಿಯೋರ್ವನಂ ಕಂಡು ಹಾಸ್ಯಗೈದದಕೆ ಬಹು
ಖತಿಗೊಂಡು ನರಜನ್ಮ ನರಕಕ್ಕೆ ಪೋಗಿರೆಂ
ದತಿಶೈಸಿದನು ಶಾಪಕುಶ್ಯಾಪ ಕೇಳಿದರೆ ತಮ್ಮಡಿಗೆ ಪೋಗೆಂದನು ॥೧೦॥

ಇಂತು ಯೋಗಿಶ ತಾಂ ಶಪಿಸಿದನೇ ನಿಮಗೆ
ಚಿಂತೆಯಂ ಕಳೆದೇಕಚಿತ್ತದಿಂದಾಲಿಸಿರಿ
ಸಂತಸದಿ ಪೇಳ್ವೆನು ವಿಶ್ಯಾಪಂ ನೀವು ನರರಲ್ಲಿ ಸತಿಪತಿಗಳಾಗಿ
ಕಂತುವಿನ ರೂಪಮಂ ಧಿಕ್ಕರಿಪ ಬಾಲನ
ತ್ಯಂತ ಮತ್ಕಳೆವೆತ್ತು ಜನಿಸುವನು ಸುಪ್ರೇಮ
ದಿಂ ಸಟೆಯಲ್ಲವಲ್ಲಿಗೀ ಶಾಪ ಪರಿಹರಮಪ್ಪುದೆಂದೊರೆದನು ॥೧೧॥

ಸಿತಕಂಠನೇ ತಮ್ಮ ಕೃಪೆಯಿಂದ ಜನಿಸುವಾ
ಸುತನ ಸತ್ಕಳೆಗಳಂ ಪೇಳಬೇಕೆಂದು ಸ

ನ್ನುತಿಗೈದು ಬೇಡಿಕೊಂಡರು ಮಹಾಭಕ್ತಿಯಿಂ ಭಾವಜಾಂತಕದೇವಗೆ
ಹಿತದಿಂದ ಶಂಕರನು ಪೇಳತೊಡಗಿದನಾಗ
ಸುತನ ಸುಕಳೆಗಳನ್ನು ವಿಧವಿಧದಿ ವರ್ಣಿಸುತ
ಲತಿತ್ವರದಿ ತಿಳಿಸಿದಂ ಗಂಧರ್ವರುಗಳಿಗಾನಂದಮಪ್ಪಂತೆ ಮನಕೆ ||೧೨||

ವಸುಮತೀ ಜನರಂತೆ ನವಮಾಸಕಾರ್ಬಕವು
ಬಸುರಿಂದ ಬಾರದ್ಯೆದನೆಯ ಮಾಸಾಂತ್ಯದಿ ಜ
ನಿಸುವದಾ ಶಿಶು ಮುಂದೆ ಸುಪ್ರೇಮದಿಂದೆ ತಾ ಮಾತೆಯ ಮೊಲೆಯ ಪೀರದು
ಹಸಿವು ತೃಷೆ ನಿದ್ರೆ ಅಂಗಚ್ಛಾಯ ವಿಷಯದಕು
ವೆಸನ ಮಲಮೂತ್ರ ಶ್ವಾಸಛ್ವಾಸಗಳ ತೆಜಿಸಿ
ಮಿಸುನಿ ಪುತ್ಥಳಿಯಂತೆಸೆವ ಸುತನು ಬಿದಿಗೆಚಂದ್ರನ ತೆರದಿ ಬೆಳೆವನಂದಂ ||೧೩||

ಕೃತಿವಾಸನು ಪೇಳಲಾಗ ಗಂಧರ್ವರುರೆ
ಚಿತ್ತಜಾರಿಗೆ ನಮಿಸಲಾಕ್ಷಣದಿ ಶಿವಭಸಿತ
ವಿತ್ತವರಿಗಪ್ಪಣೆಯ ಕೊಟ್ಟು ಕಳಿಸಿದ ಮುದದಿ ನರಲೋಕ ವಿಷಯಸುಖಕೆ
ಇತ್ತ ಭೂತಲಮಧ್ಯಪ್ರಾಂತದೊಳ್ಸತ್ಕೀರ್ತಿ
ವೆತ್ತು ಶೋಭಿಸುವ ಜಾಗ್ರತಿಪುರದೊಳಿರುತಿರ್ದ
ಉತ್ತಮೋತ್ತಮ ಮುದ್ದುಗೊಂಡರ್ಧಾಂಗಿ ಮುದ್ದಾಯಿಯ ಸುಗರ್ಭದಿಂದ ||೧೪||

ಅವತರಿಸಿ ಬಂದ ಮುನಿಶಾಪದಿಂ ಗಂಧರ್ವ
ತವೆ ಶೋಭಿಸುವ ಪುತ್ರನಂ ನೋಡಿ ಜನನಿ ಕೆಲ
ಯುವತಿಯರ್ಗಾ ಬಾಲನಂ ತೋರಿಸುತ್ತ ಸಂತೋಷಗೊಂಡಳು ಮನದೊಳು
ಅವನಿಯೊಳಗತಿ ಕುಶಲನಾದ ಪಿತ ತಾಂ ತನ್ನ
ಕುವರಂಗೆ ದ್ವಾದಶ ದಿನದಿ ನಾಮಕರ್ಣವಂ
ಸುವಿಲಾಸದಿಂಗೈಸಲಾದಿಗೊಂಡೆಂಬಾಖ್ಯವಿಟ್ಟು ಪೋದರು ಸ್ತ್ರೀಯರು ||೧೫||

ಬಾಲಲೀಲೆಯೊಳಾದಿಗೊಂಡನಿಗೆ ಶರವರುಷ
ಮೇಲಾಗಿ ಬೆಳೆಯಲಾತನ ಜನಕ ಚಿಂತಿಸಿದ
ನೀ ಲೋಕದಲಿ ಸುತನಿಗೊಪ್ಪುವ ಸುಕನ್ಯಯಲ್ಲಿರ್ಪುದೋ ತಿಳಿಯಲೆಂದು
ಶೀಲೆ ಸಂಪನ್ನೆಯಾದಬಲೆ ಸಿಕ್ಕರೆ ಮಿಸುವ
ಪಾಲಿನೊಳ್ ಸಕ್ಕರೆಯ ಬೆರಸಿದಂತಹುದು ಫಣಿ
ಮಾಲನೇ ಬಲ್ಲನಿದು ಮುಂದೆ ಗತಿಯೇನೆಂದು ಯೋಚಿಸಿದಳಾ ಮಾತೆಯು ||೧೬||

ಘನಮುದ್ದುಗೊಂಡನ ಸಹೋದರಿಯ ಬಸುರಿಂದ
ಮುನಿಶಾಪವ ಪಡೆದು ಗಂಧರ್ವಪೆಣ್ಣೊಸಾಗಿ
ಜನಿಸಲ್ಕೆ ಪಿತಮಾತೆಯರು ಮುದದಿ ಪನ್ನೆರಡು ದಿನ ಶುಭಮಹೂರ್ತದೊಳಗೆ
ವನಿತೆಯರು ಜೋಗುಳವ ಪಾಡಿ ಚುಂಚಲೆಯಂದು

ಮನವಪ್ಪಿ ಪೆಸರಿಟ್ಟು ಕರೆದು ಕೊಂಡಾಡಿದರು
ಇನಿತೆಲ್ಲ ಮುದ್ದುಗೊಂಡನು ಕೇಳಿ ತನ್ನ ಪುತ್ರನಿಗೆ ಸಮವಾಯಿತೆಂದು ||೧೭||

ಕೆಲಕಾಲ ಕಳೆದಾದಿಗೊಂಡನಿಗೆ ಚುಂಚಲೆಯಂ
ನಲುವಿಂದ ತೆಗೆದು ಪರಿಣಯ ಮಾಡಿದರು ಬೇಗ
ಮಲಹರನ ಕರುಣದಿಂ ವಧುವರರು ದಿನದಿನಕೆ ಸಂಪ್ರೀತಿಯಿಂದಿರ್ದರು
ವಿಲಸಿತ ಗಂಭೀರದಿಂ ಮೆರೆಯುತೆವ್ವನದಲ್ಲಿ
ಚಲುವಾದ ಚತುರ ಸುತರಂ ಪಡೆದರಾಗ
ಪ್ರಜ್ವಲಿಪ ಪೆಸರುಗಳನ್ನು ಕ್ರಮದಿಂದ ಪೇಳುವೆನು ಸಕಲರರಿವಂತೆ ಮುದದಿ ||೧೮||

ಪುಂಡ ಆಯುಗೊಂಡ ಪಾಯ್ಗೊಂಡ ಮರಗೊಂಡ ಜಾ
ಯ್ಗೊಂಡರೆಂದೆಂಬ ಸುತರಂ ಪೋಷಿಸುತ್ತಿರಲ್
ಮಂಡೆಬೆಳ್ತುದು ಕುಗ್ಗಿತೆವ್ವನವು ಚುಂಚಲೆಗೆ ಮೇಣಾದಿಗೊಂಡನಾಗ
ತಂಡತಂಡದಿ ಚಿಂತಿಸಿದನಂತರಂಗದೊಳ್
ಖಂಡಶಶಿಧರ ಪೇಳ್ದ ತೆರದೆಮಗೆ ಸತ್ಪುತ್ರ
ಪುಂಡರೀಕ ಭವಾಂಡದೋಳ್ಜನಿಪನೋ ಜನಿಸದಿರುವನೋ ತಿಳಿಯದೆಂದು ||೧೯||

ಬಿಟ್ಟನೂಟವನಾದಿಗೊಂಡ ಸುಖಭೋಗಗಳ್
ಸುಟ್ಟನತಿ ದುಗುಡ ಮಾನಸನಾಗಿ ಗತಿಗೆ ಗುರಿ
ಇಟ್ಟನಾಗಳೆ ಶಿವಾಧವನಸಧ್ಯಾನಮಂಗಯ್ಯಲನುವಾದ ಮುದದಿ
ಕೆಟ್ಟನಾತ್ಮಜನುದ್ಭವಿಸಿದಕ್ಕೆ ಶಪಥವನು
ತೊಟ್ಟನಾ ಸತಿಚುಂಚಲೆಯ ಕರೆದು ದುಃಖದಿಂ
ಕೊಟ್ಟನಭಯವ ಸಾಕು ಸಂಸಾರಸುಖಮೆಂದು ಮೈಮರೆದು ಧರೆಗೊರಗಿದಂ ||೨೦||

ರಮಣ ಧರೆಗುರುಳೆ ಚುಂಚಲೆ ಕರಗಳಂ ಚಾಚಿ
ಅಮಿತ ಪ್ರೇಮದಿ ಪ್ರಿಯನ ಪಿಡಿದೆತ್ತಿ ನಿನಗುಪ
ಕ್ರಮಿಸಿತೇ ವೆಸನಮಂ ಬಿಡುಕಾಂತ ಶ್ರೀಮಂತಗುಣವಂತ ತಾಳು ಶಾಂತ
ಸುಮನಪತಿ ಪೂಜಿತನು ಪೇಳ್ದನುಡಿ ಸಟೆಯಹುದೆ
ವಿಮಲ ಮಾನಸನಾಗು ಮತಿಹೀನರಂತೆ ಹೃ
ತ್ಕಮಲದೋಳ್ಚಿಂತಿಪರೆ ಶಾಪಾಂತ್ಯ ಕಾಲದೊಳ್ ಸತ್ಪುತ್ರ ಪುಟ್ಟದಿಹನೇ ||೨೧||

ಎಂದು ವಲ್ಲಭನ ಸಂತೈಸಿದಳ್ಮನದೊಳಿಹ
ಕುಂದುಗಳ ಕಳೆದು ವಿಧವಿಧ ನೀತಿ ನುಡಿಗಳಂ
ಚಂದದಿಂದೊರೆದಳಾ ಸುಂದರ ಕರಂಗಳಂ ಮುಗಿದೇಕ ಚಿತ್ತದಿಂದ
ಒಂದು ದಿನ ವರದ ರೇವಣಸಿದ್ಧ ಬಹುಶಿಷ್ಯ
ರಿಂದ ಕೂಡುತ್ತ ಜಾಗ್ರತಿ ಪಟ್ಟಣಕ್ಕೆ ತಾ
ಬಂದನತಿ ಸತ್ವರದಿ ಶಿವನ ಸ್ತುತಿಗೈಯುತಲ್ಲಲ್ಲಿಗೆ ಪರಾಕೆಂಬುತೆ ||೨೨||

ನಿಂತು ತಾಂಡವನಾಡಿ ಪುರ ನೋಡಿ ಬೀದಿಯಲಿ
ಸಂತಸದಿ ಚರಿಸ್ಯಾಡಿ ನಲಿದಾಡಿ ದೃಢದಿಂದ
ಕಂತುಹರನನು ಪಾಡಿ ಪಥಗೂಡಿಬರೆ ಶಿಷ್ಯಸಂದೋಹ ಸಿದ್ಧೇಶಗೆ
ಚಿಂತಿಸುತ ಕೇಳಿದರು ತಾಳಿದರು ಶಾಂತಿಯನು
ಇಂತು ಕುಣಿಕುಣಿದು ಮನವಿಡಿದು ಸ್ವರವೆತ್ತಿಮದ
ನಾಂತಕನ ನಾಮಸ್ಮರಣೆಯಿಂದ ಸಂತೋಷಗೊಂಡ ಕಾರ್ಯಾರ್ಥವೇನು ॥೧೩॥

ಭರದಿಂದ ತಿಳಿಸೆಂದು ಶಿಷ್ಯರಾ ಸಿದ್ಧನಂ
ಸ್ಮರಿಸಿದ ಕೇಳ್ದೊಡೆ ಮರಳಿ ರೇವಣಾಚಾರ್ಯ ತಾ
ನೊರೆದನವರಿಗೆ ಮಹಾಪುಣ್ಯಸ್ಥಲಮೆಂದು ನಲಿದಾಡಿದೆನೆನಲ್ಕೆ ಸುತರು
ಗುರುವೆ ಈ ಪುರದಲ್ಲಿ ಶಿವಕ್ಷೇತ್ರ ಶಿವನಿಲಯ
ಪರಿಶೋಧಿಸಲು ಕಾಣೆವಿಂತು ಕುಗ್ರಾಮಕ್ಕೆ
ವರಪುಣ್ಯಸ್ಥಲಮೆಂದು ಪೇಳ್ದ ಬಗೆಯಂ ತಿಳಿಸಿರೆಮಗೆನಲ್ಕಾ ಸಿದ್ಧನು ॥೧೪॥

ಅತ್ಯಧಿಕ ಪ್ರೀತಿಯಂ ಪೇಳ್ದನೀ ಪುರದೊಳಿಹ
ಸತ್ಯಯುತನಾದಾದಿಗೊಂಡನಾರ್ಧಾಂಗಿ ಗೃಹ
ಕೃತ್ಯಂಗಳಂಗೈದು ಸುಖಿಪಳಾಕೆಯ ಗರ್ಭದಲ್ಲಿ ಶಿವಯೋಗಿ ಜನಿಪ
ಸ್ತುತ್ಯವಾ ಶಿಶುವಿನಿಂದೀ ಜಾಗ್ರತಾಪುರವು
ನಿತ್ಯವೈಭವ ತಳೆದು ಮೆರೆವುದದರಿಂ ನಾನು
ನೃತ್ಯಗೈದಭವನಂ ಧ್ಯಾನಿಸಿದೆನೆಂದು ತಾ ಪೇಳ್ದ ಶಿಷ್ಯರ್ಗೆ ಮುನಿಪ ॥೧೫॥

ಸಿದ್ಧವರಗುರು ಪೇಳ್ದ ನುಡಿಗಳಂ ಶಿಷ್ಯರತಿ
ಬದ್ಧವೆಂದರಿದೊರೆದರೆಲೆ ಗುರುವೆ ಭುವನ ಪ್ರಸಿದ್ಧ
ಮಾದ ದಂಪತಿಗಳೆಮಗೆ ತೋರಬೇಕೆಂದು ಬಿನ್ನಪಗೈದರು
ಸಿದ್ಧರಾಗಿರಿ ಕರೆದುಕೊಂಡು ಪೋಗುವೆನು ಸ
ನ್ನದ್ಧರಾಗಿರಿ ನಿಮಗೆ ತೋರಿಸುವೆ ನಾನೀಗ
ವೃದ್ಧರಾದಾದಿಗೊಂಡನ ಮೇಣವನ ಪತ್ನಿ ಚುಂಚಲಾದೇವಿಯರನು ॥೧೬॥

ಎಂದು ರೇವಣಸಿದ್ಧಗುರು ತನ್ನ ನಿಜ ಶಿಷ್ಯ
ವೃಂದಮಂ ಕೂಡಿಕೊಂಡತುಳ ವೈಭವವೆರಸಿ
ಬಂದನಾ ಕುಡವಕ್ಕಲಿಗರ ಸಾಲ್ಮನೆಗಳಿತ್ತಂಡದಿರುಬಿನೊಳು ಭರದಿ
ಇಂದುಮುಖಿ ಚುಂಚಲೆಯು ಸಿದ್ಧನಂ ಕಾಣಲಾ
ನಂದಪರಳಾಗಿ ಭಯಭಕ್ತಿಯಿಂದವರ ಪಾದ
ಕೊಂದಿಸಲ್ಕಾ ತಪಸಿ ಚುಂಚಲೆಯ ಗರ್ಭಮಂ ಮುಟ್ಟುತಭಿನಂದಿಸಿದನು ॥೧೭॥

ಚುಂಚಲೆಯು ಬೆದರಿ ಬೆಂಡಾಗಿ ಬಾಯ್ಬಿಟ್ಟೀ ಪ್ರ
ಪಂಚಪಾಶಕೆ ಸಿಲ್ಕಿ ದುಃಖಕಾಸ್ಪದಳಾಗಿ

ಪಂಚಕರ್ಮಂಗಳ್ಗೆ ನೆಲೆಯಾದಯನ್ನಗಭಿವಂದಿಸುವರೇ ಗುರುವರಾ
ಚಂಚಲಾಯಿತು ಮನಕೆ ಕುವರಿಗೆ ಸಮಾಧಾನ
ಕೊಂಚ ಪೇಳುತ್ತ ರಕ್ಷಿಪುದೆಂದು ಬಿದ್ದಳೈ
ಪಂಚಮುಖ ಸುಕುಮಾರನೆನಿಪ ಸಿದ್ಧನ ಪಾದಕೆ ಬಣ್ಣಿಸಲ್ಕದು ತೀರದು ||೧೮||

ಪುಳಕದಿಂ ಮುನಿವರನು ದೇವಿಯಂ ಪಿಡಿದೆತ್ತಿ
ಕಳವಳಗೊಳುವದೇಕೆ ಸಾಕೆಂದು ಸಂತೈಸಿ
ತಿಳಿಸುವದಕನುವಾದನವಳಿಗೊಂದಿಸಿದ ಕಾರ್ಯಾರ್ಥದೆಲ್ಲಾ ಪರಿಯನು
ಪಳಿಯದಿರು ಕುವರಿ ನಿನ್ನುದರದೋಳ್ಮಿವನ ಚಿ
ತ್ಕಳೆಯೊಂದು ರೂಪಾಗಿ ಜನಿಸಿ ಬರುವುದು ಧರಾ
ತಳಕ್ಕೆ ಸಾಗರದಿ ಹಿಮಕರನುದಿಸಿ ಬಂದಂತೆ ತಿಳಿ ನಿನ್ನ ಮನ ಕೊನೆಯೊಳು ||೧೯||

ಮಲವಿಲ್ಲ ಮಾಸಿಲ್ಲ ದುರ್ಗಂಧದಿಂ ಕೂಡ್ದ
ಕಲೆಯಿಲ್ಲ ಸೀತೋಷ್ಣವಿಲ್ಲ ಹರುಷ ವಿಷಾದ
ನೆಲೆಯಿಲ್ಲ ಹಸಿವು ತೃಷೆಯೊಂದಿಲ್ಲವಾ ಶಿಶುವಿಗಭಿವಂದಿಸಿದೆನು ನಾನು
ವಿಲಸಿತಾಂಗಿಯೇ ನಿನ್ನ ಪೂರ್ವಾರ್ಜಿತದ ಪುಣ್ಯ
ಫಲಪಕ್ವದಿಂದೈದು ಮಾಸೊಳಗಾಗಿ ಪ್ರ
ಜ್ವಲಿಸುವ ಸುಪುತ್ರನನುದ್ಭವಿಸುವನು ಮೋಡದಿಂ ಪೊರಮಡುವ ಸೂರ್ಯನಂತೆ ||೨೦||

ಜಡನೆಂದು ಬಧಿರನೆಂದಳನೆಂದು ನಗನೆಂದು
ನುಸಿಯನೆಂದುಸುರಿಕ್ಕನೆಂದು ನೆರಳಿಲ್ಲೆಂದು
ಬಡನೆಂದು ಮೂರ್ಖನೆಂದುಣನೆಂದು ಮನದೊಳುಮ್ಮಳಿಸಬೇಡನುದಿನದಲಿ
ಕಡುಚಲ್ವನಾಗಿ ಮೃಡರೂಪಾಗಿ ಶಿವಯೋಗಿ
ಪೊಡವಿಗವತರಿಸುವನೆನಲ್ಕೆ ಆ ಸಿದ್ಧಂಗೆ
ನುಡಿದಳಾ ಯುವತಿ ಸಂತೋಷದಿಂದಲೆ ದೇವ ಪೆಸರಾವುದಾ ಶಿಶುವಿಗೆ ||೨೧||

ಯುವತಿಮಣಿ ಕೇಳು ಪರಮೇಶ್ವರನ ರೂಪದಿಂ
ದವತರಿಪನದರಿಂದಲಾ ಚಲ್ವ ಕೂಸಿಂಗೆ
ಶಿವಪದ್ಮನೆಂಬಾಖ್ಯ ಸಲ್ಲುವದಿದೆಂದು ಚುಂಚಲೆಗೆ ಪೇಳಿದ ಮುದದೊಳು
ಭುವನ ಪ್ರಖ್ಯಾತನಾದಾದಿಗೊಂಡನು ಬಂದು
ಅವಿರಳ ಪರಂಜ್ಯೋತಿಯಾದ ರೇವಣಸಿದ್ಧ
ನವರ ಪಾದಕ್ಕೆರಗಿ ಬಿನ್ನೈಸಿದಂ ಭಕ್ತಿಯಿಂ ಭಾವಶುದ್ಧದಿಂದ ||೨೨||

ಮಹಿಮೋತ್ತಮನೆ ನಿನ್ನ ನುಡಿ ಕೇಳಲತಿ ಚೋದ್ಯ
ವಹುದೆನ್ನ ಸತಿಗೆ ಗರ್ಭೋತ್ಪತ್ತ್ಯಮೆತ್ತ ಸುತ
ನಹುದೆತ್ತ ಪುಸಿನುಡಿಗಳೇಕೆ ಪೇಳುವಿ ಬರಿದೆ ಸಾಕೆಂದು ಕರವ ಮುಗಿಯೆ
ಇಹದೋಳೀ ಮಾತು ಪುಸಿಯಲ್ಲ ಸುತ ಪುಟ್ಟುವದು

ಸಹಜಮೆಂದಭಯಮಂ ನೀಡಿದಂ ಗುರುಸಿದ್ಧ
ಬಹುನುಡಿಗಳಂ ಪೇಳಿ ತೆರಳುವನಿತರೊಳು ಚುಂಚಲೆಯ ಸನ್ಮಿತ್ರೆಯಾದ ||೩೩||

ನಾರಿ ನಾಗಲೆ ಬಂದು ಸಾಷ್ಟಾಂಗವೆರಗಿ ನುಡಿ
ಬೀರಿದಳು ಮನಿಪಂಗೆ ಪುಸಿ ಪೇಳ್ವದೇಕೆಂದು
ದೂರಿದಳು ಕಠಿಷೋಕ್ತಿಯಿಂದ ನಿಂದಿಸಿದಳೀ ವೃದ್ಧೆಯಾದೆನ್ನ ಸಖಿಗೆ
ಮೀರಿರುವದೀಗ ಮಗನ ಪಡೆವಂದಿನ ಮುಪ್ಪು
ಏರಿರುವದೀಗ ತನುಧರ್ಮದ ಕಲೆಗಳೆಲ್ಲಾ
ಬೇರಾಗಿರುವವೀಗ ನೀನೋಡು ನೆರೆತ ರವಿಕಾರಂಗಳಂಗದೊಳಗೆ ||೩೪||

ತರುಣಿಯರು ನವಮಾಸದಲ್ಲಿ ಪಡೆವದು ಧರ್ಮ
ಶರಮಾಸಕೀ ನಾರಿ ಪ್ರಸವವಾಗುವದುಂಟೆ
ಬರಿದೆ ನಿಮ್ಮುದರ ಪೋಷಣೆಗಾಗಿ ಮರುಳರಿವರೆಂದರಿದು ಪೇಳಬಹುದೇ
ಧರೆಯೊಳೀ ಸಂಗತಿಯ ಕೇಳಲನ್ಯರು ನಗರೇ
ಪರಮಾಶ್ಚರದ ನುಡಿಯನುಸುರುವದಿದೊಳ್ಳಿತವೆ
ಶರಣ ನಿಮ್ಮಯ ಪಾದಕ್ಕೆ ಸಾಕು ಸುಮ್ಮನೆ ನಡಿಯೋ ಲೋಕೈಕ್ಯ ಪೂಜ್ಯನಾಗಿ ||೩೫||

ಎನಲು ಮುನಿನಾಥ ನಾಗಲೆಗೆ ಪೇಳ್ವನು ಮುದದಿ
ವನಿತೆ ಚುಂಚಲೆಯ ಬಸುರಿಂದ ವರಶಿವಯೋಗಿ
ಜನಿಸುವದು ಸತ್ಯಮಿದು ಮಿಥ್ಯವಲ್ಲೆಂದು ತಿಳಿ ನಿನ್ನ ಮನದೊಳಗೆಂದನು
ಅನಿತರೊಳಾದಿಗೊಂಡನು ನಮಸ್ಕರಿಸಿದನು
ವಿನಯದಿಂ ನುತಿಸಿ ರೇವಣಸಿದ್ಧದೇವನಂ
ಘನಪ್ರೇಮದಿಂ ಕಳಿಸಿ ಸತಿಸಹಿತ ಸುಖಿಯಾಗಿರಲ್ಕೆ ಚುಂಚಲಾದೇವಿಗೆ ||೩೬||

ನೆರೆತೆರೆಗಳಡಗಿ ತರುಣತ್ವದ ಸುಕಲೆಗಳಾ
ವರಿಸಿದವು ಜೋಲಾಗಿ ಬಳ್ಬಿಡಿದ ಚರ್ಮ ಸುಂ
ದರಮಾಯಿತಕ್ಷಿಗಳ್ಮಿಂಚೇರಿದವು ಕದಪು ನುಣ್ಪಡರಿದವು ಬೇಗದಿ
ಹರಿಕಟಯು ದಿನದಿನಕೆ ಗಡುತರಾಯಿತು ಮಹಾ
ಶರಧಿಯುಕ್ಕೇರಿದಂದುರ ಬೆಳೆದಿತು ತ್ರಿವಳಿ
ನೆರೆಮಾಸಿದವು ಗರ್ಭನೆಲೆಗೊಂಡಿತಾಕ್ಷಣಕೆ ಸಿದ್ದನರುಹಿದ ತೆರದಲಿ ||೩೭||

ಅಂಗನಾಮಣಿ ಗರ್ಭವಂ ತಾಳ್ದುದಂ ನೋಡಿ
ಮಂಗಲಾತ್ಮಕನಾದ ಪತಿಕಂಡು ಮೋಹದಿಂ
ಶೃಂಗರಿಸಿ ಬೆಸಗೊಂಡನೆಲೆ ಕಾಂತೆ ನಿನ್ನ ವೃದ್ಧಾಪ್ಯ ಲಕ್ಷಣಗಳಡಗಿ
ಕಂಗೊಳಿಪುದೀಗ ತರುಣತ್ವದಸು ಕಳೆಯಂತೆ
ತುಂಗ ರೇವಣಸಿದ್ಧ ಚಕ್ರೇಶ ಪೇಳ್ದದಕೆ
ಭಂಗಮಾದಪುದೆ ಗರ್ಭೋತ್ಪತ್ಯ ಸತ್ಯಮೆಂದಬಲೆಗೊರೆದನು ಮೋಹದಿ ||೩೮||

ಪತಿಯೇ ಪರಿಹಾಸಕದ ಮಾತೇಕೆ ಪೇಳ್ವಿಯಂ
ದತಿಶಯೋಕ್ತಿಗಳಿಂದ ತನ್ನ ನಿಜಕಾಂತಗೆ
ಸತಿ ಚುಂಚಲೆಯು ನಾಚುತಾಡಿದಳು ತಲೆಬಾಗಿ ಕೈಮುಗಿದು ಕರುಣದಿಂದ
ಹಿತಗೋಷ್ಠಿ ಸಾಕು ಸಾಕು ಸುರಬೇಡೆನ್ನೊಳೀ
ಕ್ಷಿತಿಜನರು ನಗುವಂತೆ ಮಾತನಾಡುವಿ ವೃಥಾ
ಶೃತಿಸುವದಿದುಚಿತಮಲ್ಲೆಂದು ಪೇಳಲ್ಕೆಮಗುಳಿಂತೆಂದನಾದಿಗೊಂಡ ॥೩೯॥

ಮಡದಿ ಕೇಳ್ನಿನ್ನ ಸ್ತನಮೊನೆಗೇಕೆ ಕಪ್ಪು ತೆಳು
ಪೊಡೆಯು ಗಡುತರಮಾಯ್ತು ಮುಪ್ಪು ಹರಿ
ನಡುಹಿಗ್ಗಿತತ್ಯಧಿಕ ನಾನೇನು ತಪ್ಪು ನುಡಿಯಾಡಿದನೆ ಸತಿರನ್ನಳೇ
ಬಿಡುವೆಸನ ಮನದೊಳಗೆ ಸುಖವರದ ಸಿದ್ಧ ತಾ
ನುಡಿದ ಮಾತಿಗೆ ಭಂಗಮಿಲ್ಲಮಿದು ಬದ್ಧ ನಿಜ
ವಿಡಿದು ನಿಶ್ಚೈಸು ಮೊದಲಿನ ನಿನ್ನ ವೃದ್ಧ ಕಳೆ ಪರಿ ಮಾಸಿತೆಂದೊರೆದನು ॥೪೦॥

ನುಡಿಯಲಾ ಪತಿಗೆ ತಲೆ ತಗ್ಗಿದಳು ಹಿಗ್ಗಿದಳು
ನಿಡುಗುರುಳ್ಗಳ ಕರದಿ ಬಾಚಿದಳು ನಾಚಿದಳು
ದೃಢವೆಂದು ಪ್ರಿಯನ ನುಡಿಗೊಪ್ಪಿದಳು ಅಪ್ಪಿದಳು ಸನ್ಮೋಹದಿಂ ಕಾಂತನ
ಸಡಗರದೊಳಿಹಳಕ್ಷಿ ಚಂಚಲೆಯು ಚುಂಚಲೆಯು
ಬಿಡದೆ ಸುಖಿಯರ್ಗೆ ಕಳೆದೋರಿದಳು ಸಾರಿದಳು
ಕಡುಚಲ್ವ ಪುತ್ರನಾಪೇಕ್ಷಿಸಿದಳೀಕ್ಷಿಸಿದಳೆಲ್ಲ ತನ್ನಯ ಕಳೆಗಳ ॥೪೧॥

ಅಂದಿಗಾ ಚುಂಚಲೆಗೆ ಶರಮಾಸ ತುಂಬಲ್ಕೆ
ಒಂದು ದಿನ ತನ್ನ ಸಖಿ ನಾಗಲೆಯು ಕೂಡಿ ನಿಜ
ಮಂದಿರದಿ ಹಂಸತಲ್ಪಕ ಮಂಚದೊಳ್ಪವಡಿಸಿದರಾಗ ರಾತ್ರಿಯೊಳಗೆ
ಕಂದುಗೊರಳನಾಜ್ಞೆಯಿಂದಾರ್ಭಕವು ಪುಟ್ಟಿ ತಾ
ಇಂದುಶೇಖರನ ಚಿತ್ಕಳೆಯೊಂದು ರೂಪಮಂ
ಪೊಂದಿ ಪಿತಮಾತೆಯರ ಸದ್ಗತಿಗೆ ಕಳಿಸಬೇಕೆಂದಿಳಿಯಿತೆಂಬಂತಿರೆ ॥೪೨॥

ಪಂಚಶರನಂ ಪೊಳೆವ ರೂಪ ಕುಲದೀಪವರ
ಪಂಚವದನನ ವಿಮಲ ತೇಜಸುರ ಭೂಜಕಡು
ಪಂಚಕರ್ಮಂಗಳಿಗೆ ದೂರ ಸುಖಸಾರಗುಣಹಾರ ಸಲೆ ಶೂರವೀರ
ಪಂಚವಾಯುಗಳ ಹಂಗರಿಯ ಸ್ಥಿರಚರಿಯ ಘನ
ಪಂಚ ಮುದ್ರಾನ್ವಿತ ಸುಕಾಯಜಿತಮಾಯತವೆ
ಪಂಚಭೂತಾಧೀನನಲ್ಲ ಪುಸಿಯಲ್ಲ ಹರಬಲ್ಲನಿನಿತೆಲ್ಲವನ್ನು ॥೪೩॥

ಸುರರು ಪುಷ್ಪದ ಮಳೆಯಗರಿಸಿದರು ಸುರಿಸಿದರು
ವರದುಂದುಭಿಯ ನಾದ ಮಾಡಿದರು ಪಾಡಿದರು

ಭರದಿ ಭೇರಿಗಳೆಲ್ಲ ಮೊಳಗಿದವು ಬೆಳಗಿದವು ಖೇಚರರ ಹೊಡೆತಕೆ
ಸಿರಿ ಸರಸ್ವತಿ ರುದ್ರಕನ್ಯೆಯರು ಚನ್ನೆಯರು
ಸರಸದಿಂ ಕೂಡಿ ಗಿರಿಜಾತೆಯೊಳು ಖ್ಯಾತೆಯೊಳು
ವರಬಾಲನಿಹ ಸ್ಥಲಕಾ ಗಮಿಸಿದಳು ಭ್ರಮಿಸಿದಳು ಸುತಗೆ ಮುದ್ದಿಡುವದಕ್ಕೆ ॥೪೪॥

ಗಿರಿಜಾತೆ ಕೂಸಿನಂ ಪಿಡಿದೆತ್ತಿ ಮುದ್ದಿಟ್ಟು
ಹರನ ಸಕಲೈಶ್ವರ್ಯ ಸಚ್ಛಕ್ತಿ ಶಮೆದಮೆಯು
ಸ್ಥಿರವಾಗಿ ನಿನ್ನಗೆ ದೊರೆಯಲೆಂದು ಮೋಹದಿಂದರಸಿದಳು ಪಲತೆರೆದಳು
ಕರಕಮಲವನ್ನು ತೊಟ್ಟಿಲಮಾಡಿ ತರುಳನಂ
ಸರಸದಿಂ ತೂಗಿದರ್ಜೋಗುಳವ ಪಾಡಿದರ್
ಸ್ವರವೆತ್ತಿ ಸದ್ಗಾನ ಮಾಡಿದರ್ಮರುಕದಿಂದೇನೆಂಬೆನಚ್ಚರಿಯನು ॥೪೫॥

ಜೋ ಜೋ ಹರನ ರೂಪ ಭಯಲೋಪ ಭಕ್ತಿಯುತ
ಜೋ ಜೋ ವಿಮಲಗಾತ್ರ ಸುಚರಿತ್ರ ಸುಜನಹಿತ
ಜೋ ಜೋ ಜಗದ್ವೀರ ಸುಕುಮಾರ ಸಲೆ ಶೂರ ಜೋ ಜೋ ಕೃಪಾಗಾರನೆ
ಜೋ ಜೋ ವಿಜಿತಕಾಮನುತ ಪ್ರೇಮಭವಭೀಮ
ಜೋ ಜೋ ದುರಿತ ನಾಶ ಸಲೀಲಾಸ್ಯ ಕಮಲಾಕ್ಷ
ಜೋ ಜೋ ಸುಕೃತಸದ್ಮ ಶಿವಪದ್ಮನೆಂದು ಪೆಸರಿಟ್ಟು ಕರೆದರು ಪ್ರೇಮದಿ ॥೪೬॥

ಮಾಸು ರಕ್ತಗಳೆಂಬ ಹೇಸಿಕೆಯನುಳಿದು ಸ
ದ್ವಾಸನೆಯೊಳಡಗೂಡಿ ಅಷ್ಟಪಾಶಗಳಳಿದು
ಸೂಸುತಲಿ ಕರ್ಮಗಳ ದೂಷಿಸುತಲೀ ಧರೆಗೆ ಬಂದ ಸಂಪ್ರೀತಿಯಿಂದ
ಭಾಸುರ ದಯಾಪರ ವಿಶೇಷ ಗುಣಧಾಮಮರೆ
ಮಾಸವಿರಹಿತ ದುರಿತನಾಶ ಶಿವಪದ್ಮೇಶ
ಈ ಸುಮಾತೆಯ ಪಿಡಿದು ನೀ ಸುಮ್ಮನಿರದೆ ನಲಿದಾಡೆಂದು ಗಿರಿಜೆ ನುಡಿಯೇ ॥೪೭॥

ನೆರೆದ ಸುರಗನ್ನೆಯರು ಶಿವಪದ್ಮನಂ ಪರಸಿ
ಕರಚಾಚಿ ಚುಂಚಲೆಯ ಬಗಳೊಳಗೆ ಬಿಟ್ಟರಾ
ತರುಳನಂ ಸರಸದಿಂದಂಬರದಿ ಮುಚ್ಚಿಡಲುತ್ವರದಿಂದ ಲೋರೆಮಾಡಿ
ಅರೆಬಿರಿದ ಸರಸೀರುಹದ ತೆರದಿ ನಸುನಗೆಯೊ
ಳಿರೆ ಬಾಲನಂ ದಿಟ್ಟಿಸುತ ನೋಡ್ದಳಾಗ ಸುತೆಯು
ಭರದಿಂದ ಮೌಕ್ತಿಕದ ಬಾಗಿನವ ಕೊಟ್ಟು ತೆರಳಿದನು ಕೈಲಾಸಪುರಕೆ ॥೪೮॥

ಈ ಸುಚಾರಿತ್ರಮಂ ಬರದೋದಿದರ್ಗೆ ಮೇಣ್
ಲೇಸಾಗಿಯಿದರರ್ಥವಾಧ್ಯಾಂತ ಪೇಳ್ದರ್ಗೆ
ಬೇಸರಿಯದುರೆ ಭಕ್ತಿಯಿಂದ ಕೇಳಿದವರ್ಗೆ ಪದುಳದಿಂ ಪಠಿಸಿದರ್ಗೆ
ಭಾಸಿತ ಸಕಲ ಭೋಗಭಾಗ್ಯಮೋಕ್ಷಂಗಳ ವಿ

ಲಾಸದಿಂದಿತ್ತು ದುರಿತೌಘಮಂ ಸಂಹರಿಸಿ
ವಾಸ ರಸ್ತಾಪುರ ಶ್ರೀ ಶರಭಲಿಂಗೇಂದ್ರ ರಕ್ಷಿಸುವನಿಹಪರದೊಳು ॥೪೯॥

ಇಂತೆಬಲ್ಲಿಗೆ ಶರಭೇಶ್ವರ ಪಾದಾಬ್ಜಭೃಂಗನು
ವಿಶಿಷ್ಠವಿದ್ವಜ್ಜನ ವಿಧೇಯನು ಆದ ಭೀಮನಾಯಕ
ಕವಿಯಿಂ ಪ್ರಣೀತಮಪ್ಪ ಹಾಲ್ಮತೋತ್ತೇಜಕ ಪುರಾಣದಲ್ಲಿ
ಅಂತು ಸಂಧಿ ೩ಕ್ಕಂ ಪದನು ೧೧೦ಕ್ಕೆ ಮಂಗಲಂ ಮಹಾಶ್ರೀಶ್ರೀಶ್ರೀ

## ಸಂಧಿ ೪-ಶಿವಪದ್ಮನ ಚರಿತ್ರೆ

ಸೂಚನೆ ॥

ಆದಿಗೊಂಡನು ಸುತಗೆ ಶಿವಪದ್ಮನೆಂಬ ಪೆಸ
ರಾದರೊಳಿಟ್ಟು ಬಾಳುತ್ತಿರಲು ರೇವಣಂ
ತಾ ದಯಾಪರನಾಗಿ ಬಂದಾ ಸುಪುತ್ರಂಗೆ ಲಿಂಗದೀಕ್ಷೆಯನೀವನು ॥

ವರದೇವದೇವ ಶಂಕರ ಸದಾಶಿವ ದಿಶಾಂ
ಬರ ಸೋಮನಾಮ ಸುಖದಾತ ರಜತಾದ್ರಿ ಮಂ
ದಿರ ಕಾಲಕಾಲದುರಿತೌಘತಿಮಿರ ಪ್ರಭಾಕರ ಪಂಚಸುಂದರಾಸ್ಯ
ಸುರಪಾಲ ಫಾಲನಯನಾಬ್ದಿ ಸಂಜಾತ ಶೇ
ಖರ ರಾಜರಾಜ ಶುಕಸನಕಾದಿ ಮುನಿನುತ್ಯ
ಸಿರಿನಾಥನಾಥನೀ ಕೃತಿಗೆ ಜಯವಿತ್ತು ಸಲಹಲಿಯೆನ್ನನತಿ ಮುದದೊಳು ॥೧॥

ಅನಿತರಲಿ ಚುಂಚಲೆಯು ಮೈಮುರಿದುಯದ್ದಳಿದು
ಕನಸೊ ಕಳವಳವೋ ನಿದ್ರಿಯ ಭರವೋ ಮೇಣನ್ನ
ಮನದೊಳುದ್ಭವಿಸಿ ಭ್ರಮಣೆಯೋ ನಾನರಿಯನೆಂದು ಯೋಚಿಸಿದಳಬಲೆ
ಘನಚೋದ್ಯಗೊಂಡೆಡಬಲಕ್ಕೆ ನೋಡಲ್ಕೆ ಶಿಶು
ಮಿನುಗುವದನರಿದು ಜವದಿಂದೆಬ್ಬಿಸಿದಳು ತಂ
ನಿನಯನಾದಾದಿಗೊಂಡನ ಕರಾಗ್ರವ ಪಿಡಿದು ಸೂಚಿಸಿದಳುತ್ಸವದೊಳು ॥೨॥

ಎಚ್ಚತ್ತು ಎದ್ದು ಕುಳಿತಾಕ್ಷಣದಿ ಮರಳಿ ಕಂ
ಣ್ಮುಚ್ಚುತ್ತ ತೆರೆಯುತ್ತ ನಿದ್ರೆಯ ಭರದಿ ಮಹಾ
ಹುಚ್ಚನಂದದಿ ಸತಿಯ ಮುಖಮಂ ನಿರೀಕ್ಷಿಸೆನ್ನಂ ಎಬ್ಬಿಸಿದ ಕಾರ್ಯಾರ್ಥವ
ನಿಚ್ಚಳದಿ ಪೇಳೆಂದು ಕೇಳಲ್ಕೆ ಚುಂಚಲೆಯು
ಬೆಚ್ಚುತ್ತ ಬೆದರುತ್ತ ಮಗ್ಗಲಿನ ಮರೆಯೊಳಿಹ
ಅಚ್ಚಯಳೆಸುತನ ದೀವಿಗೆ ಪಿಡಿದು ತೋರಿಸಿದಳಚ್ಚರಗೊಳುತ್ತ ಮನದಿ ॥೩॥

ಆದಿಗೊಂಡನು ನಿದ್ರೆ ತಿಳಿದು ಸುವಿವೇಕದಿಂ
ಮೋದವೆಗ್ಗಳಿಸುತಂಬರದ ಮುಸುಕಿನೊಳು ಮರೆ
ಯಾದ ಬಾಲನಂ ತರೆದು ದಿಟ್ಟವರಿವರಿದು ನೋಡುತ್ತ ಸತಿಗಿಂತೆಂದನು
ಆ ದೀವಿಗೆಯನೆನ್ನ ಕರದಿ ತಾರೆಂದವಳ
ನಾದರಿಸಿ ತಕ್ಕೊಂಡು ಸುತನ ಸರಸದಿ ಕೂತು
ಭೇದವಿಲ್ಲದೆ ತನ್ನ ಸತಿಯ ಸಮ್ಮುಖದಲ್ಲಿ ನೋಡಿದನು ಮನದಣಿಯದೆ ||೪||

ವನಿತೆ ಕೇಳಿಚ್ಛೆಯಿಂ ಪೇಳ್ವೆ ಸುಪ್ರೇಮದಿಂ
ದಿನಕರನು ಭೂಮಿಯಂ ಬಳಬಳಸಿ ಬೇಸತ್ತು
ಘನ ತಾಪ ಕಿರಣಮಂ ಕಡೆಗಿಟ್ಟು ಬಾಲರಸ್ಮೆಗಳಿಂದ ಮೂರ್ತಿಭವಿಸಿ
ಮನೆಯೊಳಿಳಿದನೊ ಮತ್ತ ಗುರುಶಾಪಕೊಳಗಾಗಿ
ದಿನಗಳಿಯಲೇಕೆಂದು ಹಿಮಕರನು ನರಜನ್ಮ
ವನು ತಾಳಿಬಂದನೋ ಮೇಣೆನ್ನ ಸದ್ಗತಿಗೆ ಯೋಗ್ಯವಾಗಿಹ ಪುತ್ರನೋ ||೫||

ಎಂದು ಪತಿ ಪೇಳಲ್ಕೆ ಪರಮ ಸೋಜಿಗದಿಂದ
ಇಂದುಮುಖಿ ಚುಂಚಲೆಯು ಮೃದುತರದ ಹಸ್ತಗ
ಳಿಂದ ತನ್ನುದರ ಪ್ರದೇಶಮಂ ಮುಟ್ಟಿ ನೋಡಲ್ಕೆ ಬಸುರಿಲ್ಲದಿರಲು
ಕಂದುಗೊರಳನ ಕಳೆಯತುಂಬಿ ಪರಿಸೂಸುವ
ಕಂದನನು ಪಿಡಿದೆತ್ತಿ ಕಾಂತಂಗೆ ತೋರಿ ನೀ
ನಂದ ನುಡಿ ಸತ್ಯ ಸತ್ಪುತ್ರನಹುದೆಂದುಭಯರಾಡಿಕೊಳಲನಿತರೊಳಗೆ ||೬||

ವರಗಿರ್ದ ನಾಗಲೆಯು ಕಡು ತವಕದಿಂದೆದ್ದು
ತರುಣಿ ಚುಂಚಲೆಗೆ ಪೇಳ್ದಳು ತನ್ನ ಸ್ವಪ್ನದೊಳ್
ಸಿರಿಸರಸ್ವತಿ ಗೌರಿಯರು ಬಂದು ಜೋಗುಳವ ಪಾಡಿ ಶಿವಪದ್ಮನೆಂದು
ಕರೆಕರೆದು ಪೆಸರಿಟ್ಟು ಪುಷ್ಪವೃಷ್ಟಿಯಗರಿಸಿ
ಪರಶಿವನ ಸಕಲ ಸಾಮರ್ಥ್ಯ ನಿನಗಾಗಲೆಂದುರ
ತರದಿ ಪರಸಿ ಸ್ವರ್ಗಕ್ಕಾಗಮಿಸಿದರಷ್ಟರಲ್ಲಿ ನಾನೆದ್ದೆನೆನಲು ||೭||

ಇದು ಕೇಳುತಾದಿಗೊಂಡನು ದಯಾಪರನಾಗಿ
ಚದುರಪುತ್ರನ ಹಸನ್ಮುಖ ನೋಡಿ ಮರುಕದಿಂ
ಸದಮಲಜ್ಞಾನಿಯಾಗುವನೆಂದು ನಿಶ್ಚೈಯಿಸಿ ವರ್ಣಿಸಿದನೆಂತೆಂದೊಡೆ
ವಿಧು ಬಿಂಬವೋ ವಿಮಲ ಸರಸಿರುಹವೋ ಮುಖವೋ
ವಿಧಿಬಲ್ಲನಲನಿದ ನಾನರಿಯನೆಂದು ವಿಧ
ವಿಧದಿ ಪುತ್ರನ ಮೃದುತರುವಯವಂಗಳ ಬಿಡದೆ ಬಣ್ಣಿಸಿದ ಬೇಸರಿಸದೆ ||೮||

ಸತಿ ಪೇಳಿದಳು ತನ್ನ ಪ್ರಿಯಗಿದಾರ್ಭಕಮಲ್ಲ
ಸಿತ ಕಿರಣಕಾಂತ ಶಿಲೆಯಿಂದ ರಚಿಸಿದ ದೃಗಕೆ

ಹಿತಮಾದ ಚಿತ್ರದಾಕಾರವೋ ಮತ್ತಲ್ಲಿ ಮೆರೆವ ರಜತದ ಮುದ್ದಿಯೋ
ಸರಿಯೇ ಮೇಣಲ್ಲ ನಿತ್ಯದಲಿ ಪೂಜಿಸಿ ಕರ್ಮ
ತತಿ ತ್ವರದಿ ಕಳಕೊಳ್ಳಲೆಂದು ಶಂಕರ ತನ್ನ
ವಿತತ ಕಳೆಗಳನಿಟ್ಟು ಮಂತ್ರದಿಂ ನಿರ್ಮಿಸಿದ ಮೂರ್ತಿಯೋ ತಿಳಿಯದೆಂದು ||೯||

ಅಳನು ಆಕಳಿಸನುಸರಿಡನು ಮಲಬಿಡನು ಕಂ
ಗಳ ಮುಚ್ಚಲರಿಯನು ಮಲೆಯು ಮುದದಿ ಪೀರನು ವಿ
ಮಳ ಕರತಳಂಗಳ ಬಿಚ್ಚಿದೋರನು ಎನಗಿದೇನೆಂಬುದು ಮನದಿ
ಬಳಲಿ ಬಾಯಾರಿ ಧೃತಿಗುಂದಿದ ಲಲನೆಯನ್ನು
ನಳಿದೋಳ್ಗಳಂ ಪಿಡಿದು ಸಂತೈಸುವನಿತರೋಳ್
ಕಳೆವೆತ್ತಿ ಶಿವಪದ್ಮನಂ ನೋಡಬೇಕೆಂದು ಪದ್ಮಸಖನುದಯನಾದ ||೧೦||

ಪನ್ನೆರಡು ದಿನ ಶುಭಮಹೂರ್ತದೋಳಾದಿಗೊಂ
ಡಂ ನಿಜಸತಿಯ ಕರೆದು ವಿಸ್ತರಿಸಿ ಪೇಳಿದನು
ಸನ್ನುತ ಸುಪುತ್ರಂಗೆ ನಾಮಕರಣವ ಮಾಡಿಸುವೆನೀಗಲೀ ಗೃಹವನು
ಚನ್ನಾಗಿ ಶೃಂಗರಿಸು ಮೃಷ್ಟಾನ್ನವನು ರಚಿಸು
ರನ್ನದೊಟ್ಟಿಲ ಕಟ್ಟಿಸುತ್ತ ಗ್ರಾಮದೊಳಿರುವ
ಕನ್ನೆಯರ ಕರಿಸುವೆನು ಮಾಡಲಾರಂಭಿಸಿದ ಕಾರ್ಯನೆಡಿಸೆಂದನಾಗ ||೧೧||

ಚುಂಚಲೆಯು ತದ್ಗೃಹವ ಶೃಂಗರಿಸಿ ಮಣಿದೊಟ್ಟಿ
ಲಂ ಚತುರ ಮುತ್ತೈದಿಯರ ಕರದಿ ಕಟ್ಟಿಸಿದ
ಳಂಚಗಮನಿಯರೆಲ್ಲ ಕೇರಿಕೇರಿಗಳಿಂದ ಜತೆಗೂಡುತ್ತೈತಂದರು
ಪಂಚಶರನರಸಿಯಂತೆಸೆವ ನರನಾರಿಯರು
ಪಂಚವದನನ ಕಲಾಪದ್ಮನಂ ನೋಡ್ದರೆ
ಪ್ರಪಂಚದಾಶಯ ಕಡಿವದತಿ ಭರದಿ ನಡಿರೆಂದು ನುಡಿಯುತ್ತ ಬರುತಿರ್ದರು ||೧೨||

ಸಸಿರೇಖೆದುಟಿ ತೊಂಡೆವಣ್ಣದುಟಿ ಶೋಭಿಸುವ
ಪೊಸಪವಳದುಟಿ ರಂಗುದುಟಿಯಾಲವಣ್ಣದುಟಿ
ಮಿಸುಪ ಚೆಂದುಟಿ ರನ್ನದುಟಿ ಸಲೆ ವಿರಾಜಿಪ ತಳಿರದುಟಿಯ ಜವ್ವನೆಯರು
ಬಿಸಜಮೊಗ ಮುದ್ದುಮೊಗ ಕುಮುದಸಖಮೊಗ ಮೇಣ್ವಿ
ಲಸಿತಮೊಗ ಥಳಥಳಿಪನುಣ್ಮೊಗ ಸುಚಲ್ವಮೊಗ
ಹಸನಮೊಗ ಬಟ್ಟಮೊಗದಬಲೆಯರು ಪ್ರಬಲೆಯರು ಪಾತಿವೃತಯುತೆಯರು ||೧೩||

ಯಳೆರನ್ನಪಲ್ಲ ಕೆಂಬಲ್ಲ ಸುಲಿಪಲ್ಲ ಕಂ
ಗೊಳಿಪ ಕುಲಿಶದ ಪಜ್ಜಪಲ್ಲ ತೆಳುಪಲ್ಲ
ಥಳಥಳಿಪ ದಾಡಿಂಬಬೀಜದಪಲ್ಲ ಮೊಲ್ಲೆಯ ಮುಗುಳ್ಪಲ್ಲದಂಗನೆಯರು
ಕಳಶಕುಚ ತೆಂಗಾಯಿಕುಚ ಬಟ್ಟಡಕಿಕುಚ ವಿ

ಮಳ ಕಮಳಮೊಗ್ಗಿಕುಚ ನುಣ್ಣುಚ ವಿರಾಜಿಸುವ
ಬೆಳಗಾಯಿಕುಚ ಕಠಿಣಕುಚ ಬೊಗರಿಕುಚ ಕಂತುಕಕುಚಯವರೈತಂದರು ||೧೪||

ಕುಡಿನಯನ ಕಾಡಿಗಿನಯನ ಹರಿಣನಯನವರ
ಕುಡತನಯನಾರಾಜಿಸುವ ಮೀನನಯನ ಬೀ
ಳ್ವಿಡಿದು ಚಂಚಲನಯನ ಕಡೆನಯನ ತೊಳಪ ತಾವರೆನಯನದಂಗನೆಯರು
ನಿಡುಗುರುಳು ಸಿತಗುರುಳು ಮೆರೆವಮುಂಗುರುಳುಯಿಂ
ಮಡಕಿಳದಗುರುಳು ಮಧುಕರಗುರುಳು ನಿರಿಗುರುಳು
ಯಡೆಬಿಡದೆ ನಲಿವ ಜೋಲ್ಗುರುಳಿನ ಸುನಾರಿಯರು ಸಾರಿಬಂದರು ಸೌಖ್ಯದಿ ||೧೫||

ವರಲಿಂಬಿ ಬಣ್ಣವರೆ ಮೊಳೆತ ಗರಿಕೆಯಬಣ್ಣ
ಮಿರುಗುತಿಹ ಯಳೆಬಿದಿರಬಣ್ಣವರಶಿನಬಣ್ಣ
ಮೆರೆವಪೊಂಬಣ್ಣ ಸುಳಿವಾಳೆಲೆಯಬಣ್ಣ ತಾವರೆಯಬಣ್ಣದ ಸ್ತ್ರೀಯರು
ಹರಿಯನಡು ಶಳೆನಡು ವಿಲಸಿತಬಡನಡು ಬಳ್ಕು
ತಿರುವ ಪಿಡಿನಡುವಪ್ಪ ಗೊಂಡಶಿಯನಡು ಪರಮ
ಕಿರಿನಡುವಿನಂಗಜನ ಪಟ್ಟದಾನೆಯ ತೆರದೊಳಡಿಯಿಡುತ್ತೈತಂದರು ||೧೬||

ಪಟ್ಟಣದ ವನಿತೆಯರು ಒಟ್ಟಾಗಿ ಬಾಲಕನ
ಬಟ್ಟಸುಂದರವದನ ದಿಟ್ಟವರಿವರಿದು ಕೈ
ಯಿಟ್ಟು ರಂಗದ ಮೇಲೆ ಮುಟ್ಟಿಮೋಹದಿ ಮುದ್ದುಗೊಟ್ಟರಾ ಶಿವಪದ್ಮಂಗೆ
ದಿಟ್ಟಶಂಕರ ಸ್ಮರನಸುಟ್ಟುಬಿಡೆ ಪ್ರತಿರೂಪ
ದೊಟ್ಟಳಿದನೆಂದು ಘಣವಿಟ್ಟಾಡಿದರು ಕೆಲರು
ನೆಟ್ಟನೆತುಹಿನುಕರನು ಪುಟ್ಟಿಬಂದನೆಯೆನುತ್ತೊಟ್ಟಾಗಿ ಕೆಲರಾಡ್ದರು ||೧೭||

ಪರಕಿಸಲ ಸೀತೋಷ್ಣಮಿಲ್ಲ ರೋದನೆಯಿಲ್ಲ
ನಿರುತದಲಿ ನೆಡೆವ ಸ್ವಾಸ್ವೋಚ್ವಾಸ ಮೊದಲಿಲ್ಲ
ಮಿರುಗುತಿಹ ಪಕ್ಷಿಗಳು ಚಿತ್ರಪುತ್ಥಳಿಯಂತೆ ತುರುಗೆವೆಯ ಚಲನೆಯಿಲ್ಲ
ಅರಿಯಲಿದು ಮಾನುಷ್ಯ ಶಿಶುವಲ್ಲ ನವಮಾಸ
ಪರಿಪೂರ್ಣದೋಳ್ಪುಟ್ಟಲಿಲ್ಲಿದು ಪಿಶಾಚಿಯೆಂ
ದರು ಸಂಚಗಾಮಿನಿಯರೊಂದಾಗಿ ತಮ್ಮ ನಿಜ ಮನದೊಳಾಲೋಚಿಸಿದರು ||೧೮||

ಮುತ್ತೈದೆರೆಲ್ಲರೊಂದಾಗಿ ತಚ್ಛಿಶುವಿನಂ
ಯತ್ತಿ ಮಣಿದೊಟ್ಟಿಲದೊಳಿಟ್ಟು ಜೋಗುಳವ ಪಾಡಿ
ಚಿತ್ತಶುದ್ಧದಿ ನಿಂದು ಶಿವಪದ್ಮನೆಂದುತ್ಸವದಿ ಪೆಸರ್ಗರೆದರಾಗ
ಇತ್ತರಾಗಲೆ ಬಾಗಿನವನು ಸಂಭ್ರಮದಿಂದ
ಮತ್ತೇಭಯಾನೆಯರು ಉತ್ತಮಧಾನಿಯರು
ಜತ್ತುಗೂಡುತ್ತ ತಮ್ಮಯ ಗೃಹಕೆ ಆಗಮಿಸಿದರು ಘನಹರುಷ ಭಾವತಳೆದು ||೧೯||

ದಿನದಿಕೆ ಘನವಾಗಿ ಬೆಳೆದನಾ ಶಿವಪದ್ಮ
ಮುನಿ ರೇವಣಾಚಾರ್ಯ ಸಿದ್ಧನ ದಯದಿಂದ
ಲನಿತರೋಳ್ಪಂಚ ಮಾಸಗಳು ಮೀರಿದವು ಮೊಳೆವಲ್ಲೊಗುವ ಜೊಲ್ಲು ಶಿರದ
ಮಿನುಗುತಿಹ ಜೋಲ್ಗುರುಳು ನುಣ್ಗದಪು ಬಟ್ಟದೊಡೆ
ಯನಿಮಿಷ ದೃಷ್ಟಿ ಸುಳಿನಾಭಿ ನಗೆಮೊಗದ ಸೊಬ
ಗನು ತೋರಿ ಮಂದತ್ವದಿಂದಂಬೆಗಾಲಿಡುತ ಜನನಿ ಮುಂದೊಪ್ಪಿರ್ದನು ॥೧೦॥

ಸುತನ ಸಲ್ಲೀಲೆಗಳ ಕಂಡು ಹಿಗ್ಗುವಳೊಮ್ಮೆ
ಹಿತದಿ ಮೊಲೆಯುಣ್ಣದಕ್ಕಾಲೋಚಿಸುವಳೊಮ್ಮೆ
ಗತಿಗೆ ಪತವಾಯ್ತೆಂದು ಧೈರ್ಯಗೊಂಬುವಳೊಮ್ಮೆ ಪರಮ ಶ್ರೀಗುರುಸಿದ್ಧನ
ಅತಿಭಕ್ತಿಯಿಂದ ಮನದೊಳು ಧ್ಯಾನಿಸುವಳೊಮ್ಮೆ
ಯತಿನುಡಿಗೆ ಭಂಗಬರದೆಂದು ನಂಬುವಳೊಮ್ಮೆ
ಪತಿಗೆ ತಚ್ಛಿಶುವಿನಂ ತಂದು ತೋರುವಳೊಮ್ಮೆ ಕಂಡುಕಾಣದವಳಂತೆ ॥೧೧॥

ಬಿಟ್ಟುಮುಂದಕೆ ಪೋಗಿ ತಿರುಗಿ ನೋಡುವಳೊಮ್ಮೆ
ತಟ್ಟನೇ ತವಕದಿಂದ ಬಗಲೊಳೆತ್ತುವಳೊಮ್ಮೆ
ಪಟ್ಟಸಾಲೆಯೊಳಿರಿಸಿ ಮರೆಗೆ ನಿಲ್ಲುವಳೊಮ್ಮೆ ಮೋಹದಿಂ ಮೊಲೆ ಬಾಯೊಳು
ಇಟಟು ಪಾಲ್ಸವಿಯಂದು ಪೊಟ್ಟ ಬಡಿಯುವಳೊಮ್ಮೆ
ಬಟ್ಟವದನಕೆ ಮುದ್ದುಗೊಟ್ಟು ನೋಡುವಳೊಮ್ಮೆ
ದಟ್ಟಡಿಯಿಡುತ್ತ ಬಾರೆಂದು ಕರೆಯುವಳೊಮ್ಮೆ ಮನದಣಿಯದನುದಿನದಲಿ ॥೧೨॥

ಅಂಬೆಗಾಲಗಳಿಡುತ ಮಾತೆ ಚುಂಚಲೆಯಜ
ರಂಬರದ ನೀವಿಗಳನನುವಿನಂ ಕರದೊಳಗೆ
ಕೊಂಬುತಲ್ಲಿಂ ಮೆಲ್ಲಗೇಳುತ್ತ ಬೀಳುತ್ತ ಬಾಲಲೀಲೆಯಗಳೆದನು
ತುಂಬಿದವು ಪಂಚವರ್ಷಂಗಳಾ ಪದ್ಮಂಗೆ
ನಂಬಿನುತಿಸುವ ಮನದೊಳಾಸನದಿ ಕೂತು ಜಗ
ದಂಬಿಕಾ ವಲ್ಲಭನ ಪಾದಸರೋಜಗಳನ್ನು ಲೋಕದವರರಿಯದಂತೆ ॥೧೩॥

ಪದ್ಮಾಸನದಿ ಕೂತು ಭಕ್ತಿಯಿಂ ಶಿವನ ಪಾದ
ಪದ್ಮಂಗಳಂ ಸದಾ ನಂಬಿ ಪ್ರಾರ್ಥಿಸುವ ಶಿವ
ಪದ್ಮನಂದೂರ್ನಿಂದು ನೋಡಿ ಮಾತಾಪಿತರು ಅತ್ಯಧಿಕ ವಿಭವದಿಂದ
ಪದ್ಮನಾಭಾಕ್ಷರಂಜಿತಪಾದ ಶಿವನ ಹೃ
ತ್ಪದ್ಮದೊಳಗನುದಿನದಿ ಧ್ಯಾನಮಂ ಮಾಡುತ್ತ
ಸದ್ಮದೊಳಗೊಂದುಗೂಡೀರ್ವರಾಡಿದರು ನುಡಿ ಬಾಲಕನಿಗರಿಯದಂತೆ ॥೧೪॥

ನಿತ್ಯ ಶಿವಪದ್ಮನುದಯದೊಳೆದ್ದು ತನ್ನ ಗೃಹ
ಕೃತ್ಯಂಗಳಿಗೆ ದೃಷ್ಟಿಗೊಡದೆ ಮೌನದಿ ಕೂಡಿ

ಸತ್ಯಯೋಗಿಗಳಿರುವ ಸ್ಥಲವನರಸುತ್ತ ದೃಢಚಿತ್ತದಿಂದಾತ್ಮದೊಳಗೆ
ಅತ್ಯಧಿಕವಿಭವದಿಂದ ದ್ರಿಜಾವಲ್ಲಭನ
ಭೃತ್ಯ ತಾನಾಗಿ ಸಂಚರಿಸುತ್ತ ದಿನಗಳೆದ
ಮತ್ತೆ ಮಾತಾಪಿತರ ಮೋಹಂಗಳಿಲ್ಲ ಲೌಕಿಕ ವಿಷಯದಾಶಯವಿಲ್ಲ ||೧೫||

ಅಂದಿಗಾ ಶಿವಪದ್ಮಗಷ್ಟವರುಷಗಳಾಗೆ
ತಂದೆತಾಯ್ಗಳು ಯೋಚಿಸಿದರು ಮನದೊಳಗೆ ವರ
ನಂದನಗೆ ಪರಿಣಯವಗಯ್ಯಬೇಕೆಂದು ತಮ್ಮಿಷ್ಟರಾಗಿಹ ಜನರೊಳು
ಚಂದದಿಂ ವಿಸ್ತರಿಸಿ ಪೇಳಿದರು ಯಮ್ಮಸುತ
ಯಿಂದಿಗಷ್ಟಾಬ್ಧಗಳು ತುಂಬಿದವಿವಗೆ ತಕ್ಕ
ಸುಂದರ ಸುಕನ್ಯೆಯಂ ತಂದುಕೊಡಿರೆಂದು ಕೇಳಲ್ಕೆ ಮಗುಳಿಂತೆಂದರು ||೧೬||

ಆದಿಗೊಂಡನೆ ಕೇಳು ತಿಳಿಯ ಜಲಮಂ ಬಿಟ್ಟು
ಶಾದೋದಕಕಾಪೇಕ್ಷ ಮಾಡ್ದಂತೆ ನಿನ್ನಯ ಸ
ಹೋದರಿಯ ಕುವರಿ ಜಿಂಕಾದೇವಿಯೆಂಬ ಸತ್ಕಳೆವೆತ್ತ ಕನ್ಯವಿರಲು
ಮೋದವಿಲ್ಲದೆ ಬರಿದೆ ಮಾತನಾಡುವರೆ ನೀ
ನೀ ದುಗುಡಮಂ ಬಿಟ್ಟು ಭೇದವಿಲ್ಲದೆ ವಿವಾಹ
ಗೈದು ಮೇದಿನಿಯೊಳಗೆ ಕೀರ್ತಿಯುತನಾಗೆಂದು ಬೋಧಿಸಿದರುತ್ಸವದೊಳು ||೧೭||

ಅವರಂದ ನುಡಿಗಾತನೊಪ್ಪುತ ಸಹೋದರಿಯ
ಕುವರಿಯಂ ಶುಭಮುಹೂರ್ತವ ನೋಡುತಲಿ ನಿಶ್ಚ
ಯವಗೈಸಿ ಸಕಲೇಷ್ಟ ಬಾಂಧವಾದಿಗಳಿಂಗೆ ಪ್ರೀತಿಯಿಂ ವೀಳ್ಯಗೊಡಿಸಿ
ಅವನಿಜನರಿಂಗೆ ಸರಿ ಬಪ್ಪಂತೆ ತರತರದಿ
ವಿವಾಹ ಮಂಟಪವನ್ನು ವಿರಚಿಸಿದಾನಂದದಿಂ
ದವನ ಸಾಹಸ ವಿಭವದುತ್ಸವದ ವಿಭವಮಂ ಪೇಳಲಚ್ಚರಿಯಾದುದು ||೧೮||

ಕಸ್ತೂರಿಯ ಸಾರಣೆಯು ಕುಂಕುಮದ ಕಾರುಣೆಯು
ವಿಸ್ತಾರಗೊಳಿಸಿ ಮುತ್ತಿನ ತೋರಣಂಗಳ ಪ್ರ
ಶಸ್ತದಿಂ ಕಟ್ಟಿಸುತ ಮುತ್ತೈದೆಯರ ಕರದಿ ಸತ್ವರ ವಧೂವರರ್ಗೆ
ಪ್ರಸ್ತುತದಿ ತೈಲಸ್ನಾನಂ ಗೈಸುತರ್ಶಿನ ಸ
ಮಸ್ತಾಂಗದೊಳು ಪೂಸಿ ಕಂಕಣವ ಕಟ್ಟಿ ವರ
ಮಸ್ತಕಕೆ ಬಾಸಿಂಗ ಧರಿಸುತ್ತ ನಂದಿಮುಖಗೈಸಿದಂ ಮೋಹದಿಂದ ||೧೯||

ಭಾಸುರ ವಧುವರಂಗಳಂ ಕರೆದು ಶೋಭಿಸುವ
ಶಾಸೆಗಟ್ಟೆಗೆ ತಂದು ಕುಳ್ಳಿರಿಸಿ ಕೈಲಾಸದ
ವಾಸನಂ ಸ್ಮರಿಸಿ ಮಂಗಲಸೂತ್ರ ಧರಿಸಿ ಮಂಗಲವ ಪಾಡಿದರು ಮುದದಿ
ಆ ಸಮಯದೋಳ್ಸಮಸ್ತಾಪ್ತೇಷ್ಟರೆಲ್ಲ ಸುವಿ

ಲಾಸದಿಂದೆದ್ದದ್ದು ಶಿವನಾಮಮಂ ಸ್ಮರಿಸಿ
ಸೇಸೆದಳೆಯುತ ಪದ್ಮಹರಿಣದೇವಿಯರಿಗಾಯರಿ ಮಾಡಿದರ್ವಿಭವದಿ ॥೩೦॥

ಪರಿಣಯವನೆಸಗಿ ಜನರೊಂದಾಗಿ ಮುಂದಾಗಿ
ಮೆರವಣಿಗೆಯನ್ನು ಸಲೆ ಮರಸಿದರು ಪರಸಿದರು
ತರತರದಿ ಭೇರಿಗಳು ಬೆಳಗಿದವು ಮೊಳಗಿದವು ಸರ್ವಾಪ್ತಜನ ತಂಡಕ್ಕೆ
ಪರಮ ಮೃಷ್ಟಾನ್ನಗೈದುಣಿಸಿದರು ದಣಿಸಿದರು
ಹರುಷದಿಂ ಭುಂಜಿಸುತ ಮರಳಿದರು ತೆರಳಿದರು
ಹರಪದ್ಮನನ್ನು ಕೊಂಡಾಡಿದರು ಪಾಡಿದರು ನರನಲ್ಲಿವಂ ಎನುತಲಿ ॥೩೧॥

ಇತ್ತ ಶ್ರೀಗುರು ರೇವಣಾಚಾರ್ಯ ತಾಂ
ತತ್ತರುಳ ಶಿವಪದ್ಮನಂ ನೋಡಬೇಕೆಂದು
ಚಿತ್ತಗೈದುತ್ಸವದಿ ಪಥವನಾಕ್ರಮಿಸಿ ಜಾಗ್ರತೀಪುರಿಗೆ ಬಂದಿಳಿದನು
ವುತ್ತಮಾಪುರದೆಡೆಯೊಳರ್ಥಿಯಿಂ ನಿಂದು ಪುರ
ವೃತ್ತಮಂ ನೋಡುತಾತ್ಮದೊಳು ಸಲೆ ಬಣ್ಣಿಸು
ತ್ತುತ್ತುಂಗ ಶಶಿಸೂರ್ಯವೀಧಿಗಳ ಮಧ್ಯದಲಿ ನಡೆದನತಿ ವಿಭವದಿಂದ ॥೩೨॥

ಈರೇಳು ಲೋಕದೊಳ್ ಶೋಭಿಸುವ ವಸ್ತುವಂ
ವಾರಿಜಭವಂ ಪೋಗಿ ಹುಡಿಕಿತಂದೀ ಪುರಿಗೆ
ಸೇರಿಸಿದನೋ ದಾನವರ ದಾಳಿಗಂಜಗೀರ್ವಾಣ ಗಣವರ ತನ್ನಯ
ಸಾರಸಾಮ್ರಾಜ್ಯವಷ್ಟೈಶ್ವರ್ಯಮೆಲ್ಲಮಂ
ಆರರಿಯದಂತೆ ತಂದಿರಿಸಿದನೋ ತಿಳಿಯದಿದು
ಮಾರಾರಿ ಬಲ್ಲನೆಂದಾ ರೇವಣಾಚಾರ್ಯ ವರ್ಣಿಸುತಲೊಳಪೊಕ್ಕನು ॥೩೩॥

ಉನ್ನತೋನ್ನತಮಾದ ಮಾಲ್ಗಳಿಂ ಸಾಲ್ಗಳಿಂ
ಚನ್ನಾಗಿ ತೋರ್ಪ ಅಂಗಡಿಗಳಂ ಗುಡಿಗಳಿಂ
ರನ್ನಗಲಶದ ಗೋಪುರಂಗಳಿಂದಂಗಳಿಂ ಕೋಟೆಕೊತ್ತಲಗಳಿಂದ
ಹೊನ್ನಿನಿಂ ಕೂಡಿರ್ದ ಮನುಜರಿಂ ವಣಿಜರಿಂ
ಪನ್ನಗಾಭರಣನ ಸುಧ್ಯಾನದಿಂ ಮಾನದಿಂ
ಚನ್ನಚೌಬೀದಿ ಬಾಜಾರದಿಂ ಪೊರದಿಂ ಜಾಗ್ರತಾಪುರ ಮೆರೆದುದು ॥೩೪॥

ಇಂತು ಪುರ ವರ್ಣಿಸುತ ಸಿದ್ಧರೇವಣ ಮಹಾ
ಸಂತಸದಿ ಪೋಗುತಿರಲಾ ನಗರದೊಳಗಿರ್ಪ
ಕಂತುಹರನ ಸುಭಕ್ತಿಯಿಂದೆಸೆವ ಗಂಗಮ್ಮನೆಂಬ ಕಡುಬಡವಿ ಮನೆಯ
ನಿಂತು ನೋಡುತ್ತ ಗೃಹಪೊಕ್ಕನತಿ ತವಕದಿಂ
ಕುಂತಿರ್ದ ಬಡವಿ ತಡಮಾಡದೆದ್ದಾ ಸಿದ್ಧ
ನಂತವೆ ನುತಿಸಿ ಮರಳಿ ಪಾದ ಸರೋಜಂಗಳ್ಗೆ ವಂದಿಸಿದಳೊಂದೆ ಮನದಿ ॥೩೫॥

ರೇವಣಾಚಾರ್ಯ ಗಂಗಮ್ಮನ ಸುಭಕ್ತಿ ಸ
ದ್ಭಾವಕ್ಕೆ ಮೆಚ್ಚಿ ಮನದೊಳಗೆ ಯೋಚಿಸಿದನೀ
ಕೋವಿದೆಗೆ ಬಡತನವನೇಕೆ ಕೊಟ್ಟನೋ ಬ್ರಹ್ಮನೆಂದು ಮರಮರ ಮರುಗುತ
ಭಾವೆ ನಿನ್ನಯ ಗುಣಕೆ ಬೆಲೆಯಿಲ್ಲ ಬಡತನ ಮಿ
ದಾವ ಕರ್ಮದಿ ನಿನಗೆ ಪ್ರಾಪ್ತಿಸಿತೊ ನಾನರಿಯೆ
ದೇವದೇನೆ ಬಲ್ಲನೆಂಬ ಶಿರವಿಡಿದೆತ್ತಿ ಬೋಳೈಸಿದಂ ಬೇಗದಿ ॥೩೬॥

ಅಂದ ನುಡಿಗಳು ಗ್ರಹಿಸಿ ಗಂಗಮ್ಮನಾಡಿದಳು
ತಂದೇ ಕೇಳೆನಗೆ ದಾರಿದ್ರವೆಂಬುವದಿರಲಿ
ಇಂದುಶೇಖರನ ದಯವಿರಲಿ ನಿಮ್ಮಂತೆ ಮುನಿಗಳು ಸದಾ ಮನೆಗೆ ಬರಲಿ
ಯಂದು ಸಿದ್ಧೇಂದ್ರನಂ ಕರೆದೊಯ್ದು ತನ್ನ ನಡು
ಮಂದಿರದಿ ಗದ್ದುಗೆಯಗೊಳಿಸಿ ಕೂಡ್ರಿಸಿ ಭಕ್ತಿ
ಯಿಂದ ಪನ್ನೀರಿನಿಂ ಪಾದಗಳ ತೊಳೆದು ವರಪ್ರತಿ ಪುಷ್ಪಂಗಳಂ ಧರಿಸಿದಳು ॥೩೭॥

ಧೂಪದೀಪವ ಬೆಳಗಿ ಭಜಿಸಿ ಪೂಜಿಸಿ ಷಡ್ವಿ
ದೋಪಚಾರದಿ ಭೋಜನಂಗೈಸಿದಳ್ಮನದಿ
ರೂಪುಗೊಳ್ಳದೆ ದೃಢದಿ ಸಿದ್ಧ ಗುರುವರನು ಸಂತೃಪ್ತಿಗೊಂಡೆದ್ದನಾಗ
ಚಪಲಾಕ್ಷಿಯು ಕಂಬಳಿಯು ಕಡೆಗೆ ತೆಗೆಯೆ ನಿ
ಕ್ಷೇಪಮಂ ಕಂಡು ಪಿಡಿಯದೆ ಬಂದು ಪೇಳಿದಳು
ತಾಪಸೋತ್ತಮನೆ ದ್ರವ್ಯವ ತಂದು ಗದ್ದುಗೆಯ ಕೆಳಗಿರಿಸಿ ವಿಸ್ಮರಣದಿ ॥೩೮॥

ಇಲ್ಲಿಟ್ಟು ಪೋಗುವದಿದುತ್ತಮವೇ ಗುರುವರನೇ
ಸಲ್ಲದೆನಗೀ ಹೊನ್ನು ತೆಗದುಕೊಳ್ಳಿರೀ ಬೇಗ
ವಲ್ಲೆ ನಿಮ್ಮಯ ಪದಾರ್ಥವನೆಂದು ಮೌನದಿಂ ಬಿದ್ದಳಂಘ್ರಿಗೆ ಭರದೊಳು
ನಿಲ್ಲುನಿಲ್ಲೌ ಮಗಳೆ ತರಹರಿಸಬೇಡ ಜವ
ದಲ್ಲೀ ಹಣವಕೊಂಡು ಗಣತೃಪ್ತಿಗೈಸು ಪುಸಿ
ಯಲ್ಲವಿದು ನಿನ್ನ ಭಕ್ತಿಗೆ ಮೆಚ್ಚಿ ಪರಮಾತ್ಮ ನಿನಗಾಗಿ ಕೊಟ್ಟಿರುವನು ॥೩೯॥

ಪರರಿತ್ತ ಧನಮೆಲ್ಲ ಮೇಣೆನ್ನದಲ್ಲ ಶ್ರೀ
ಪರಶಿವಂ ನಿನ್ನ ಮನದಂತರವ ಪರೀಕ್ಷಿಸಿ
ಪರಮಾರ್ಥವಂನಿತ್ತು ರಕ್ಷಿಸಿದ ಮೋದದಿಂದೆಂದು ಮುಂದಡಿಯಿಟ್ಟನು
ಪರಮಾತ್ಮ ನೀನಲ್ಲದನ್ಯರಿನ್ಯಾರುಂಟು
ಪರತರ ಮಹಿಮ ತೋರಿ ಪಾರಾಗಿ ಪದುಳದಿಂ
ಪರಲೋಕ ಪಥವ ಪಿಡಿವರೆ ಕಪಟವೇಷದಿಂ ಸಾಕು ಸಲಹಂದಳಬಲೆ ॥೪೦॥

ಚದುರೆ ಗಂಗಾದೇವಿ ಕೇಳು ಬಿಡುದಾರಿಯನು
ಮದನಾರಿ ನಾನಲ್ಲ ಸಿದ್ಧರೇವಣನೆಂದು

ಮುದದಿಂದ ತಿಳಿ ಗೌರಿಯರಸನೊಲಿದಿತ್ತ ಸರಲಾಸ್ವ ಸ್ವೀಕರಿಸೆನಲ್ಕೆ
ಸುದತಿಮಣಿ ಮುಗುಳುನಗೆ ಮೊಗದಿಂದ ಬಿನ್ನೈಸಿ
ಸದಮಲ ಜ್ಞಾನಿ ಶಂಕರಸುತನೇ ಸಲಹೆಂದು
ಪಾದವನಜಗಳ್ಪಿಡಿದು ಬಿದ್ದಳಂಗನೆ ಧರೆಗೆ ತರುಮನಧನವನೊಪ್ಪಿಸಿ ||೪೧||

ರಾಗದಿಂದವಳ ಶಿರ ಪಿಡಿದೆತ್ತಿ ಸಕಲಾರ್ಥ
ಈಗ ನಿನ್ನಾಲಯದೊಳಿರಿಸುತಲಿ ಪರಮಸುಖಿ
ಯಾಗಿ ನಿತ್ಯದಿ ನಿನ್ನ ಮಂದಿರಕೆ ಕ್ಷುದ್ಬಾಧೆಯಿಂದ ಬಂದತಿಥಿಗಳ್ಗೆ
ಬೇಗದಿಂದುಣಬಡಿಸಿ ಮರ್ತ್ಯದೋಳ್ಕೀರ್ತಿಯುತ
ಳಾಗಂತ್ಯ ಕಾಲಕ್ಕೆ ಮುಕ್ತಿದೊರೆವುದು ನಿನಗೆ
ಪೋಗುವೆನೆನುತ್ತ ರೇವಣಸಿದ್ಧ ಗೃಹಬಿಟ್ಟು ಪಥ ಪಿಡಿದನವಸರದೊಳು ||೪೨||

ಮನೆ ಬಿಟ್ಟು ಮುಂದಕ್ಕೆ ಕಳಿಸಿ ಗಂಗಾದೇವಿ
ಘನಮೋದದಿಂದ ನಿಜಮಂದಿರಕ್ಕೈತಂದು
ಕನಸೋ ಕಳವಳವೋ ಏನಿದು ಎನ್ನ ಹಾಳ ಮನೆ ಪೋಗಿ ನೂತನ ನಿಲಯವು
ಮನಸಿಗಿಂಪಾಗಿ ತೋರ್ಪುದು ಸಿದ್ಧಶ್ರೀಗುರುವ
ರನ ಮಹಿಮವಿದು ಮೂಢಳಾಗಿ ಮುಂದರಿಯದಾ
ಆನಘನಂಬಿಟ್ಟೆ ಇನ್ನೆಂದಿಗಾತನ ಪಾದವಕಾಂಬೆನೆಂದಾತ್ಮದೊಳಗೆ ||೪೩||

ಸ್ಮರಿಸಿದಳು ಸದ್ಗುರುವಿನಂಘ್ರಿ ಪಂಕಜಗಳಂ
ಧರಿಸಿದಳು ವೈರಾಗ್ಯ ಲಕ್ಷಣಗಳಂ ನಿರಾ
ಕರಿಸಿದಳು ಪ್ರಾಪಂಚ ವಿಷಯಂಗಳೆಲ್ಲಮಂ ದೃಢಚಿತ್ತದಿಂ ಪುರದೊಳು
ಚರಿಸಿದಳು ತ್ವರದಿಂ ರೇವಣಸಿದ್ಧ ಕುಲಚಕ್ರೇಶ
ನರಸಿದಳು ಮನೆಮನೆಯ ಬೇಸತ್ತು ಮರಳಿ ಪಥ
ವರಿಸಿದಳು ಮೌನದಿಂ ಮಂದಿರಕೆ ಬಂದತಿಥಿ ಸತ್ಕಾರಗೈಯುತಿರಲು ||೪೪||

ಮತ್ತಮಾ ಗುರುಸಿದ್ಧತಿಲಕ ಪುರದೊಳಗೆ ಚರಿ
ಸುತ್ತಬರುವವದನಾದಿಗೊಂಡ ನೋಡುತ್ತ ದೃಢ
ಚಿತ್ತದಿಂದಿದಿರು ಬಂದಾ ಮುನಿವರಂಗೆನಯ ಭಯಭಕ್ತಿ ಭಾವದಿಂದ
ಉತ್ತಮ ಪಾದಾಬ್ಜಗಳಿಗೊಂದಿಸಲ್ಕಾತ ಪಿಡಿ
ದೆತ್ತಿ ಪುಳಕದಿ ಶಿರದ ಮೇಲೆ ಕರವಿಟ್ಟು ಜಸ
ವೆತ್ತು ಬಾಳೆಂದು ಪರಸುತ ಬಂದ ಶಿವಪದ್ಮನಿಹ ನಿಜಕೇತನಕ್ಕೆ ||೪೫||

ಪೇಳವನ ಬಳಿಗೆ ಗಂಗಯಿಳಿದು ಬಂದಂತೆ ಚಿ
ತ್ಕಳವೆತ್ತು ಸಿದ್ಧಗುರುವರನು ಸದಯದೊಳೆನ್ನ
ನಿಳಯಕ್ಕೆ ಬಂದನೆಂದಾತ್ಮದೋಳ್ನುತಿಸುತ್ತ ಕರಮುಗಿದೆರಗಿದಾ ಪಾದಕ್ಕೆ
ಎಳೆಬಾಲನಂ ತಂದೆ ಕಂಡಪ್ಪಿ ಸುಖಿಪಂತೆ

ಘಳಿಲನೇ ಕರಂಗಳಂ ಪಿಡಿದೆತ್ತಿ ಪದ್ಮನ ವಿ
ಮಳಭಕ್ತಿಗೊಪ್ಪಿ ಗಂಭೀರದಿಂ ಮುದ್ದಿಸಿದ ಮನದಣಿಯದಂತೆ ತಾನು ||೪೬||

ಚುಂಚಲೆಯು ಬಂದು ಗುರುಪಾದಕೆರಗಲಾತ ಶಿವ
ಪಂಚಾಕ್ಷರವ ಜಪಿಸಿ ಜಯಶೀಲಳಾಗೆಂದು
ಮಂಚದೋಳ್ಕೂತು ಮೋಹದ ನುಡಿಗಳಾಡಿದನು ಭಕ್ತವತ್ಸಲಂ ಬಿರಿದನು
ಚಂಚಲಾಕ್ಷಿಯಳಿತ್ತ ಪಾಕಶಾಲೆಗೆ ಬಂದು
ಪಂಚಾಮೃತವ ಬೆರಸಿ ಪಾಕ ವಿರಚಿಸುತ್ತ
ತಾ ಪಂಚಮುದ್ರಾನ್ವಿತನಯಬ್ಬಿಸಿದಳತಿ ಶೀಘ್ರಸ್ನಾನಕ್ಕೆ ಸಂಭ್ರಮದೊಳು ||೪೭||

ಸ್ನಾನವ ಮಾಡಿ ರೇವಣಸಿದ್ಧ ಶವಿನ ಸ
ಧ್ಯಾನದೋಳ್ಕೂತಿರಲ್ಕಾಗ ಪದ್ಮನು ಕಂಡು
ದೀನರಕ್ಷಕ ದೇವಯನಗಿಷ್ಟ ಲಿಂಗಮಂ ಧರಿಸಿ ಶಿವಮಂತ್ರವನ್ನು
ಸಾನುರಾಗದಿ ಬೋಧಿಸೆನಲಾಗ ಗುರುಸಿದ್ಧ
ಸೂನುವಿನ ನುಡಿಗೆ ತಲೆದೂಗಿ ಸಂಭ್ರಮದಿಂದ
ನ್ಯೂನಮಿಲ್ಲದೆ ಲಿಂಗಧರಿಸಿ ಪಂಚಾಕ್ಷರೀಮಂತ್ರಮಂ ಬೋಧಿಸಿದನು ||೪೮||

ಸ್ಯಾತಕ್ಕೆ ಕುಂದನವನಿಟ್ಟಂತೆ ರಂಜಿಸುವ
ಸೀತಕಿರಣನ ದೋಷಕಳೆದಂತೆ ಪದ್ಮನಿಗೆ
ಪ್ರೀತಿಯಿಂದುಪದೇಶವಿತ್ತು ರಕ್ಷಿಸಲಾಗ ಶಿವನೆ ತಾನಗೆಸದನು
ಖ್ಯಾತದಿಂದಮೃತಮಂ ಸ್ವೀಕಾರಗೈದು
ಮತ್ತಾ ತರುಳನಂ ಕರೆದು ಪೇಳಿದನು ಪ್ರೇಮದಿಂ
ನಾ ತೆರಳುವೆನು ಭುವನ ಸಂಚಾರಕೀಗ ನೀಂ ಕುರಿಗಳಂ ಸಲಹು ಸತತ ||೪೯||

ತಂದೆ ಕೇಳಿನ್ನು ನಿನ್ನನು ಬಿಟ್ಟು ಭುವನದೊಳ
ಗೊಂದು ನಿಮಿಷವನಗಲಿರಲ್ಕಾಗದೆನ್ನಿಂದ
ಇಂದು ನಾ ನಿನ್ನೊಡನೆ ಬರುವೆನೆಂದಡಿಗಳ್ಗೆ ನಮಿಸಿ ಸನ್ನುತಿಗೈದನು
ಕಂದ ಕೇಳ್ ನೀನೀ ಕುರಿಗಳನ್ನು ಕಾಯುತ್ತ
ಚಂದಮಾಗಿಹ ಶ್ರೀಗಿರಿಯ ಸಮೀಪಕ್ಕೆ ನಡಿ
ಹಿಂದೆ ನಾ ಬಂದು ನಿನ್ನನು ರಕ್ಷಿಸುವೆನೆಂದು ಪೇಳಿ ತೆರಳಿದ ಸಿದ್ಧನು ||೫೦||

ಈ ಸುಚಾರಿತ್ರಮಂ ಬರದೋದಿದರ್ಗೆ ಮೇಣ್
ಲೇಸಾಗಿ ಯಿದರರ್ಥವಾಧ್ಯಾಂತ ಪೇಳ್ದರ್ಗೆ
ಬೇಸರಿಯದುರೆ ಭಕ್ತಿಯಿಂದ ಕೇಳಿದವರ್ಗೆ ಪದುಳದಿಂ ಪಠಿಸಿದರ್ಗೆ
ಭಾಸಿತ ಸಕಲ ಭೋಗಭಾಗ್ಯಮೋಕ್ಷಂಗಳ ವಿ
ಲಾಸದಿಂದಿತ್ತುದುರಿತೌಘಮಂ ಸಂಹರಿಸಿ
ವಾಸ ರಸ್ತಾಪುರ ಶ್ರೀ ಶರಭಲಿಂಗೇಂದ್ರ ರಕ್ಷಿಸುವನಿಹಪರದೊಳು ||೫೧||

ಇಂತೆಬಲ್ಲಿಗೆ ಶರಭೇಶ್ವರ ಪಾದಾಬ್ಜಭೃಂಗನು
ವಿಶಿಷ್ಠವಿದ್ವಜ್ಜನ ವಿಧೇಯನು ಆದ ಭೀಮನಾಯಕ
ಕವಿಯಿಂ ಪ್ರಣೀತಮಪ್ಪ ಹಾಲ್ಮತೋತ್ತೇಜಕ ಪುರಾಣದಲ್ಲಿ
ಅಂತು ಸಂಧಿ ೪ಕ್ಕಂ ಪದನು ೧೬೧ಕ್ಕೆ ಮಂಗಲಂ ಮಹಾಶ್ರೀಶ್ರೀಶ್ರೀ

## ಸಂಧಿ ೫-ಶಿವಪದ್ಮನ ಚರಿತ್ರೆ

ಸೂಚನೆ ||

ಮುನಿಪ ಜಾಬಾಲನ ರುಧಿರದಿಂದೊಗೆದ ಕುರಿಗ
ಳನು ಶಂಕರಿಯು ಹುತ್ತಿನೊಳು ಪೊಗಿಸಿರಲ್ಕೆ ಪ
ದ್ಮನು ನೇಗಲೆಯುನೊಡೆಯುತಿರಲಲ್ಲಿ ಕುರಿ ಹೊರಡಲವುಗಳಂ ಪಾಲಿಸುವನು ||

ಶುಭ್ರಾಂಗ ಸಚ್ಚಿದಾನಂದ ರೋಗಕ್ಷಯಂ
ವಿಭ್ರಾಜಿಸುವ ಪಂಚಮುಖ ಸಾಸಿರಾಹ್ವಯಂ ಕೈಲಾಸಪುರ ಮಂದಿರಂ
ವಿಭ್ರಮಣ ಹರಭಸಿತಮಯಗಾತ್ರತಾರಾಪ
ತಿಭ್ರಾಜಮಾನ ಮಕುಟಂ ಪರಾತ್ಪರ ಮೃಡಮ
ನಭ್ರಾಂತಿಯನು ತೀರಿಸಿಳೆಯೊಳೀಕೃತಿಯನಹುದೆನಿಸುಜನೌಘದಿಂದ ||೧||

ಸಿದ್ಧರೇವಣನ ಪಾದಸ್ಮರಿಸುತ್ತ ಶಿವಪದ್ಮ
ಸದ್ಧರ್ಮದಿಂದ ಕುರಿಗಳ ಕಾಯಲಿಕ್ಕೆ ಸ
ನ್ನದ್ಧನಾಗುತ್ತ ಘನಪ್ರೇಮದಿಂ ಹಿಂಡುಗಳ ಹಿಂಗೊಂಡು ಕಂಬಳಿಯನು
ಬದ್ಧಟೊಪ್ಪಿಗೆಗೈದು ಕರದಿ ದಂಡವ ಪಿಡಿದು
ವೃದ್ಧನಂದದಿ ಸಾವಧಾನದಿಂದಡಿಯಿಡುತ
ಬುದ್ಧಿಯುತನಾಗಿ ಗಿರಿತಟದಿ ಹಟ್ಟಿಯನೆಗಳ್ಚಿ ಹರುಷದಿಂದಿರುತಿರಲ್ಕೆ ||೨||

ನಾಗಭೂಷಣನೊಂದು ದಿನ ಶಾಂಭವಿಯ ಸಹಿತ
ಯೋಗಿ ಸುರಸಿದ್ಧ ಖೇಚರರಿಂದ ಕೂಡಿ ಸುಖ
ಭೋಗದಿಂದಿರುತಿರಲ್ಕೋರ್ವ ಖೇಚರ ಬಂದು ಶಿವನಿಗಭಿವಂದಿಸುತ್ತ
ತಾಗಡನೆ ಹಿಂದಕ್ಕೆ ಸರಿಯಲ್ಮಹಾಯತಿಗೆ
ತಾಗಿ ತಾತನ ಚರಣಕೋಪದಿಂದಾ ಯತಿಯು
ಭೂಗೋಲದೊಳ್ಪೋಗಿ ನರನಾಗಿ ಪುಟ್ಟೆಂದು ಶಾಪಿಸಿದನಾಕ್ಷಣದಲಿ ||೩||

ಖೇಚರನು ಶಾಪದಿಂದಾ ಭವನೆಡೆಗೈತಂದು
ಭೋ ಚಂದ್ರಶೇಖರನೇ ನಿಮ್ಮ ಪಾದಕೊಂದಿಸುತ
ಲೀಚೆಗೆ ಬರುವ ಸಮಯದಲಿ ಎನ್ನ ಪಾದ ಮುನಿವರಗೆ ಸೋಂಕಲ್ಕಾತನು
ಭೂಚಕ್ರದಲಿ ಪೋಗಿ ನರನಾಗಿರೆಂದೆನಗೆ

ವಾಚಿಸಿ ಮಹಾಶಾಪವಿತ್ತನಿದಕೆ ವಿಶ್ಯಾಪ
ಸೂಚಿಸೆನ್ನಂ ಸಲಹು ಭಕ್ತಾಭಿಮಾನಿಯಂದೆರಗಿದನು ಪಾದಯುಗ್ಮಕೆ ||೪||

ಪಾದಕೆರಗಿದಾ ಖೇಚರನ ಶಿರವಪಿಡಿದೆತ್ತಿ
ಪದುಳ ಮಾನಸನಾಗಿ ಪೇಳ್ದನೆಲೋ ನಿನ್ನ
ಗೊದಗಿದ ವೆಸನಮಂ ಕಳೆವೆ ನೀಂ ಧರೆಗೆ ಪೋಗಿ ಜಾಬಾಲ ಮುನಿಯಾಗಿ ಪುಟ್ಟು
ಸದುಗುಣದಿ ಕೂಡಿ ಯೋಗಭ್ಯಾಸ ಮಾಡು ಘನ
ಮುದದಿಂದ ನಿನ್ನ ಕಾರ್ಯಕ್ಕಾಗಿ ನೂತನ ಪು
ರದ ಭೂಪ ಗಂಗಾಧರಂಗೆ ಸುತನಾಗೆನ್ನ ಚಿತ್ಕಲಾಂಶವು ಜನಿಪುದು ||೫||

ಮುಕ್ತನಾಗುವಿ ತಚ್ಛಿಸುವಿನಿಂದ ತಿಳಿಯಂದು
ಭಕ್ತಗಭಯವನಿತ್ತು ಕಳಿಸಲಾ ಖೇಚರ ವಿ
ರಕ್ತನಾಗೀ ಧರೆಯೊಳುದ್ಭವಿಸಿ ಗಿರಿತಟದಿ ಯೋಗಕ್ಕೆ ಸಿದ್ಧಾದನು
ಯುಕ್ತಿಯಿಂದುಸುರ್ವೆತತ್ಶಿವನ ಕಲೆ ರೂಪಾಗಿ
ವೆಕ್ತವಾಗಿಳೆಯೊಳೆಸದಿರುವ ನೂತನ ಪುರದಿ
ಶಕ್ತಿಯಂದದಿ ಸದ್ಗುಣಾಗಣಿತಳಾದ ಚಂಗಲಾದೇವಿಯುದರದೊಳಗೆ ||೬||

ಜನಿಸಲಾರ್ಭಕವು ಶಿವರೂಪದಿಂ ಶುಭದಿನದಿ
ಘನಪರಾಕ್ರಮಿಯಾದ ಗಂಗಾಧರಾವನಿಪ
ತನಯನುದಿಸಿದ ಸಂಗತಿಯ ಕೇಳಿ ಮನದೊಳಗೆ ಸಂತೋಷವಾಗಲತ್ತ
ಅನಲಾಕ್ಷ ಮೃತ್ಯುದೇವಿಯ ಕರೆದು ಪೇಳ್ದಮೇ
ದಿನಿಗೆ ನೀಂ ಪೋಗಿ ನೂತನ ಪುರನರೇಂದ್ರನ ಸು
ತನ ಶಿರವಗಡಿದು ಜಾಬಾಲಮುನಿ ಸನ್ನಿಧಿಯೊಳಿಟ್ಟು ಬಾರೆಂದ ಭರದಿ ||೭||

ಮಾಯದಿಂ ಮನೆಮನೆಯ ಶೋಧಿಸುತ ಬೇಗದಿ
ದಾಯುಧವ ಕರದಿ ಪಿಡಿದರಸಿನ ಮನೆಯಂ ಪೊಕ್ಕು
ತಾಯಿ ಮಗ್ಗಲಿನ ಮರೆಯೊಳಗಿರುವ ಶಿಶುವಿನಂ ನೋಡ್ದಳಾ ಮೃತ್ಯುದೇವಿ
ಕಾಯಜಾಂತಕನ ಕಳೆಯೊಂದಾಗಿ ತೋರುವದ
ನಾಯತನಯನದಿಂದ ದಿಟ್ಟೆ ವರಿದಾಕ್ಷಣದೊ
ಳಾಯಳೆಸು ಬಾಲನ ಶಿರಶ್ಛೇದನಂಗೈದದಂ ಕರತಳದಿ ಕೊಂಡಳು ||೮||

ತ್ವರಿತದಿಂದಾ ಶಿರವ ಪಿಡಿದೆತ್ತಿ ಮುದ್ದಿಸುತ
ಕರತಳದಿ ಪಿಡಿದು ರಜತಾದ್ರಿ ಮಾರ್ಗವ ಪಿಡಿದು
ಬರುತಿರಲ್ಕಾ ಗಿರಿಯ ತಟದಿ ಯೋಗದೊಳಿರ್ಪ ಜಾಬಾಲನಂ ಕಂಡಳು
ಶಿರವನಾ ಮುನಿ ಮುಂದೆಡೆಯೊಳಿಟ್ಟು ಸ್ವರ್ಗಕ್ಕೆ
ಚರಿಸಲಿತ್ತಾಲಯದಿ ಚಂಗಲೆಯು ಎಚ್ಚತ್ತು
ವರಗಿರ್ದ ಕೂಸಿನಂಬರ ಮುಸುಕು ತೆರೆಯಲ್ಕೆ ಶಿರವಿಲ್ಲದಂ ನೋಡ್ದಳು ||೯||

ಈಗಲೀ ಸುತನುತ್ತಮಾಂಗಮಂ ಕತ್ತರಿಸಿ
ಪೋಗಿರ್ಪರಯ್ಯಯ್ಯೋ ಮಾಡಲಿನ್ನೇನೆಂದು
ಕೂಗುತಲಿ ಮೂರ್ಛೆಗೊಂಟೊರಗಿದಳು ಭುವನಕ್ಕೆ ಚಿತ್ಕಾರಧ್ವನಿಯ ಕೇಳಿ
ಬೇಗದಿಂದಾಲಯದೊಳಿಹ ದಾಸದಾಸಿಯರು
ಆಗಮಿಸಿ ಚಂಗಲೆಯ ಮೂರ್ಛೆಯನ್ನೋಡುತಲಿ
ಆಗ ಬಂದೊರೆದರಾ ರಾಜಗಂಗಾಧರಗೆ ಏನೆಂಬೆನಚ್ಚರಿಯನು ||೧೦||

ರಾಜಗಂಗಾಧರಂ ಬೇಗದಿಂ ಬಂದು ಮೃಗ
ನಡುವಿನ ಮಡದಿಯನ್ನು ಪಿಡಿತೆತ್ತುತಡು
ರಾಜನಂದದಿ ಮಿಸುವ ಕೂಸಿನ ಕಳೇಬರವನೀಕ್ಷಿಸುತ ಧೈರ್ಯದಿಂದ
ಓಜಗೆಟ್ಟಮಿತ ದುಃಖಾಬ್ಧಿಯೊಳ್ಮುಳುಗಿ ಸುಖ
ಮಾಜಿ ಮಂತ್ರಿಯಂ ಕರದು ಪೇಳ್ದನೆನ್ನಯ ವಂಶ
ತೇಜನ ಶಿರವಗಡೆದ ದುಷ್ಠರಂ ಹುಡುಕಿ ತಲೆಗತ್ತರಿಸಿ ಬಿಡುವದೆಂದ ||೧೧||

ನೃಪನಪ್ಪಣೆಯನೊಪ್ಪಿ ಮಂತ್ರೀಶ ಶೀಘ್ರದಿಂ
ದಪರಮಿತ ಶೂರರಂ ಕಳಿಸಿದನು ಶೋಧನೆಗೆ
ಕಪಟವೇಷವನಾಂತು ಪೋದರಾಚಾರಕರು ಬೆಟ್ಟತಿಟ್ಟವನರಸುತ
ವಿಪಿನವೆಲ್ಲವ ತಿರುಗಿ ಬೇಸತ್ತು ಬರುತಿರ
ಲ್ತಪದೊಳಿರುತಿಹ ಮುನಿಯ ಮುಂಭಾಗದೋಳಿಟ್ಟ ಶಿರ
ಚಪಲತನದಿಂ ನೋಡಿ ರಾಜಸುತನೆಂದರಿದು ಭಾಷ್ಪಲೋಚನರಾದರು ||೧೨||

ಶ್ರೀಕನಕಗಿರಿಯೊಳನೇಕ ಸಿದ್ಧಿಗಳ ಪಡಿ
ಬೇಕೆಂಬ ಭ್ರಾಂತಿಲಿ ವಿವೇಕದಿಂದಾಸನಂ
ಹಾಕಿ ಪರ್ಣಾಹಾರ ಸ್ವೀಕರಿಸಿ ಸರ್ವಸುಖ ಶೋಕಂಗಳನ್ನು ಬಿಟ್ಟು
ಲೌಕಿಕದ ವಿಷಯಗಳ ನೂಕಿ ವೈರಾಗ್ಯದಿಂ
ದೇಕ ಮಾನಸರಾಗಿ ಲೋಕೈಕ ಪೂಜ್ಯನಂ
ಸಾಕಾರದಿಂ ನುತಿಪರೀಕಾರ್ಯ ಮಾಡರೆಂದಾ ಕುಚಲ ಚರರಾಡ್ದರು ||೧೩||

ಕೂಸಿನ ಶಿರವ ಕಂಡು ಯೋಗಿಯಂ ಕೊಲ್ಲದತಿ
ಮೋಸದಿಂ ಭೂಪಾಲನಲ್ಲಿಗೈತಂದು ಚರ
ರಾ ಸಂಗತಿಯನೆಲ್ಲ ವಿಸ್ತಾರವಾಗಿ ಪೇಳಲ್ಕೆ ಗಂಗಾಧರನೃಪನು
ಬೇಸರದಿ ನುಡಿದನೆಲೊ ಚಾರಕರೆ ನಡಿರಿ ನಾ
ನೀ ಸಮಯದೊಳ್ಪೋಗಿ ಭೂತಲದಿ ಯೋಗದ
ಭ್ಯಾಸಮಂ ಮಾಳ್ಪಯತಿಯಂ ಕೊಂದು ಬರ್ಪೆನೆಂದತಿ ತ್ವರದಿ ತೆರಳಿಬಂದಾ ||೧೪||

ನೋಡಿದಂ ಯೋಗಿಯ ಮುಖವನೀಕ್ಷಿಸಿ ನಿಂದ ತಾ
ನಾಡಿದಂ ಮನಕೆ ಬಂದಂತೆ ಮೌನದಿ ಕೋಪ

ಗೂಡಿದಂ ಚಾರರಂ ಸರಿಸಕ್ಕೆ ಕರೆದು ಶಿಶುಘಾತಕವಗೈದನೆಂದು
ತೀಡಿದಂತನ್ನ ಕುಡಿಮೀಸೆ ಕರದಿಂ ಸನ್ನೆ
ಮಾಡಿದಂ ಸಕಲರ್ಗೆ ನಿಜವೆಂದು ಪೇಳಿಗಡ
ಬೇಡಿದಂ ಭಟರಕಯ್ಯೋಳಗಿರ್ಪಮನೆವೆತ್ತ ಚಂದ್ರಾಯುಧವನಾಗ ||೧೫||

ಚರನಾಗ ಚಂದ್ರಾಯುಧವ ತಂದು ಕೊಡಲದಂ
ಕರದೊಳಗೆ ಪಿಡಿದು ಪರಪರನೆ ಪಲ್ಗಿರಿದೆನ್ನ
ತರುಳನಂ ಕೊಂದ ಫಲನೋಡೆಂದು ಕೋಪದಿಂ ಕತ್ತರಿಸಿಬಿಟ್ಟ ಶಿರವ
ಧರಣಿಗೆ ರುಧಿರ ಬೀಳಲದರೊಳಗೆ ತರತರದ
ಕುರಿಗಳುದ್ಭವಿಸಿ ಪೊರಪೊರಡಲಗಣಿತಮಾಗಿ
ಬೆರಗಾಗಿ ಭೂಪಾಲನವುಗಳಂ ಪೊರೆವದೆಂದುಸುರ್ದನಾ ರಾಹುತರ್ಗೆ ||೧೬||
ಅತ್ತ ಜಾಬಾಲಮುನಿ ನಿಶ್ಯಾಪನಾಗಿ ವರ
ಕೃತ್ತಿವಾಸನ ಸಭೆಗೆ ಪೋದ ಖೇಚರರ ರೂಪ
ವೆತ್ತು ಸಂತೋಷದಿಂ ಶಿವನ ಸ್ತುತಿ ಮಾಡುತ್ತ ಪಾಡುತ್ತ ಸದ್ಗಾನದಿ
ಇತ್ತ ರಾಹುತರು ಕುರಿಗಳ ಹಿಂದೆ ತಿರುಗಿ ಬೇ
ಸತ್ತು ರಾಜನ ಮುಂದೆ ಪೇಳ್ದರೀ ಕುರಿಯ ಕಾ
ಯುತ್ತ ಸಂಚರಿಸಿ ಬಂದೆವು ಸಕಲ ಭೂಮಿಯನು ಸಾಕುಸಾಕೆಂದರವರು ||೧೭||

ಆಗ ಮಂತ್ರಿಯ ಕರೆದು ಪೇಳಿದನು ಭೂಪಾಲ
ಬೇಗದಿಂ ನೀಂ ಪೋಗಿ ಕುರಿಗಳಂ ಕಾಯ್ದು ಸುಖಿ
ಯಾಗಿರೆಂದೊರೆಯಲಾ ಸಚಿವನಾಲೋಚಿಸುತ ನೃಪಗೆ ಮುಗುಳಿಂತೆಂದನು
ಯೋಗಿಯರುಧಿರದಿಂ ಜನಿಸಿದವಿವಂ ಕಾಯ್ವು
ದಾಗದೆನ್ನಿಂದಿದಕೆ ನೀ ಬಂದರೀಗ ನಾಂ
ಪೋಗುವೆನು ಸತ್ಯ ತಿಳಿಯೆಂದು ನುಡಿಯಲ್ಕೆ ರಾಜೇಂದ್ರನೊಪ್ಪುತಲೀರ್ವರು ||೧೮||

ತರಿಸಿದರು ದುಂಡಗಂಬಳಿಯನಂಗಕ್ಕೆತ್ವರ
ಧರಿಸಿದರು ಮಂತ್ರನೃಪರೊಂದಾಗಿ ಪಥವಿಡಿದು
ಚರಿಸಿದರು ಕುರಿಗಳಿಹ ತಾಣಕ್ಕೆ ತವಕದಿಂದೆಡಬಲವ ಬಿಡದರಸುತ
ಸರಿಸಿದರು ಹಿಂದಕ್ಕೆ ಮೊತ್ತಗೊಳಿಸುತ್ತ ಸಲೆ|
ನರಸಿದರು ಸಕಲ ಮರಿಗಳಂನೆತ್ತಿ ತಂದಿರಿಸಿ
ದರು ಮಮಕಾರದಿಂದ ಮಾತೆಯ ಮೊಲೆಗೆ ಹಚ್ಚಿದರು ಹರುಷವೆರಸಿ ||೧೯||

ಈ ತೆರದಿ ಕುರಿಗಳಂ ಪಲವು ದಿನಕಾಯ್ದು ಘನ
ಚೇತರಿಸಿ ಮನದಿ ಬಹು ಬೇಸರವಗೊಂಡು
ವರಶ್ವೇತಾದ್ರಿ ತಟದಿ ಭೂಪಾಲ ಮೇಣಾಮಂತ್ರಿವಂದಾಗಿ ಪದ್ಮಾಸನದೊಳು
ಪ್ರೀತಿಯಿಂ ಶಿವನ ಸನ್ನುತಿಗಯ್ಯಲಾಗ ಗಿರಿ

ಜಾತೆಯರಸನು ಮೆಚ್ಚಿ ಮೋಹದಿಂ ನಿಮ್ಮಯನಿ
ಕೇತನಕೆ ನಡಿರಿ ಮನಸಿನ ವೆಸನ ಬಿಡಿರೆಂದಭಯ ನುಡಿಗಳಂ ಪೇಳ್ದನು ||೨೦||

ತೆರಳಿದರು ತಮ್ಮ ನಿಜಪುರಕೆ ನೃಪಮಂತ್ರಿಯರು
ಪರಶಿವಂ ಯೋಚಿಸಿದ ನೀ ಕುರಿಗಳಂ ಕಾಯ್ದು
ತರುವರಾರಿನ್ನೆಂದು ಬರ್ಮನಂ ಕರೆದು ಪೇಳಿದನೆಲ್ಲ ಸಂಗತಿಯನು
ಹರನ ಮಾತಿಗೆ ಮನಂಗೊಡುತ ಚತುರಾಸ್ಯ ತಾ
ನಿರದೆ ತೆರಳಿದ ಕುರಿಗಳನ್ನು ಕಾಯ್ವುದಕೆ ಬಂ
ಧುರದಿ ದಂಡವಕರದಿ ಪಿಡಿದು ತವಕದಿ ಬಂದನವುಗಳಿರುತಿಹ ತಾಣಕ್ಕೆ ||೨೧||

ತಿರುಗಿದನಾ ಹುಲ್ಲು ಜಲಮಿರುವ ಹಳ್ಳದದಡಿಗೆ
ಪರಿಪರಿಯೊಳಾದರಿಸಿ ಪಲು ದಿನ ಪೊರೆದು ಮನ
ಮುರಿದು ಬೆಂಡಾಗಿ ಬಿಸುಸುಯ್ದುವುಗಳಂಬಿಟ್ಟು ಬಂದ ಶಂಕರನ ಬಳಿಗೆ
ಹರನೇಯೆನ್ನಿಂದಾಗದೀ ಕಾರ್ಯವೆಂದು ವರ
ಚರಣಕ್ಕೆ ನಮಿಸಿ ಸನ್ನುತಿಗಯ್ಯಲಾಗ ಶ್ರೀ
ಹರಿಯನ್ನು ಕರೆದೊರದ ಕುರಿಗಳಂ ಪೊರೆವುದೆಂದಾ ಜ್ಞಾಪಿಸಿದ ಮುದದೊಳು ||೨೨||

ಪಕ್ಷಿವಾಹನನೊಪ್ಪಿ ಬಂದನೀ ಭುವನಕ್ಕೆ
ಕಕ್ಷದೊಳ್ಕಂಬಳಿಯ ಧರಿಸಿ ಕುರಿಗಳನು ಸಂ
ರಕ್ಷಣೆವ ಮಾಡುತ್ತ ಗುಡ್ಡಗಹ್ವರಂಗಳಂ ತಿರುತಿರುಗಿ ಬೇಸತ್ತನು
ಅಕ್ಷಯಾತ್ಮಕ ಶಿವನ ಸನ್ನಿಧಿಗೆ ಬಂದು ಸಲೆ
ಸುಕ್ಷೇಮದಿಂ ಪೇಳ್ದನಾಗದೆನ್ನಿಂದ ನೀ
ಲಕ್ಷಕ್ಕೆ ತಂದು ಪಾಲಿಪುದೀಗ ಪ್ರೇಮದಿಂದೆಂದು ಸ್ತೋತ್ರವ ಮಾಡ್ದನು ||೨೩||

ಅಜಹರಿಗಳಿಗೆ ಮೀರಿತೀಕಾರ್ಯಮೆಂದಾಗ
ತ್ರಿಜಗಪೂಜಿತ ತಾನೆ ವೇಷಾಂತರದಿ ಧರೆಗೆ
ಭುಜದಿ ಬೆತ್ತವನಿಟ್ಟುಕೊಂಡು ಕುರಿಗಳನೆಬ್ಬಿಸಿದನು ಮೇಯಿಸುವುದಕ್ಕೆ
ಕುಜದ ಚಿಗುರೆಲೆಗಳಂ ಕತ್ತರಿಸಿ ಹಾಕುತ ತಿ
ಳಿಜಲಮಂ ಕುಡಿಸುತ್ತ ಮರಿಗಳಂ ಬಗಲೊಳಗೆ
ನಿಜದಿಂದ ಪಿಡಿದುಕೊಂಡತಿ ಪ್ರೀತಿಯಿಂ ರಕ್ಷಿಸುತ ನಡೆದನುತ್ತರಕೆ ||೨೪||

ನಡೆನಡೆದು ಬೇಸತ್ತು ಬಾಯಾರಿ ಬಳಲುತ್ತ
ಮೃಡನು ಕುರಿಗಳಂ ಬಿಟ್ಟು ಶಿವಪುರಿಗೆ ಪೋಗುತ ದು
ಗುಡದಿಂದ ಕೂತಿರಲ್ಕಾಗ ಶಾಂಭವಿಯು ಬಂದು ನಮಿಸಿ ನುಡಿದಳು ಕಾಂತಗೆ
ಜಡಮನುಜರಂತೆ ಚಿಂತಾಬ್ಧಿಯೊಳ್ಮುಳುಗಿರ್ಪ
ನುಡಿ ಯಾವದಿರ್ಪುದೆನ್ನಗೆ ಪೇಳು ಪ್ರೇಮದಿಂ
ಬಿಡು ನಿನ್ನಯ ಮನದ ಘನವೆಸನವೆಂದಾ ಶಿವೆಯು ಬೇಡಿಕೊಂಡಳು ಸ್ಮರಿಸುತ ||೨೫||

ಸತಿಯೇ ಕೇಳ್ ಜಾಬಾಲಮುನಿ ರುಧಿರದಿಂದೊಗೆದ
ಅತಿಶಯದ ಕುರಿಗಳಂ ಹರಿಯಜರು ಕಾಯ್ದು ಘನ
ಖತಿಗೊಂಡು ಬೇಸತ್ತು ಬೋಳಾಗಿ ಬಳಲುತ್ತ ತೊಳಲುತ್ತ ಬಂದು ಎನ್ನ
ಸ್ತುತಿಗೈದು ಬೇಡಿಕೊಳಲಾಗನಾಂ ಪೋಗಿ ಕುರಿ
ತತಿಗಳಂ ಪರಿಪರಿಯೊಳಾದರಿಸಿ ಪೊರೆಯುತ್ತ
ಕ್ಷಿತಿಯನೆಲ್ಲವ ತಿರುಗಿ ಧೃತಿಗುಂದಿ ಬಂದೇನಿದಕಿನ್ನೇನು ಗತಿಯೆಂದನು ||೧೬||

ಮನಮುನಿಗಣಾರ್ಚಿತ ಪಾದಾಬ್ಜನೇ ನಿನ್ನ ಮನ
ಸಿನ ಕ್ಲೇಶಮಂ ಬಿಟ್ಟು ಮಾತಾಡು ಮುಖನೋಡು
ಎನಗುನುಜ್ಞೆಯ ಕೊಟ್ಟು ಕಳಿಸಿದರೆ ನಾಂ ಪೋಗಿ ಕಾಯ್ವನೆಂದಳು ಕುರಿಗಳ
ಧನದಾಪ್ತೆ ಗಿರಿಜಾತೆ ನುಡಿಗೆ ತಲೆದೂಗಿ ಕೊ
ಟ್ಟನು ವಿಭವದಿಂದಪ್ಪಣೆಯನಾಗ ಶಂಕರಿಯು
ಘನಹರುಷದಿಂದ ಬಗಲೊಳ್ಗಣಪನಂ ಪೊತ್ತು ಇಳಿದಳೀ ಕುವಲಯಕ್ಕೆ ||೧೭||

ಕುರಿಗಳಂ ನೋಡಿದಳು ಮಾಡಿದಳು ಸನ್ನೆಯಂ
ತ್ವರಿತಪತಗೂಡಿದಳು ತೀಡಿದಳು ಮುಂಗುರುಳ
ಸರಸವನ್ನಾಡಿದಳು ಪಾಡಿದಳು ಗಾನಮಂ ವಡೆ ಹುಲ್ಲಿರುವ ತಾಣಮಂ
ಅರಸುತ್ತ ಸಾರಿದಳು ಬೀರಿದಳು ಪುಳಕಮಂ
ಗಿರಿತಟವನೇರಿದಳು ಸೇರಿದಳು ಮರಿಗಳಂ
ಕರೆದು ಜಲದೋರಿದಳು ಕೋರಿದಳು ಗಣಪಂಗೆ ಸಕಲ ಕುರಿಗಳಗಣಿತಮಂ ||೧೮||

ಎಳೆ ತೃಣವ ನೋಡಿ ಧ್ವನಿಮಾಡಿ ಕುರಿಗೂಡಿಸುತ
ಎಳೆಮರಿಯನೆತ್ತಿ ಗಿರಿಸುತ್ತಿ ಬೇಸತ್ತೀಳೆಗೆ
ಎಳೆದುರುಳನಿಳಿಸಿ ಸುಖಗೊಳಿಸಿ ಮುಂದೆಳೆಸಿದಳು ಹುಲಿಕರಡಿಗಳಿಗಳುಕದೆ
ಕೊಳಲ ನುಡಿಸುತ್ತ ಚರಿಸುತ್ತ ಸರಿಸುತ್ತ ತಾ
ಕೊಳಲ ನೀರ್ಗುಡಿಸಿ ಭಯಬಿಡಿಸಿ ತ್ವರನಡಿಸಿ ಭಯ
ಕೊಳಗಾಗಿ ನಿಂದು ಮನನೊಂದು ತನುಬೆಂದು ಯೋಚನೆಗೆ ಸಿಲ್ಕಿದಳು ಶಿವೆಯು ||೧೯||

ಮಾರನೆ ದಿನ ಕುರಿಗಳಂ ಬಿಟ್ಟು ಮರಳಿ ಸುಕು
ಮಾರನಂ ಬಗಲೊಳಿರಿಸುತ್ತ ವ್ಯಾಕುಲದಿಂದ
ಸಾರಿದಳು ಕಾಡಡವಿ ತಿರತಿರುಗಿ ಬೇಸತ್ತು ಜಾಗ್ರತಾಪುರ ಸೀಮೆಗೆ
ಮೀರಿತಗಜೆಗೆ ತಾಪಹರಿಯಜ ಹರರಿಗಾದ
ಭೂರಿಸಂಕಟವು ಸಟೆಯಲ್ಲೆಂದರಿದು ಮನದಿ
ಮೂರುಕಣ್ಣಿನ ಹುತ್ತ ಶೋಧಿಸುತ ನಡೆದಳೆಡಬಲ ಗುಡ್ಡಗಿಡಗಳೊಳಗೆ ||೨೦||

ನೋಡ್ದಳಲ್ಲೊಂದು ಘನ ಮೂರು ಕಣ್ಣಿನ ಹುತ್ತ
ಮಾಡ್ದಳು ಮುಹೂರ್ತ ಬೇಸತ್ತು ಬಳಲಿಕೆಯಿಂದ

ಕೂಡ್ದಳು ಶಿವಸ್ಮರಣೆಯೋಳ್ಮಹಾ ಪಂಚಾಕ್ಷರೀ ಪ್ರಣಮ ಧ್ಯಾನಿಸುತಲಿ
ಬೇಡ್ದಳೊರಗಳನು ತನ್ನಿಷ್ಟಾರ್ಥದಂತೆ ಕೊಂ
ಡಾಡ್ದಳಾತನ ಮಹಿಮನೆನಿಸಿ ಹೃತ್ಕಮಲದೊಳು
ನೀಡ್ದಳಾಧಾರವನು ಮಂತ್ರದಿಂದಾ ಮೂರು ಕಣ್ಣಾಗಿರುವ ಹುತ್ತಿಗೆ ||೨೦||

ಆಧಾರವನು ಮಂತ್ರ ಜಪಿಸಿ ತಳಿಯಲ್ಕಾಗ
ಮೇದಿನಿಯು ಬಿಚ್ಚಿವಿಭ್ಭಾಗವಾಗಲು ಶಿವೆಯು
ಶೋಧಿಸುತ ಹಿರಿಮರಿಗುರಿಗಳಲೊಳ ಪೊಗಸಿದಳ್ ಸಂತೋಷಭರಿತಳಾಗಿ
ಆ ಧರೆಯ ಮೇಲ್ತನ್ನ ಮೊಲೆಹಾಲ್ಗರೆದು ಸುತಗೆ
ಬೋಧಿಸುತನಾದಿ ಹದಗೈದು ಮುಚ್ಚಿದಳಿತರ
ಬಾಧೆಯಾಗದ ತೆರದಿ ಮೌಕ್ತಿಕದ ಮೂಗುತಿಯ ತೆಗೆದದರ ಮೇಲೂರ್ದಳು ||೨೧||

ಮತ್ತದಕೆ ವೀರಭದ್ರನ ಕಾವಲಿಯಿಟ್ಟು
ಮುತ್ತಿನಸು ಮೂಗುತೆಗೆ ಹರಸಿ ಪೇಳ್ದಳು ಮುಂದೆ
ಮುತ್ತುಗದ ಮರನಾಗಿ ಬೆಳೆದು ಬಾಳೆಂದರಿಕೆಗೊಟ್ಟು ಪೋದಳು ಬೇಗನೆ
ಇತ್ತ ಜಾಗ್ರತಿಯ ಪಟ್ಟಣದಿ ಶಿವಪದ್ಮ ತಾ
ಚಿತ್ತಶುದ್ಧದಿ ಕುರಿಗಳಂ ಕಾಯ್ದು ನಿತ್ಯಸುಖಿ
ಸುತ್ತಿರಿಲ್ಕಾತನರ್ಧಾಂಗಿ ಜಿಂಕಾದೇವಿ ಗರ್ಭವತಿಯಾದಳಾಗ ||೨೨||

ತರುಣಿಗೊದಗಿರ್ಪ ಗರ್ಭದ ಕಳೆಯ ಕಂಡು ಮಿಗೆ
ಹರುಷಮಂ ತಾಳ್ದು ಗುರುಸಿದ್ಧ ರೇವಣನ ಪಾದ
ಸ್ಮರಿಸಲಾಕ್ಷಣ ಮೇಘಮರೆಗಿರ್ಪ ರವಿ ಕಡಿಗೆ ಬಂದು ಪ್ರಜ್ವಲಿಸುವಂತೆ
ಭರದಿಂದಲಿಳಿದು ಮುಂದೆಸೆಯೊಳ್ಪರಲ್ವಾದ
ಕ್ಕೆರಗಿದನು ಶಿವಪದ್ಮ ಸದ್ಭಕ್ತಿಯಿಂದಾಗ
ಶಿರವ ಪಿಡಿದೆತ್ತುತೆನ್ನಂ ಧ್ಯಾನಿಸಿದ ಕಾರ್ಯಭಾಗಮದನೇನಂದನು ||೨೪||

ಗುರುವೆ ಕೇಳೆನ್ನ ಪತ್ನಿಯು ಗರ್ಭಧಿರಿಸಿಹಳು
ಸರಸದಿಂ ನಿಮ್ಮಮೃತ ಹಸ್ತಮಂ ನಾರಿಯ ಬ
ಸುರಿನ ಮೇಳಲಿದೆನ್ನಗಾಶೀರ್ವಚಿಸಿ ಪೋಗಬೇಕೆಂದು ಪ್ರಾರ್ಥಿಸಿದನು
ತರುಳ ನಿನ್ನಯ ಮನಸಿನರಕೆ ಕೈಗೂಡವದು
ಮರುಗಬೇಡಿ ನಿನ್ನ ಸತಿಯ ಗರ್ಭದೊಳು
ಪರತರ ಪುತ್ರನುದಿಸುವನು ಮಿಥ್ಯವಲ್ಲಾ ಕೂಸಿಗೆನ್ನ ಪೆಸರಿಟ್ಟು ಬಾಳು ||೨೫||

ಎಂದು ಪೇಳ್ದಭವಸುತ ತೆರಳಿದನು ಬಾಂದಳಕೆ
ಸುಂದರಿ ಹರಿಣಾದೇವಿಗೊದಗಿದವು ಚತುರಮಾ
ಸಂದಯಾನಿಧಿಪತಿಯು ಸೀಮಂತ ಸಂಭ್ರಮಕ್ಕಾರಂಭಿಸಿದ ಮುದದೊಳು
ಚಂದದಿಂದಷ್ಟಾಪ್ತರುಗಳೆಲ್ಲ ಕಂಚುಕವ

ತಂದರಾಗಲೆ ತರುಣಿಯರು ತಂಡತಂಡದಲಿ
ಒಂದುಗೂಡುತ್ತ ಬಂದರಾರತಿಯು ಬೆಳಗಿ ಮುಯ್ಯವನಿತ್ತರತಿ ಮುದದೊಳು ||೩೬||

ಹರುಷದಿಂ ಗೃಹಕೃತ್ಯಕಾರ್ಯ ತತ್ಪರರಾಗಿ
ಗುರುಸಿದ್ಧ ನುಡಿಗಳಂ ಸ್ಮರಿಸುತ್ತಲಿರೆ ತರುಣಿ
ಹರಿಣಾದೇವಿಗೆ ಗರ್ಭಚಿಹ್ನೆಗಳು ಹೊರಸೂಸಿ ತುಂಬಿದವು ನವಮಾಸವು
ಹರನ ದಯದಿಂ ಶುಭಮುಹೂರ್ತದೊಳ್ಪಡೆದಳಾ
ತರುಳನ ಸುಕಳೆಗಳಂ ನೋಡಿ ಪಿತಮಾತೆಯರು
ಪರಿಪರಿಯೊಳೊರ್ಣಿಸುತ ಹೃದ್ವಜನದೋಳ್ಪನಾನಂದರಾಗಿರುತಿರ್ದರು ||೩೭||

ದ್ವಾದಶ ದಿನದಿ ನಾಮಕರ್ಣದುತ್ಸವಗೊಳಿಸಿ
ಆದಿಗುರು ಸಿದ್ಧರೇವಣನ ಧ್ಯಾನಿಸಿ ಮಹಾ
ಮೋದದಿಂ ಕೂಡಿ ರೇವಣನೆಂದು ಪೆಸರಿಟ್ಟು ಕಾಲಗಳೆಯುತಲಿರ್ದರು
ಆದಿಗೊಂಡನು ಒಂದು ದಿನ ತನ್ನ ತನಯರಂ
ಭೇದವಿಲ್ಲದೆ ಹತ್ತಿರಕ್ಕೆ ಕರೆಯುತ್ತಲತ್ಯಾದ
ರದಿ ಸರ್ವರ ಮಕ್ಕಳಿಗೆ ಬೋಧಿಸಿದನದಂ ಪೇಳ್ವೆನಾಲಿಪುದೀಗಳೆ ||೩೮||

ಎಲೆ ಸುತರೆ ಎಮ್ಮ ಹಿರಿಯರ್ಮಾಡುತಿರ್ದ ಹೊಲ
ನೆಲಗಳಂ ಬಿಟ್ಟು ಕುರಿಗಳ ಕಾಯ್ವುದೊಂದೆ ಘನ
ಕೆಲಸಮಂ ಮಾಡುತ್ತ ಸೋಮಾರಿತನದಿಂದ ವರ್ತಿಸುವದುಚಿತಮಲ್ಲ
ಅಲಲ ನಿಮ್ಮಯ ಶಕ್ತಿ ಮನಗಂಡೆನೀಗ ನೇ
ಗಿಲಹೂಡಿ ಹೊಲಹಸನಗೈಯಲದು ಮುಂದೆ ಮಿತ
ಫಲಮಾಗಿ ಖಗಮೃಗಗಳಂ ರಕ್ಷಿಸುವದಲ್ಲದೆಮ್ಮಗತಿ ಸುಖಮೀವುದು ||೩೯||

ಎಂದು ಪೇಳಲ್ಕೆ ಜಾಯ್ಗೊಂಡ ಪಾಯ್ಗೊಂಡೆಂಬ
ನಂದನರು ನುಡಿದರೀ ಕೃಷಿಕೃತ್ಯ ಮಾಳ್ಪುದೆಂ
ಮ್ಮಿಂದಾಗದಿದಕೆ ಶಿವಪದ್ಮನಂ ಕಳಿಸೆಂದು ಹೇಳಿಕೊಳವನಿತರೊಳಗೆ
ಬಂದ ನಿನ್ನೊಬ್ಬ ಮಗ ಗೊಂಡನೆಂಬಾತ್ಮಜನು
ಅಂದನೆಲೆ ತಂದೆ ಕುರಿಗಳ ಕಾಯ್ದು ಬಿಸಿಲೊಳಗೆ
ಬೆಂದು ಬಳಲುತ್ತಿರುವ ಕಷ್ಟಮಂ ನೀನರಿಯದೇ ಪ್ರೀತಿಯಿಂ ಪೇಳ್ವರೆ ||೪೦||

ಈ ರೀತಿ ಬಳಲಿಸುವದಿದು ನ್ಯಾಯವೇನು ಸುಕು
ಮಾರನೆಂದಾ ಪದ್ಮನನ್ನು ಮನೆಯೊಳಗಿರಿಸಿ
ಚಾರಕರ ತರದೊಳೆಮ್ಮಗೆ ಕೆಲಸ ಪೇಳಿದರೆ ಸರಿಯೆಂಬರೇ ಪ್ರೌಢರು
ಭೂರಿದಯದಿಂ ಸುತರ ಸಮದಿಂದೆ ಪೋರಿಭೇದ
ತೋರಿ ನಡೆದರೆ ಪಿತನ ಧರ್ಮಕ್ಕೆ ಕೊರತೆ ಬರ
ಲಾರದಿರ್ಪುದೇ ತಂದೆ ಪುಟ್ಟಿಸಿ ಮಹಾಕಷ್ಟಕೆ ಕಳಿಸುವರೆ ಕೃತ್ರಿಮದಲಿ ||೪೧||

ಬೇಸರಾದರೆ ನಿನಗೆ ವಿಷಗೊಟ್ಟು ಕೊಲ್ಲು ಮರೆ
ಮೋಸದಿಂದೆಮಗೆ ಕಷ್ಟದ ಕೆಲಸಮಂ ಪೇಳಿ
ಘಾಸಿಸುವನಾಂತರಕೆ ದಬ್ಬಿ ಬಳಲಿಸಬೇಡವೆಂದು ಕರಮುಗಿದೆದ್ದನು
ಆ ಸಕಲ ನುಡಿಗಳಂ ಕೇಳಿ ಶಿವಪದ್ಮನು
ಲ್ಲಾಸದಿಂದೆದ್ದಾಗ್ರಜರ ಪಾದಕ್ಕೆರಗಿ ನಗೆ
ಸೂಸುತಲಿ ಪೇಳಿದಂ ನಾನಿರಲು ನಿಮಗೇಕೀ ಕಷ್ಟಮೆಂದೊರೆದನು ॥ ೪೧॥

ಅಗ್ರಜರೆ ಪಿತನ ಮುಖವೆಂಬ ಚಂದ್ರಂಗೆ ರಾ
ಹುಗ್ರಹಣ ಮಾಳ್ಪುದೇತಕೆ ಬರಿದೆಬಿಡಿರಿ ನಿ
ಮ್ಮುಗ್ರ ಕೋಪವ ನಿಲ್ಲಿಸಿರಿ ವೈರಗುಣಮಳಿರಿ ರಾರಾಜಿಸುವ ನಿಲಯದಿ
ವೆಗ್ರದಿಂದಿರರಿ ಬಳಲಿಕೆಯ ಕಳಿರೆನುತಲಿ ಸ
ಮುಗ್ರರಿಗೆ ಪೇಳಿ ಕಾಸಿಯ ಕಟ್ಟಿದ ಮನದೋಳ್ಶಿ
ಷಗ್ರೀವನೊರ ಪುತ್ರನಾದ ಸಿದ್ಧೇಂದ್ರನಂ ನೆನಸಿತಾತಗೆ ನಮಿಸಿದಿಂ ॥೪೨॥

ನೇಗಲೆಯ ತಕ್ಕೊಂಡು ಮಿಣಿಗಳಂ ಪೊತ್ತು ಮುಂ
ಬಾಗಿಲೆಗೆ ಬಂದು ಭಯಯತ್ತುಗಳ ಬಿಚ್ಚಿ ತಾಂ
ಪೋಗಲಿಕೆ ಸಿದ್ಧನಾಗುತಿರಲ್ಮಾತೆ ಚುಂಚಲಾದೇವಿ ಕಂಡಳಾಗ
ಈಗಲೀ ಕಾರ‍್ಯ ನಿನಗೊರೆದರಾರ‍್ಮಗನೆನೀ
ಸಾಗಲಿಳೆಗೆಲಸ ನಿನ್ನಿಂದಹುದೆ ಕಾಕಾಳಿ
ಕೋಗಿಲೆಗೆ ಸಮವೇ ಮೇಣಿದಂತೆ ಈ ಸುತರು ನಿನ್ನ ಸಮನಾಗುತಿಹರೆ ॥೪೪॥

ಮಗನೆ ಬಿಡುಬಿಡುಯಂದು ಗುಪ್ತದಿ ಪೇಳಿ ಕರ
ಮುಗಿಯಲ್ಕೆ ಮಾತೆಯಂ ಸಂತೈಸಿ ನಡೆದ ನಡ
ವಿಗೆ ಪದ್ಮಪಥವಿಡಿದು ತಂದೆ ಪೇಳಿದ ಹೊಲವ ಶೋಧಿಸಿದ ಸುತ್ತವರಿದು
ಮಿಗೆ ಹರುಷವೆತ್ತು ನೇಗಲೆಗೆ ಮುಂಜುಣವನಿಟ್ಟು
ನೊಗಮಿಣಿಗಳಂ ಧರಿಸಿ ಎತ್ತುಗಳ ಹೂಡಿ ಭೂ
ಮಿಗೆ ನಮಿಸಿ ಮತ್ತಾತ್ಮದೋಳ್ಸಿದ್ಧನಂ ನೆನೆದು ಸಾಗಿಸಿದ ಸತ್ವರದಲಿ ॥೪೫॥

ಇತ್ತಿ ಗೃಹದೊಳಗವನ ಮಾತೆ ಮಗನಂ ನೆನೆಸಿ
ಚಿತ್ತದೊಳ್ಮರುಗಿದಳು ಮಧ್ಯಾಹ್ನ ಸಮಯಮಾ
ಯ್ತುತ್ತ ಮಗನಿಗೆ ಕ್ಷುಧಾತುರಮದಾಗಿರಬಹುದೆನುತ್ತ ಬಹು ಸತ್ವರದಲಿ
ಉತ್ತಮೋತ್ತಮ ಶಾಖಪಾಕಮಂಗೈದು ಸಲೆ
ಬುತ್ತಿಯಂ ಕಟ್ಟಿಕೊಂಡೈತಂದಳಾ ಹೊಲಕೆ
ನೆತ್ತಿ ಮೇಲಿರ್ದ ಕಟ್ಟೋಗರವನಿಳಿಸಿ ಧ್ವನಿದೋರಿ ಕರೆದಳು ಪುತ್ರನ ॥೪೬॥

ಧ್ವನಿಗೇಳಿ ಶಿವಪದ್ಮ ನೇಗಲೆಯು ನಿಲ್ಲಿಸುತ
ಜನನಿ ಹತ್ತಿರ ಬಂದು ಸಾಷ್ಟಾಂಗವೆರಗಿ ಸ

ದ್ವಿನಯಮಂ ದೋರಿಯನ್ನಿಂದಾದುದೀ ಕಷ್ಟ ನಿನಗೆಂದು ಚಿಂತಿಸಿದನು
ಇನಿದಾದ ಪಕ್ವಾನ್ನ ಸವಿದು ಸಂತೋಷದಿಂ
ಮನೆಯೊಳಿರುತಿಹ ನಿನಗಡವಿಗೆಲಸಾದಗಿಂತೆಂದನು
ಮುನಿಸುತಲಿ ಬಂದೆನೆನಗೆ ಕಷ್ಟಮಿದೇನು ಸ್ವೀಕರಿಸು ಪಾಕವನ್ನು ॥೪೭॥

ಅಷ್ಟರಲಿ ಜಾಯ್ಗೊಂಡ ಪಾಯ್ಗೊಂಡ ಮೊದಲಾದ
ದುಷ್ಟರೆಲ್ಲರು ಬಂದು ದೂರಿದರು ಮಾತೆಯನು
ಇಷ್ಟೇಕೆ ಪ್ರೀತಿ ಶಿವಪದ್ಮನೋಳ್ಬಿಡು ಸಾಕುಸಾಕು ನಡೆ ಮನೆಗೆಂದರು
ಕಷ್ಟದಿಂ ಕಣ್ಣೀರು ಸುರಿಸುತ್ತ ಚುಂಚಲೆಯು
ಭ್ರಷ್ಟರ ನುಡಿಗೆ ಬೆದರಿ ಪಥವಿಡಿದು ಬರುಬರುತ
ಸೃಷ್ಟಿಗೀಶ್ವರ ಸಿದ್ಧನಂ ನೆನೆದು ಸುತನ ಮುಖನೋಡಿ ದುಮ್ಮನಗೊಂಡಳು ॥೪೮॥

ಮರುಗಿದಳು ಮನದೊಳಗೆ ನೀಚಸುತರೊಂದಾಗಿ
ಹರಪದ್ಮನಿಗೆ ಬುತ್ತಿಕೊಡುವರೋ ಬಿಡುವರೋ
ಮರಳಿ ಬಾಲನಿಗೆ ಮದ್ದಿಡುವರೋ ಶಿರವ ನೋಡೆಗಡಿವರೋ ತಿಳಿಯದೆಂದು
ತಿರುಗಿದಳು ಮಧ್ಯಪಥದಿಂದೆ ಹಿಂದಕ್ಕೆ ಗಂ
ಹರದಿಚರಿಸುತ್ತ ಮತ್ತಾ ತರುಳರಿಂಗೆ ತಾ
ಮರೆಯಾಗಿ ಗಿಡದಡಿಯ ಭಾಗದೋಳ್ತನಗವರು ಕಾಣುವ ತೆರದಿ ನಿಂದಳು ॥೪೯॥

ಆಗಲಾ ದುಷ್ಟರೊಂದಾಗಿ ಶಿವಪದ್ಮನಂ
ನೇಗಲೆಗೆ ಕಳಿಸಿ ಮಾತೆಯು ತಂದ ಮಧುರಾನ್ನ
ರಾಗದಿಂ ಭುಂಜಿಸುತ ಮರಗೊಂಡನಂದನಾಗ್ರಜರೇ ನಾವಿಂದಿನಿಂದ
ಹೀಗೆ ಕಾಪಟ್ಯನೆಸಗಿದರೆ ನಿತ್ಯದೊಳು ಸುಖ
ಮಾಗಿ ಜೀವಿಸುವೆ ವೀಭಾಗದಿ ಪುಟ್ಟಿ ಹಿತನೀಗಿತೆ
ಮ್ಮಗೆ ಹೀನಭೋಗ ಬಂದಿತು ಮುಂದಿಕ್ಕೇನು ಗತಿಯೆಂದರು ॥ ೫೦॥

ಈ ರೀತಿಯಾಗಿ ನಾಲ್ವರು ಕೂಡಿ ಮಾತಾಡಿ
ಸಾರಪಕ್ವಾನ್ನಮಂ ಸ್ವೀಕರಿಸಿ ನೀರ್ಗುಡಿದು
ಭೂರಿ ಕೋಪದೊಳು ಮಿಕ್ಕಾನ್ನಮಂ ಹೂಳಿಟ್ಟು ಜಲಚೆಲ್ಲಿ ನಡೆದರವರು
ದೂರದಲಿ ನಿಂದು ನೋಡಿದಳೆಲ್ಲ ಚುಂಚಲೆಯು
ಧೀರ ಶಿವಪದ್ಮನಂ ಕರೆದಳತಿ ದುಃಖದಿಂ
ತೋರಿಸಿದಳಾಗ್ರಜರು ಮಾಡಿದನ್ಯಾಯಮಂ ಪೇಳಿದಳುಸುರ್ದ ನುಡಿಯ ॥೫೧॥

ಕೇಳಿ ಶಿವಪದ್ಮ ಗುರುಮಂತ್ರಮಂ ಸ್ಮರಿಸಿಖತಿ
ತಾಳಿ ವೀರಾವೇಶದಿಂ ಭಸ್ಮ ತಳಿಯಲ್ಕೆ
ಥಾಳಿಸುವ ತಂಬಿಗೆಯ ಜಲಭರಿತಮಾಯ್ತು ಬಟ್ಟಲವನ್ನು ಕರದು
ಕೊಳಲು ಮೇಲೆಸೆವ ಪಂಚಾಮೃತವು ತುಂಬಿತದ

ರೊಳಗೆ ಬಾಲಕನ ಸಚ್ಚರಿತ್ರವ ಕಂಡು ಮಾತೆ ಸುಖಜಾಲ
ದೋಳ್ಕೂಡಿ ಕೊಂಡಾಡಿದವಳಿಂಗೆ ನರನೆಂಬರಾರೀ ಧರೆಯೊಳು ||೫೨||

ಪಂಚಾಮೃತವ ಸವಿದು ಬೇಗದಿಂದಲಿ ಮಾತೆ
ಚುಂಚಲೆಯನು ಕಳಿಸಿ ಬಾರ್ಗೋಲು ಪಿಡಿದಗ್ರಜರ
ವಂಚನೆಯ ನೆನೆನೆನೆದು ನೇಗಲೆಯು ಸಾಗಿಸಿದನತಿ ಶೀಘ್ರದಿಂದೆ ಬಂದು
ಮುಂಚೆ ಧರೆಗಿಳಿದು ಶ್ರೀ ಶಿವೆಯು ಕುರಿಗಳ ಕಾಯ್ದು
ಸಂಚರಿಸಿ ಬೇಸರದಿ ಒಳಗಿರಿಸಿ ಮುಚ್ಚಿ ಶಿವ
ಪಂಚಾಕ್ಷರೀ ಮಂತ್ರದಿಂದ ಭಸ್ಮವ ತಳೆವ ಹುತ್ತಿಂಗೆ ಹತ್ತಿತಾಗ ||೫೩||

ತೆರೆದಿತು ಹರನರಾಣಿ ಮುಚ್ಚಿರ್ದ ಹುತ್ತಾಗ
ಬಿರಿದಿತು ಧರಾವಲಯ ವಿಭ್ಭಾಗಮಾಗಿ ಸಲೆ
ಮುರದಿತಾ ನೇಗಲೆಯ ಮುಂಚಣಾಗ್ರದ ಭಾಗ ಮರಳಿ ನಿಡುವಾದ ಮಿಣಿಯು
ಹರದಿತು ತತ್ಕಕ್ಷಣದೊಳಗ್ನಿಯುದ್ಭವಿಸಿ ಸು
ತ್ತರದಿತು ಸಕಲಕಾಷ್ಟತೃಣಮಹಾಗಿಡಗಳಂ
ಉರದಿತು ಪುಲಿಕರಡಿ ನರಿಗಳೆಲ್ಲ ಶಕೆಗಂಜಿ ಅತ್ತಿತ್ತ ಬಿಟ್ಟೋಡ್ದವು ||೫೪||

ಬೆದರಿದವು ಎತ್ತುಗಳು ನಡಿಯಲಾರದೆ ಶಕೆಗೆ
ಅದರಿದವು ತುಸು ಮುಂದಕಡಿ ಇಡುತ್ತಲಿ ಪೋಗಿ
ಮುದುರಿದವು ಮೈನರಗಳೆಲ್ಲ ಶಟಗೊಂಡು ಎದ್ದೆದ್ದು ಬಿದ್ದವು ನೆಲಕ್ಕೆ
ಹೆದರಿದವು ಮೃತಿಗೆ ಇದನೆಲ್ಲ ನೋಡಲು ಪದ್ಮ
ಗುದರಿದು ಬಾಷ್ಪಜಲಕರ ಚರಣಗಳು ಭರದಿ
ಬೆದರಿದವು ಇನ್ನಿದಕೆ ಗತಿಯಾವುದೆಂದು ಶ್ರೀಸಿದ್ಧನಂ ಧ್ಯಾನಿಸುತಲೀ ||೫೫||

ಭಸಿತಮಂ ತಳಿಯಲುರಿ ನಂದಿತಾಗಳೆ ಮನದ
ವೆಸನಮಂ ಬಿಟ್ಟೆಬ್ಬಿಸಲ್ಕೆ ಎತ್ತುಗಳೆದ್ದು
ಎಸೆದವು ಮೊದಲಿನಂತೆ ನಡೆದವು ಗೃಹಕ್ಕಿತ್ತ ಹಿಂದಿರುಗಿ ನೋಡುತಲಿರೆ
ಪೊಸಬಣ್ಣದಿಂದ ಕೂಡಿರ್ದ ಕಂಗೊಳಿಪ ಕುರಿ
ವಿಸ್ತಾರಮಂ ನೋಡಿ ಬೆರಗಾಗಿವುಗಳೆಲ್ಲಿಂದು
ದಸಿದವೆಂದೆನುತ ನೇಗಲೆಯು ಯೀಸಂಪೊತ್ತು ನಡೆದನವುಗಳ ಪೊರೆಯುತ ||೫೬||

ಈ ಸುಚಾರಿತ್ರಮಂ ಬರದೋದಿದರ್ಗೆ ಮೇಣ್
ಲೇಸಾಗಿ ಯಿದರರ್ಥವಾಧ್ಯಾಂತ ಪೇಳ್ದರ್ಗೆ
ಬೇಸರಿಯದುರೆ ಭಕ್ತಿಯಿಂದ ಕೇಳಿದವರ್ಗೆ ಪದುಳದಿಂ ಪಠಿಸಿದರ್ಗೆ
ಭಾಸಿತ ಸಕಲ ಭೋಗಭಾಗ್ಯಮೋಕ್ಷಂಗಳ ವಿ
ಲಾಸದಿಂದಿತ್ತುದುರಿತೌಘಮಂ ಸಂಹರಿಸಿ
ವಾಸ ರಸ್ತಾಪುರ ಶ್ರೀ ಶರಭಲಿಂಗೇಂದ್ರ ರಕ್ಷಿಸುವನಿಹಪರದೊಳು ||೫೭||

ಇಂತೆಬಲ್ಲಿಗೆ ಶರಭೇಶ್ವರ ಪಾದಾಬ್ಜಭೃಂಗನು
ವಿಶಿಷ್ಠವಿದ್ವಜ್ಜನ ವಿಧೇಯನು ಆದ ಭೀಮನಾಯಕ
ಕವಿಯಿಂ ಪ್ರಣೀತಮಪ್ಪ ಹಾಲ್ಮ ತೋತ್ತೇಜಕ ಪುರಾಣದಲ್ಲಿ
ಅಂತು ಸಂಧಿ ೫ಕ್ಕಂ ಪದನು ೨೧ಲಕ್ಕೆ ಮಂಗಲಂ ಮಹಾಶ್ರೀಶ್ರೀಶ್ರೀ

## ಸಂಧಿ ೬-ಶಿವಪದ್ಮನ ಚರಿತ್ರೆ

ಸೂಚನೆ ||

ತರುಣಿ ಚುಮಲಾದೇವಿಯನ್ನು ಪಿಡಿದೊಟ್ಟುಸುರೆ
ಸೆರೆಯೊಳಿಟ್ಟಿರಲು ಶಿವಪದ್ಮನಾದನುಜೆಯಂ
ತರಿದು ಬಾವನ್ನ ಬಿರಿದುಗಳಗೈದಾ ಚುಮಲೆಯನ್ನು ಪರಿಪಾಲಿಸುವನು

ಕರದೃತ ಕಪಾಲ ಫಣಿಮಾಲ ಕರುಣಾಳು ಶಂ
ಕರಮುಕ್ತಿ ಮೂಲ ಮುನಿಜಾಲ ಪರಿಪಾಲ ಶ್ರೀ
ಕರ ಕಾಲಕಾಲ ಸಲ್ಲೀಲ ಸುಖಲೋಲ ವರಶೂಲಧರ ನೀಲಕಂಠ
ಸುರರಾಜನುತ್ಯ ತಸ್ಕೃತ್ಯ ಸೌಚಿತ್ಯ ಭಾ
ಸುರ ಭಸಿತಕಾಯ ನಿರ್ಮಾಯ ವರದಾಯಕಮ
ಸುರವೈರಿ ಪ್ರೇಮಗಿರಿಧಾಮ ನಿಜಧಾಮ ಭವಭೀಮ ಪಾಲಿಸುಯನ್ನನು ||೧||

ಶಿವಪದ್ಮ ತನ್ನ ನುಜಮಾತೆಪಿತರಂ ಮರೆದು
ಭುವನಮಂ ಚರಿಸುತ್ತಪರಿಪರಿ ಕುರಿಗಳಂ ವಿ
ಭವದಿ ಕಾವುತ್ತ ಗಿರಿಗಹ್ವರಗಳಂ ನೋಡಿ ವರ್ಣಿಸುತ ಮರಿಗಳನ್ನು
ಅವಚಿ ಪಿಡಿದೆತ್ತಿ ಸುಪ್ರೇಮದಿಂ ಪಾಲಿಸುತ
ವವಿರದೆ ಎಡಬಲದ ತಿಳಿಜಲವ ಶೋಧಿಸುವ
ಸುವಿಲಾಸದಿಂ ಕೊಳಲನೂದುತ್ತ ಭುವನಮೆಲ್ಲವ ತಿರುಗಿ ಬೇಸತ್ತನೂ ||೨||

ಭಾವಶುದ್ಧದಿ ನಿಂದು ಭಾಸುರಾನನ ಪದ್ಮ
ದೇವಗಂಗಾಧರನ ಧ್ಯಾನಮಂ ಮಾಡ್ದು ನೀ
ಭೂವಲಯದೋಳ್ಪಿಟ್ಟೆ ಭೂರಿಶ್ರಯಪಟ್ಟೆ ಶಂಭೋಯನ್ನಂ ಪಾಲಿಸೆಂದಂ
ಆ ವೇಳೆಯಲಿ ಹರನವನ ಮುಂದಿಳಿದು ನಿನ್ನ
ಗಾವಿಧದ ತೊಂದರೆಗಳಾವರಿಸಿದವು ಪೇಳ್ ವ
ರಾವತಾರನೆಯನ್ನನೇಕೆ ನೆನೆದೆನಲಾಗಳಾ ಪದ್ಮನೊರದ ಮುದದೀ ||೩||

ಕುರಿಗಳು ಕಾಯ್ದು ನಾಂ ಕೊರಗಿದೆ ಸೊರಗಿದೆ ವರ
ಗಿರಿಗಳಂ ಸುತ್ತಿ ತವೆ ತೆರಳಿದೆ ಹೊರಳಿದೆ ಎಳೆ
ಮರಿಗಳಂ ಹೊತ್ತು ಬಲುಬಳಲಿದೆ ತೊಳಲಿದೆ ಹೆಗ್ಗಾಡಿನೋಲ್ವಾಸಮಾದೇ

ಕುರಿಗಳಂ ಕಂಡು ಕಂಡಳಕಿದೆ ಬಳಕಿದೆನತಿ
ಕೆರೆಗಳಂ ಹುಡುಕಿ ನೀರ್ಗುಡಿಸಿದೆ ಪಡಿಸಿದೆ ಸುಖ
ಹರಿಗಳಂ ನೋಡಿ ಭಯಧರಿಸಿದೆ ನಿನ್ನಯ ಪಾದವನಜಗಳೆನಲೂ ॥೪॥

ಆಗಲಾ ಶಂಕರಂ ಮೆಚ್ಚಿ ಶಿವಪದ್ಮನಂ
ರಾಗದಿಂದುತ್ತುಮಾಂಗದ ಮೇಲೆ ಕರವಿಟ್ಟು
ಭೋಗಿಯಾಗಂದರಿಸಿ ಬೋಳೈಸಿ ಮುಗುಳೆಂದನೀ ಬಳಲಬೇಡ ಬರಿದೆ
ಈಗ ವೀರೇಶನಂ ನಿನ್ನ ಜೊತೆಯೊಳ್ಬಿಡುವೆ
ನೀ ಗಿರಿಯ ತಟದಿ ಕುರಿಗಳನು ಕಾಪಾಡಿ ಸುಖಿ
ಯಾಗಿರುವದೆಂದೀರ್ವರನು ಬಿಟ್ಟು ಗೌರೀಶಗಮಿಸಿದನು ಕೈಲಾಸಕೆ ॥೫॥

ಒಂದು ದಿನ ತ್ರಿಪುರಾಂತಕಂ ಗರುಡಗಂಧರ್ವ
ನಂದಿನಾರದ ಭೃಂಗಿ ಮುನಿಗಣರ್ವೆರಸಿ ಮುದ
ದಿಂದಿರಲ್ಕೋರ್ವ ಮುನಿಯಂ ಕಂಡು ಹಾಸ್ಯಗೈದರು ತ್ರಿಜನಗಂಧರ್ವರು
ದಂದುಗದಿ ಕೂಡು ತಾ ಮುನಿವರನವರಿಗೆ ಭರ
ದಿಂದ ಮರ್ತ್ಯಕೆ ಪೋಗಿ ಕಷ್ಟದಿಂದಲಿ ಬಾಳಿ
ರೆಂದು ಕಡುಗೋಪದಿಂದುರುತರದ ಶಾಪಮಂ ಕೊಟ್ಟನತ್ಯವಸರದೊಳು ॥೬॥

ಗದಗದನೆ ನಡುಗಿ ಗಂಧರ್ವರಾ ಮುನಿವರನ
ಪಾದಕೆರಗಿ ಕೇಳಿದರು ನಿಶ್ಯಾಪವೇನಿದಕೆ
ಪದುಳ ಮಾನಸರಾಗಿ ಪೇಳುತೆಮ್ಮನು ಪಾಲಿಸೆಂದು ಸ್ತೋತ್ರವಗೈದರು
ಸದಮಲಜ್ಞಾನಿಗಂತಃಕರಣ ಪುಟ್ಟೆ ಪೇ
ದನೋರ್ವನಿಗೆ ನೀನು ಬಂಕಾಪುರದೊಳಿರ್ಪ
ಕುದಯರಕ್ಕಸರ ವಂಶದೊಳುದ್ಭವಿಸಿ ಪಲವು ದಿನವರಿಗೆ ಬಾಳೆಂದನು ॥೭॥

ಮರಳಿ ಮತ್ತೋರ್ವಗೆ ಕಾಕನಾಗುತಲಿ ಸಂ
ಚರಿಸಿ ಬದುಕೆಂದ ಮತ್ತೋರ್ವನಿಗೆ ಕಾಂಚಾಲ
ಮರನಾಗಿ ಭುವನದೊಳ್ಪುಟ್ಟು ಕೆಲಕಾಲ ಸುಖಿಸೆಂದು ಸುರಲಾಕ್ಷಣದೊಳು
ಮರಮರನೆ ಮರುಗಿ ನಿಶ್ಶಾಪವಿದಕೇನೆಂದು
ಮರಳಿ ಕೇಳಲ್ಕೆ ಮುನಿ ಪೇಳ್ದನೆಲೋ ಸಿದ್ಧ
ಗುರುವರನ ಸುತ ಶಿವಪದ್ಮ ಬಂದು ನಿಮ್ಮಗೆ ಮುಕ್ತಿಕೊಟ್ಟು ಪಾಲಿಸುವನೆಂದ ॥೮॥

ವರಮುನಿಗಳರುಹಿದ ತೆರದಿ ಕಾಕ ಕಾಂಚಾಲ
ಮರರಕ್ಕಸಿಗಳಾಗಿ ಕೆಲಗಾಲ ಸುಮ್ಮನಿರು
ತಿರಲೊಂದು ದಿನ ದನುಜೆಯು ಜಾಗ್ರತಾಪುರಿಗೆ ಬಂದಳತಿ ಭೀಕರದೊಳು
ಅರಸನೆದುರಿಗೆ ನಿಂದು ನಿನ್ನ ಸುತೆಯಾದ ಸುಂ

ದರ ರೂಪೆಯನ್ನೆನಗೆ ಹಾರಕ್ಕೆ ಕೊಡುವುದೆಂದುರು
ತರದ ಕೋಪದಿಂ ಗಡಬಡಿಸುತಡಿಗಡಿಗೆ ಕೇಳಲವನಿಂತೆಂದನು ॥೯॥

ರಕ್ಕಸಿಯೆ ಕೇಳೆನ್ನ ಪುತ್ರಿಯಂ ಬೇಡುವುದು
ತಕ್ಕ ಮಾತಲ್ಲ ಬಿಡು ನಿನಗೊಂದುಪಾಯಮಂ
ಅಕ್ಕರದಿ ಪೇಳ್ವೆ ದೃಢಚಿತ್ತದಿಂ ಲಾಲಿಸೀ ಪುರದೊಳಿಹ ಸಕಲ ಜನರಂ
ಒಕ್ಕಟ್ಟು ಮಾಡುತವರಂ ವಿಚಾರಿಸಿ ದಿನದಿ
ನಕ್ಕೊಬ್ಬರಂ ನಿನಗೆ ಕೊಡುವಂತೆ ಪೇಳ್ವೆನೀ
ಧಿಕ್ಕರಿಸಬೇಡ ನಡಿನಡಿಯಂದಭಯ ಪೇಳ್ದ ಚಕ್ರವರ್ತಿ ಭೂಪಾಲನು ॥೧೦॥

ಕರಸಿದಂ ಮಂತ್ರಿಮಾನ್ಯರನು ಜವದಿಂದ ಹಿಡ
ತರಿಸಿದಂ ಸರ್ವಪ್ರಜೆಗಳನು ಚಿಂತಾತುರದಿ
ನೆರಸಿದಂ ಕವಿ ವಿಶಾರದರಾದ ವಿಭುಧರಂ ಪೇಳಲಚ್ಚರಿಯಾದುದು
ಧರಿಸಿದಂ ವೆಸನಗಳಂ ನಿಟ್ಟುಸುರ್ಬಿಡುತ
ತ್ವರದಿ ಸುರಿಸಿದಂ ಬಾಷ್ಪಜಲ ಮೆಲ್ಲಜನನರರಿವಂತೆ
ಸ್ಮರಿಸಿದಂ ಶಂಕರನೆ ಗತಿಯೇನಿದಕ್ಕೆ ನೀಂ ಪೊರೆಯಂದು ರೋಧಿಸಿದನೂ ॥೧೧॥

ಆಗಲಾ ಸಚಿವನೆದ್ದು ಭಯ ಕರ ಮುಗಿದು ತಲೆ
ವಾಗಿ ದುಃಖಿಸುವ ರಾಜೇಂದ್ರನಂ ಸಂತೈಸಿ
ಬೇಗದಿಂ ಕೇಳ್ದ ನಿನಗೊದಗಿರ್ಪ ಬಂಧನವದೇನೆನಗೆ ಪೇಳೆಂದನು
ಈಗೋರ್ವ ರಕ್ಕಸಿಯು ಪುರನಿಳಯಂ ಪೊಕ್ಕು ಸುಖಿ
ಯಾಗಿರ್ಪ ಜನರನಪಹರಿಸುವೆನೆನುತ್ತಲತಿ
ಕೂಗುತ್ತ ನಿಂತಿಹುದಿದಕ್ಕೆ ಗತಿಯೇನೆಂದು ವೆಸನ ಮನದಿಂದುಸುರಿದಂ ॥೧೨॥

ಪುರಜನರು ಮರುಗಿ ಪೇಳಿದರಾ ನರೇಂದ್ರಂಗೆ
ಬರಿದೆ ಚಿಂತಿಸಬೇಡ ದಿನಕೊಂದು ಮನೆಗೋರ್ವ
ಪುರುಷನಂ ಕೊಡುವಂತೆ ಕಟ್ಟಳೆಯ ಮಾಡೆಂದು ತೆರಳಿದರು ತಮ್ಮ ಗೃಹಕೆ
ಮರಳಿ ಭೂಪಾಲನಿದರಂತೆ ರಕ್ಕಸಿಯಳಿಗೆ
ಬರದಿಂದ ಪೇಳಲದಕ್ಕೊಪ್ಪಿದನುಜೆಯು ನಿತ್ಯ
ಹರುಷದಿಂದೋರ್ವನಂ ತಿಂದು ಕೆಲಕಾಲ ಕಳೆಯುತ್ತ ಸುಖದಿಂದಿರ್ದಳು ॥೧೩॥

ಕೊನೆಗೆ ಜನಪಗೆ ಬಂದು ಕೇಳುತಿಂದಿಗೆ ಸರ್ವ
ಮನೆ ತೀರಿದವು ನಿನ್ನ ನಿಲಯಕ್ಕೆ ಬಂದೆ ಭೋ
ಜನಕೀವುದೀಗ ಚುಮಲಾದೇವಿಯಳನೆಂದು ಪಲ್ಗರಿದು ಭೀಕರಿಸಿತು
ದನುಜೆಯ ಭಯಕ್ಕೆ ಬೆದರುತ್ತ ತನ್ನರ್ಧಾಂಗಿ
ಯನು ಕರೆದು ಮೋಹದ ಕುವರಿಗಂತ್ಯ ಕಾಲ ಬಂ
ತೆನಲಾಕ್ಷ ಮುನಿದನೆಂದೊರೆದು ವಿಧವಿಧದಿಂದ ಶೋಕಕ್ಕೆ ಗುರಿಯಾದನು ॥೧೪॥

ಪ್ರಿಯನ ದುಃಖವ ನಿಲ್ಲಿಸುತ್ತ ಸತಿ ತನ್ನಾತ್ಮ
ಜೆಯಳನ್ನು ಕರೆದು ಜರದಂಬರವ ನುಡಿಸಿ ಮಣಿ ಮ
ಣಿಯದಾಭರಣವನಿಟ್ಟು ಮಿತದುಃಖದೊಳು ಶೃಂಗರಿಸಿ ರಥದೋಳ್ಕೂಡ್ರಿಸಿ
ಹಯವ ಬಂಧಿಸಿ ಚಾರರನ್ನು ಕಳಿಸಿದಳು ದನು
ಜೆಯೊಳಿರುವ ಬಂಕಾಪುರದ ಸೀಮೆ ಬಳಿಗೆ ನಿ
ಶ್ಚಯಮಿಲ್ಲ ಈ ಕಾಯ ಈ ಪ್ರಪಂಚಮಿದೆಂದು ಪುರಜನರು ರೋಧಿಸಿದರು ||೧೫||

ಕಳಿಸಲ್ಕೈತಂದವರ್ಗೆ ಚುಮಲಾದೇವಿ
ಕಳವಳದಿ ಕರಜೋಡಿಸುತ್ತ ಪೋಗುವೆನೆಂದು
ನಿಳಯಬಿಟ್ಟೈದಳಪ ಮರಣಕ್ಕೆ ಗುರಿಯಾದೆನೆಂದು ಮನದೊಳಗಳುಕದೆ
ಘಳಿಲನೇ ದನುಜೆ ಕೋಪ ತಾಳಿ ಪಲ್ಗರಿದುತಾ
ಸಳೆ ರಥಕೆ ಹಾರಿ ರೂಪವ ನೋಡಿ ಮರುಕದಿಂ
ನಳಿದೋಳ್ಗಳನ್ನು ಪಿಡಿದೊಯ್ದಳತಿ ತವಕದಿಂದೇನೆಂಬೆನದ್ಭುತವನು ||೧೬||

ನೀಳಾದ ಕಾಂಚಾಲ ಮರದಡಿಯ ಬಳಿಯೊಳಿಹ
ಹಾಳನಿಲಯಕೆ ಪೋಗಿ ಕ್ಷುದ್ಬಾಧೆ ತಡಿಯದೆ ಮ
ರುಳಾಗ ಮನೆಯ ಸುಲಾವಣ್ಯಮಂ ಕಂಡು ರಕ್ಕಸಿಗೆ ಘನಕರುಣ ಪುಟ್ಟೇ
ಪೇಳಿದಳು ಪ್ರೇಮದಿಂ ಕ್ರೂರರೂಪವ ತೆಗದು
ತಾಳಿದಳು ಮಾನುಷ್ಯ ಸ್ತ್ರೀರೂಪ ಹೆದರದಿರು
ಕೇಳೆನ್ನ ನುಡಿಗಳಂ ಈಗೆನಗೆ ಪುತ್ರಿಯಾಗಿರುಯಂದು ಬೋಧಿಸಿದಳು ||೧೭||

ಮಾರನೆ ದಿನದಿ ರಕ್ಕಸಿಯು ತನ್ನ ಮೋಹದ ಕು
ಮಾರಿಯಂ ಕರೆದು ಪೇಳ್ದಳು ನಿನ್ನಿರುಳೆನಗೆ
ಹಾರಂಗಳಿಲ್ಲದಕ್ಕೀಗ ನಾಂ ಪೋಗಿ ಹೆಣಗಳ ತರುವೆ ತವಕದಿಂದ
ಸಾರನಿಲಯದಿ ನೀನು ಮೃಷ್ಟಾನ್ನ ಸವಿದು ಸುಖಮ
ಯಾಗಿರು ನಿನ್ನಗಾರೇನು ಮಾಳ್ಪರೆಂ
ದಾ ರಾಕ್ಷಸಿಯು ತೆರಳಿ ತರತರದಿ ಪ್ರೇತಂಗಳಂ ಪೊತ್ತು ಭೀಕರದೊಳು ||೧೮||

ಮರಳಿ ತಚ್ಛವಗಳಂ ಮರದಡಿಯೊಳಿರಿಸಿ ದಣಿ
ವಿಂದ ವಿಶ್ರಮಿಸಿ ತೃಷಿಯಾಗಿರುವದೆನಗೆ ನೀ
ರ್ತಂದೀವುದೆಂದು ಚುಮಲಾದೇವಿಯಂ ಕರೆದು ಪೇಳಿದಳು ಪ್ರೀತಿಯಿಂದ
ಅಂದ ನುಡಿ ಕೇಳಿ ಮೈಮುರಿದೆದ್ದಬಲೆ ರಜ್ಜ
ಬಿಂದಿಗೆಯ ತಕ್ಕೊಂಡು ಕೂಪಕ್ಕೆ ತಂದು ತ್ವರ
ದಿಂದ ಜಲಮಂ ಕೊಟ್ಟು ತೃಪ್ತಿಗೊಳಿಸಲ್ಕೆ ದೈತ್ಯಳು ಪೊಕ್ಕಳಾಲಯವನು ||೧೯||

ಇದರಂತೆ ಪನ್ನೆರಡು ವರುಷ ಬಾಳಿರಲಿತ್ತ
ಮದನಾರಿ ಭಕ್ತ ಶಿವಪದ್ಮ ಗಣತೃಪ್ತಿಯಂ

ಮುದದಿಂದ ಮಾಡಲಿಚ್ಛೈಸಿ ತೆರಳಿದ ವನಕ್ಕಗ್ನಿಯಂ ತರುವದಕ್ಕೆ
ಸದನದಿಂದೇಳ್ವ ಹೊಗೆಯಂ ಕಂಡು ಪ್ರೇಮದಿಂ
ಬದಿಯೊಳೈತಂದೀ ಮಹಾ ವನ ಮಧ್ಯದೊಳ್
ಇದು ನಿರ್ಮಿಸಿದರಾರು ನಾನರಿಯನೆಂದು ತ್ವರದಿಂ ಬಂದದ್ವಾರದೆಡೆಗೆ ||೧೦||

ನಿಲಯದೊಳಗಾರಿರುವಿರೆನ್ನಗಗ್ನಿಯಂ ಕೊಟ್ಟು
ಕಳಿಸಬೇಕೆಂದು ಪೇರ್ಧ್ವನಿಯಿಂದ ಕೂಗಲ್ಗೆ
ಒಳಗಿರುವ ಚಲುವೆ ಚುಮಲಾದೇವಿ ಕೇಳಿ ಗಡಬಂದು ತಗೆದಳು ಕದವನು
ತೊಳಗುವ ಕಳೇಬರವ ನಗೆಮೊಗದ ನುಣ್ಪಿಡಿದ
ತೆಳುಗಲ್ಲವಾ ಪದ್ಮನಂ ನೋಡಿ ತನ್ನ ಮನ
ದೊಳು ಚಿಂತಿಸಿದಳಾರಿವಂ ಮನುಜರಾದರಿಲ್ಲಿಗೆ ಬರ್ಪ ಧೈರ್ಯಮೆತ್ತ ||೧೧||

ಸೋಮನೋ ಲಂಕಾಪುರೀಶನಂ ಕೊಂದ ರಘು
ರಾಮನೋ ನೀಚಕೀಚಕನ ಸತ್ವದಿ ಸೀಳ್ದ
ಭೀಮನೋ ಭುವನದೊಳಗಿರುವ ವಿಟರಾಳಿಯಂ ಸೋರೆಗೊಳ್ಳಲ್ಕೆ ಬಂದನೋ
ಕಾಮನೋ ಜಂಬಾಸುರನ ಶತ್ರುವಾದ ಸು
ತ್ರಾಮನೋ ತಿಳಿಯದಿವನಂ ನೋಡಲೆನ್ನಗೆ ಮ
ಹಾಮನುಜನ ತಾಪವೆಚ್ಚಿತಿವನಂ ವರಿಸದಿರ್ದೋಡೇಂ ಫಲಮೆಂದಳು ||೧೨||

ನಾರಿಮಣಿ ಮರೆಗೆ ನಿಂತೀಕ್ಷಿಸುವಳೊಮ್ಮೆ ಗಂ
ಭೀರದಿಂದಡಿಯಿಡುತ್ತೊಳ ಪೋಗುವಳೊಮ್ಮೆ ಮಿತಿ
ಮೀರಿ ವಿರಹದಿ ಮರಳಿ ಬಂದು ನಿಲ್ಲುವಳೊಮ್ಮೆ ಪೀತಾಂಬರದನೀವೆಯ
ತಾರತಮ್ಯದಿ ತೀಡಿ ಸಡಿಲಿಸುವಳೊಮ್ಮೆ ಮುಂ
ಗಾರೆ ಮಿಂಚಿನ ಬಣ್ಣ ತೆರೆದು ಮುಚ್ಚುವಳೊಮ್ಮೆ
ಸಾರಸೊಬಗಿಂದುರದ ಮೇಲಣ ಸೆರಗ ತೆಗೆದು ಹಾರಿಸುವಳೊಮ್ಮೆ ಮುದದಿ ||೧೩||

ನಿಂದು ನೋಡಿದನವಳ ಮಾಟ ಕಡೆನೋಟ ನವ
ಸುಂದರಿಯ ಮದಕರಿಸುಯಾನ ನಿಡು ಮೀನಗ
ಣ್ಣೆಂದು ಮಂಡಲಸದೃಶವದನ ತೆಳುರದನ ಪೂಸರದಂತೆಸೆವ ನಾಶಿಕವ
ಮಂದನಗೆ ಮೃಗರಾಜ ಕಟಪವಳದುಟಿ ಹೇಮ
ದಂದದಿ ಮಿಸುಪ ತನುಶ್ಚಾಯ ಮೃದುಕಾಯ ಭೂ
ಸುಂದರಿಯರಂ ಪಳಿವರೂಪಮಂ ಕಂಡು ಶಿವಪದ್ಮ ಬಣ್ಣಿಸುತಿರ್ದನು ||೧೪||

ನಾರಿಯೋ ಮದನ ಕಠಾರಿಯೋ ಮೋಹದನು
ಸಾರಿಯೋ ಎನ್ನಮನಸೂರಿಯೋ ಸ್ಮರಯುದ್ಧ
ಧೀರಿಯೋ ವಿಟಮನೋಹಾರಿಯೋ ಪರಮಶೃಂಗಾರಿಯೋ ಭೂಸತಿಯರ
ಮೇರೆಯೋ ನವರಸಸುಪೋರಿಯೋ ಎನಗೆ ಹಿತ

ಗಾರಿಯೋ ಸೊಬಗಿನೊಯ್ಯರಿಯೋ ಕಡುಚಲ್ವ
ನೀರೆಯೋ ರತಿಯಾವತಾರಿಯೋ ರಂಜಿಸುವ ಜಾರಿಯೋ ಶಿವನೆ ಬಲ್ಲಾ ॥೧೫॥

ನಾನರಿಯೆನೆಂದವಳ ನೋಟಮಂ ಬೇಟಮಂ
ಸಾನುರಾಗದೊಳುರೆ ನಿರೀಕ್ಷಿಸಿದಪೇಕ್ಷಿಸಿದ
ಮಾನವಾಧಮರಿಗತಿ ಸುಖವಾಗದಿರದೀಗ ಬಂದಳೆಲ್ಲಿಂದಳೀ ಸಖೀ
ದಾನವರ ಸೆರೆಗೆ ಸಿಲ್ಕಿದ ಸುರಸ್ತ್ರೀಯೋ ಚತು
ರಾನನಂ ಯೋಗಿಗಳ ವ್ರತಭಂಗ ಮಾಳ್ಪುದ
ಕ್ಕೀ ನಾರಿಯಂ ಪುಟ್ಟಿಸಿದನೋ ಶಿವಬಲ್ಲನೆಂದಾಲೋಚಿಸಿದ ಮನದೊಳು ॥೧೬॥

ತಡಮಾಡದೆನಗೆ ಅಗ್ನಿಯನು ಕೊಟ್ಟುಕಳಿಸೆಂದು
ನುಡಿಯಲ್ಕೆ ಜಡಜಮುಖಿ ಕೇಳಿ ಸಂತೋಷದಿಂ
ಅಡಿಮುಂದಕಿಡುತೆಲವೋ ನೀನಾರು ನಿನ್ನ ಪೆಸರೇನೆನಗೆ ಪೇಳೆಂದಳು
ಪೊಡವಿಯೋಳೆನಗೆ ಶಿವಪದ್ಮನೆಂಬಭಿಧಾನ
ಒಡೆಯ ಶ್ರೀಗುರು ಸಿದ್ಧರೇವಣನ ಸುತನಾನು
ಮಡದಿಮಣಿ ತಳಿ ನಿನ್ನ ಪೆಸರಾವುದೆನಗೀಗ ಪುಸಿಯದುಸುರವದೆಂದನು ॥೧೭॥

ಆಗಲಾತನ ಮಾತಿಗೊಪ್ಪಿ ಪೇಳ್ದಳು ಪೂರ್ವ
ಭಾಗದೋಳ್ರಂಜಿಸುವ ಜಾಗ್ರತಾಪುರವ ಸುಖ
ಭೋಗದಿಂ ಪಾಲಿಸುವ ಚಕ್ರಪತಿ ಭೂಪಾಲ ಪಡೆದನೆನ್ನಂ ಮುದದೊಳು
ಬೇಗದಿಂದೆನಗೆ ಚುಮಲಾದೇವಿಯೆಂದು ನಿಜ
ವಾಗಿ ಪೆಸರಿಟ್ಟು ಕೆಲಕಾಲ ಪೋಷಿಸುತಿರಲು
ವಾಗೀಶ ಲಿಖಿತಕನುಸಾರದಿಂದೋರ್ವ ರಕ್ಕಸಿ ಬಂದು ತಂದಳಿತ್ತ ॥೧೮॥

ಇಂದಿಗೆಣಿಸಲ್ಕಾಯ್ತು ಪನ್ನೆರಡು ವರುಷ ತಿಳಿ
ಕಂದರ್ಪರೂಪ ನೀನಿಲ್ಲಿಗೇತಕೆ ಬಂದೆ
ಸಂದೇಹ ತೋರ್ಪುದೆನ್ನಗೆ ಶೀಘ್ರ ಸಾಗು ರಕ್ಕಸಿ ಬರುವ ಹೊತ್ತಾದುದು
ಮಂದಸ್ಮಿತೆಯೇ ಮೋಹದಿಂ ಕೇಳು ದನುಜೆ ತಾಂ
ಬಂದೇನು ಮಾಳ್ಪಳೀ ಭಯಮಿಲ್ಲಮೆನೆಗೆನಲು
ವಿಂದ ಪಾಲಿಪುನೆನ್ನ ಶ್ರೀಗುರು ಸಿದ್ಧರೇವಣನು ತಿಳಿ ನಿನ್ನ ಮನಕೊನೆಯೊಳು ॥೧೯॥

ಗಣತೃಪ್ತಿಗೈಸುವೆನು ಕೊಟ್ಟು ಕಳಿಸಗ್ನಿಯನು
ಕ್ಷಣದೊಳಗೆ ನಾಂ ಪೋಗ್ವೆನೆನಲಾಗಲಾ ತರುಣಿ
ಮಣಿತವಕದಿಂ ಪಾವಕವ ಕೊಟ್ಟು ಮಿಕ್ಕಪ್ರಸಾದಮಂ ತರುವದೆಂದು
ಮಣಿದು ಪೇಳಲ್ಕೆ ಶಿವಪದ್ಮನದಕೊಪ್ಪಿ ಶ್ರೀರೇ
ವಣ ಗುರುವರೇಣ್ಯನ ಪಾದಾಂಭೋಜ ಸ್ಮರಿಸಿ ಸ
ದ್ಗುಣ ಪೂರ್ಣನಾಗಿ ತ್ವರದಿಂದ ಹಟ್ಟಿಗೆ ಬಂದು ಪಾಕವನು ಮಾಡ್ದ ಮುದದೀ ॥೨೦॥

ಕರುಣದಿಂ ತುರು ತನ್ನ ಕರುವಿನೆಡೆಗೈದಂತೆ
ಗುರು ರೇವಣಾಚಾರ್ಯ ಗಣಸಮೂಹದಿಂ ಬಂದು
ವಿರಚಿಸಿದ ಪಾಕಮಂ ಸ್ವೀಕರಿಸಿ ಪದ್ಮಂಗೆ ಪರಶಿ ಸಂಚರಿಸುತಲಿತ್ತ
ಸರಸದಿಂ ಮಿಕ್ಕ ಪ್ರಸಾದಮಂ ತೆಗೆದೊಯ್ದು
ತರುಣಿ ಚುಮಲಾದೇವಿಯಳಿಗೆ ಕೊಡಲವಳು ಘನ
ಹರುಷದಿಂದನ್ನಮಂ ಸೇವಿಸುತ ಪದ್ಮನ ಚರಣಪದ್ಮಕೊಂದಿಸಿದಳು ||೩೦||

ಆ ತರುಣಿಯಂ ಪದ್ಮ ಪಿಡಿದೆತ್ತಿ ಪೇಳ್ದನೆಲೆ
ನಾ ತೆರಳುವೆನು ಸುಖದೋಳೀಗೃಹದೊಳಿರು ನೀನು
ಭೀತಿಗೊಳಗಾಗಬೇಡೆಂದು ಮುಂದಡಿಯಿಲ್ ನಾರಿ ಕರಗಳ ಮುಗಿದು
ಮಾತು ಮನ್ನಿಸು ಮೋಹನಾಂಗ ಮರಿಲಾರೆ ಸು
ಪ್ರೀತಿಯಿಂ ಪಿಡಿಕಯ್ಯ ನಿನ್ನ ನೋಡಲ್ಕೆ ತನು
ಜಾತನಸ್ತ್ರಕೆ ತರಹರಿಸುವೆ ತಿಳಿ ಮನದಿಯನ್ನೊರಿಸೆಂದು ಮೊರೆಯಿಟ್ಟಳು ||೩೧||

ವನಿತೆ ಕೇಳ್ಕುಲಹೀನಳಾದ ರಕ್ಕಸಿಯ ಬಳಿಯೊ
ಳನವರತ ಬಾಳ್ವ ನಿನ್ನಂ ವರಿಸಲೆಂತು ಬಿಡು
ಮನದಾಸೆ ಕಳಿ ತೀವ್ರ ಕೊಡುಯನಗನುಜ್ಞೆಯಂದೊರೆದನಾ ಶಿವಪದ್ಮನು
ಮನಸೋತ ಮಾನುನಿಯ ಬಿಟ್ಟು ಬಳಲಿಸುವದಿದು
ಘನತರವೆ ನೀಡೆನ್ನಗಭಯ ಬಹುಬೇಗದಿಂ
ಮುನಿಸ್ಯಾಕೆ ಸಾಕು ಸೈರಿಸು ಶಾಂತನಾಗು ಕುಂದಿಟ್ಟು ಪೋಗುವದುಚಿತವೇ ||೩೩||

ಹರಿಕರಡಿ ತನುಜೆಯಂ ಭೀಮನು ಹಿಡಂಬಿಯಂ
ವರವಶಿಷ್ಟ ಅರುಂಧತಿಯಳೆಂಬ ನಾರಿಯಂ
ನರನು ಶೇಷನ ಸುತೆಯರಂ ಪರಾಶರ ಮತ್ಸ್ಯಗಂಧಿಯಂ ಸಂಮುದದೊಳು
ಪರಿಣಯವ ಮಾಡಿ ಕೊಂಡತಿ ಸುಖವಬ
ಟ್ಟರಿದನರಿಯದೆ ಮರುಳನಂತೆ ಮಾತನಾಡುವಿ
ಬರಿದೆ ತರವಲ್ಲ ಬಿಡುಪಂಥ ಮತ್ತೆ ಪೇಳುವನೇಕ ಚಿತ್ತದಿಂ ಕೇಳೆಂದಳು ||೩೪||

ಕೆಸರಿನೊಳು ಕಮಲ ಜಲದೊಳು ಮೌಕ್ತಿಕಂ ಮೃಗದಿ
ಪೊಸಕಸ್ತೂರಿಯು ಕೀಟದೊಳು ಪಟ್ಟು ಸೂತ್ರ ಶೋ
ಭಿಸದ ಮೃತ್ತಿಕೆಯಲಿ ಸುವರ್ಣಗೋಕ್ಷೀರಗೋರೋಜನಗಳೆಂಬಿವುಗಳು
ಹಸನಾಗಿರದ ಹೀನಸ್ಥಲದೊಳುದ್ಭವಿಸಿ ಘನ
ಮಿಸುವ ವಸ್ತುಗಳೆನಿಸಿಕೊಂಡವದರಂತೆ ನಾ
ನಸುರಕುಲದವಳಾದಡೇನೆನ್ನ ಸುಗುಣಮಂ ಗ್ರಹಣ ಮಾಳ್ಪುದು ಮೋಹದಿ ||೩೫||

ಪ್ರಾಣಪ್ರಿಯನೆ ಪ್ರೇಮದೊರೆದು ನಾಂ ಪುಟ್ಟಿರ್ದ
ತಾಣಮಂ ನೀನರಿದರಿಯದಂತೆ ಪೇಳಿದಡೆ

ಜಾಣರೊಪ್ಪುವರೆ ಜಲಜಾಯುತಾಕ್ಷನೆ ಜಾತಿದೋಷಮಂ ಎಣಿಸದಿರೀಗ
ಮಾಣದೆನ್ನಂ ಕೂಡಿ ಸರಸ ಮಾತಾಡಿ ಪೂ
ಬಾಣನ ಸಮರದೊಳತಿ ಸೌಖ್ಯಮಂ ತೋರ್ಪುದೀ
ಕ್ಷೋಣಿಯೊಳ್ನಿನ್ನಸಮಗಾಣೆ ಚನ್ನಿಗ ಚದುರ ಬಾರೆಂದು ಕರಪಿಡಿದಳು ||೩೬||

ಅಂಚತಲ್ಪಕಯುಕ್ತಮಾಗಿ ರಾರಾಜಿಸುವ
ಮಂಚದೋಳ್ಕೂಡ್ರಿಸುತ್ತ ಕಡುಮೋಹದಿಂದವರ
ಪಂಚಾಮೃತವನುಣಬಡಿಸಲನಿತರೊಳು ದಿವಾಕರನಸ್ತಗಿರಿಗಿಳಿದನು
ಚಂಚಲಾಕ್ಷಿಯು ತನ್ನ ಚತುರತೆಯ ತೋರಿಸುತ
ಪಂಚಶರನಾಹವದಿ ಪದ್ಮನಂ ಗೆಲ್ದು ಪ್ರಾ
ಪಂಚಕನುಸರಿಸಿ ಕಾಂತನಂ ಮಾಡಿಕೊಂಬೆನೆಂದಮಿತ ಸುಖಪರಳಾದಳು ||೩೭||

ಅಗರು ಚಂದನ ಗಂಧ ಪುನುಗು ಕಸ್ತೂರಿ ಜಾಜಿ
ಅಗಣಿತ ಸುಪೂಗಳಂ ತಂದು ಮಂದೊಳಿರಿಸಿ
ಲಗುಬಿಗಿಯೊಳಮಳ ಜೋತಿಗಳ ಸಾಲ್ಗೊಳಿಸಿ ನಿಜಕಾಂತ ಪದ್ಮನನ್ನು
ಬಗೆಬಗೆಯೊಳಾರೈಸಿ ಸದ್ಗಂಧ ದ್ರವ್ಯಮಂ
ಮಿಗೆ ಕೂತೂಹಲದಿಂ ಕಾಯಕನು ಲೇಪಿಸುತ
ಬಗೆದು ರತಿ ಕೇಳಿಯೋಳ್ಕರಿಕರಿಣಿಗಳ ತೆರದಿ ಸ್ಮರಕಲಹಕೀಡಾದರು ||೩೮||

ಇತ್ತ ರಕ್ಕಸಿ ಮಧ್ಯರಾತ್ರಿಗೆ ಶವಂಗಳಂ
ಪೊತ್ತು ಬಲ್ದಿಡಿಗಿಲಿ ಬರುತ್ತ ನರವಾಸನೆಯು
ಹತ್ತಿ ಕಡುಕೋಪದಿಂದಾರ್ಭಟಿಸಿ ಪುಟನೆಗೆದು ಮನದೊಳಾಲೋಚಿಸುತಲೀ
ಚಿತ್ತಜಾಂತಕ ಹರಿವಿರಂಚಾದಿ ಗೀರ್ವಾಣ
ರೊತ್ತಿ ಬಹರೆನ್ನಯಪುರಕ್ಕೆ ಮನುಷ್ಯರಿಂ
ನೆತ್ತಣ ಪರಾಕ್ರಮಿಗಳೆಂದು ಪಲ್ಗರಿದು ಭೀಕರದಿ ಚೀರುತ ಬಂದಳು ||೩೯||

ಪರಮ ಕಾಂಚಾಲ ಮರದಡಿಯೊಳಾ ಶವಗಳಂ
ನಿರಿಸೆಡಬಲದೊಳೀಕ್ಷಿಸಲ್ಕುವರಿಯಂ ಕಾಣ
ದಿರದೇಕ ಕಾಲದಿಂದಾಲಯಕ್ಕಾಗಮಿಸಿ ಬಂಧಿಸಿದ ದ್ವಾರವ ನೋಡಿ
ತರಹರಿಸಿ ಕುಬಭೋಯಂದಾರ್ಭಟಿಸಿ ಬೊಬ್ಬಿಡಲ್
ತರುಣಿ ಚುಮಲಾದೇವಿ ತವಕದಿಂದೆದ್ದು ನಿಜ
ಪುರುಷನಂ ಎಚ್ಚರಿಸಿ ಪೇಳ್ದಳೆನ್ನಯ ಮಾತೆ ಭರದಿಂದ ಬಂದಳೀಗ ||೪೦||

ತಿನ್ನದೆ ಬಿಡಳು ಪ್ರಾಣಕಾಂತ ಪದ್ಮೇಶ ಕೇ
ಳೆನ್ನಿಂದ ನಿನಗೆ ದುರ್ಮರಣವಾಗುವದು ನಿಜ
ನಿನ್ನ ಮಾತಾಪಿತರ ಪುಣ್ಯನಿಗೀತೆ ಹೇಗೆ ಮರೆಯಲೆಂದುರನೊಂದಳು
ಅನ್ನೆಗಂ ಶಿವಪದ್ಮ ಲಲನೆಯಾಡಿದ ನುಡಿಗ

ಳನ್ನು ಕೇಳುತ ಮಹಾಕೋಪಮಂ ತಾಳಿ ಗುರು
ರನ್ನ ರೇವಣಸಿದ್ಧ ಕಾಯ್ವನನುದಿನದೊಳೆನ್ನಂ ವೃಥಾ ವೆಸನವೇಕೆ ||೪೦||

ಭಂಡಧನುಜೆಯಳ ಅರನಿಮಿಷದೊಳ್ತರಿದವಳ
ಖಂಡಮಂ ತೆಗೆತೆಗೆದು ಭೂತಗಣಕಾಹುತಿಯ
ತಂಡತಂಡದಿ ಕೊಟ್ಟು ನಿನ್ನಂನೆನ್ನಯ ಪುರಿಗೆ ಕೊಂಡು ಪೋಗುವೆ ಭರದಲಿ
ಖಂಡಶಶಿಧರನ ಕೃಪೆಯನ್ನೊಳಿರಲೀಗಲೇ
ಭಂಡರಕ್ಕಸಿಗೆ ನಾನಳ್ಕಿ ಧೃತಿಗುಂದುವನೆ
ಪುಂಡನೋಳಪಜಯದ ನುಡಿಗಳುಸುರುವರೆ ಛೀ ಬಿಡುಬಿಡೆಂದನುವಾದನು ||೪೧||

ಸತಿ ಕೇಳಿ ಸಂತೋಷಯುಕ್ತದಿಂದಾ ಪ್ರಾಣ
ಪತಿಗೊರೆದಳಾಗ ದನುಜೆಯ ಕೊಲ್ವದುಚಿತ ಮೆಲ್ಲ
ಲತಿ ಶಾಂತನಾಗು ಯುಕ್ತಿಯಲಿ ಪೋಗ್ವಯತ್ನಮಂ ರಚಿಸೆಂದು ಬೋಧಿಸಿದಳು
ಯತಿ ಕುಲೋತ್ತಮ ಸಿದ್ಧಗುರುವರನ ಸ್ಮರಿಸಿ ಸ
ಮ್ಮತಿ ಪೇಳ್ದತದ್ಯುವತಿಮಣಿಗೆ ಸನ್ಮೋಹದಿಂ
ದತಿಶೈಸಿದನು ಯುಕ್ತಿಯಿಂದೆ ಶಿಕ್ಷಿಸುವೆನೆನುತಲಿ ತರುಣಿ ಸಂತೋಷಿಸಿದಳು ||೪೩||

ಎಲೆ ರಮಣಿ ಕೇಳೀ ಭಸಿತ ನಿನ್ನ ಕರದಿ ಪಿಡಿದು
ಮಲಹರನ ಮಹಿಮೆಯಿನ್ನಾಂಗೌಳಿಯಾಗಿವರ
ನಿಲಯದೋಳ್ಗೌಪ್ಯದಿಂದಿರುವೆ ತಿಳಿ ನಿನಗೆ ಬೇಕಾದರಾಭೂತಿಯನ್ನು
ವಿಲಸಿತ ಮನದಿ ತಳಿಯಲಾಕ್ಷಣದಿ ಮೊದಲಿನ ವಿ
ಮಲರೂಪನಾಗ್ವೆನೀಂ ನಿನ್ನ ಮಾತೆಯ ಮರಣ
ಕಲೆಗಳಂ ತಿಳಿದೆನಗೆ ಪೇಳೆಂದು ಕಲಧೌತ ಗೌಳಿಯಾದಂ ಪದ್ಮನು ||೪೪||

ಹರಿಣಾಕ್ಷಿ ಹರುಷದಿಂ ಬಾಗಿಲ್ಗೆ ಬಂದುಭಯ
ಕರ ಮುಗಿದು ನಿಂತಿರಲ್ಕಾಗಲಾದಾನವಿಯು
ಪರಿತಾಪಗೊಂಡಿದೇಂ ಮನುಜವಾಸನೆ ಮನೆಯ ತುಂಬಿಕೊಂಡಿಹುದೆ ಬಿಡದೆ
ಸುರಪಾದಿ ದಿಕ್ಪತಿಗಳೆನ್ನಯ ಪುರಿಗೆ ಬರಲ್ಕರಿ
ಯರಿದುಯನಗೆ ಪರಮಾಶ್ಚರ್ಯಮಾಗಿಹುದು
ನರನಿಲ್ಲಿಗೈತಂದನೆಂತು ತಿಳಿಸೆಂದು ವಿಧವಿಧದಿಂದ ಬಾಯ್ಬಿಟ್ಟಳು ||೪೫||

ಮಾತೇ ನೀ ಮಧ್ಯಮಾಂಸಂಗಳಂ ತಿಂದು ವಿಪ
ರೀತ ನುಡಿಗಳನುಸುರಿ ಕೊರಗಿಸದಿರೆನ್ನನುರೆ
ಪ್ರೀತಿಯಿಂದಿಂದಿನತನಕ ಪುತ್ರಿಯಂತೆ ಪರಿಪಾಲಿಸೀಗನ್ಯಾಯದ
ಮಾತೇಕೆ ಬಿಡು ಬರಿದೆ ನಿನಗೆ ಬೇಸರವಾದ
ರೀ ತನುವ ನಿನಗೊಪ್ಪಿಸುವೆ ಮನಕೆ ಬಂದಂತೆ
ಘಾತಿಸೆನ್ನಂ ತಿಂದು ಸಂತೃಪ್ತಳಾಗು ಪುರುಡಿಸುವದಿದುಚಿತಮಲ್ಲವು ||೪೬||

ಎಂದು ನಯಭಯ ಭಕ್ತಿಯಿಂದ ವನಜಾಂಬಕೆಯು
ದಂದುಗದಿ ನುಡಿಯಲಾದನುಜೆ ಯೋಚಿಸಿದಳಿವ
ಳಂದ ಮಾತನ್ನ ನಾನರಿಯಲೆಂತೆಂದು ಯುಕ್ತಿಯಿಂ ಕೇಳಿದಳದೆಂತೆಂದೊಡೆ
ಕೆಂದುಟಿಗೆ ದಂತ ಘಾಯಂಗಳೇತಕೆ ಮುಖವು
ಕಂದಿ ನಯನದ್ವಂದ ಕೆಂಪಾದವೇಕೆ ಬ
ಲ್ಪಿಂದುಟ್ಟ ಪಿತಾಂಬರದ ನೀವೆ ಜಾರಿರುವವೇಕೆ ಪೇಳೆಂದಳಸುರೆ ॥೪೭॥

ಜನನಿ ಕೇಳ್ಳೀನಿಲ್ಲದಿರು ನಾನೋರ್ವಳೆ
ಮನೆಯೊಳೊರಗುವದಕತಿ ಭಯಮಾಗಿ ಎದ್ದು ಕೂ
ತೆನದಕ್ಕೆ ಸುಂದರ ಸುಮುಖ ಕಂದಿಕಣ್ಣಾಲೆ ಅರುಣ ಬಣ್ಣದೊಳಿರ್ಪವು
ಸ್ತನಕೆ ತಾಕಿರೇಖೆಯಾಗಿವೆ ಪವಳದುಟಿಯಾಲ
ಕೊನೆ ತಾಕಿರೇಖೆಯಾಗಿವೆ ಪವಳದುಟಿಯಾಲ
ತನಿವಣ್ಣಿದೆಂದರಿದು ಗಿಳಿಕದಂಕಿದೊಡೆ ಘಾಯಗಳಾಗಿ ತೋರುತಿಹವು ॥೪೮॥

ಸಿರಿಬಾಲೆನೆನ್ನ ಜವ್ವನವ ನೋಡುತ ತನ್ನ
ಸೆರಗಳೆಸೆಯಲು ವಿರಹ ಪುಟ್ಟೆ ನಿದ್ರೆಯ ಭರದೊ
ಳಿರಲು ಹೊರಳಾಡಿಲಂಬರನೀವಿಜಾರಿರುವವಿದಕಾಗಿ ಕೃತಿಮದಲಿ
ಪರೀಕ್ಷಿಸುವದಿದು ವಳಿತವಲ್ಲ ನಿನ್ನಗೆ ಕ್ಷುಧೆಯ
ಪರಿತಾಪ ಆದರೆನ್ನಂ ತಿಂದುಬಿಡು ಬರಿದೆ
ಜರಿದು ವಿಧವಿಧೊಳಪಕೀರ್ತಿ ಗಳಿಸಲಿ ಬೇಡವೆಂದಾ ಮಾತಿಗೆ ಪೇಳ್ದಳು ॥೪೯॥

ದಾನವಿಯು ದಯಾಹೃದಯಳಾಗಿ ವನಜಾಕ್ಷಿಯ ನಿ
ಧಾನದಿಂಬೋಳೈಸಿ ಸುತೆಯೊಳೊರೆದಳು ನಿನ್ನ
ನೂನ್ಯತೆಗಳಂ ನೋಡಲಿಚ್ಛೈಸಿ ನಿನಗೊಳಿತು ಕೇಳಿದೆನು ಪರಿಪರಿಯೊಳು
ನೀನಧೈರ್ಯವಗೊಳ್ಳದೀಧಾಮದೊಳಗೆ ಸು
ಮ್ಮಾನದಿಂದಿರು ಬಳಲುಬೇಡ ನಿನ್ನಗೆ ವೃಥಾ
ಹಾನಿಗೈಸುವನೇ ಬಿಡುಭಯವೆಂದಭಯ ನೀಡಿ ಬೋಧಿಸಿದಳತಿ ಮೋದದೀ ॥೫೦॥

ಜನನಿಯಾಡಿದ ನುಡಿಗಳಂ ಗ್ರಹಿಸುತಂಗನೆಯು
ಘನಮೋದದಿಂದ ಮಾರುತ್ತರಂಗೊಟ್ಟಳೆನ್ನನು
ಬಿಟ್ಟು ನಿತ್ಯದಲಿ ದೂರ ಪೋಗುವಿನಿನ್ನನಲ್ಲಿ ವೈರಿಗಳು ಕೂಡಿ
ತನುವ ಕತ್ತರಿಸಿದೊಡೆ ನಾನೀವನದೊಳೆಂತು
ದಿನಗಳಿವೆ ನಿನ್ನ ಮರಣದ ಕಲೆಯ ಶೀಘ್ರದಿಂ
ದೆನಗೆ ತಿಳಿಸೆಂದು ಕರಮುಗಿದು ಶಿರಸಾವಹಿಸಿ ಕೇಳಿದಳು ಗೌಪ್ಯದಿಂದ ॥೫೧॥

ಪುತ್ರೆಯ ಚಮತ್ಕಾರ ಗೋಷ್ಠಿಯಂ ಕೇಳುತ ವಿ
ಚಿತ್ರ ಮಾನಸಳಾಗಿ ನುಡಿದಳೆಲೆಯನ್ನನು ಧರಿ

ತ್ರಿಯೊಳ್ಮರಣಗೊಳಿಸುವ ವೀರರುಂಟೇ ಬಿಡುವೆಸನ ನಿನಗೇಕೆ ಸಾಕು
ಕೃತ್ರಿಮವ ತೊರೆದೀಗ ನಿನಗೆ ಪೇಳುವೆ ನಿಮಿಷ
ಮಾತ್ರ ದೃಢಚಿತ್ತದಿಂ ಕೇಳೆಂದು ದನುಜೆ ನಿಜ
ಪುತ್ರಿಯಂದದಿ ತನ್ನ ಮರಣವಂ ಪೇಳುವದಕನುವಾದಳತಿ ಭರದೊಳು ||೫೧||

ಮನೆಯ ಮುಂದಿನ ಮರದೊಳಿರುವ ಕಾಕನತರಿಯೆ
ಲೆನಗೊದಗುವದು ಮರಣ ತತ್ತರುಧರಾತಳಕೆ
ಘನತವಕದಿಂದೆ ಕಂಪಿಸಿ ಬೀಳ್ವದೆನಲದಂ ಕೇಳಿ ಚುಮಲಾದೇವಿಯು
ಮನದಾಸೆ ಕೈಗೂಡಿತೆಂದು ಹಿಗ್ಗುತ ಮರಳಿ
ಜನನಿಗೊರೆದಳು ಹೆಣಗಳಂ ತರುವ ಹೊತ್ತಾಯ್ತು
ಮಿನುಗುತಿಹ ಸುತ್ತಲಿನ ಪುರಮಂ ಪ್ರವೇಶಿಸೆಂದನುವಾಗಿ ಬೋಧಿಸಿದಳು ||೫೨||

ಕ್ರೂರರೂಪದಿ ದನುಜೆಗಮಿಸಲ್ಕೆ ಚುಮಲೆ ಗಂ
ಭೀರ ಭಾವದಿ ಕಾಂತನಿತ್ತ ಭಸಿತವಕೊಂಡು
ರಾರಾಜಿಸುವ ಗೌಳಿ ಮೇಲೆ ಧರಿಸಲ್ದಿವ್ಯ ರೂಪದಿಂದೆಸೆದ ಪದ್ಮ
ವಾರಿಜಾಂಬಕಿ ಪ್ರಿಯನ ಚಾರು ವೈಭವ ಕಂಡ
ಪಾರ ಹರುಷಿತಳಾಗಿ ಸಾರಿದಳು ನಿನ್ನ ಸಮ
ರಾರುಂಟು ಭುವನದಲಿ ಧೀರ ಮಹಿಮಾಕಾರ ಬಾರೆನ್ನ ಸುಖಸಾಗರ ||೫೪||

ನಿನ್ನಾಜ್ಞೆಕನುಸಾರಳಾಗಿ ದನುಜೆಯ ಮರಣ
ವನ್ನರಿತುಕೊಂಡೆ ಬಿಡುಬಿಡು ಮನದ ವ್ಯಾಕುಲಂ
ಮುನ್ನೊರೆವೆ ಮರುಕದಿಂ ಕೇಳ್ಮನೋಂಬುಜ ಹಂಸಸತ್ಕೀರ್ತಿ ಸುಗುಣ ಸರಸ
ಸನ್ನುತಾಂಗನೆ ಮನೆಯ ಮುಂದಿರ್ಪ ಗಿಡದಿ ಸ್ಥಲ
ವನ್ನು ವಿರಚಿಸಿಕೊಂಡು ಬದುಕುತ್ತಲಿಹ ಕಾಕ
ನನ್ನು ಕೊಲ್ಲಿದರೆ ಮರ ಮುರಿದು ಬೀಳುವದು ದೈತ್ಯಗೆ ಮರಣವುಂಟಾಗ್ವದು ||೫೫||

ಎಂದು ವನಜಾಕ್ಷಿ ಪೇಳಲ್ಕೆ ಶಿವಪದ್ಮ ಮುದ
ದಿಂದುಸುರಿದನು ಕಾಕನನ್ನು ಪಿಡಿಯುವ ಯುಕ್ತಿ
ಚಂದದಿಂ ಮಾಳ್ಪೆನೆಂದವಸರದಿ ಮಧುರಾನ್ನಮಂಗೈಸಿಕೊಂಡು ಮರದ
ಮುಂದದಂ ಚಲ್ಲಿ ಕೊಟ್ಟಲ್ಲಿ ಪವಡಿಸಿದ ಮೃತಿ
ಹೊಂದಿದವನಂತೆ ಶ್ವಾಸೋಛ್ವಾಸವನ್ನು ತ್ವರ
ಬಂದು ಮಾಡುತ್ತ ಕರಕಾಲ್ಗಳಲ್ಲಾಡಿಸದೆ ಗುಪ್ತದಿಂದಿರುತಿರ್ದನು ||೫೬||

ಕಾಕನಾ ಪದ್ಮನಂ ಕಂಡಿದು ವೇಶವಮೆಂದು
ಏಕಕಾಲಕ್ಕೆ ಬಂದನ್ನಮಂ ಸ್ವೀಕರಿಸ
ಬೇಕೆಂಬ ಭ್ರಾಂತಿಯಿಂ ಹಾರುತಾ ಶವದ ಮೇಲ್ಕೂತುಕೊಂಡಿತು ಪ್ರೇಮದಿ
ಮೂಕತ್ವದಿಂದೆ ತಟ್ಟನೆ ಕರದಿ ಪಿಡಿಯಲದು

ಕಾಕಾಯನುತ್ತೊದರಿ ಕಸಿವಿಸಿಗೊಳುತ್ತಿರ
ಲ್ಕಾ ಕಪಟ ಹೃದಯಳಾದಸುರೆಯಳಿಗತಿ ಕಷ್ಟಮಾಗಿ ಗೃಹಪಥವಿಡಿದಳು ||೫೭||

ತ್ವರ ಮನೋವೇಗದಿಂದ್ಕೈ ತಂದು ಕಾಂಚಾಲ
ಮರ ಸಮೀಪದಿ ನಿಂದು ಪದ್ಮನ ಕರದಿ ಕಾಕ
ನಿರುವುದಂ ನೋಡಿ ಭೀಕರಿಸಿ ಬಾಯ್ದೆರೆದು ಮೇಲ್ವಾಯ್ದು ಬರುತಿರೆ ಸರಿಸಕೆ
ಹರನೊರಸುತಂ ತನ್ನ ಗುರು ಸಿದ್ಧರೇವಣನ
ಸ್ಮರಿಸುತ್ತ ಕಾಗಿಯಂ ಕೊಲ್ಲಲ್ಕೆ ರಕ್ಕಸಿಯು
ಮರಣಹೊಂದಿದಳಾಗಲಾ ಮರಂ ಮುರಿದು ಭೂಮಂಡಲಕ್ಕುರುಳಿ ಬಿತ್ತು ||೫೮||

ಯತಿವರನ ಶಾಪವಿಂದಿಗೆ ಮುಗಿದು ಪದ್ಮನಿಂ
ದತಿಶಯದ ಮುಕ್ತಿಯಂ ಪಡೆದು ಕೈಲಾಸಪುರಿ
ಗತಿ ತ್ವರದಿ ತೆರಳಿದರು ತ್ರಿಜನಗಂಧರ್ವರಿತ್ತಾಗ ಶಿವಪದ್ಮ ತನ್ನ
ಸತಿ ಚುಮಲೆಯಂ ಕರೆದು ಬೆಟ್ಟದಂತೆ ವನಿಯೊ
ಳ್ಕೃತಿ ಹೊಂದಿ ಬಿದ್ದಿರುವ ರಕ್ಕಸಿಯಳನು ತೋರಿ
ಸುತ ಘನಾದರದಿ ಮುಗುಳೆಂದನೆಲೆ ಕಾಂತೆ ನಿನ್ನಯ ಸೆರೆಯು ದೂರಾಯಿತು ||೫೯||

ಭರದಿಂದ ಎನ್ನೊಡನೆ ನಡಿಯಂದು ಪ್ರಿಯನ
ಕರೆ ವಚನ ಕೇಳಿ ಹರುಷಾಧಿಕ್ಯಳಾಗುತ
ಚ್ಚರಿಗೊಂಡು ನೋಡುತಿರಲಾಗ ಶಿವಪದ್ಮ ದೈತ್ಯೆಯ ಶಿರವನುರೆ ಭೇದಿಸಿ
ಮೆರೆವ ಮಾಯ್ಮೂರ್ತಿಯನು ಮಾಡಿದಂ ಮತ್ತೆ ಕೈ
ಬೆರಳ್ಗಳಂ ಕಿತ್ತಿ ಹೆಗ್ಗಾಳಿ ಕರ್ನಿಯ ಕಾಳಿ
ಬುರುಗು ಸಲೆ ರಾಜಿಪನ ಪೂರಿಯಂ ಮಾಡ್ದ ಡೊಕ್ಕೆಯ ಸೀಳಿ ಡೊಳ್ಳು ಮಾಡ್ದ ||೬೦||

ಕರುಳು ಕಿರಿಗೆಜ್ಜೆ ಸ್ತನಜಗಜಂಪು ಮತ್ತುಭಯ
ಚರಣವಂದಿಗೆಯು ನರನಡುವಿನೊಡ್ಯಾಣ ಮೇಣ್
ಕರತಾಳ ಬೆನ್ನು ಹಪ್ತಾಗಿರಿಯು ನಾಲಿಗೆ ಕಡಾವಿಗೆ ನಿತಂಬ ಪಟಹ
ಮಿರುಗುತಿಹ ದಂತ ಜಗಜಂಪಿಗೊಪ್ಪುವಸುಪಿಂ
ಜರ ಮುಖ್ಯ ಬಾವನ್ನ ಬಿರುದುಗಳ ಮಾಡಿ ಸರ
ಸಿರುಹ ಮುಖಿಯಂ ಕೂಡಿ ಕುರಿಗಳ ನಿವಾಸಕ್ಕೆ ತವಕದಿಂದೈತಂದನು ||೬೧||

ಈ ಸುಚಾರಿತ್ರಮಂ ಬರದೋದಿದರ್ಗೆ ಮೇಣ್
ಲೇಸಾಗಿ ಯಿದರರ್ಥವಾಧ್ಯಾಂತ ಪೇಳ್ದರ್ಗೆ
ಬೇಸರಿಯದುರೆ ಭಕ್ತಿಯಿಂದ ಕೇಳಿದವರ್ಗೆ ಪದುಳದಿಂ ಪಠಿಸಿದರ್ಗೆ
ಭಾಸಿತ ಸಕಲ ಭೋಗಭಾಗ್ಯಮೋಕ್ಷಂಗಳ ವಿ
ಲಾಸದಿಂದಿತ್ತುದುರಿತೌಘಮಂ ಸಂಹರಿಸಿ
ವಾಸ ರಸ್ತಾಪುರ ಶ್ರೀ ಶರಭಲಿಂಗೇಂದ್ರ ರಕ್ಷಿಸುವನಿಹಪರದೊಳು ||೬೨||

ಇಂತೆಬಲ್ಲಿಗೆ ಶರಭೇಶ್ವರ ಪಾದಾಬ್ಜಭೃಂಗನು
ವಿಶಿಷ್ಠವಿದ್ವಜ್ಜನ ವಿಧೇಯನು ಆದ ಭೀಮನಾಯಕ
ಕವಿಯಿಂ ಪ್ರಣೀತಮಪ್ಪ ಹಾಲ್ಮತೋತ್ತೇಜಕ ಪುರಾಣದಲ್ಲಿ
ಅಂತು ಸಂದಿ ೬ಕ್ಕಂ ಪದನು ೨೮೦ಂಕ್ಕೆ ಮಂಗಲಂ ಮಹಾಶ್ರೀಶ್ರೀಶೀ

## ಸಂಧಿ ೭-ಬೀರೇಶ್ವರನ ಜನನ

ಸೂಚನೆ ||

ಧರೆಯೊಳಗೆ ಶಿವಪದ್ಮನಖಿಳ ಮಹಿಮೆಯ ತೋರಿ
ಹರನಾಜ್ಞೆಯಿಂದ ಕೈಲಾಸಕ್ಕೆ ಪೋಗಿ ತಾಂ
ಮರಳಿ ಶಿವಸಿದ್ಧ ಬೀರೇಶನೆಂಬಭಿದಾನವೆತ್ತು ಪುಟ್ಟುವನಿಳೆಯೊಳು

ಕರಿವದನ ತಾತ ಪರಿಪೂತ ಸುಖಧಾತ ಶಿವ
ಕರಿಚರ್ಮಧಾರ ಭವದೂರ ವೃಷಭೇಶ
ಶಾಂಕರಿಯ ಪ್ರಿಯರಕ್ಷ ಪಾಲಾಕ್ಷ ಖಳಶೀಕ್ಷ ಘನಧಕ್ಷ ಪ್ರತ್ಯಕ್ಷಮಹಿಮ
ಶರಣ ಪರಿಪೋಷ ಹರಿಭೋಷ ಸಂತೋಷಕರ
ಶರಧಿಭುವನಪ್ರಭು ಮುನಿಪ್ರಣೀತ ಅಪ್ರಮಿತ
ಶರಪಂಚನಾಶ ಜಗದೀಶ ಪರಮೇಶ ಭೂತೇಶನೆನ್ನಂ ಪೊರೆಯಲಿ ||೧||

ಹರಪದ್ಮ ಬಾವನ್ನ ಬಿರಿದುಗಳಗೈದು ಬಂ
ದುರದಿಂದ ಬಂಕಾಪುರದೊಳಿಟ್ಟು ಬಂದಿತ್ತ
ಕುರಿಗಳನು ಪೊರೆಯುತ್ತ ಹಾಗ್ಗಾಡಿನೊಳ್ಸುಖಿಸುತಿರಲತ್ತ ಕೈಲಾಸದಿ
ಹರಿಯಜ ಸುರೇಂದ್ರ ಪ್ರಮುಖ ಸುರ್ವಾಣಗಣ
ಗರುಡಗಂಧರ್ವ ಭೃಗುಬಕದಾಲ್ಭ ಮುನಿನಿಕರ
ವೆರಸಿ ಪರಶಿವರತ್ನ ಖಚಿತ ಸಿಂಹಾಸನದಿ ವಾಸಿಸಿರಲಾ ಸಮಯದೀ ||೨||

ನಾರದ ಮುನೀಶ್ವರಂ ಬಂದು ಶಂಕರನ ಪಾದ
ವಾರಿಜಕ್ಕೆರಗಿ ಶಿವಪದ್ಮ ಬಂಕಾಪುರದ
ಕ್ರೂರದಾನವಿಯ ಶಿರತರಿದವಯಂಗಳಂ ಬಾವನ್ನ ಬಿರುದು ಮಾಡಿ
ಆರರಿಯದಂತೆ ತತ್ಪುರದೊಳವುಗಳನಿಟ್ಟು
ನಾರಿ ಚುಮಲಾದೇವಿಯಳ ಸೆರೆಯ ಬಿಡಿಸಿ ಗಂ
ಭೀರದಿಂ ಸ್ವಸ್ಥಲಕೆ ಕರತಂದ ಸಂಗತಿಯ ಪೇಳಿದಂ ಪ್ರೇಮದಿಂದ ||೩||

ಕೇಳಿ ಪುತ್ರನ ಮಹಿಮ ಪಂಚಾನನು ಹರುಷ
ತಾಳಿ ಬಂಕಾಪುರದೊಳಿರುವ ಬಾವನ್ನ ಬಿರುದಾವಳಿಗಳ ರಕ್ಷಣೆಗೆ
ಕಳಿಸಲಿನ್ನಾರನೆಂದಾಲೋಚಿಸುತ ಮನದೊಳು

ಪೇಳಿದನು ಬಾಗಿ ಬಂಕಣ್ಣನಂ ಕರಿಸುತ್ತ
ಹಾಳು ಬಂಕಾಪುರಕೆ ಪೋಗಿ ಪದ್ಮನ ಬಿರಿದ
ಮೇಳದಿಂದಿಟ್ಟು ಪಾಲಿಸು ಮುಂದೆ ಶಿವಸಿದ್ಧ ಬೀರನುದ್ಭವಿಸುತಿಹನು ||೪||

ಆ ಮಹಾ ಬಿರಿದುಗಳ ಸಿದ್ಧಬೀರಂ ಪೊರೆವ
ನಾ ಮೇಲೆ ನೀನಿತ್ತ ಬರ್ಪುದೆಂದಪ್ಪಣೆಯ
ನಾ ಮಾರಾರಿಪು ಕೊಟ್ಟು ಬಾಗಿ ಬಂಕಣ್ಣಂ ಬಂಕಾಪುರಕೆ ಕಳಿಸಿದಂ
ಪ್ರೇಮದಿಂ ಶಿವನಾಜ್ಞೆಕೊಪ್ಪಿ ಬಿರುದುಗಳಿರುವ
ಧಾಮಕ್ಕೆ ಬಂದು ಪರಿಪೋಷಿಸುತ್ತಿರಲಿತ್ತ
ಭಾಮಾಮಣಿಯಳಾದ ಚುಮಲೆಯಂ ಕೂಡಿ ಶಿವಪದ್ಮ ವನದೊಳಗಿರ್ದನು ||೫||

ಧರಣಿಯಲ್ಲವ ಸುತ್ತಿ ಸಿದ್ಧಕುಲ ಚಕ್ರೇಶ
ನಿರದೆ ತರುಳನ ನೋಡಲಿಚ್ಛೈಸಿ ಗಣವೃಂದ
ವೆರಸಿ ಶಿವಪದ್ಮನಿಹ ಸ್ಥಾನಮಂ ಶೋಧಿಸುತ ನಭೋಮಾರ್ಗದಿಂದಿಳಿದನು
ಗುರುವಿನಾಗಮನವಂ ನೋಡುತಾ ಬಾಲಕಂ
ತ್ವರಿತದಿಂದೆದ್ದು ಪಾದಸರಸಿಜಕ್ಕಭಿನಮಿಸಿ
ಸ್ಮರಿಸಲ್ಕೆ ಸಿದ್ಧೇಂದ್ರ ಪಡಿದೆತ್ತಿ ಪೇಳ್ದನೆಲೊ ಬೆಲೆಯಲ್ಲ ನಿನ್ನಧಟಕೆ ||೬||

ಬಂಕಾಪುರದೊಳಿರ್ಪ ರಕ್ಕಸಿಯ ಕೊಂದು ಬಿರಿ
ದಂಕನೆನಿಸಿದಿ ಮತ್ತೆ ಸೆರೆಯೊಳಗೆ ಸಿಕ್ಕಿರ್ದ
ಪಂಕಜಾಂಬಕಿ ಚುಮಲೆಯಂ ತಂದಿನಿನ್ನಸಮರಾರುಂಟು ಭೂತಲದಲೀ
ಶಂಕರನ ಕೃಪೆ ನಿನಗೆ ಪರಿಪೂರ್ಣವುಂಟು ಕೇಳ್
ಮಂಕುಮೋಹದ ಮಗನೆ ಮರುಕದಿಂ ಪೇಳ್ವೆನು ಕ
ಳಂಕವೆಳ್ಳನಿತಿಲ್ಲ ಪೂರ್ವಾರ್ಜಿತನ ಸುಕೃತ ಬಂದೊದಗಿ ನಿಂತಿರುವದು ||೭||

ಇಂದು ನಿನಗೀ ಚುಮಲೆಯಳಿಗೆ ಪರಿಣಯನೆಸಗಿ
ಮುಂದೆ ಗಮಿಸುವೆನೆಂದು ದೇವಗನ್ನೆಯರನ್ನು
ಚಂದದಿಂ ಕರಿಸಿ ಮಧುರಾನ್ನಮಂಗೈಸಿ ಗಂಧರ್ವ ವಿವಾಹಗೈದನು
ಬಂದ ಕಂಟಕ ನಾಶಗೊಳಿಸಿ ಸುಪ್ರೇಮದಿಂ
ದಿಂದುಶೇಖರ ನಿನ್ನ ಪೊರೆಯಲೆಂದರಸಿ ಗಣ
ವೃಂದಮಂ ಕೊಡ್ದು ರೇವಣಸಿದ್ಧ ಭುವನ ಸಂಚಾರಕ್ಕೆ ತೆರಳಲಿತ್ತ ||೮||

ಸಕಲ ಕುರಿಗಳ ತಂಡಮಂ ತಿರುವಿಕೊಂಡು ಗಿರಿ
ನಿಕರಭಾಗದೊಳು ಮೇಸುತ್ತ ಸತ್ವರದಿ ಮುಂ
ದಕೆ ಪೋಗಿ ಜಾಗ್ರತೀಪುರದ ಸೀಮೆಯ ಪೊಕ್ಕು ಗುರುನಾಮವನು ಸ್ಮರಿಸುತ
ಅಕಳಂಕ ಮತಿವಂತನಾದಾದಿಗೊಂಡನ ಹೊ

ಲಕೆ ಬರಲ್ಕಾ ಕುರಿಗಳಿರದೆ ಸಸಿಗಳ ಕೆಡಿಸ
ಲಿಕೆ ಜಾಯಿಗೊಂಡ ಪಾಯ್ಗೊಂಡಮರಗೊಂಡರೈತಂದರತಿ ಕ್ರೋಧದಿಂದ ॥೯॥

ಭಂಡ ನೀನಾವವನೆಲೊ ಭರದಿಂದ ಬಂದು ಕುರಿ
ಹಿಂಡುಗಳನೆಮ್ಮ ಹೊಲಮಂ ಪೊಗಿಸಿ ಭುವನದೊಳು
ಪುಂಡನಂತ್ಯೆ ತರುವಿ ಛೀ ನಿನಗೆ ನಾಚಿಕಿಲ್ಲವೆ ನೀಚ ದುರ್ನೀತನೆ
ದಂಡಿಸುವೆವೀಗ ನಿನ್ನೊಳ್ಳೆ ಮಾತಿಲಿ ಪೋಗು
ಖಂಡಿಸಾಪೇಕ್ಷಮೆಂದಾ ಪದ್ಮ ನಂ ನೂಕಿ
ಕಂಡಂತೆ ಬೊಗಳಿ ಮುಖನೋಡಿ ಯಮ್ಮನುಜನೆಂದಾಲೋಚಿಸಿದರು ಮನದಿ ॥೧೦॥

ತಮ್ಮ ನೀನಿಷ್ಟುದಿನಮೆಲ್ಲಿ ವಾಸಿಸಿದಿ ಮೇ
ಣಮ್ಮನಮ್ಮರೆತಾರ ಮನೆಯ ಸೇರಿದಿ ಭರದಿ
ಸಮ್ಮತದಿ ನಿಂದು ಸನ್ಮೋಹದಿಂ ಪೇಳೆಮಗೆ ಸುವಿವೇಕ ಸುಗುಣಶಾಲಿ
ಉಮ್ಮಳಿಸಬೇಡ ನಿನ್ನನು ನೆನಸಿ ಮನೆಯೊಳಗೆ
ದುಮ್ಮಾನಗೊಳುವರನುದಿನ ಮಾತೆ ಪಿತರು ತಿಳಿ
ಗಮ್ಮನೇ ನಿಜಾಲಯಕೆ ಬಾರೆಂದು ಪದ್ಮನಂ ಪರಿಪರಿಯೊಳುರೆಗೈದರು ॥೧೧॥

ಆಗ್ರಜರ ನುಡಿಗೆ ಕಿವಿಗೊಡದೆ ತನ್ನಯ ಕುರಿ ಸ
ಮಗ್ರಮಂ ತಿರುವಿಕೊಂಡಿರದೆ ಮುಂದಕೆ ಕೋಪ
ದುಗ್ರದೊಳಗಡಿಯಿಡುತ ಬರಲಾಗ ಪಾಯ್ಗೊಂಡನೆಂಬೋರ್ವನಮಿತ ಸುಖದಿ
ಸ್ವಗೃಹಕೆ ಪೋಗಿ ಸಂದೇಹಮಿಲ್ಲದೆ ಮಹಾ
ವೆಗ್ರದಿಂ ಪಿತಮಾತೆಯರ್ಗೆ ಪೇಳಿದನು ಕಾ
ಲಗ್ರೀವನೊರದಿ ಜನಿಸಿದ ಪದ್ಮನಂ ಕಂಡು ಬಂದಿರುವೆ ಸಂಭ್ರಮದಲಿ ॥೧೨॥

ಬಂದೆಮ್ಮ ಹೊಲದಡಿಯೊಳಿರುವನಾಲಯಕೆ ಬಾ
ರೆಂದು ಕರೆದರೆ ಕರ್ನಗೊಡದೆ ಮೇಣಮ್ಮ ನಂ
ನಿಂದಿಸುವನಿದಕೆ ನೀವಾಗಮಿಸಿ ಅನುಜನಂ ಕರೆತರುವದೆನಲಾಕ್ಷಣ
ತಂದೆತಾಯ್ಗಳು ತವಕದಿಂದೆ ಸುತನಿಹ ಸ್ಥಲಕೆ
ಚಂದದಿಂದ್ಯೆತಂದು ವಿಧವಿಧದಿ ಕರೆದರವ
ರಂದ ನುಡಿಗುತ್ತರವ ಕೊಡದದೆಂದುಗದೊಳಿರೆ ಜನನಿಗಾಯಿತು ವೆಸನವು ॥೧೩॥

ಪುತ್ರನೇ ಬಾ ಭುವನತಲದೊಳಗಣಿತ ಸಚ್ಚ
ರಿತ್ರನೇ ಬಾ ಸಲೆ ವಿರಾಜಿಸುವ ಪಾಲ್ಮತವ ಪ
ವಿತ್ರನೇ ಬಾ ಪಂಚಕರ್ಮಾಂಧಕಾರಕೌಘ ಮಿತ್ರನೇ ಬಾ ಕೋ
ಮಲಗಾತ್ರನೇ ಬಾ ಸರಸಿರುಹತಿರಸ್ಕರಿಪದ್ವಯ
ನೇತ್ರನೇ ಬಾ ನಿನ್ನ ಭಕ್ತಾಳಿ ಸನ್ನುತಿಗೆ
ಪಾತ್ರನೇ ಬಾರೆನ್ನ ವಂಶನೆಂಬುವ ನಿಜಕೆ ಚೈತ್ರನೇ ಬಾ ನಿನ್ನ ನಿಲಯಕೆ ॥೧೪॥

ಜನನಿಯಂಬುವ ಗುರ್ತುವರಿಯದೆನ್ನಂ ನೀನು
ಮುನಿದು ಮಾತಾಡದೀಪರಿ ಮಾಳ್ಪರೇ ನಿನ್ನ
ಗಿನಿತು ವಿಪರೀತ ಮನಪುಟ್ಟಿಸಿದರಾರು ಪೇಳೆಂದು ತರತರದಿ ಸುತನ
ಘನಪ್ರೇಮದಿಂ ಕಪೋಲವ ಪಿಡಿದು ಕೇಳಿದೊಡೆ
ವನಿತೆ ಚುಮಲಾದೇವಿಯಳ ಸೆರೆಯ ಬಿಡಿಸಿ ವರ
ದನುಜೆಯಳ ಸೀಳಿ ಬಾವನ್ನ ಬಿರುದುಗಳಗೈದನಕ ಪೇಳಿ ಮುದದೊಳು ||೧೫||

ಬಾಲಕನ ವಿಕ್ರಮಕೆ ಮೆಚ್ಚಿ ಸನ್ಮೋಹದಿಂ
ದಾಲಿಸುತ ಮೃದುಮಧುರನುಡಿಗಡಣಮಂ ಕೃಪೆಯೊ
ಳಾಲಿಸಿ ತಲೀಲನಂ ನೋಡಿ ಹಿಗ್ಗುತ ಮನೆಗೆ ಬಾರೆಂದು ಕರೆಯಲವನು
ಈ ಲೌಕಿಕದ ಸುಖದಾಪೇಕ್ಷೆಯನಗಿಲ್ಲಭವ
ಜಾಲಮಂ ಪರಿದು ಮುಕ್ತನ ಮಾಡ್ದ ಗುರುಸಿದ್ಧಂ
ಪಾಲಿಸುವನೆನ್ನ ನೀವನವೆ ನಿಜನಿಲಯ ಬರಲಾರೆನೆಂದನು ಗೃಹಕ್ಕೆ ||೧೬||

ಬಳಿಕಲಾ ಜನನಿತನಯನೇ ನಿನಗೆ ಯೋಗ್ಯ
ಮಲ್ಲಿಳೆಯೊಳೆನ್ನಂ ಬಳಲಿಸಬೇಡಯನ್ನ ನುಡಿ
ಪಳಿದು ಪಿತಮಾತೆ ಸತಿಸುತರ ಬಿಡ್ಡಡವಿಯನು ಸೇರುವದಿದಾವ ನೀತಿ
ಮುಳಿಯದಾಲಯಕೆ ಬಂದು ಅನುದಿನದಿ ವಿಷಯಸುಖ
ಕೆಳಿಸು ಸುಪ್ರೇಮದಿಂ ಸುಜನರಹುದೆಂಬುವರು
ತಿಳಿ ನಿನ್ನ ಮನದಿ ಕ್ಷಿಪ್ರದಲಿ ಬಾರೆಂದು ತವೆ ಬುದ್ಧಿಗಲಿಸಿದಳು ಸುತಗೆ ||೧೭||

ಎಷ್ಟು ವಿಧದಿಂ ಕರೆದರವ ಪೋಗದಿರಲಾಗ
ಸೃಷ್ಟಿಯಂ ಪೊರೆವ ಪರಮಾತ್ಮನಾ ಚುಂಚಲೆಯು
ಕಷ್ಟಕ್ಕೆ ಮೆಚ್ಚಿ ಚರರೂಪಮಂ ಧರಿಸಿ ಸಂತುಷ್ಟದಿಂದೈತರುತಲಿ
ಇಷ್ಟು ಛಲವ್ಯಾಕೋ ಪಿತಮಾತೆಯರ ಬಿಟ್ಟು ನಿನ
ಗಿಷ್ಟದೈವತಮುಂಟೆ ಸಾಕು ನಡಿನಡಿ ಜಗದಿ
ದುಷ್ಟನೆಂಬದೆ ಬಿಡರು ಕೇಳಿದ ಸುಜನರೆಲ್ಲ ಜನನಿಯಂ ಮನ್ನಿಸೆಂದ ||೧೮||

ಚರಮೂರ್ತಿ ನುಡಿಗೊಪ್ಪಿ ಪದ್ಮ ಚುಮಲೆಯ ಕೂಡಿ
ವರಜನನಿ ಜನಕ ಮೇಣಾಗ್ರಜರ ಮೇಳೈಸಿ
ತೆರಳಿದನು ಜಾಗ್ರತಾಪುರಿಗೆ ಜವದಿಂದ ಶೋಭೆಯಿನ್ನೆಂತೊರೆಯಲಿ
ಸರಸದಿಂದಾಲಯವ ಪೊಕ್ಕು ಕೆಲಕಾಲ ಬಾ
ಳಿರಲಾಗಲಾ ಚುಮಲೆ ಗರ್ಭವತಿಯಾಗಿ
ಸುರಚಿರ ಬಾಲನಂ ಶುಭಮುಹೂರ್ತದಿಳ್ಪಡೆದು ರೇವಣನೆಂಬ ನಾಮವನ್ನು ||೧೯||

ಪದುಳದಿಂದಿಟ್ಟು ಬಾಳುತ್ತಿರಲ್ಕೈಲ ದಿನಕೆ
ಸುದತಿಯಾ ಚುಮಲೆ ಮತ್ತೊಂದು ಪೆಣ್ಣೂಸಿನಂ ಪ

ಡೆದು ಪುತ್ರಪುತ್ರಿಯರ ಪಾಲಿಸುತೆ ಪ್ರಾಪಂಚಗೈದು ವರ್ತಿಸುತ ನಿತ್ಯ
ಸದಮಲಜ್ಞಾನಿ ಪದ್ಮನ ಸೇವೆಯೊಳ್ಸಂದು
ಮದನಾರಿ ಭಕ್ತಿಯಂಗೈದನಾರತ ಸುಖದೊ
ಳೊದಗಿರುತ ಸಿದ್ಧಗುರುವರನನಂಘ್ರಿಯುಗ್ಮಮಂ ಬಿಡದೆ ಭಜಿಸುತಲಿರ್ದಳು ||೨೦||

ಆಗಲಾ ಗುರುಸಿದ್ಧ ರೇವಣಾಚಾರ್ಯ ತಾಂ
ಸಾಗಿ ಪದ್ಮನ ಬಳಿಗೆ ಬಂದು ಪೇಳಿದನೆಲವೋ
ಈಗಲೀ ಲೌಕೀಕದ ವಿಷಯದಾಪೇಕ್ಷೆಯಂ ಬಿಟ್ಟು ಕೈಲಾಸಪುರಕೆ
ಬೇಗದಿಂದ ನಡೆ ಶಿವಮಲ್ಲಭನನುಜ್ಞೆ ನಿನ
ಗಾಗಿಹುದು ಪುಸಿಯಲ್ಲವೆನಲು ನುಡಿಗಳು ಕೇಳಿ
ರಾಗದಿಂ ಶಿವಪದ್ಮಸಿದ್ಧನಂ ನೆನಿಸುತ್ತ ನಿಂತು ತಾಂಡವನಾಡಿದ ||೨೧||

ಗುರುವರನ ಪಾದಕ್ಕೆರಗಿ ತ್ವರಿದಿಂದ ಕೈಲಾಸ
ಪುರಕೆ ಪದುಳದಿ ಪೋಗಿ ಕಾತ್ಯಾಯನೀಧವನ
ವರಪಾದ ಸರೋಜಯುಗ್ಮಂಗಳಿಗೆ ನಮಿಸಿ ಪರಿಶುದ್ಧದಿಂ ಭಜಿಸಲಾಗ
ಪುರಹರನು ಶಿರವ ಪಿಡಿದೆತ್ತಿ ಮುಗುಳೆಂದನೆಲೊ
ಧರಣಿಯೊಳ್ಬಾಬಾಲ ಮುನಿಪನ ರುಧಿರದೊಳವ
ತರಿಸಿದ ಕುರಿಗಳನ್ನು ಪೊರೆದು ಬಂಕಾಪುರವ ಪೊಕ್ಕು ನೀಂ ಧೈರ್ಯದಿಂದ ||೨೨||

ಕೊಂದು ದನುಜೆಯಳ ಬಿರಿದಂಗಳಂಗೈದು ಮುದ
ದಿಂದ ಚುಮಲಾದೇವಿಯಳ ಸೆರೆಯಂ ಬಿಡಿಸಿ ನಿಜ
ಮಂದಿರಕೆ ತಂದು ಪಾಣಗ್ರಹಗೈದು ಪ್ರಖ್ಯಾತಿ ಹೊಂದಿದೀ ಜಗದೊಳು
ಕಂದ ಕೇಳೆಲೋ ನಿನ್ನ ಮಹಿಮಕ್ಕೆ ಬೆಲೆಯಿಲ್ಲ
ವೆಂದು ಶಿವಪದ್ಮನಂ ಶಿವನು ಪಿಡಿದೆತ್ತಿ ಆ
ನಂದಗೊಂಡನು ಮನದಿ ಮಹಿಮೆಗಳ ವರ್ಮಿಸುತ ಪೇಳಲಚ್ಚರಿಯಾದುದು ||೨೩||

ಕೃತ್ತಿವಾಸನು ಪೇಳ್ದನೆಲೋ ಪದ್ಮನೀಂ ಮರಳಿ
ಉತ್ತಮವೆನಿಪ ಚಂದ್ರಗಿರಿ ಮಹಾಪುರವ ಝಸ
ವೆತ್ತು ಪರಿಪಾಲಿಪನಿಲಂಕಾರ ನೃಪನಸುತ ಬರ್ಮದೇವನ ಸತಿಯೊಳು
ಚಿತ್ತಜನರೂಪಮಂ ತಳೆದುದ್ಭವಿಸಿ ನಿನ್ನ
ಉತ್ತುಂಗ ಮಹಿಮೆಗಳ ಭೂಮಂಡಲದಿ ತೋರಿ
ಸುತ್ತಿತ್ತಬರುವದೆಂದೊರೆಯಲ್ಕೆ ಪದ್ಮನದಕೊಪ್ಪಿ ಸ್ವಗ್ರಾಮಕಿಳಿದ ||೨೪||

ಈಗುಸುರ್ವನೊಂದು ದಿನ ಪುಷ್ಪದತ್ತಂ ಘನ
ಸಾಗರದಿಂ ಶಿವಪೂಜೆಗೈದು ಕೃತಕೃತ್ಯತಾ
ನಾಗಬೇಕೆಂದು ಮನವಿಡಿದು ಪುಷ್ಪವ ತರುವದಕ್ಕೆ ಕಾಸಾರದೊಳಗೆ
ಪೋಗಿ ಸಾಸಿರದಳದ ಕಮಲಮಂ ನೋಡ್ದು ಮ

ತ್ತಾಗದಂ ಯತ್ತಲೊಂದೊಂದುದ್ಭವಿಸಲು ಬಹು
ಬೇಗದಿಂದಾ ಪುಷ್ಪ ತಂದು ಶಂಕರನ ಶಿರದೊಳು ಧರಿಸಿ ಪೂಜಿಸಿದನು ॥೧೫॥

ಬಳಿಕ ಹರಿ ಶಿವಪೂಜೆಗೈಯಬೇಕೆಂದು ಪ್ರ
ಜ್ವಲಿಪ ಶಂಕರನ ಶಿರದೊಳಗಿರ್ಪ ಪುಷ್ಪಾಳಿಗನೂ
ಕಲವು ಹರನ ಪಾದದೋಳ್ಬೀಳಲಾಕ್ಷಣದಿ ಶ್ರೀ ಗೌರೀಶನು
ನಳಿನಗಳ ಕೊಂಡು ಜಂಗಮ್ಮಾಡಿ ಧರಿಸಿ ನಿ
ರ್ಮಳ ಮನದಿ ಪೇಳ್ದನೆಲೋ ಕೃಷ್ಣ ನಿನ್ನಗೆ ದೋಷ
ನೆಲೆಯಾಯ್ತು ಬಿಡದೆಂದು ಕಣ್ದೆರೆದು ಘರ್ಜಿಸಿದನೇನೆಂಬೆನದ್ಭುತವನು ॥೧೬॥

ಸರಸಿಜಾಕ್ಷನು ತರತರನೆ ನಡುಗುತ ದೋಷ
ಪರಿಹರಿಪುದೆಂದು ನಯಭಯಭರಿತ ಭಕ್ತಿಯಿಂ
ಸ್ಮರಣೆಗೈಯಲ್ಕೆ ಶಿವಮೆಚ್ಚಿ ಸಂತೋಷ ಕಳೆ ಧರಿಸಿ ಮುಗುಳ್ನಗೆ ಬೀರುತ
ಭರದಿಂದೆ ಪೇಳಿದನು ಕಪ್ಪೆಕಲಕದ ಜಲ ಭ್ರ
ಮರ ಮುಟ್ಟದಿಹ ಪುಷ್ಪ ತಂದೆನ್ನಂ ಪೂಜಿಸಲ್
ದುರಿತ ಪೋಗುವದೆನಲ್ಕವುಗಳಂ ತರುವದಕೆ ಕಾಸೀ ಪಥ ಪಿಡಿದನು ॥೧೭॥

ಭಾರ್ಗಾ ನಾನು ಬರುವವರಿಗೆ ಪೂಜಿಸುವದ
ಕ್ಕಾರ್ಗೊರೆಯಲಾರನಂ ನೇಮಿಸಲಿನುತ್ತಲಿವು
ಸುರ್ಗರೆಂದು ಹರಿಯು ತಾನಾಲೋಚಿಸುವ ಸಮಯದೊಳು ಬರ್ಮನತಿ ಭರದೊಳು
ಮಾರ್ಗದೋಳ್ಬೈತಿರುತಿರಲ್ಕವನ ಕಾಣಿತ್ತ
ಲರ್ಗಳಂ ತರುವದಂ ನಿಲಿಸಿ ಪೆಸರೇನು ಪುರ
ದುರ್ಗಮಾವುದು ಎನಗೆ ಪೇಳೆಂದು ಕೇಳಲವ ನಸುನಗೆಯೊಳಿಂತೆಂದನು ॥೧೮॥

ವರಚಂದ್ರಗಿರಿ ಪುರಕ್ಕರಸು ತೀರಾವತಿಯ
ಪುರಕೆ ದೇಸಾಯಿ ಬ್ರಹ್ಮಾವತಿಗೆ ಗೌಡ ಬಂ
ಧುರನಿಲಂಕಾರನಾತ್ಮಜ ಬರ್ಮದೇವನಾಂ ನೀನಾರು ಪೇಳೆಂದನು
ಧರಣೀಶ ಕೇಳ್ನಾನು ಕೃಷ್ಣ ಕಾಶಿಪುರಕೆ
ಭರದಿ ಪೋಗುವೆನೀಗ ಮರಳಿ ಬರುವನಕ ಶಂ
ಕರನಂ ಪೂಜಿಸು ನಿನಗಿಷ್ಟಾರ್ಥ ಕೊಡುವೆ ಪುಸಿಯೆಣಿಸಬೇಡೆಂದ ಮನದಿ ॥೧೯॥

ನಿನ್ನಯ ಸಹೋದರಿ ಸುರಾವತಿಯನಿಪಳನ್ನು
ಎನ್ನಗಿತ್ತತತಿಶಯ ಪ್ರೀತಿಯಿಂ ಪರಿಣಯವ
ಚನ್ನಾಗಿಗೈದಾಡಂ ನೀಂ ಬರುವವರೆಗೆ ಶಿವಪೂಜೆ ಮಾಡುವೆನೆಂದನು
ಪನ್ನಗಶಯನು ಅದಕೊಪ್ಪುತ ಸುರಾವತಿಯ
ಳನ್ನೀಯುವೆನೆಂದು ಬರ್ಮೇಶನಂ ಕರೆದು ಕೊಂ
ಡುನ್ನುತ ಪ್ರೇಮದಿಂ ವೈಕುಂಠಪುರಿಗೆ ಹಿಂದಿರುಗಿ ಕರದೊಯ್ದು ಭರದಿ ॥೨೦॥

ನುಡಿದಂತೆ ಕೃಷ್ಣ ತನ್ನಯ ಸಹೋದರಿಯ ಕರ
ವಿಡಿಸುತ್ತ ಪರಿಣಯವಗೈಸಿ ಕಡುಭರದಿಂದ
ನಡೆದ ಶ್ರೀ ವಾರಣಾಸಿಗೆ ಪುಷ್ಪ ತರುವದಕ್ಕಿತ್ತಲಾ ಬರ್ಮದೇವಂ
ಮಡದಿಯಮ್ಮನ್ನಿಸಿ ಶಿವಾರ್ಚನೆಗೆ ಪೋಪೆನೆಂ
ದಡಿ ಮುಂದಕಿಡುತ ಸಾಗಿದನು ಕಾಸಾರಕ್ಕೆ
ಮೃಡನ ಮನದೊಳು ಸ್ಮರಿಸಿ ತರತರದ ಪುಷ್ಪಗಳನೆತ್ತಿಕೊಂಡನು ಮುದದೊಳು ॥೩೦॥

ರಜತಾದ್ರಿಯೊಳ್ಮೆರೆವ ಶಿವಸಭೆಗೆ ಪೋಗಿ ತವೆ
ಭಜಿಸಿ ಬಿಲ್ವಾದಿ ಕೆಲವು ಪುಷ್ಪಗಳ ಧರಿಸುತಲಿ
ನಿಜಭಕ್ತಿಯಿಂದ ಪೂಜಿಸಲು ಪರಮೇಶ್ವರಂ ಮೆಚ್ಚಿ ನೀನಾರೆಂದನು
ತ್ರಿಜಗಪಾಲನೇ ಚಂದ್ರಗಿರಿಪುರದ ನೃಪನಾದ
ವಿಜಯಪೂರಿತನಿಲಂಕಾರನ ಕುಮಾರ ಸರ
ಸಿಜಜಾಂಡದೊಳಗೆನಗೆ ಬರ್ಮಭೂಪಾಲನೆಂದೆನ್ನನು ಕರೆವರೆಂದ ॥೩೧॥

ಬರ್ಮದೇವನೆ ನಿನ್ನ ಪೂಜಕ್ಕೆ ಮೆಚ್ಚಿ ದು
ಷ್ಕರ್ಮಮಂ ಕಳೆದ ನೀನನುದಿನದೊಳಿದರಂತೆ
ದುರ್ಮದವನಳಿದು ಪೂಜಿಪುದೆಂದು ಪೇಳುತಲಿ ದ್ವಾರಪಾಲಕರಂ ಕರೆದನು
ಮರ್ಮದಿಂದೊರೆದ ಹರಿಬಂದರವನಂ ಬಿಡದೆ
ಬರ್ಮನಂ ಬಿಡುವುದೆಂದಾಜ್ಞಾಪಿಸಲ್ಕೆ ಚಾ
ರರ್ಮುನಿಯದೊಪ್ಪಿ ಕಡೆದ್ವಾರಕ್ಕೆ ಬಂದೊಡೆ ಯಡಬಲಕ್ಕೆ ನಿಂತರು ಹರುಷದಿ ॥೩೨॥

ಅಕಳಂಕ ಭಕ್ತಿಯಿಂ ಬರ್ಮಭೂಪಂ ಬಿಡದೆ
ಮಕರಕೇತನ ಭಂಗನಂ ಪೂಜಿಸುತ್ತ ಸುರ
ನಿಕರದೋಳ್ಮೆರೆದಿದ್ದ ಕಾಶಿನಗರದಿಂದೆ ಹರಿಯು ಪೂಜೆಲವಕೊಂಡು
ಶುಕನಾರದಾದಿ ಮುನಿನುತ ಶಂಕರನ ಕಾಂಬು
ದಕೆ ದ್ವಾರದೆಡೆಗೆ ಪೋಗಲ್ಕೆ ಚಾರರ್ತಡಿಯ
ಲಿಕೆ ಹರಿಯು ಕೋಪದಿಂದೆನ್ನನೇತಕೆ ತಡದಿರೆಂದು ಕೇಳಿದನವರಿಗೆ ॥೩೪॥

ಮೃಡನು ಬರ್ಮನ ಪೂಜೆಗೊಲಿದು ನಿನ್ನನ್ನೊಳಗೆ
ಬಿಡುಬೇವೆಂದೆಮ್ಮಗಪ್ಪಣೆಯನಿತ್ತಿರುವ
ನಡಿಹಿಂದಕೆಂದು ಚಾರರ್ನುಡಿಯಲಾಗ ಮಧುಸೂದನಂ ಮರುಗಿ ಮನದಿ
ಕಡುದೈನ್ಯದಿಂದವರನಂ ಸಮ್ಮತಿಸಿ ಜಗದೀಶ
ನೆಡೆಗೆ ಭರದಿಂ ಪೋಗಿ ಭಯಭರಿತ ಭಕ್ತಿಯಿಂ
ದಡಿಗಳ್ಗೆರಗಿ ಜಲವನಭಿಷೇಕಗೈದು ತಂದ ಪೂಗಳಂ ಧರಿಸಿ ಪೂಜಿಸಿದನು ॥೩೫॥

ಪುಲ್ಲಾಕ್ಷ ಮರಳಿ ಶಂಕರಗೆ ಪೇಳಿದ ಪುತ್ರ
ನಿಲ್ಲದವನಂ ಪೂಜೆಗೊಂಬುವುದು ಯೋಗ್ಯಮೆಂ

ದೆಲ್ಲ ನೀನರಿದರಿಯದಂತೆ ಈ ಬರ್ಮನರ್ಚನೆಗೆ ಮನಗೊಟ್ಟೆ ಬರಿದೆ
ಇಲ್ಲಿಗೆನ್ನಂಬಾರದಂತೆ ಮಾಡಿದ ಪರಿಯ
ನುಲ್ಲಾಸದಿಂ ಪೇಳಿ ದೋಷಗುಣಗಳನಲಿದು
ನಿಲ್ಲದೆನ್ನಂ ರಕ್ಷಿಸೆಂದು ಸರಸೋಕ್ತಿಯಿಂ ಸಧ್ಯಾನಗೈದೆನೆಂದು ‖೩೬‖

ದೇವದೇವನು ಹರಿಯ ದೋಷಗಳ ಕಳೆದು ಸ
ದ್ಭಾವದಿಂ ಕಳಿಸಲಿತ್ತಾ ಬರ್ಮನೈತಂದು
ಭಾವಜಾಂತಕನ ಪೂಜೆಯ ಮಾಡಲನಿತರೊಳ್ ಕಣ್ದೆರೆದು ಜಗದೀಶನು
ಸಾವಧಾನದಿ ಪೇಳ್ದನೆಲೊ ನಿನ್ನಗತಿಗೆ ಸುಖ
ಮೀಮ ಸುತನಿಲ್ಲೆಂದು ಅಜಪಿತಂ ಸೂಚಿಸಿದ
ನೀ ವಿಧದಿ ನೀ ಪೂಜಿಸುವದು ಯೋಗ್ಯವು ಸಾಕುಸಾಗೆಂದ ನಿನ್ನಪುರಕೆ ‖೩೭‖

ಆ ವಚನ ಕೇಳಲಾ ಬರ್ಮ ಶಂಕರಗೆ ಶಿರ
ಸಾವಹಿಸಿ ಸಾಷ್ಟಾಂಗವೆರಗಿ ತನ್ನಯ ಪುರಿಗೆ
ಸಾವಕಾಶದಿ ಪೋಗಿ ದುಗುಡ ಮಾನಸನಾಗಿರಲ್ಕೆ ಸತಿಕಂಡು ಭರದಿ
ಪ್ರಾಣೇಶ ನಿನ್ನ ಶಶಿಮೊಗವು ಕುಂದಿದಕಾರ್ಯ
ವಾವುದೆನ್ನಗೆ ಪದುಳವೆರಸಿ ಪೇಳುವದೀಗ
ಕೋವಿದನೆ ಕಳವಳ ಕಳಿಯಂದು ಕಡುದೈನ್ಯಳಾಗಿ ಕರವಂ ಮುಗಿದಳು ‖೩೮‖

ಜಾಣೆ ಕೇಳ್ನಿನ್ನಣ್ಣನಾದ ದನುಜಾಂತಕಂ
ಸ್ಥಾಣಿವಿನ ಬಳಿಗೆ ಬಿಜಯಂಗೈದು ತನ್ನ ಮನ
ಕೇಣದಿಂ ಪುತ್ರನಿಲ್ಲದ ಪಾಪಿಯಾದ ಬರ್ಮನು ಬಂದು ನಿನ್ನ ಪಾದವ
ಮಾಣದೆ ಸದಾಪೂಜೆಗೈದು ಪೋಗುವನು ಗೀ
ರ್ವಾಣಪತಿನತಪದನೆ ಮುಂದೆವನನೀಸುರ
ಶ್ರೇಣಿಯೋಳ್ಬಿಡಬಾರದೆಂದು ಕಾಪಟ್ಯದಿಂ ಪೇಳಿರುವ ಪರಿಪರಿಯೊಳು ‖೩೯‖

ಕಾಂತನಾಡಿದ ನುಡಿಗಳಾಲಿಸಲ್ಕಾಸತಿ ನಿ
ಜಾಂತರಂಗದಿ ಮರುಗಿ ತನ್ನಯ ಸಹೋದರಿಯ
ತಾಂ ತಿಳಿಯದೀಪರಿಯೊಳೆನ್ನನ್ನಂ ಬಂಜೆಯೆಂದಭವನೋಳ್ಪೇಳ್ದನೇಕೆ
ಸ್ವಾಂತಸುಖವಂ ತೊರೆದು ಏಕಾಂಗಿಯಾಗಿ ಗಿರಿ
ಕಾಂತರ ಸೇರಲೇ ಪ್ರಿಯನ ಮೇಲಣ ಮೋಹ
ಭ್ರಾಂತಿಯಂ ತ್ಯಜಿಸಿ ಶಿವನಂ ಭಜಿಸಿ ಪುತ್ರನಂ ಬೇಡಲೇ ಮಾಡಲೇನು ‖೪೦‖

ಎಂದು ಗದ್ಗದ ಕಂಠೆಯಾಗಿ ಹರಿಯಂ ಜರಿದು
ಕಂದಿದಾನನದಿ ಮುಂದಡಿಯಿಡುತ್ತತಿ ಭರದಿ
ಬಂದಳೀಶನ ಸಭೆಗೆ ನಿಡುಕೇಶ ಜೋಲಾಗಿ ಬಿಟ್ಟು ಕರಕಮಲ ಮುಗಿದು
ಇಂದುಧರನವಳನೀಕ್ಷಿಸಿ ಸುರಾವತಿಯೇ ನೀಂ

ಬಂದ ಕಜ್ಜಮದೇನು ಪುಸಿಯದೆ ಉಸುರವುದೀಗ
ಸಂದೇಹ ಬಿಡು ಸಮಾಧಾನಗೊಳಿಸುವನೆಂದು ಮಂದಸ್ಮಿತದಿ ಕೂಡ್ದನು ॥೪೦॥

ಚಿತ್ತೈಸು ದೇವ ಮಮಕಾತ ನಿನ್ನಂ ಪೂಜಿ
ಸುತ್ತಿರುವದಿಂ ಕಾಣೆ ತನ್ನಣ್ಣನಾದ ಪುರು
ಷೊತ್ತಮಂ ಕಪಟದಿಂ ಬಂಜೆಯಂದೆನಗೆ ನಿಂದಿಸಿ ನುಡಿದು ನಕ್ಕನಂತೆ
ಕೃತ್ತಿವಾಸನೆ ಪುತ್ರನಂ ಎನಗೆ ಸತ್ವರದೊ
ಳಿತ್ತು ರಕ್ಷಿಪುದೆಂದು ವಿಧವಿಧದಿ ಸ್ತೋತ್ರಗೈ
ಯುತ್ತ ನಿಂತಿರಲಭವನಂತಃಕರುಣದಿಂದೆ ಪೇಳುವದಕನುವಾದನು ॥೪೧॥

ನೀಲಕುಂತಳಿಯೆ ಮಾರ್ಘಳಿಗೆ ನಿಲ್ಲುವದೆಂದು
ನೀಲಲೋಹಿತ ಪೇಳಿ ನಿರ್ಮಲಮನಸಿನಿಂದ
ಮೂಲಪ್ರಣಮಮಾದ ಪಂಚಾಕ್ಷರಂಗಳಂ ಜಪಿಸಲ್ಕೆ ತಕ್ಷಣದಲಿ
ಫಾಲದೋಲ್ಬೆವರೊಗೆಯಲಾಗದಂತೆಗದು ಸುಖ
ಲೀಲೆಯಿಂದಾ ಸುರಾವತಿಯಳಂ ಕರೆದು ಭಯ
ಜಾಲಮಂ ಕಳೆದವಳಿಗೀಯಲ್ಕೆರದಿಕೊಂಡು ಹರುಷದಿಂ ಸೇವಿಸಿದಳು ॥೪೨॥

ಹಸ್ತಿಚರ್ಮಾಂಬರಮಂ ಬಳಿಕ ಸುತೆಯಂ ಕರೆದು
ಮಸ್ತಕದ ಮೇಲೆ ಕಡುಮೋಹದಿಂ ತನ್ನಮೃತ
ಹಸ್ತಮಂಯಿಟ್ಟು ಭಸಿತಮಂ ಕೊಟ್ಟು ಪುತ್ರವತಿಯಾಗಿ ಬಾಳೆಂದರಸುತ
ವಿಸ್ತಾರದಿಂದವಳಿಗಾನಂದಮಪ್ಪಂತೆ
ವಿಸ್ತರಿಸಿ ಹೊನ್ನುಹೊಕ್ಕಳ ಸುವರ್ನದ ಜಡೆಗೆ
ಭಸ್ತಿಯಲಿ ಉಡುಪನಂ ಧಿಕ್ಕರಿಪ ಬಾಲನುದ್ಭವಿಸುವನು ನಿನ್ನುದರದಿ ॥೪೪॥

ಜಾತಂಗೆ ನರರ ಭಯಮಿಲ್ಲ ಸಟೆಯಿಲ್ಲ ತಿಳಿ
ಭೂತಲದಿ ಮಹಿಮೆಗಳ ತೋರಿ ಮೆರೆವನು ಮುಂದೆ
ಆತಂಗೆ ಶಿವಸಿದ್ಧ ಬೀರನೆಂಬಭಿದಾನವಿಟ್ಟು ಪರಿಪಾಲಿಸೆಂದಾ
ಭೂತೇಶ ಪೇಳಿಕಳಿಸಲು ಸುರಾವತಿಯಳತಿ
ಪ್ರೀತಿಯಿಂದೈ ತಂದು ಪುರುಷಂಗೆ ಶಿವನೊರೆದ
ಮಾತುಗಳ ತಿಳಿಸಲಾ ಬರ್ಮಭೂಪಂ ಘನಾನಂದದೋಳ್ಮಗ್ನನಾದಂ ॥೪೫॥

ಅತ್ತ ಶಂಕರನು ರೇವಣನೆಡೆಗೆ ಚರನಂ ಕಳಿ
ಸುತ್ತ ಶಿವಪದ್ಮನಂ ಲೌಕೀಕ ವಿಷಯ ಬಿಡಿಸು
ಇತ್ತಿತ್ತ ಕರತರುವದೆಂದಾಜ್ಞೆಯಿತ್ತು ಸಮ್ಮೋದದಿಂ ಕಳಿಸಲಾಗ
ಚಿತ್ತಜಾಂತಕನೊರೆದ ನುಡಿಗಾತನೊಪ್ಪಿ ಜಸ
ವೆತ್ತಸವ ಜಾಗ್ರತಾಪುರವನೊಳ ಪೊಕ್ಕು ಶಿ
ಷ್ಯೋತ್ತಮನ ಬಳಿಗೆಳಿದು ಸಾಕು ವಿಷಯದ ಸುಖಮಂ ಬಾರೆಂದು ಕೈಲಾಸಕೆ ॥೪೬॥

ಗುರ್ವಾಜ್ಞೆಕನುಸರಿಸಿ ಮಾತೆಪಿತರಿಗೆ ನಮಿಸಿ
ತುರ್ವಿಯಿಂ ಬಿಟ್ಟು ನಾಂ ಪೋಗುವೆನು ಪ್ರೇಮದಿ
ಶರ್ವನಾಭನ ಪುರಾಲಯಕ್ಕೆಂದು ಮೃದುಮಧುರೋಕ್ತಿಗಳು ಬೀರಲನಿತರೊಳಗೆ
ಸರ್ವರರಿವಂತಾದಿಗೊಂಡ ಚುಂಚಲದೇವಿ
ಯರ್ವದನ ಕಳೆಗುಂದುತಸುವಳಿದು ಭರದಿ ಗಂ
ಧರ್ವರೂಪಂ ತಳೆದು ನಿಶ್ಶಾಪರಾಗಿ ಸುರಲೋಕಮಂ ಸೇರ್ದರಿತ್ತ ॥೪೭॥

ಶಿವಪದ್ಮನಾಗ್ರಜರಂ ಸಂತೈಸಿ ನಿಜಕುವರ
ರೇವಣನ ಮೇಣುಭಯ ಸತಿಯರಂ ಕರೆದು
ಅವನಿಯೊಳ್ಸುಖರೂಪರಾಗಿರರಿ ಗುರುಲಿಂಗಜಂಗಮಕ್ಕಭಿನಮಿಸಿರಿ
ತವೆ ಶೋಭಿಸುವ ಪಾಲ್ಕುತವನುದ್ಧರಿಸಿರಿ ದು
ರ್ಭವದೂರ ರೇವಣಾರಾಧ್ಯನಸುಪಾದ ಸರೋ
ಜನ ನಿರಂತರದಿ ಸ್ಮರಿಸಿರಿ ಸತ್ತ ಕುರಿಗಳಂ ಹೊತ್ತು ವಿಕ್ರೈಸಿರೆಂದೂ ॥೪೮॥

ಈ ವಿಧದಿ ಸತಿಸುತರ್ಗೊರದು ಪುರಬಿಟ್ಟು ಸ
ದ್ಭಾವದಿಂದಂತರಗಮನನಾಗಿ ಶ್ರೀಗುರುಸಿದ್ಧ
ದೇವನಂ ಸ್ಮರಿಸುತ್ತ ಸರ್ವಜನ ನೋಡುತಿರೆ ನಡೆದನತಿ ತವಕದಿಂದಾ
ಭೂವಲಯದೊಳಗಿರ್ಪ ಸಕಲ ಪ್ರಾಣಿಗಳನ್ನು
ಪಾವನ ಮಾಡಿ ಶಿವಪುರಿಗೆ ಪೋಗುವೆನೆಂದು
ಕೋವಿದರು ಪದ್ಮಂಗೆ ಜಯಜಯವೆನುತೊಯ್ಯನೊಯ್ಯನೇ ಕರವ ಬಡಿದರು ॥೪೯॥

ಬಳಿಕ ತ್ರಿಪುರಾಂತಕಂ ಪದ್ಮನೈ ತರುವದಂ
ತಿಳಿದು ಸುರಪಾದಿ ಕಿನ್ನರ ಕಿಂಪುರಷರನ್ನು
ಕಳಿಸಲವರಾಗಮಿಸಿ ವಿಭವಾತಿಶಯದಿದಿರ್ಗೊಂಡು ಪೂಮಳೆಗರಿಸುತ
ವಿಳಸಿತ ಪಟಹ ಭೇರಿಭೂರಿ ದುಂದಭಿಗಳಂ
ಮೊಳಗಿ ಜಯಘೋಷದಿಂದೊಡಗೂಡಿ ಶಿವಸಭೆಯ
ನಿಲಯಮಂ ಪೊಕ್ಕು ಶಂಕರನ ಸನ್ನಿಧಿಗೆ ಪೋಗುತ್ತಿರಲ್ಕಾ ಸಮಯದಿ ॥೫೦॥

ಸುರಮುನಿಗಳೆದ್ದು ಕೊಂಡಾಡಿದರು ಪಾಡಿದರು
ಹರಗಣಂಗಳು ಜಯವ ಬೀರಿದರು ಸಾರಿದರು
ಹರಿಬ್ರಹ್ಮಗಳೊಂದುಗೂಡಿದರು ನೋಡಿದರು ಮಾಡಿದರು ಸತ್ಕಾರಮಂ
ಸಿರಿಸರಸ್ವತಿಯರುರೆ ಪರಸಿದರು ಚರಿಸಿದರು ಗಿರಿಜಾತೆ
ಮರುಕಮಂ ಹಚ್ಚಿದಳು ಮೆಚ್ಚಿದಳು ಸುರಸ್ತ್ರೀ
ಯರಾರತಿಯನೆತ್ತಿದರು ಮುತ್ತಿದರು ಸುತ್ತಿದರು ಜಗದೀಶನು ॥ ೫೧॥

ಹರಪದ್ಮನತಿ ಸರಸವೆರಸಿ ಮನವಿರಸಿ
ಭಾಸುರಗಣಸ್ತೋಮಕ್ಕೆ ನಮಿಸಿ ಸಂಭ್ರಮಿಸಿ

ಸುರವರ ಹರಬ್ರಹ್ಮನಂ ನೋಡಿ ಮುದಗೂಡಿ ಗೌರೀಶನಸುನಾಮಗಳನು
ನೆರೆನುತಿಸಿ ಮನವಸ್ಥಿರ ಬಗೆದು ಕರಮುಗಿದು ಪಾದ
ಕ್ಕೆರಗಿದಂ ಸದ್ಭಕ್ತಿ ತಳೆದು ಭಯಕಳೆದು
ಪರತರ ದೇವ ಸಲಹೆಂದು ನುಡಿದು ದೃಢವಿಡಿದು ಪರಿಪರಿಯಿಂದ ಬೇಡಿಕೊಂಡ ||೫೨||

ಮೇದಿನಿವಲಯದಿಂದ ಬಂದ ಸುತನಂ ಕಂಡು
ಆದುದೀಶಂಗೆ ಸುಖಮೃದುನುಡಿಗಳಂ ಗ್ರಹಿಸಿ
ಮೋದದಿಂ ಪದ್ಮನಂ ಪಿಡಿದೆತ್ತ ಮುದ್ದಾಡಿ ಸತ್ಸಮಾಜದೊಳಿರುತಿಹ
ಆ ದಿವಿಜ ವೃಂದಮಂ ಆ ಸಿದ್ಧಸಾಧ್ಯರಂ
ಆದರದಿ ನೋಡೆಂದು ಕರಸನ್ನೆಯಿಂದ ಜಗ
ದಾದಿದೇವಂ ಮುಗುಳ್ನಗೆಯೊಳಾತಂಗೆ ತೋರಿಸಿದಾ ಬಹುಚಿತ್ರಗಳನು ||೫೩||

ಇಂದುಧರ ಪದ್ಮನಿಗೆ ಪೇಳಿದಂ ಪುಳಕದಿಂ
ಹಿಂದೆ ಭಿಲ್ಲಾಸುರನ ನಾಶಗೈವದಕೆನ್ನ
ಕಂದ ವೀರೇಶನಂ ಭುವನಕ್ಕೆ ಕಳಿಸಲವ ಬೀರಾವತಾರ ಧರಿಸಿ
ಮಂದಮತಿಯಾದ ಖಳನ ಕೊಂದು ಕುರುಬರಂ
ಚಂದದಿಂದುದ್ಧರಿಸಿ ಬಂದನಿಲ್ಲಿಗೆ ಮರಳಿ
ಇಂದು ನೀ ಬರ್ಮನ ಮಡದಿ ಸುರಾವತಿಯ ಗರ್ಭಾಬ್ಧಿಯೊಳಗುದ್ಭವಿಸುತ ||೫೪||

ಶಿವಸಿದ್ಧ ಬೀರನೆಂಬಭಿದಾನದಿಂ ಸಕಲ
ಭುವನದೋಳ್ಮಹಿಮಗಳ ತೋರೆಂದು ಪದ್ಮಂಗೆ
ಶಿವನೊರೆಯಲದಕ್ಕೊಪ್ಪಿ ಸಾಷ್ಟಾಂಗವೆರಗಿ ನಾಂ ಪೋಗಿ ಭೂತಲದೊಳುದಿಸಿ
ಶಿವಭಕ್ತಿಯಂ ಬೆಳಸಿ ಘನಮಹಿಮೆ ತೋರುವೆನು
ಸುವಿಲಾಸದಿಂದೆನ್ನಗೋರ್ವ ಶಿಷ್ಯನಂ ಕೊಟ್ಟು
ಅವನಿಗಿಳಿಸೆಂದಾ ಪಾದವಿಡಿದು ಪರಿಪರಿಯಿಂದ ಬೇಡಿಕೊಂಡನು ವಿನಯದಿಂದಾ ||೫೫||

ಮೃಡ ಮೆಚ್ಚಿ ಮಗನೆ ನೀನಳುಕಬೇಡ ಬಳಲಬೇಡ
ಅಡಿಮುಂದಕಿಡು ನಿನ್ನ ಸೇವಕ್ಕೆ ನಾ ಕಳಿಸಿ
ಕೊಡುವೆ ಕೆಲದಿನಕೆ ಬಿಲ್ಲಾಳಸೋಮನ ಪುತ್ರ ವೀರಮಾಳಿಂಗನನ್ನು
ಮಿಡುಕುವದಿದುಚಿತವಲ್ಲಿಳೆಯೊಳಗೆ ನೀನಂದ
ನುಡಿಯೆ ನಿಜಮಂತ್ರನಿಂದೆದ್ದ ಸುಕ್ಷೇತ್ರ ಮೇಣ್
ಪಿಡಿದ ಮೃತ್ತಿಕೆ ನಿನಗೆ ಹೊನ್ನಾಗಲೆಂದು ಪಂಚಾಕ್ಷರಿಯ ಬೋಧಿಸಿದನು ||೫೬||

ಬಳಿಕ ಶಿವಪದ್ಮಂ ಸುರಾವತಿಯ ಗರ್ಭಾಬ್ಧಿಯೊಳ
ಗಿಳಿದು ಒಂದೆರಡು ಮಾಸಗತಮಾಗೆ ಶಶಿ
ಕಳೆಯಂತೆ ತೋರ್ಪ ತರುಣಿಯ ಮುಖವು ಬಿಳ್ಪೇರಿಸು ಪ್ರಕಾಶವು ಹೆಚ್ಚಿತು
ಒಳಗೊಳಗೆ ಶಿಶು ಬೆಳೆಯಲುದರ ಪ್ರದೇಶದೊಳ್

ಪೊಳೆವ ತ್ರಿವಳಿಗಳು ನೆರೆ ಮಾಸಿದವು ಬೇಗದಿಂ
ಬಳುಕುವತಿ ಬಡನಡುವು ಗಡುತರಮಾಯ್ತಿಡಿಯಿಡಲ್ಗತಿಯು ಬಹುಜಡವಾಯಿತು ||೫೭||

ಕಂಜಾಕ್ಷಿ ತರತರದ ಮಧುರಾನ್ನವನು ಬಯಸಿ
ಭುಂಜಿಸುವದಂ ಕಂಡು ಪಟ್ಟಣದೊಳಿರ್ಪ ಕೆಲ
ಮಂಜುಳಾಂಗಿಯರೊಂದುಗೂಡುತವರೊಳಗೋರ್ವಳಂದಳಿಂ ನೋರ್ವಳಿಂಗೆ
ಬಂಜೆತನದಿಂ ಬಳಲುತಿಹ ಸುರಾವತಿಗೆ ಸ್ಮರ
ಭಂಜನನ ಕರುಣದಿಂ ಗರ್ಭಂ ಧರಿಸಿ ಸುಖ
ಪುಂಜದೋಳ್ಕೂಡಿದಳಿವಳ ಸುಕೃತಮೆಂತುಂಟೋ ಪೇಳಲಚ್ಚರಿಯಾದುದು ||೫೮||

ಇರುತಿರುತ್ತಾ ಸುದತಿಗೊದಗಿದವು ಶರಮಾಸ
ಗಿರಿವರಂ ಪೇಳ್ದ ನುಡಿ ದಿಟವಾದುದೆಂದರಿದು
ಹರುಷಮಂ ತಳೆದು ವರವೈಕುಂಠಪುರದೊಳಿಹ ತನ್ನಣ್ಣನಾದ ಹರಿಗೆ
ಪರಮಾನ್ನ ಮೊದಲಾದ ಪಂಚಭಕ್ಷಗಳನ್ನು
ನೆರಗೈಸಿ ಕಟ್ಟೋಗರವಕೊಂಡು ಬಾರೆಂದು
ಚರನೋರ್ವನಂ ಕರೆದು ತನ್ನಯ ರಹಸ್ಯಮಂ ಪೇಳಿ ಕಳಿಸಿದಳು ತ್ವರದಿ ||೫೯||

ಆ ಚರಂ ವೈಕುಂಠಪುರಿಗೆ ಚರಿಸುತ ಹರಿಗೆ
ಸೂಚಿಸಲ್ಕಾತನತ್ಯಂತ ಕೋಪವ ತಾಳಿ
ಯೋಚಿಸಿದ ತಂಗಿಯ ಸುತನು ಪುಟ್ಟಿ ಮುಂದೆನ್ನ ಸುತೆಯಳಂನೊಯ್ವ ಭರದಿ
ಭೂಚಕ್ರದೊಳಗೆನ್ನಗಪಹಾಸ್ಯಮೆಂದು ತಿಳಿದಾ
ಚತುರಮುಖ ಜನಕ ವೈರತ್ವದಿಂ ಮನದು
ರಾಚಾರಕಿಳಿಸಿ ವಿಷಬೆರಸಿ ಕಟ್ಟೋಗರವಗೈಸಿ ಚರಿಸಿದನಲ್ಲಿಗೆ ||೬೦||

ಆ ಸುರಾವತಿಯ ನಿಜಮಂದಿರಕೆ ಹರಿ ಬರ
ಲ್ಕಾ ಸುದತಿ ನಿದ್ರೆ ಹೊಂದಿರೆ ಗರ್ಭದೊಳು
ಶಿಶುವು ತಾ ಸುಮ್ಮನಿರದೇ ಕನಸಿನೊಳು ನಿಜ ಜನನಿಗೊರದಿತು ನಿನ್ನಗಣ್ಣನಾದ
ಭಾಸುರ ಶ್ರೀಪತಿಯು ವಿಷಬೆರಸಿದನ್ನಮಂ
ಮೋಸದಿಂ ತರುವನೀಂ ಸ್ವೀಕರಿಸಬೇಡ ಸುವಿ
ಲಾಸಗೊಳಬೇಡ ಪುಸಿಯಣಿಸಬೇಡೀ ನುಡಿಯಲ್ಕೆಯಚ್ಚತ್ತಳವಳು ||೬೧||

ಅವಸರದಿ ದ್ವಾರಕೈತರಲಾಗ್ರಜನ ಮುಖವ
ನವಲೋಕಿಸುತ್ತ ಮತ್ತೊಳಗವಳು ಪೋಗಲ್ಕೆ
ಜವದಿಂದೆ ಗೃಹಬಿಟ್ಟು ಗ್ರಾಮ ಪ್ರವೇಶಮಂ ಮಾಡಿದನು ಕಪಟದಿಂದೆ
ತವೆ ಶೋಭಿಸುವ ಪುರದ ಸಾಲ್ವೀಧಿಗಳ ನೋಡಿ
ಸುವಿವೇಕದಿಂದೆ ಸಂಚರಿಸಿ ಮನಸಿನ ಕಾರ್ಯ
ಭುವಿಯೊಳಿನ್ನೆಂತು ಗೆಲಿಸಲಿಯನ್ನಗಪಹಾಸ್ಯವಾಯಿತೆಂದೊಳ ಸೊರಗಿದಂ ||೬೨||

ಇತ್ತ ಬರ್ಮನ ಮಡದಿ ಮರಳಿ ದ್ವಾರಕ್ಕೆ ಬಂ
ದಿತ್ತಂಡ ಮನಿಸಿನಿಂದ ಆಗ್ರಜನು ಪೋದುದಂ
ಚಿತ್ತದೊಳ್ತಿಳಿದು ಸುತಪೇಳ್ದ ನುಡಿ ದಿಟವೆಂದು ಕೆಲಕಾಲ ಕಳಿಯಲಾಗ
ಮತ್ತೇಭಿಗಾಮಿನೆಗೆ ನವಮಾಸ ತುಂಬಿ ವರ
ಕೃತ್ತಿವಾಸನ ಕರುಣದಿಂ ಶುಭಮುಹೂರ್ತದೋಳ್
ಪೆತ್ತಳು ಸುಪುತ್ರನ ಸುವರ್ಣದ ಜಡೆಗಳಿಂದಲಾ ಶಿಶು ವಿರಾಜಿಸುತಿರೆ ॥೬೩॥

ಶಿವನ ದಯದಿಂದಲಾ ಶಿಶು ಶಶಿಯ ತೆರದಿಂದೆ
ತವೆ ಪ್ರಕಾಶದಿ ತನ್ನ ಪಿತಮಾತೆಯರ್ಗೆ ಉ
ತ್ಸವದೋರುತಿರುಲಿತ್ತ ವೈಕುಂಠವಾಸನಾಗಿರ್ದ ಶ್ರೀಗೋವಿಂದನು
ಜವದಿಂದೆ ಪಂಚಾಂಗಮಂ ಪಿಡಿದು ವೇಷಾಂತರದಿ
ಭವನಮಂ ಬಿಟ್ಟು ಮಾರ್ಗವ ಪತ್ತಿಸಲೆ ರಂಜಿ
ಸುವ ಚಂದ್ರಗಿರಿಪುರವ ಪೊಕ್ಕು ಶಕುನವ ಪೇಳುತರಸಿನ ಮನೆಗೆ ಬಂದನು ॥೬೪॥

ಪಟ್ಟಶಾಲೆಯೊಳು ಕೂತುರ್ಭಕಗೆ ಮುದದಿ ಮೊಲೆ
ಗೊಟ್ಟು ವಿಶ್ರಮಿಸುವ ಸುರಾವತಿಯಂ ಕರೆದು ಶಿಶು
ಪುಟ್ಟಿದ ಮುಹೂರ್ತವು ಹೀನವು ಒಂದು ಮಾಸಕ್ಕೆ ನಿನ್ನಾಗ್ರಜೆಗೆ ಮರಣವು
ಕೆಟ್ಟೆನಯ್ಯಯ್ಯೋ ದುಷ್ಪುತ್ರನುದ್ಭವಿಸುತೊಡ
ಹುಟ್ಟಿದೆನ್ನಣ್ಣಗಪಮೃತ್ಯು ಒದಗಿಸಿತೆ ದಯ
ವಿಟ್ಟು ಮುಂದಿದಕೆ ಪ್ರಾಯಶ್ಚಿತ್ತವೇನೆನಗೆ ಪೇಳಿ ಪಾಲಿಪುದೆಂದಳು ॥೬೫॥

ಎಲೆ ಸುರಾವತಿ ನಿನ್ನ ಪುತ್ರನಂನೊಯ್ದು ಹರಿ
ಪುಲಿಗಳಿಹ ಗಿರಿಗಂಹರದ ಮಧ್ಯ ಕಾಂತಾರದಲಿ ಬಿ
ಡಲ್ಕಾ ಹರಿಗೆ ಮರಣ ತಪ್ಪುವದೆಂದು ಪೇಳಲಾ ತರುಣಿಮಣಿಯು
ಹಲವು ಮಾತೇನೆನ್ನ ಪ್ರಾಣಮೊಂದಿರಲಿಂಥ
ಚಲುವಸುತನಂ ಕಾಂಬೆ ಒಡಹುಟ್ಟಿದಾಗ್ರಜಕು
ವಲಯದೊಳ್ದೊರಕನೆಂದಾಲೋಚಿಸುತ ಸುತನಂ ಬಿಡುವದಕೆ ಸಿದ್ಧಳಾದಳು ॥೬೬॥

ಹರಿಕಪಟಮಂ ಪೇಳಿ ವೈಕುಂಠಪುರಿಗೆ ತಾಂ
ತೆರಳಲಾವರ ಸುರಾವತಿ ಮಹಾದುಃಖದಿಂ
ಮರಮರನೆ ಮರುಗಿ ಮಗನಂ ಜರೆದು ಮೌನದಿಂ ಚಾರರಂ ಕರೆದು ಭರದಿ
ತರುಳನಂ ಪಿಡಿದೆತ್ತಿ ತಂದಾಗ ತೊಟ್ಟಿಲದೊ
ಳಿರಿಸಿಜರದಂಬರವ ಪೊದಿಸುತ್ತವರ ಕರಕೆ
ಹರುಷಮಂ ತೊರೆದಿತ್ತು ಗೃಹದಿಂದ ಕಳಿಸಿದಳು ಸತ್ಪುತ್ರನೆಂದರಿಯದೆ ॥೬೭॥

ಬಲು ಭರದಿ ತೊಟ್ಟಿಲವ ಪೊತ್ತುಕೊಂಡಾ ಚರರು
ನಿಲಯಮಂ ಬಿಟ್ಟು ಕೂದಲಿನ ಬನದ ಹಾಲಹೇ

ವಲಿಹಳ್ಳಕ್ಕೆ ತಂದು ವಟವೃಕ್ಷಮಂ ನೋಡಿ ತೊಟ್ಟಿಲವ ನೆರಳಿಗಿಳಿಸಿ
ಬಲುಭಾಗದೊಳಿರ್ಪ ಬಾವಿಯಂ ಕಾಣುತಲಿ
ಜಲಪಾನಕಾಗಿ ಸರ್ವರು ಕೂಡಿ ತೃಷಿಯಿಂದ
ಲಲಿತಮಾನಸರಾಗಿ ಮೈಮರೆದು ತೊಟ್ಟಿಲವ ಬಿಟ್ಟು ಒಳಗಿಳಿದರವರು ॥೭೮॥

ಅತ್ತ ಶಂಕರನು ಈ ಶಿಶುವಿನ ಮಹಾಕಷ್ಟಮಂ
ಚಿತ್ತದಿಂದರಿದು ವಾಯುವ್ಯನಂ ಕರೆದೊರೆದ
ನಿತ್ಯಭುವಿಯೊಳಗೆ ಹೇವಲಿಹಳ್ಳದಂತ್ಯದಿಹ ವಟವೃಕ್ಷ ನೆರಳಿನಲ್ಲಿ
ಉತ್ತಮೋತ್ತುಮ ಪುತ್ರನವತರಿಸಿರುವನವನಂ
ಪೊತ್ತು ತಂದಿಳಿಸಿ ಜಲಪಾನಕ್ಕೆ ಭಟರೆಲ್ಲ
ಮೊತ್ತಗೂಡುತ ಬಾವಿಯೊಳಗಿಳಿದಿಹರು ಬಾಲನಂ ಪೋಷಿಸುವದೆಂದನು ॥೭೯॥

ಮೃಡನಾಜ್ಞೆಯಂತೆ ನಿಲನಾಕ್ಷಣದೊಳತಿ ವೇಗ
ದೊಡನೆ ಚಂಡಪ್ರಚಂಡದಿ ಬೀಸಲಾ ಮರಂ
ತಡಿಯದವನಿಗೆ ಬಾಗುತೇಳ್ವನಿತ್ತದೊಳಾಗಲಾ ಬಾಲನ ತೊಟ್ಟಿಲ
ಗಿಡದಂತ್ಯಶಾಖೆಗೆದು ಸಿಲ್ಕಿ ಮೇಲ್ಭಾಗದೆಸೆ
ಗಡರಲ್ಕೆ ಮಾರುತಂ ಶಾಂತರೂಪಮಂ ತಾಳಿ
ಜಡಪಾನಗೈದು ಭಟರತಿ ಭರದಿ ಬಂದು ನೋಡ್ದಡೆ ತೊಟ್ಟಿಲವಲ್ಲಿಲ್ಲದಿರಲು ॥೮೦॥

ಭೂರಿವಿಸ್ಮಯದಿಂದಿದೇಂ ತಿಳಿಯದೆಂದು ತ್ವರ
ಸಾರಲವರ್ರೈವರೆದೆಗುಂದಿ ಕಂಪಿಸಿ ರಕ್ತ
ಗಾರಿ ತಕ್ಷಣದೊಳಸುವಳಿದರಾ ಶಿವಕಲಾಭರಿತನಸು ಮಹಿಮೆಯಿಂದ
ಮಾರಾರಿ ಶಿಶುವಿನಂ ನೋಡಬೇಕೆಂದು ಗಂ
ಭೀರದಿಂ ಗಿರಿಜಾತೆ ಸಹಿತ ಸುರಪತಿ ಬ್ರಹ್ಮ
ನಾರದಾದಿ ಪ್ರಮುಖ ಮುನಿಗಳಂ ಕೂಡಿ ಹೇವಲಿಹಳ್ಳಕ್ಕೆ ತಂದರು ॥೮೧॥

ವಟವೃಕ್ಷದಗ್ರದೋಳ್ನೇತಾಡ್ವ ತೊಟ್ಟಿಲವ
ನಿಟಿಲಾಕ್ಷ ಕಂಡು ಸುರನಾರಿಯರ ಕರದಿಂದೆ
ಪಟುಪರಾಕ್ರಮಿ ಸಿದ್ಧಬೀರನೆಂಬಭಿದಾನವಿಡಿಸಲಾಗುಮೆಯು ಮುದದಿ
ಲಟಲಟನೆ ಮುದ್ದಿಟ್ಟು ಭಸ್ಮಮಂ ಧರಿಸಿ ದೂ
ರ್ಜಟಿಯ ಸತ್ವವ ಬಲಿದು ಭೂಮಂಡಲದಿ ಘನಾ
ರ್ಭಟದಿ ರಿಪುಗಳ ಗೆದ್ದು ಭುವನದೋಳ್ಬಾಳೆಂದು ಪರಸಿದಳು ಪಲತೆರದೊಳು ॥೮೨॥

ನಂದಿರೂಢನು ಘನಾನಂದದಿಂ ಬಾಲಕನ
ಮಂದಚರಿತಗಳನ್ನು ಮಂದಹಾಸದಿ ಪೇಳಿ
ಇಂದುವದನಕೆ ಮುದ್ದುಗೊಟ್ಟು ಸುಪ್ರೇಮದಿಂ ಅಂಬರವನಂಗ ಕೊಡಿಸಿ
ಬಂದ ತ್ರಿದಶರ್ಗೆ ನಿರ್ಬಂಧಪಡಿಸಿದ ಮುಂದೆ

ಕಂದನಂ ನಾವಗುಂಬಿಡದೆ ಸಂರಕ್ಷಿಸುವ
ದೆಂದು ವಿಧವಿಧದಿಂದೆ ಪೇಳ್ದನವಸರದಿ ಕೈಸನ್ನೆಯಂ ಮಾಡುತಾಗ ||೭೩||

ವರಸುರ್ವಾಣಧೇನುವಿಗೆ ನಿತ್ಯದೊಳು ಪಾ
ಲ್ಗರಿದು ಪಾಲಿಸುವಂತೆ ದಿಕ್ಪಾಲರಂ ಕಾವ
ಲಿರುವಂತೆ ಮಾರುತನಿಗೆ ಶಾಂತಿಗೊಳುವಂತೆ ಸುರವರನೀಕ್ಷಿಸುವಂತೆ ನೇಮ
ವಿರಿಸಿ ಪರಮೇಶ್ವರಂ ಪರಿತೋಷದಿಂದ ತ
ತ್ತರುಳನಂ ತೊಟ್ಟಿಲದೊಳಿಟ್ಟು ರಜತಾಚಲದ
ವರಪಥವ ಪಿಡಿದು ಸುಕ್ಷೇತ್ರಗಳ ನೋಡುತ್ತ ಕೊಲ್ಲಿಪಾಕಿಗೆ ಬಂದನು ||೭೪||

ರಾಜಬೀದಿಯೊಳು ಸಲೆ ರಾಜಿಸುವ ತತ್ಪುರದ
ರಾಜನಾರಾಮದೊಳಗಿರ್ಪ ವೃಕ್ಷದ ಕೆಳಗೆ
ರಾಜಶೇಖರನಿಳಿದು ಜಪತಪಕ್ಕನುವಾಗಿ ಕೂತಿರೆ ಕುತೂಹಲದೊಳು
ಓಜಿಯಿಂ ಸೋಮೇಶನೃಪ ಬಂದು ಶಿವನ ಪಾದ
ರಾಜೀವಕೆರಗಿ ಪೇಳಿದೆನ್ನ ಗೃಹಕ್ಕೈದು
ಭೋಜನವ ಮಾಳ್ಪುದೆಂದತ್ಯಧಿಕ ಭಕ್ತಿಯಿಂದ ಕರಮುಗಿದು ಬೇಡಿಕೊಂಡ ||೭೫||

ಜಗದೀಶ್ವರಂ ನೃಪನ ನುಡಿಗೊಪ್ಪಿ ಪುಳಕದಿಂ
ದಗಜಾತೆ ಸಹಿತ ರಾಜಾಲಯಕ್ಕೈ ತರಲು
ಲಗಿಬಿಗಿಯೊಳಾ ಭೂಪ ಸಾಸಿರೆಡೆಗಳ ಮಾಡಿ ಭಜಿಸಿ ಪೂಜಿಸಿದನಾಗ
ನಿಗಮವೇದ್ಯನು ನರೇಂದ್ರನ ದಿವ್ಯ ಭಕ್ತಿಯ ಸು
ಬಗೆಯ ತಿಳಿವದಕೆ ಬಿಟ್ಟೋಡಿದನು ಬಯಲಾಗಿ
ಪಗಲ ಮಧ್ಯದೊಳು ಮಾದಿಗರ ಚನ್ನಯ್ಯನಾಲಯವನೊಳಪೊಕ್ಕ ಭರದಿ ||೭೬||
ಚನ್ನಯ್ಯ ಸಾಷ್ಟಾಂಗಗೈದೆದ್ದು ಬಂದ ಬಗೆ
ಯನ್ನು ಕೇಳಲ್ಕೆ ಶಿವ ಕ್ಷುದ್ಬಾಧೆಯಿಂ ಬಂದೆ
ಅನ್ನವನು ನೀಡಿಸಲವಂ ಪೇಳ್ದ ನಾವು ಮಾದಿಗರು ನಿಮಗುಚಿತಮಲ್ಲ
ಇನ್ನಿಲ್ಲಿ ನಿಲ್ಲದಾಚೆಗೆ ನಡಿಯರೆನೆ ಮೃಡಂ
ಮುನ್ನನಾಂ ಬಂದ ಮನೆಯಿಂ ಬಿಟ್ಟು ಮುಂದೆಸೆಗೆ
ಬನ್ನ ಬಟ್ಟಡಿಯಿಡಲ್ಕೊಲ್ಲೆ ನೀಡೆನಗೆ ಪಾಕವಂ ತಂದು ಪ್ರೀತಿಯಿಂದ ||೭೭||

ನಂಬಿಗೆಯನಿಟ್ಟು ಚನ್ನಯ್ಯ ಪಾಕವನು ತಂ
ದಂಬಿಕಾ ವಲ್ಲಭಗೆ ನೀಡಿ ನೀ ಸೇವಿಸಂ
ತೆಂಬ ವಾಕ್ಯವ ಕೇಳಿ ಘನಹರುಷದಾಳಿ ಮುಗುಳೆಂದನಾ ಪರಮಾತ್ಮನು
ಡಾಂಭಿಕರ ಮನೆಗೆ ಪೋಗುವೆನೆ ನಾಂ ನಿನ್ನಂತೆ
ಅಂಬಲೆಯ ನೀಡಿದರೆ ಸೇವಿಪನೆ ನೀನೆನ್ನೊ
ಳಿಂಬಿಂನಿಂ ಕೂತು ಸಹಭೋಜನವ ಮಾಡಿದರೆ ಸ್ವೀಕರಿಸುತಿಹನೆಂದನು || ೭೮ ||

ಹರನು ಚನ್ನಯ್ಯನೋಳ್ಸಹ ಭೋಜನಂಗೈದು
ಪರಮಸಂತೋಷದಿಂದಿರಲಿತ್ತ ಭೂಪಾಲ
ಅರಮನೆಯೊಳಭವನಿಲ್ಲದೆ ಬಗೆಯನರಿತು ಪರಿಪರಿಯಿಂದ ಚಿಂತಿಸಿದನು
ಭರದಿಂದ ಮಾದಿಗರ ಮನೆಯಿಂದ ಪರಮಾತ್ಮ
ಚರಿಸಿ ಮಾಯದಿ ಬಂದು ಮೋದದಿದರಮನೆಯೊ
ಳಿರುತಿರಲ್ಕರಸ ಕಂಡಿದುವರೆಗೆ ಮಾಯದಿಂದೆಲ್ಲಿರ್ದಿರೆಂದು ನುಡಿದ ||೭೯||

ಎಲೆ ಭಕ್ತ ಕೇಳು ಮಾದಿಗರ ಚನ್ನಯ್ಯನೊಳು
ಸಲೆ ಪಾಕಗೈದೆ ನಿಮ್ಮಯ ಭಕ್ತಿಗೆಣೆಯುಂಟೆ
ಕಲಿಯುಗದ ಸುಖಸಾಕು ಶಿವಪುರಿಗೆ ಬಾರೆಂದಭಯ ಕೊಟ್ಟ ಸರ್ವೇಶನು
ವಿಲಸಿತ ಮಧ್ಯಮಾರ್ಗದೊಳ್ ವಟವೃಕ್ಷ ಕಂಡು ಆ
ತಳದಿದರ ಬುಡದಿ ವಾಸಿಸಿದಂಗನೆಯರು ಗರ್ಭವ ಧರಿಸಲೆಂದು ಪೇಳಿ ||೮೦||

ಆ ವೃಕ್ಷಕ್ಕೆ ವರವಿತ್ತು ಶಂಕರಂ ಮುಂದಕ್ಕೆ
ತಕ್ಷಣವೆಗಮಿಸಿನು ದೇವಗನ್ನಿಯರಿತ್ತ
ಸಕ್ಷಮದಿ ತತ್ತರುವಿನೆಡೆಗೆ ಬಂದದರ ನೆರಳಲ್ಲಿ ವಿಶ್ರಮಿಸುತಿರಲು
ಅಕ್ಷಯಾತ್ಮಕನ ನಿರ್ಬಂಧದಂತಬಲೆಯರು
ಕುಕ್ಷಿಗಡುತರಮಾಗಿ ನವಮಾಸ ಕಳೆದೋರೆ
ಈಕ್ಷಿಸುತ ತಂತಮ್ಮೊಳಗೆ ಚಿಂತಿಸಿದರು ಕುಂದಿಟ್ಟನೇತಕೆ ಶಂಕರ ||೮೧||

ಸುರರಿದಂ ಕಂಖಡೊಡೆಮ್ಮನು ದಂಡಿಸುವರೆಂದು
ಪರಿಪರಿಯೊಳೆತ್ನೈಸಿ ಚಳ್ಳುಗುರಿನಿಂದುದರ
ಚರಚರನೆ ಸೀಳಿ ಶಿಶುಗಳನ್ನೈದು ಮೊತ್ತಗೂಡಿಸಿ ತೆಪ್ಪದೊಳು ಹಾಕುತ
ತವರನದಿಗೆ ಬಿಟ್ಟು ತಮ್ಮಯ ಸ್ಥಲಕೆ ಸಾರಲವು
ಹರಿದು ಬಂದೊಂದು ತಟಕತಿ ಶೀಘ್ರದಿಂ ಬಂದು
ವರಿಯಲಿದು ಅತಿಚೋದ್ಯಮವಾಗಿ ಕಾಂಬುವದುಯೇನೆಂಬೆ ಶಂಕರನ ಮಹಿಮೆ ||೮೨||

ನದಿಯ ತಟದಲಿ ಹಟ್ಟಿ ಚಾಮರಾಯೊಂಬೋರ್ವ
ಮುದಿಮಾನುಷನು ಕುರಿಗಳಂ ಕಾವುತಿರಲವನ
ಬದಿಗೆ ತಿಪ್ಪಂಬಲ್ಕಾ ಪಂಚಶಿಶುಗಳಂ ದಿಟ್ಟವರಿದೀಕ್ಷಿಸಿದನು
ಬೆದರದೆ ಅವುಗಳಂ ಕೊಂಡು ಮನೆಗೆ ಬಂದವಸ
ರದಿ ಸದಮಲಜ್ಞಾನಿ ಶಾಂಭವಿಯಂಬ ತನ್ನ ನಿಜ
ಸುದತಿಯಂ ಕರೆದು ಕೂಸುಗಳೈದವಂ ಕೊಟ್ಟು ಹರುಷಾಬ್ದಿಯೋಳ್ಮುಳಿಗಿದಂ ||೮೩||

ಸತಿ ಶಾಂಭವಿಯು ಮುಪ್ಪಿಗೀ ಶಿಶುಗಳೆನ್ನಗೆ ದೊ
ರೆತವೆಂದು ಸ್ತ್ರೀಯರಂ ಕರೆಸಿ ತೊಟ್ಟಿಲಳಿಟ್ಟು
ಹಿತದಿ ಲಕ್ಷ್ಮೀ ಮಾಯಿ ಮಾಕಾಂಳಿ ಮಂಕಮ್ಮ ಅಕ್ಕಮ್ಮನೆಂಬಾಖ್ಯವ

ಚತುರತೆಯೊಳಿಟ್ಟು ಸುತೆಯರಂ ಕಂಡು ಹಿಗ್ಗುತಲು
ಸತತೆ ಪಾಲ್ಬೆಣ್ಣೆಯನ್ನಿತ್ತು ಬೆಳಸುತ್ತಲಿರೆ
ಮತಿವಂತರಾಗಿ ಪ್ರಾಯಕ್ಕೆ ಬರಲವರು ಕುರಿಗಾಯ್ವುದಕೆ ಪೋಗ್ವೆವೆನಲು ||೮೪||

ಮಾತಾಪಿತರು ಮೋಹದಿಂದಪ್ಪಣೆಯನು ಕೊ
ಟ್ಟಾತುರದಿ ಕಳಿಸಲ್ಕೆ ಕೋಲು ಕರದಲಿ ಪಿಡಿದು
ಪ್ರೀತಿಯಿಂದೈವರು ಕುರಿಗಳಂ ಮೇಸುತ್ತ ಹಾಲಹೇವಲಿಹಳ್ಳಕ್ಕೆ
ಖ್ಯಾತದಿಂದೈತರಲ್ಕಾತ ವೃಕ್ಷದ ಮೇಲೆ
ನೇತಾಡುತಿಹ ತೊಟ್ಟಿಲದೊಳಿರ್ಪ ಶಿಶು ಪರಮ
ಪ್ರೀತಿಯಿಂ ಚೀತ್ಕಾಗಧ್ವನಿಗಯ್ಯಲಾಗವರಿದೇಂ ಚೋದ್ಯವೆಂದರಾಗ ||೮೫||

ಅವರೈವರಕ್ಕತಂಗಿಯರೊಳಗೆ ಭೇದವು
ದ್ಭವಿಸಿ ತಚ್ಛಿಶುವನ್ನನಗೆ ನನಗೆನ್ನುತ ಮನದಿ
ತವೆವಾದಿಪುದಕೆ ಪ್ರಾರಂಭಿಸಲ್ಕೆ ಅಕ್ಕಮ್ಮನೊಂದು ಯುಕ್ತಿಯಂತೆಗೆದಳು
ಶಿವನೆಮ್ಮೊಳಂತಃಕರುಣವಿಟ್ಟು ತರುಳನಂ
ನವರಸದೊಳಾರುಡಿಯೊಳಿಳಿಸುವನೋ ಅವರ್ಗೆ ಸ
ಲ್ಲುವದೆಂದು ಪಂತಮಂ ಗಟ್ಟಿ ಪೇಳಿದಳು ನಿಷ್ಕಾಪಟ್ಯ ಬುದ್ಧಿಯಿಂದ ||೮೬||

ಪರಮೇಶ್ವರನಂ ಪ್ರಾರ್ಥಿಸುತ ಪಂಚಸ್ತ್ರೀಯರಾ
ತರುವಿನ ಕೆಳಗೆ ಪಂಕ್ತಿಗೊಂಡುಡುಡಿಯನೊಡ್ಡಿ ನಿಂ
ತಿರಲಾ ಭವ ಆ ಸಿದ್ಧಬೀರನಂ ಅಕ್ಕಮ್ಮನ ಉಡಿಯೊಳೊಗೆದನು ಸೂಕ್ಷ್ಮದಿಂ
ಚರಣವಿಲ್ಲದ ಪೆಳವನಡಿಗೆ ಗಂಗೆಯು ತಾನೆ
ಚರಿಸಿ ಬಂದಂತೆ ದಾರಿದ್ರನಾಲಯಕೆ ವರ
ಸಿರಿದೇವಿ ಮೆಚ್ಚಿ ಬಂದಂತೆಮಗೆ ಶಿಶು ತಾನೆ ದೊರೆತುದೆಂದಾ ಮೋದದಿ ||೮೭||

ಮಗುವಿನ ಸುಲಕ್ಷಣಗಳಂ ನೋಡಿ ತವಕದಿಂ
ಮೊಗಕೆ ಮೊಗವಿಟ್ಟು ಮುದ್ದಂಗೈದು ದಿನಗಳಿಯ
ಲಗಜಾರಮಣನು ಅಕ್ಕಮ್ಮನಿಗೆ ನಿಜರೂಪದೋರಿ ಸನ್ಮೋಹದಿಂದೆ
ಮಿಗೆ ರಂಜಿಸುವ ಸಿದ್ಧಬೀರನಿತಿಹಾಸಮಂ
ಬಗೆಬಗೆಯೊಳಾದ್ಯಂತ ತಿಳಿಸುತಲಿ ಸುತೆಯೆ ನಿ
ನ್ನಗೆ ಸುಖವನಿತ್ತಾಸುಬಾಲಕಂ ಮುಂದೆ ಪಾಲಿಪನೀಗಲವನ ಪೊರೆಯ್ಯೆ ||೮೮||

ಸಿದ್ಧಬೀರನ ಶಿರದೊಳಭವ ಕರವಿಟ್ಟು ಭುವ
ನೋದ್ಧಾರವಾಗಲಿ ಸಕಲಯಂತ್ರ ಮಂತ್ರಗಳು
ಸಿದ್ಧಿಯಾಗಲಿ ಪೇಲಿದನೃತ ವಚನಗಳೆಲ್ಲ ಭೂವಲಯದೊಳಗೆ ನಿರುತ
ಬದ್ಧವಾಗಲಿ ರಿಪುಗಳಂ ಜೋಡುವದಕೆ ಸ

ನ್ನುದ್ಧರಾಗಲಿ ಮುಂದೆ ಶ್ರೀ ರೇವಣಾರಾಧ್ಯಂ ಪ್ರ
ಸಿದ್ಧಗುರು ನಿನಗಾಗಲೆಂದು ಆಶೀರ್ವದಿಸಿ ಕೈಲಾಸಗಿರಿಗೈದಿದಂ ॥೮೯॥

ಈ ಸುಚಾರಿತ್ರಮಂ ಬರದೋದಿದರ್ಗೆ ಮೇಣ್
ಲೇಸಾಗಿ ಯಿದರರ್ಥವಾಧ್ಯಾಂತ ಪೇಳ್ದರ್ಗೆ
ಬೇಸರಿಯದುರೆ ಭಕ್ತಿಯಿಂದ ಕೇಳಿದವರ್ಗೆ ಪದುಳದಿಂ ಪಠಿಸಿದರ್ಗೆ
ಭಾಸಿತ ಸಕಲ ಭೋಗಭಾಗ್ಯಮೋಕ್ಷಂಗಳ ವಿ
ಲಾಸದಿಂದಿತ್ತುಕುರಿತೌಘಮಂ ಸಂಹರಿಸಿ
ವಾಸ ರಸ್ತಾಪುರ ಶ್ರೀ ಶರಭಲಿಂಗೇಂದ್ರ ರಕ್ಷಿಸುವನಿಹಪರದೊಳು ॥೯೦॥

ಇಂತೆಬಲ್ಲಿಗೆ ಶರಭೇಶ್ವರ ಪಾದಾಬ್ಜಭೃಂಗನು
ವಿಶಿಷ್ಠವಿದ್ವಜ್ಜನ ವಿಧೇಯನು ಆದ ಭೀಮನಾಯಕ
ಕವಿಯಂ ಪ್ರಣೀತಮಪ್ಪ ಹಾಲ್ಮತೋತ್ತೇಜಕ ಪುರಾಣದಲ್ಲಿ
ಅಂತು ಸಂಧಿ ೭ಕ್ಕಂ ಪದನು ೩೭೦ಕ್ಕೆ ಮಂಗಲಂ ಮಹಾಶ್ರೀಶ್ರೀಶ್ರೀ

## ಸಂಧಿ ೮-ಶಿವಸಿದ್ಧ ಬೀರೇಶ್ವರನ ಚರಿತ್ರೆ

ಸೂಚನೆ ॥

ಇಂದುಗಿರಿ ಪುರಬಿಟ್ಟು ಬೆಳ್ಳಗುತ್ತೀಪುರಕೆ
ಬಂದಲ್ಲಿ ನಿಂದು ವೈಕುಂಠಕ್ಕೆ ಪೋಗಿ ಹರಿ
ನಂದನೆಯ ಪಾಣಿಗ್ರಹಣಗೈದು ಶಿಷ್ಯರಿಲ್ಲದಕೆ ಶಿವಪುರಿಗೆ ಪೋಗ್ವಂ

ಚಿದ್ರೂಪ ಚಿನ್ಮಯ ನಿರಂಗಮುನಿಸಂಗ ಹೈ
ಮಾದ್ರಿಜಾಹೃದ್ವನಜ ಭೃಂಗಪುರಭಂಗ ವಿಲ
ಸಾದ್ರಜರಾಜಸಖತುಂಗ ನಿಜಲಿಂಗ ಪನ್ನಂಗಧರ ಮಂಗಲಾಂಗ
ಕ್ಷುದ್ರವ್ರಜೋಪದ್ರನಾಶ ಪರಮೇಶ ಭವ
ಚಿದ್ರಸುರವರನುತ ಸುಖಂಕರಸು ಶಂಕರ ಸು
ರದ್ರುಮ ಗಿರೀಶ ವೀರಭದ್ರ ಪಿತರುದ್ರ ಭವನೇಶನೆಮ್ಮಂ ಪೊರೆಯಲಿ ॥೧॥

ಅಕ್ಕಮ್ಮನತ್ಯಧಿಕ ತ್ವರದಿ ಕುರಿಗಳನು ತ
ನ್ನಕ್ಕನವರಿಂ ಮೊತ್ತಗೊಳಿಸಿ ತೊಟ್ಟಿಲವ ಪೊ
ತ್ತಕ್ಕರದಿ ಪಥವಿಡಿದು ಐವರೊಂದಾಗಿ ಸ್ವಗೃಹಕೆ ಬಂದರು ಬೇಗದಿ
ಚಿಕ್ಕ ಬಾಲನಂ ಕಂಡು ಮಾತಾಪಿತರ್ಗಳಿದು
ಸಿಕ್ಕಿತೆಲ್ಲೆಮೆಗೊರೆಯಬೇಕೆಂದೆನಲ್ಕವರು
ಮುಕ್ಕಣ್ಣ ಪೇಳ್ದ ಸಂಗತಿಯ ವಿಸ್ತಾರಮಂ ಪೇಳಿಕೊಂಡರು ಮುದದೊಳು ॥೨॥

ಪಿತಮಾತೆಯರು ಕೇಳಿ ಸಂತುಷ್ಟರಾಗಿ ವರ
ಸುತನಸಮಮಾಡಿ ಶಿವಸಿದ್ಧಬೀರನಂ ಸದಾ
ಹಿತದಿ ಪಾಲಿಸುತ್ತಿರಲ್ಕೆರಡು ವರುಷಗಳು ತುಂಬಿದವಾಗ ಸುಕುಮಾರಗೆ
ಚತುರತನದಿಂ ಬಾಲಲೀಲೆಯಂ ತೋರಿ ತನ
ಗತಿ ಪ್ರೇಮಳಾದಕ್ಕನೊಳು ತೊದಲ್ನುಡಿಗಳಂ
ಶೃತಿಸುವದಕಾರಂಭಗೈದು ದಟ್ಟಡಿಯಿಡುತ ಚರಿಸುವದಕನುವಾದನು ॥೩॥

ತಮ್ಮನ ಸುಬಾಲಲೀಲೆಗಳು ಕಂಡಕ್ಕಮ್ಮ
ಸುಮ್ಮಾನಗೊಳುತಿರಲ್ಕೊಂದು ದಿನ ಸಿದ್ಧಬೀ
ರಂ ಮಹಾಕೋಪದಿಂ ಮರಿಗಳುಡೆಂ ಜಲದ ಕ್ಷೀರವಂ ತಂದು ತಂದು
ದುಮ್ಮಾನಗೊಳದೆನಗೆ ಕುಡಿಸಿದಿರಿದುವರಿಗೆ ಮುಂದಂ
ಮಮ್ಮ ಸಾಕುಸಾಕೆಂದು ಪಾಲೊಲ್ಲೆನೆಂ
ದುಮ್ಮಳಿಸಲವಳು ಘನವೆಸನಗೊಂಡು ಗಜಾರಮಣನ ಸನ್ನುತಿಗೈದಳು ॥೪॥

ಇಂದುಧರ ಮೆಚ್ಚಿ ಖೇಚರಗೆ ಪೇಳಲ್ಯಾತ
ಬಂದನಕ್ಕಮನ ನಿಜಲಯಕ್ಕೆ ಮೋದದಿಂದೆನೆಲೆ
ಹಿಂದೊಂದು ದಿನ ಸಕಲಸುರಯಕ್ಷರೊಂದಾಗಿರಲ್ಕೈಭವನ
ಸುಂದರಿ ಸುಪಾರ್ವತೆಗೆ ಗಂಧರ್ವನಾರಿತಾಂ
ನಿಂದಿಸಲ್ಕಾ ಶಿವೆಯು ಕಡುಕೋಪವನು ತಾಳು
ಮಂದಭಾಗ್ಯಳೆವ ಸುಂದರಿಯೊಳಗೆ ಕುರಿಯಾಗಿ ಪುಟ್ಟೆಂದು ಶಾಪವಿತ್ತಳು ॥೫॥

ಅಗಲಾ ಸುರನಾಗಿ ಬೆದರಿ ಬಾಯ್ಬಿಟ್ಟು ಬೆಂ
ಡಾಗಿ ಕರಮುಗಿದು ನಿಶ್ಶಾಪ ಕೇಳಿದೊಡೆ ಭೂ
ಭಾಗದೊಳ್ ಸಿದ್ಧಬೀರೇಶನೆಂಬೋರ್ವ ಘನಮಹಿಮ ಜನಿಸುವವನಿಗೆ
ರಾಗದಿಂ ನಿನ್ನ ಮೊಲೆಗಳಿಂ ಪಾಲ್ಗರಿದು
ಬೇಗದಿಂ ಕೊಡಲವಂ ಸ್ವೀಕರಿಸಿದಡೆ ಶಾಪ
ನೀಗಿ ಮೊದಲಿನ ರೂಪ ಬರುವದಿದು ಪುಸಿಯಲ್ಲವೆಂದು ಪೇಳಿದನವಳಿಗೆ ॥೬॥

ಅದರಂತೆ ಗಂಧರ್ವನಾರಿ ತಾಂ ನಿನ್ನ ಕುರಿ
ಯುದರದೋಲ್ಪುಟ್ಟಿರ್ಪಳಾ ಕುರಿಯ ಗುರ್ತು ಸ
ಮ್ಮದದಿ ಕೇಳದು ಕಂಚುಬೋಳಿಯ ಸುಗುಡಿಯು ಮತ್ತೆ ಕೊರಳಲ್ಲಿ ಮಲೆಯಿಂದ ಮೆರೆವದು
ಇದನೆಲ್ಲ ನೀನರಿದು ಹಿಂಡಿನೋಳ್ಪಡುಕಿ ಚಂ
ದದಿ ತೋರ್ಪುಗಳ ಮೊಲೆಯ ಪಾಲ್ಗರಿದು ಪ್ರೇ
ಮದಿಂ ಚದುರೆ ನಿನ್ನನುಜನೆನಿಸಿದ ಸಿದ್ಧಬೀರಂಗೆ ಕುಡಿಸೆಂದು ಬಯಲಾದನು ॥೭॥

ಅಕ್ಕಮ್ಮನತಿ ಶೀಘ್ರದಿಂದೆದ್ದು ಹಿಂಡಿನೊಳ
ಪೊಕ್ಕು ಖೇಚರನೊರೆದ ಕಂಚು ಬೋಳಿಯನು ಹಿಡಿ

ದಕ್ಕರದಿ ಹರನಾಮಂ ಸ್ಮರಿಸಿ ಕೊರಳಮಾಲೆ ಪಿಡಿಯಲ್ಕೆ ಪಾಲ್ಗರಿಯಲು
ಚಕ್ಕನೆ ಮನೆಗೆ ಬಂದು ಸಿದ್ಧಬೀರಗೆ ಕೊಡಲು
ತಕ್ಕ ಪಾಲೆಂದು ಸೇವಿಸಲಾಕೆ ನಿತ್ಯದೊಳು
ಮಿಕ್ಕ ಕುರಿಗಳನುಳಿದು ಸುಗುಡಿಯ ಕೊರಳ ಮೊಲೆಯು ಕರೆಯುತಿರ್ದಳು ನೇಮದಿ ||೮||

ಈ ಪರಿಯೊಳವನು ಕೆಲಗಾಲಗಳೆದೆನ್ನದೋ
ಳಾಪೇಕ್ಷ ಮಾಡಲಾಗಕ್ಕಮ್ಮ ತನ್ನಗೆಪ
ರೋಪಕಾರವಗೈದ ಕಂಚುಬೋಳಿಯ ಬಳಿಗೆ ಬಂದು ಸಂಪ್ರೀತಿಯಿಂದ
ನೀ ಪರಮಪುಣ್ಯಯುತ ಕಕುರಿಯಂದೆನ್ನುತ್ತ ನಿ
ಷ್ಕಾಪಟ್ಯದಿಂ ಪೂಜೆಗೈಯ್ಯಲದು ಜವದಿ ನಿ
ಶ್ಯಾಪವಾಗುತ್ತಸುವಳಿದು ಬಿತ್ತು ಭೂಮಿಯಲಿ ಕಂಡು ಬೆರಗಾದಳವಳು ||೯||

ಸತ್ತ ಕುರಿಯಂ ತಮ್ಮ ಹಟ್ಟಿಯೊಳು ಹೂಳಿ ಏಕ
ಚಿತ್ತದಿಂದಲಿ ಸಮಾಧಿಯಂಗೈದು ಪೂಜಿಸದೆ
ಳುತ್ತುಂಗ ಬಲ ಸಿದ್ಧಬೀರ ಚಿಕ್ಕಾಟಕ್ಕೆ ಪೋದ ಸರಿಬಾಲರೊಳಗೆ
ಚಿತ್ತರದ ಚಂಡಿನಾಟವ ಕಂಡು ಮನವನದ
ಕಿತ್ತು ಬಂದಕ್ಕನಿಗೆ ಕಂತುಕವ ಮಾಡಿಸೆಂ
ದೊತ್ತರದಿ ಕರೆಕರೆಯಗಯ್ಯಲವಳನುಜಂಗೆ ಪೇಳಿದಳದೆಂತೊಡೆ ||೧೦||

ಉಂಡಾಡು ಮನೆಯೊಳಗೆ ಚಂಡಿನಾಟಕ್ಕೆ ನೀಂ
ಕಂಡ ಹುಡುಗರ ಕೂಡಿಕೊಂಡು ಪೋದರೆ ನಿನಗೆ
ದಂಡಿಸುವೆನೀಗವರ ಪಂಡಿತರು ಮೆಚ್ಚುವರೆ ಪುಂಡ ಶಿವಸಿದ್ಧಬೀರ
ಭಂಡಪೋರರುಗಳಿಹ ತಂಡಕ್ಕಡಿಯನಿಡಲು
ಮಂಡೆಗೆ ಬಡಿದು ಮಾನ ಕೊಂಡು ಬಿಡುವೆನು ಮನದಿ
ಖಂಡಿತದ ನುಡಿ ಪೇಳ್ವೆ ಹಿಂಡು ಜನರೊಳು ನೀಂ ಪ್ರಚಂಡನೆನಿಸದಿರೆಂದಳು ||೧೧||

ಬೇಡ ಕಂಡುಕದಾಟ ಕೀಳಹುಡುಗರ ಬೇಟ
ಮಾಡು ಮಧುರದ ಊಟಯನಗಿಡುತಿಹರೆ ಕಾಟ
ಬೇಡಿಕೊಂಬುವೆನಕಟ ಇಡುವದೆನ್ನೊಳು ನೋಟಕರ ಕರೆಯದೊಳಿತಲ್ಲವು
ಕೇಡು ಬರುವುದು ಸಿದ್ಧಬೀರ ಕೇಳಿದು ಬದ್ದ
ಕೋಡಿ ಆಟಕೆ ಸಿದ್ಧನಾಗುವರೆ ಸನ್ನುದ್ಧ
ನಾಡೊಳಗಿರುವ ವೃದ್ಧಜನರಿಗಿದು ವಿರುದ್ಧಯಂದು ಬುದ್ಧಿಯ ಪೇಳ್ದಳು ||೧೨||

ಸಡಗರದಿ ಅಕ್ಕಮ್ಮನಂದ ನುಡಿ ಕೇಳದಿರೆ
ದಿಡಿಗಿನಿಂ ಧನ ಕರದಲಿ ಕೊಂಡು ಕಮ್ಮಾರ
ರೊಡಿಯ ಪದ್ಮಣ್ಣನ ಬಳಿಗೆ ಪೋಗಿ ರತ್ನಕಂಡುಕಗೈಸಿ ವೀಯಲಾಗ
ಮೃಡಸಿದ್ಧ ರೇವಣನು ಬಂದು ಬೀರೇಶಂಗೆ

ಸಡಗರದಲಿ ಲಿಂಗದೀಕ್ಷೆಯನಿತ್ತು ಮುದದಿಂದ
ಮೃಡನ ಪಂಚಾಕ್ಷರೀ ಮಂತ್ರಮಂ ಬೋಧಿಸುತ್ತ ಸಿದ್ಧ ಪೋಗುತಲಿತ್ತ ||೧೩||

ಅಂಗಜಹರನ ಸ್ಮರಿಸಿ ಕಂಡುಕವನೆಗರಿಸುತ
ಮಂಗಲಾತ್ಮಕ ಸಿದ್ಧರೇವಣನ ನುತಿಸಿ ನಿಲು
ವಂಗಿ ಮುಂಡಾಸ ಧರಿಸುತ ಸಿದ್ಧಬೀರ ತಾಂ ಬಂದ ನಡುಬೀದಿಯೊಳಗೆ
ಅಂಗಡಿಗಳಿಹ ಬೈಲ ಮುಂಭಾಗದೊಳಗಲ್ಲಿ
ಸಂಗನಬಸವನೆಂಬ ತುಂಗಧನಿಕನ ಪುತ್ರ
ಲಿಂಗಬಸಪ್ಪನಿರಲವಗೆ ಕಂತುಕದಿಂದೆ ಪೊಡೆಯಲಸುವಳಿದು ಬಿದ್ದ ||೧೪||

ನೋಡಿದಂ ಬೀರೇಶ ಬಿದ್ದ ಬಾಲಕನ ಬಿ
ಟ್ಟೋಡಿದಂ ಮೆಲ್ಲನಡಿಯಿಡುತ ಬರುಬರುತ ತ್ವರೆ
ಮಾಡಿದಂ ಬೇರೆ ಪಥವಿಡಿದು ಸ್ವಗೃಹಕೆ ಬಮದೊಡಿಯ ಗುರುವಿನ ಧ್ಯಾನದಿ
ಕೂಡಿದಂ ಭಜಿಸಿ ಪೂಜಿಸಿ ನಮಿಸಿ ವರಗಳಂ
ಬೇಡಿದಂ ತದ್ಗುರುವಿನಮಳ ಮಹಿಮೆಗಳ
ಕೊಂಡಾಡಿದಂ ವೆಸನವಿಲ್ಲದೆ ಧೈರ್ಯಪರನಾಗಿ ಮನೆಯೊಳಗೆ ವಾಸಿಸಿದನು ||೧೫||

ಇತ್ತ ಕೆಲಬಾಲರೊಂದಾಗಿ ಭರದಿಂ ಪೋಗಿ
ಸತ್ತ ಹುಡುಗನ ತಂದೆತಾಯಿಗುಸುರಲ್ಕವರು
ತತ್ತರದಿ ರೋಧಿಸುತ್ತೆದೆಗುಂದಿ ಮನನೊಂದು ಪರವಶದಿ ಬಂದರಾಗ
ಮತ್ತಮಾ ತರುಳ ಮೃತಿ ಹೊಂದಿರ್ದುಂ ನೋಡಿ
ಸುತ್ತನಿಂದಿರ್ದ ಬಾಲರ್ಗೆ ಕೇಳಿದರಿವನ
ನೆತ್ತಿಯೊಳ್ಪೊಡೆದ ಪಾಪಿಷ್ಟನಾಮಂ ಯಮಗೆ ತ್ವರದಿಂದೆ ಪೇಳೆಂದರು ||೧೬||

ಬೀರನೆಂಬುವ ಹುಡುಗ ಮಣಿಮಯದ ಚಂಡಿನಿಂ
ಹಾರಿ ಹೊಡೆಯಲು ಲಿಂಗಬಸವ ಭೂಮಿಗೆ ಬಿದ್ದು
ಭೂರಿಶ್ರಮೆಯಿಂದ ಒದ್ದಾಡಿ ಮರಮರುಗಿ ಪ್ರಾಣವ ಬಿಟ್ಟನೆಂದೊರೆದರು
ಮೀರಿತವರಿಗೆ ದುಃಖಕೋಲ್ಗುದಿಗೆ ಕತ್ತಿಕ
ಠಾರಿ ತಕ್ಕೊಂಡು ಕೆಲರೋಡಿ ಬಂದಕ್ಕನಿಗೆ ದೂರಿ
ದುರ್ವಾಕ್ಯದಿಂ ಬೇದುದಂ ಕೇಳಿ ಬೀರೇಶನೆದುರಿಗೆ ಬಂದನು ||೧೭||

ಕೊಲ್ಲಿದ ದುರಾತ್ಮನ್ಯೆತಂದನೆಂದವಸರದಿ
ಬಲ್ಲಿದರು ಪೋಗಿ ಖಡ್ಗವನೆತ್ತಿ ಕಡಿಯಲ್ಕೆ
ಸಲ್ಲಲಿತ ವಜ್ರಕ್ಕೆ ಪೊಡೆದಂತೆಯಾಗಲತಿ ವಿಸ್ಮಯಂಬಟ್ಟರವರು
ಬಲ್ಲವರು ಬೀರನಂ ಕರೆದು ಕೊಂಡವಸರದೊ
ಳಲ್ಲಿಂದ ಲಿಂಗಬಸವನು ಬಿದ್ದಸ್ಥಲಕೆ ಬರಲು
ಯಲ್ಲರರಿವಂತೆ ಭಸ್ಮವ ತಳೆದು ಪ್ರಾಣಪ್ರತಿಷ್ಠೆಯಂಗೈದನಾಗ ||೧೮||

ನೆರದ ಜನರೆಲ್ಲ ಶಿವಸಿದ್ಧ ಬೀರನಂ ಕಂಡು
ನರನಲ್ಲಿವಂ ಜಗಕೆ ಶಿವನ ದಯದಿಂ ಬಂದ
ಪರಮ ಮಹಿಮಾಂಕನೆಂದೆಡಬಲದಿ ಕೆಲರು ತಂತಮ್ಮೊಳಗೆ ಮಾತಾಡ್ದರು
ಸುರನೀತನೆಂದು ಕೈಸನ್ನೆ ಮಾಡ್ದರು ಕೆಲರು
ಪರಮಾತ್ಮನೇ ಭುವನಕಿಳಿದನೆಂದರು ಕೆಲರು
ಪರಿಪರಿಯೊಳರ್ಚಿಸಿ ನಮಸ್ಕರಿಸಿದರು ಕೆಲರು ಕೊಂಡಾಡಿದರ್ಕೆಲಬರು ||೧೯||

ಮಾರನೆಯ ದಿನದೊಳಕ್ಕಮ್ಮನಿಲ್ಲಿರಲನುಜ
ಗಾರೇನು ಮೋಸಮಂ ಮಾಳ್ಪರೋ ತಿಳಿಯದೆಂ
ದಾರೈಸಿ ಯೋಚನೆಯೊಳಾ ಸಿದ್ಧಬೀರನಂ ಕೊಂಡು ಸ್ವಗೃಹವ ಬಿಟ್ಟು
ಧಾರುಣಿಯೊಳೆಸವ ಬೆಳ್ಳಿಯಗುತ್ತಿ ಪಟ್ಟಣದ
ದಾರಿಯಂ ಪಿಡಿಯಲ್ಕೆರಸಿಕೋತ್ತಮರು ಬಂದು
ಭೂರಿವಿಶ್ವಾಸದಿಂ ಪೇಳಿದರು ನೀತಿಯಂ ಪತಗುಟ್ಟಿ ನಿಂತರವರು ||೨೦||

ಇಲ್ಲಿರಲು ಮುಂದೆ ಮಗನರ್ಥಗಳು ಸಂಧಿಸುವ
ವೆಲ್ಲರೊಂದಾಗಿ ಪರಿಪರಿಯೊಳಿರುಯಂಬುವದು
ಸಲ್ಲದೆಂದೀರ್ವರೊಂದಾಗಿ ತಲೆತಗ್ಗಿಕೊಂಡೆಡಬಲವ ನೋಡ್ದರವರು
ಮೆಲ್ಲಮೆಲ್ಲನೆ ಮುಂದಡಿಗಲಿಡುತೆ ಪುಳಕದಿಂ
ದೆಲ್ಲರಿಗೆ ಪೇಳುತರಿಂದಪ್ಪಣೆಯಕೊಂಡು
ನಿಲ್ಲದೆ ಚರಿಸಲಾಗ ಪುರಜನರು ಬೆರಗಾಗಿ ನಿಂತು ನೋಡುತಲಿರ್ದರು ||೨೧||

ಮುಂದಕ್ಕೆ ಪೋಗಿ ಶಿವಸಿದ್ಧಬೀರಂ ಮರಳಿ
ಹಿಂದಕ್ಕೆ ನೋಡುತಿರೆ ನಿಂತ ಜನರರಿವಂತೆ
ಕಂದುಗೊರಲನ ಸ್ಮರಿಸುತಕ್ಕನಂ ಕೂಡಿಕೊಂಡಲಿರ್ಪ ಹುತ್ತಿನೊಳಗೆ
ಚಂದದಿಂ ಪೊಕ್ಕರೀರ್ವರು ಸರ್ಪರೂಪದಿಂ
ಹಿಂದೆನಿಂದಿರ್ದ ಜನರೋಡಿ ಹುತ್ತಿನ ಬಳಿಗೆ
ಬಂದು ನೋಡಲ್ಕೆ ಮುಂದಕೆ ಹೆಜ್ಜೆಯಿಲ್ಲದಿರೆ ತಿರುಗಿದರು ತಮ್ಮಪುರಿಗೆ ||೨೨||

ಹುತ್ತಿನೊಳಗಿರ್ಪ ಬೀರೇಶ ಮೇಣಕ್ಕಮ್ಮ
ಚಿತ್ತಶುದ್ಧದಿ ಮೇಲಕ್ಕೈತಂದು ಮುಂದಿಲ್ಲಿ
ಚಿತ್ತರದ ನಾಗಠಾಣೆಂಬ ಪುರಪುಟ್ಟಲೆಂದರಿಕೆಗೊಟ್ಟರು ಹರುಷದಿ
ವತ್ತರದಿ ಬೆಳ್ಳಿಗುತ್ತಿಗೆ ಬರಲ್ಕೆಲರು ಕಳೆ
ವೆತ್ತ ಬೀರನಂ ಕಂಡು ಬೆರಗಾಗಿ ತಂತಮ್ಮ
ಮೊತ್ತಗೂಡ್ದಲ್ಲಲ್ಲಿ ಹಿಂದುಮುಂದಾಗಿ ವರ್ಣಿಸಿದರಾತಾಶ್ಚರ್ಯದಿ ||೨೩||

ನಗೆಮುಖದ ನಸುದೆರೆದಬಾಯಿ ನುಣ್ಪಿಡಿದಂಗ
ಮಿಗೆರಂಜಿಸುವ ಸುವರ್ಣಚ್ಛಾಉಯವಿಡಿದ ಜಡೆ

ಸೊಗಸಿನಿಂ ಬಿಗಿದು ಕಟ್ಟಿದ ಕಾಶಿಯರೆವಿರಿದ ಕುಂದುಮಲ್ಲಿಗೆಯ ಪಲ್ಲು
ಸುಗುಣ ಸುಂದರ ಸುಕಳೆ ಸರಸಿರುಹಸಮನಯನ
ನಗಧರಾತ್ಮಜನಸಮರೂಪಮಂ ಕಂಡಿವಂ
ಅಗಣಿತ ಮಹಿಮನಾಗಿ ತೋರ್ಪಸುರನಾವನೋ ಧರೆಗಿಳಿದನೆಂದರವರು ‖೧೪‖

ಅನುಜಕರಾಗ್ರ ಪಿಡಿದಕ್ಕಮ್ಮನೈ ತರುವ
ದನು ಕಂಡು ಲಂಬೋದರನ ದಂತಿಮುಖಕೆ ಭೂ
ಜನರು ಬೆದರುವರೆಂದು ನರವದನಮಂ ಧರಿಸಿ ಪುತ್ರನಂ ಕರೆದುಕೊಂಡು
ಜನನಿ ಗಿರಿಜಾತೆ ಗೌರವದಿಂದ ಭವನದೊಳು
ಮಿನುಗುತಿಹ ಸುಕ್ಷೇತ್ರ ನೋಡಲೋಸುಗ ಬಂದ
ಳೆನುತ ತಂತಮ್ಮೊಳಗೆ ಮಾತಾಡುತೆದ್ದು ಬಂದೀಕ್ಷಿಸಿದರುಲ್ಲಾಸದಿ ‖೧೫‖

ನೆರೆದ ಜನರೊಳಗೋರ್ವ ಹೇಮಣ್ಣನೆಂಬ ಹಿರಿ
ಗುರುಬನವಸರದಿಂದೆ ಬಂದು ವಂದಿಸಿ ನಿಮ್ಮಾ
ಪುರಮಾವುದಾವ ಪೆಸರರುಹು ಜತೆಯಾಗಿರ್ಪ ತರುಳನಿವನಾರೆಂದನು
ಧರೆಯೊಳೆನಗಕ್ಕಮ್ಮನೆಂಬರೆನಗನುಜನಿವ
ಹರಸಿದ್ಧ ಬೀರನೆಂಬಭಿದಾನ ಮರಳಿ ಕೇಳ್
ಮೆರೆವ ಮಂದಲಗಿರಿ ನಗರವು ಜನ್ಮಸ್ಥಾನವೆಂದು ಪೇಳ್ದಳು ಪುಳಕದಿ ‖೧೬‖

ಅನಿತರೋಳ್ರೋಗದಿಂದಸುವಳಿದ ಕುರಿಗಳಂ
ಘನವೆಸನದಿಂ ಪೊತ್ತುಕೊಂಡು ಬರುವ
ದನ್ನೋಡುತಯಿದೇತಕೆ ಸತ್ತವೆಂದಕ್ಕಮ್ಮನವಸರದಿ ಕೇಳಿದುದುಕಾ ಮನುಜರು
ಹಿರಿರೋಗದಿಂದಳಿಹವೆನಲಾಗ ಬೀರೇಶ
ಗುರುನಾಮಮಂ ಸ್ಮರಿಸಿ ಭಸ್ಮವ ತಳಿಯಲಾಕ್ಷಣದಿ
ಕುರಿಗಳೆದ್ದಡಿಯಿಡಲು ಹೇಮಣ್ಣ ಬೆರಗಾಗಿ ಸ್ವಗೃಹಕೆ ಕರೆದೊಯ್ದನು ‖೧೭‖

ಅವರಿರುವದಕ್ಕೆ ಪಾಲ್ಮತದವರ್ಕೂಡಿ ನಿಜ
ಭವನಮಂ ರಚಿಸಿದರ್ಮತ್ತೆ ಮನೆಮೆನಗೊಂದು
ತವೆಬೆಳದ ಕುರಿಯನುಡುಗರೆಗೊಡುದೆಂದರಿಕೆ ಮಾಡಿಕೊಂಡರು ಮೋಹದಿ
ಶಿವಸಿದ್ಧಬೀರನು ಕುರಿಯಕೊಂಡು ಮಾಡಲೇಂ
ಅವಿರತ ಪೊರೆದು ತರುವರಾರೆಮಗೆನಲ್ಕೆ ವೈ
ಭವದಿಂದೆ ಹೇಮಣ್ಣ ತನ್ನ ಸುತನಂ ಕೊಟ್ಟು ಕರಮುಗಿದ ಬೀರೇಶಗೆ ‖೧೮‖

ಹೇಮಣ್ಣನಿತ್ತ ಗೋವಣ್ಣನಂ ಕೊಂಡು ನಿಜ
ಧಾಮಕ್ಕೆ ಪೋಗಿ ಏಳ್ನೂರು ಕುರಿಗಳಂ ಕೂಡಿಸಿ
ಪ್ರೇಮದಿಂ ರಕ್ಷಿಸೆನ ಲಕ್ಕಮ್ಮನತಿ ಮುದದೊಳವೊಂದು ಕೋಲುಕೊಟ್ಟು
ನೇಮನಿತ್ಯದಿ ಪೋಗಬೇಕೆಂದು ಪೇಳುತಿ

ತ್ತಾ ಮಹಾನಿಲಯದೊಳಗಿರ್ದು ಶ್ರೀಗುರು ಸಾರ್ವ
ಭೌಮ ಸಿದ್ದೇಶ್ವರನ ನಿರುತದಿ ನುತಿಸಿ ಸುಖಿಸುತಿರಲು ಶಿವಸಿದ್ಧಬೀರಂ ॥೧೯॥

ಕೆಲಕಾಲ ಕಳೆದು ತನಗೊಂದು ಬಿಲ್ಮಾಡಿಸಿ
ಘಳಿಲನೆ ತಾರೆಂದಮಿತ ವೆಸನದಿಂದಕ್ಕನೋಳ್
ಛಲವಿಡಿದು ವಿಧವಿಧದಿ ಕಾಡುತಿರಲಾಕೆ ಮಮಕಾರ ಸಂಯುಕ್ತಳಾಗಿ
ಯಲವೊ ನಿನ್ನಗೆ ಹಿಂದೆ ಚಂಡುಮಾಡಿಸಿಗೊಟ್ಟ
ಫಲದಿ ಮಂದಲಗಿರಿನಗರ ಬಿಟ್ಟು ಬಂದೆವು ವಿ
ಮಲತನದಿ ಧನುಬೇಡಿ ಮುಂದೇನನರ್ಥ ಮಾಡುವೆಯೋ ಬೇಡೆಂದೊರೆದಳು ॥೨೦॥

ಬಗೆಬಗೆಯೊಳೊರೆದರವ ಕೇಳದಿರಲಕ್ಕಸಾ
ಲಿಗರ ಶಿರಸಪ್ಪನ ಬಳಿಗೆ ಪೋಗಿ ತಕ್ಷಣದಿ
ಮಿಗೆ ಮೆರೆವ ಧನುವ ಮಾಡಿಸಿಕೊಂಡು ತಂದಿತ್ತಳನುಜನೊಪ್ಪಿದನದಕ್ಕೆ
ಬಿಗಿದು ಕಾಸಿಯ ಕಟ್ಟಿ ಮೀಸಲ ಮನದೊಳು ಬಿ
ಲ್ದೆಗೆದು ಪೂಜಿಸಿಕೊಂಡು ಗುರುವರನ ಸ್ಮರಿಸುತ್ತ
ವಿಗಡ ಮತೆಯಿಂ ಶರವ ಪೂಡಿ ಸಿಂಜನಿಯನೊದರಿಸುತ ನಡೆದನು ಮುಂದಕೆ ॥೨೧॥

ಬರದಿ ಬೈಲಿಗೆ ಬಂದು ನೀರ್ತರವ ಏಳ್ನೂರು
ತರುಣಿಯರ ತುಂಬಿದ ಕೊಡಕ್ಕೆ ಬಾಣವನೆಸೆಯ
ಲುರೆ ಛಿದ್ರ ಬೀಳಲವರತಿ ಕೋಪದಿಂ ನಿಂದು ಜನನಿ ಜನಕರ ಕಾಣದ
ಪರಮ ನೀಚನೆ ಕುಂಭಗಳಿಗೆ ಶರದಿಂ ಪೊಡೆದು
ಮರಿಯಾದೆ ಭಂಗಮಂ ಮಾಡುವದಿದೊಳ್ಳಿತವೆ
ಸರಿಯಲ್ಲವೆನಲವಂ ಮರಳಿ ಮೇಣದ ಬಾಣದಿಂ ಬಂದು ಮಾಡಿನೆಡೆದ ॥೨೨॥

ನಿಂದಿಸಿದ ನುಡಿಗಳವನೆದೆಯೊಳಗೆ ನೆಟ್ಟು ಜವ
ದಿಂದಾಲಯಕ್ಕೆ ಬಂದಕ್ಕನಿಗೆ ಕರಮುಗಿದು
ಅಂದನೆನ್ನಂ ಪಡೆದ ತಂದೆತಾಯಿಗಳಾರು ತಿಳಿಸೆಂದು ಹಟವಿಡಿದನು
ಚಂದದಿಂದಕ್ಕಮ್ಮನನುಜನಂ ಸಂತೈಸುತ
ತಂದಳ್ಮರಳಿ ನಿನ್ನ ಪಿತ ಭರ್ಮದೇವ ಮೇ
ಣೆಂದು ಗಿರಿನಗರ ಜನ್ಮಸ್ಥಾನ ಹರಿ ಸಹೋದರಿ ಸುರಾವತಿ ಮಾತೆಯು ॥೨೩॥

ಅನುಜ ಕೇಳ್ನೀನು ಪುಟ್ಟಿದ ಸಪ್ತದಿನಕೆ ನಿ
ನ್ನನು ಸೇರಿಸಿದನು ಕೂದಲಿನ ವನದ ಮಧ್ಯದೊಳ್
ಅನಿತರಲಿ ಕುರಿಗಾಯ್ವುದಕ್ಕೆ ನಾಂ ಬಂದೆತ್ತಿಕೊಂಡು ತಂದೆನು ಗೃಹಕ್ಕೆ
ಯನಲವಂ ಕೇಳ್ದು ಯನ್ನಡವಿಗೆ ಕಳಿಸಿದರಾರು
ಯನಗೊರಯಬೇಕೆನಲ್ಕಗುಳಿ ಪೇಲ್ದಳು ಮುದದಿ
ದನುಜಾರಿ ತನ್ನ ಸುತೆಯಳಿಗೆ ಪತಿಯಾಗುತವನೆನುತ್ತ ಮೋಸವಗೈದನು ॥೨೪॥

ಅಕ್ಕನೊಳು ನಾನು ಪುಟ್ಟಿದ ಕೆಲವು ದಿನಕೀವ
ನಕ್ಕೆ ಸೇರಿಸಿದ ಸೋದರಮಾವನೆಂಬಧಮ
ರಕ್ಕಸಾಂತಕನಿರುವ ಪುರಮಾವುದಾತನಾತ್ಮಜೆಯು ಪೆಸರೇನೆಂದನು
ಮಿಕ್ಕ ಮಾತೇನಾತ ವೈಕುಂಠದೊಳಗಿರು
ಚಿಕ್ಕಪ್ರಾಯದ ಕನ್ನಿಕಾಮಾಲಿಯಂಬೋರ್ವ
ತಕ್ಕ ಸುತೆಯಿರ್ಪಳವಳಂ ನಿನ್ನಭಯಕೆ ಕಾವಲಿಯೊಳಿಟ್ಟಿರುವ ಸತತಂ ||೩೫||

ಸಿದ್ಧಬೀರಂ ತ್ವರದೊಳೆದ್ದು ತನ್ನಕ್ಕಂಗೆ
ಶುದ್ಧಮನದಿಂ ಮೀಸಿ ತಿದ್ದಿ ಕಟ್ಟಿದಕಾಸಿ
ಬುದ್ಧಿಶೂನ್ಯನ ಸೆರೆಯೊಳಿರ್ದ ಕನ್ನಿಕೆಯನ್ನು ಗೆದ್ದು ತರುವೆನು ತವಕದಿ
ಯುದ್ಧಪರಿಮುಖದೊಳವರಿರ್ದ ನಿಜವಂನರಿತು
ವೃದ್ಧರಾಕ್ಷಸರ ನಾನೊದ್ದು ಬರ್ಪೆಂ ಯಿದು ನಿ
ಬದ್ಧವೆಂದರಿಯಂನನುದ್ಧರಿಪ ಬಿಡದೆ ಗುರುಸಿದ್ಧ ರೇವಣನೆಂದನು ||೩೬||

ತಮ್ಮಂಗೆ ಕೈ ಮುಗಿದು ಬೇಡೆಂದು ಪೇಳಲ
ಕ್ಕಮ್ಮನ ನುಡಿಗೆ ಮನಗೊಡದೆ ತವೆ ತನ್ನಾತ್ಮ
ಸಮ್ಮತೆಯೊಳಾಯುಧವಕೊಂಡು ಬಿಲ್ಲಂ ಪಿಡಿದು ಯುದ್ಧಕ್ಕೆ ಸಿದ್ಧನಾಗಿ
ದುಮ್ಮಾನಗೊಳದೆ ವೈಕುಂಠಕ್ಕೆ ಪೋಗಿ ಸೊಬ
ಗಿಮ್ಮೆರೆವುತತ್ಪುರವನೀಕ್ಷಿಸುತ್ತೊಡಲೊಳಗೆ
ಉಮ್ಮಳಿಸಿದಲೆ ರಾಜಬೀದಿಯಂ ಪಿಡಿದುವಳಪೊಕ್ಕನತಿ ತವಕದಿಂದೆ ||೩೭||

ಬರುಬರುತ್ತಾತ್ಮದೊಳು ಪರಮಾತ್ಮನಂ ಸ್ಮರಿಸಿ
ಗುರುಸಿದ್ಧ ರೇವಣನಂ ನೆನೆದು ಶಸ್ತ್ರಾಸ್ತ್ರಮಂ
ತ್ವರದಿಂದೆ ತೆಗೆದೊಂದು ಸ್ಥಲದಿರಿಸಿ ಬಳಿಕ ಬಳೆಗಾರ ವೇಷವನು ತಾಳಿ
ನೆರೆವೃದ್ಧನಾಗಿ ನಡುವೀಧಿಯೋಳ್ತರತರದಿ
ಮೆರೆವ ಬಳೆಗಳನೊಟ್ಟು ಮಾರುತಿರೆ ದಾದಿಯರು
ಸರಸದಿಂ ನೋಡಿ ಮನೆಗೈತಂದು ಕನ್ನಿಕಾಮಾಲೆಗೊರೆದರು ಮೋಹದಿ ||೩೮||

ಆ ಕನ್ನಿಕಾಮಾಲಿ ದಾಸಿಯೋರ್ವಳನು ಕರೆ
ದಾಕೆಗೊರೆದಳು ಬಳೆಯು ಬಂದ ಸಂಗತಿಯಂ ವಿ
ವೇಕಾನಾದೆನ್ನ ಜನಕಗೆ ಪೇಳಿ ಕರಕೊಂಡು ಬಾರೆಂದು ಕಳುಹಿಸಿದಳು
ಏಕಕಾಲಕೆ ಪೋಗಿ ಹರಿಗೆ ತಿಳಿಸಲ್ಕಾತ
ಸಾಕಾರದಿಂದೆ ಬಳೆಗಾರನಂ ಕರೆಸುತವ
ನಾಕಾರಮಂ ನೋಡಿ ವೃದ್ಧನೆಂದರಿದು ನಿಜಮಂದಿರವನೊಳಪೊಗಿಸಿದಂ ||೩೯||

ಕೋಲು ಕರದಲಿ ಪಿಡಿದು ಬಳೆ ಪೆಗಲ ಮೇಲ್ವೊತ್ತು
ಕಾಲೋರೆಯಿಡುತಕಂಪಾಯದಿಂ ಹರಿರಾಯ

ನಾಲಯವ ಪೊಕ್ಕು ವರಸುಂದರಿ ಸುಕನ್ನಿಕಾಮಾಲಿ ಸನ್ನಿಧಿಗೆ ಬಂದು
ಮೇಲೆಸೆವ ಮಣಿಮಯದ ಮಂಚದೊಳ್ಕುತಿರ್ದ
ಶೀಲೆ ಸಂಪನ್ನೆಯಂ ಕಂಡು ಬೆರಗಾಗಿ ಸ
ಲ್ಲೀಲೆಯಿಂ ವಾರ್ಧಿಕ್ಯ ಲಕ್ಷಣಗಳಂ ಮಾಜಿ ತನ್ನ ನಿಜಕಳೆದೋರ್ದನು ||೪೦||

ಅಂಚತಲ್ಪಕ ಸಿದ್ಧಗೊಳಿಸಿ ಮಣಿ ಕೆತ್ತಿಸಿದ
ಮಂಚೋಳ್ಕಡು ಸೊಬಗಿನಿಂದ ಕೂತಿರ್ದವರ
ಚಂಚಲಾಕ್ಷಿಯ ಸುಂದರಾಸ್ಯ ಸುಲಿಪಲ್ಲಾಲದುಟಿ ಕನ್ನಡಿಗಳ ತೆರದಿ
ಮಿಂಚಿಡಿದ ಕದಪುನಳಿದೋಳ್ಗಳಂ ನೆರೆನೋಡಿ
ಪಂಚಶರತಾಪವೆಗ್ಗಳಿಸಿ ವ್ಯಥೆಗೊಂಡೀ ಪ್ರ
ಪಂಚ ಸುಡುಸುಡುಲಿವಳನೊಯ್ಯದೀ ಪೃಥ್ವಿಯೊಳಗಿದ್ದೇನು ಫಲವೆಂದನು ||೪೧||

ಬಟ್ಟಮುಖ ನಿಡುಯಸಳ್ಗಣ್ಣ ಬಲಗಾತ್ರ ಬರ
ದಿಟ್ಟ ಸುಂದರರೂಪ ಕಂಡು ಮರುಳಾಗಿವನ
ಬಿಟ್ಟನೊಳಗೆಂತು ಹರಿ ತಿಳಿಯದಿವನಂ ಬ್ರಹ್ಮನೆಷ್ಟು ದಿನತಿದ್ದಿಳೆಯೊಳು
ಪುಟ್ಟಿಸಿದನೋ ಮಹಾಮಹಿಮನಂತೆಸೆವನೆಂ
ದಟ್ಟಹಾಸದಿ ಕರವ ಚಾಚಿ ನಾಚಿಕೆಯಿಂದ
ಕೊಟ್ಟಳಾತನ ಕೈಗೆ ಸೂಕ್ಷ್ಮದಿಂದಾತ ಬಳೆಯಿಡುತ ಯೋಚಿಸಿದ ಮುದದಿ ||೪೨||

ಪುಲ್ಲನೇತ್ರಿಯೆ ನಿನ್ನಗಿದು ತವರ್ಮನೆಯೋ ಮೇ
ಣೊಲ್ಲಭನ ಮನೆಯೋ ಮತ್ತೀಖಳರ ಕಾ
ವಲಿಯೊಳಿಟ್ಟರೇಕೆನಗೆ ವಿಸ್ತರಿಸಬೇಕೆಂದು ವಿನಯದಿಂ ಕೇಳಲವಳು
ನಲ್ಲನಿದುವರಿಗೆನ್ನಗಿಲ್ಲ ಮಾವನಮನೆಯಿ
ದಲ್ಲ ಜನಕನ ಮನೆಯಿಲ್ಲಿರ್ಪೆ ಸಾಕುಸಾ
ಕೆಲ್ಲಿ ಪತಿಯಲ್ಲಿ ರತಿಯಲ್ಲಿ ಗತಿಯಲ್ಲಿ ಜತೆ ದುರ್ದೈವಿಗೆ ||೪೩||

ಇಂದುಗಿರಿಪುರದ ಬರ್ಮನ ಸತಿ ಸುರಾವತಿಯ
ನಂದನೆನಿಪ ಸಿದ್ಧಬೀರೇಶಂನಿಲ್ಲಿಗೈ
ತಂದೆನ್ನ ನೊಯ್ವನೆಂದು ಈ ವಿಧದಿ ಪನ್ನೆರಡು ಸಾಸಿರ ಖಳರ ಮಧ್ಯದಿ
ತಂದೆಯು ಈ ಬಂಧನಗೈದು ನಿಲ್ಲಿಸಿದ ಆ
ಸುಂದರನು ಬಂದೆನ್ನ ತನ್ನ ನಿಜ ಮಂದಿರ
ಕ್ಕೆಂದೊಯ್ವನೋ ತಿಳಿಯದೆಂದು ಬಾಷ್ಪೋದಕವ ಸುರಿಸುತ್ತನೊಂದಳಾಗ ||೪೪||

ಕುಂಜರಗಮನೆ ಮೌನದಿಂದೆ ಕೊರಗುವರೆಯಿ
ನ್ನಂಜದಿರು ನಾಂ ಪೋಗಿ ಬೆಳ್ಳಗುತ್ತಿಯೊಳಿರ್ಪ
ಕಂಜಶರರೂಪ ಶಿವಸಿದ್ಧ ಬೀರೇಂದ್ರನಂ ಭರದಿ ಕರೆತರುವೆನೆಂದು
ಮಂಜುಳಾಂಗಿಗೆ ಮಾತುಗೊಟ್ಟು ಮಾಸಿದ ರೂಪ

ದಿಂ ಜವದಿ ಗೃಹಬಿಟ್ಟು ಸ್ವಸ್ಥಲಕೆ ಬಂದು ಮಂತ್ರ
ಮಂ ಜಪಿಸಿ ಭೋಜನವಗೈದು ಮನದೋಳ್ ಮುಂದಿನಾಲೋಚನೆಯ ಮಾಡ್ದನು ||೪೫||

ಮಾರನೆಯ ದಿನದಿ ಚಿಪ್ಪಿಗನಾಗಿ ತರತರದೊ
ಳಾರಾಜಿಸುವ ಕುಪ್ಪಸಗಳನ್ನು ತಕ್ಕೊಂಡು
ಮಾರುತ್ತ ಬೀದಿಯೊಳ್ ವಾಸಿಸಿರಲರಸನಾಲಯದ ದಾಸಿಯರು ನೋಡಿ
ಭೂರಿ ಶೀಘ್ರದಿ ಕನ್ನಿಕಾಮಾಲಿಯಂ ಕಂಡು
ಬೀರಲ್ಕೆ ಮರಳಿತಾತಂಗೆ ತಿಳಿಪುದುಕೋರ್ವ
ನಾರಿಯಂ ಕಳಿಸಿದಳು ಕಂಚುಕದ ಮೇಲಾಶವಿಟ್ಟಂತೆ ಸಂಭ್ರಮದಲಿ ||೪೬||

ದನುಜಾರಿ ವೃದ್ಧ ಚಿಪ್ಪಿಗನಂ ಕರೆಸಿ ಗೃಹಕೆ
ಮಿನುಗುತಿಹ ಕಂಚುಕವ ಕೊಡುವದೆಂದಾಜ್ಞೆಯಂ
ನನುನಯದಿಗಯ್ಯಲವ ಮುಗುಳೆಂದ ಮಾನಿನಿಯ ರಂದಗಳತೆಯನು ನೋಡಿ
ಕನಕಜರದಿಂದೆಸೆವ ಕುಪ್ಪಸವ ಕೊಡುವೆನಂ
ದೆನಲವ ನುಡಿಗೊಪ್ಪಿ ಸುತೆಯ ತಾಣಕೆ ಚಿಪ್ಪಿ
ಗನ ಕಳಿಸಲವ ಮೆಲ್ಲನೊಳ ಪೊಕ್ಕು ನಡೆದ ತನ್ನಾಪೇಕ್ಷೆ ತೀರಿತೆಂದು ||೪೭||

ಬೇಡಿದ ಜರದ ಕುಪ್ಪಸಗಳೀಯ್ಯಲವಳು ಕೊಂ
ಡಾಡಿ ನಿನ್ನಯ ಗ್ರಾಮನಾಮ ತಿಳಿಸೆನಲವಂ
ಗಾಡಿಕೋರರ ಗಂಡ ಬರ್ಮಭೂಪನ ಸತಿ ಸುರಾವತಿಯ ಸತ್ಯಪುತ್ರ
ಮೋಡಿಕಾರರ ಮಿಂಡ ವಿಷ್ಣುವಿನಳಿಯ ಚಂದ್ರ
ಚೂಡನೊರೆಸುತ ಸಿದ್ಧರೇವಣನ ಸಚ್ಛಿಷ್ಯ
ರೂಢಿಯೊಳು ಶಿವಸಿದ್ಧ ಬೀರ ನಿನ್ನಯ ಪ್ರಾಣಪದಕನೇ ನಾನೆಂದನು ||೪೮||

ಹೇ ಕಾಂತ ಮಹಾಬಂಧನದೋಳಿಟ್ಟೆರ್ಪ
ನೇಕಾಂತಸ್ತಲಕೆ ನೀನೈತಂದ ಸಂಗತಿಯ
ಶ್ರೀಕಾಂತ ನೋಡಿದೊಡೆ ಕೊಲ್ಲಿಸದೆ ಬಿಡನೆಂದು ಪೇಳಲವನಿಂತೆಂದನು
ಭೂಕಾಂತರೊಂದಾಗಿ ಬರಲವರನೆಲ್ಲ ಕೊಲ್ಲುವೆನು
ಮಾಕಾಂತನೆನ್ನ ಪರಿಪಾಲಿಸುವನು ನಿನ್ನೊಯ್ಯ
ಬೇಕಂತ ಬಂದಿಹೆನು ನೀ ಸಿದ್ಧಳಾಗು ನಿನ್ನಯವೆಸನ ಕಳಿಯಂದನು ||೪೯||

ಸಿದ್ಧಬೀರನು ಪೇಳ್ದ ನುಡಿಗೇಳಿ ತರುಣೀ ಪ್ರ
ಸಿದ್ಧ ನಿನ್ನಂಬಿಟ್ಟುಯಿರಲೆಂತೆನಲ್ಕವಂ
ಸಿದ್ಧರೇವಣನ ಸದ್ಭಕ್ತಿಯಿಂ ಸ್ಮರಿಸಲಾತಮ್ಮಹಾ ವಿಭವದಿಂದೆ
ಸಿದ್ಧಸುರನಾಗ ಕಿನ್ನರರ ಸಮ್ಮೇಳದಿಂ
ಸಿದ್ಧಾಗಿ ಗುಪ್ತದಿಂ ಬಂದನಂತಃಪುರಕೆ
ಸಿದ್ಧಿಸಿತು ನೆನೆದ ಸತ್ಕಾರ್ಯವೆಂದಾ ಬೀರಗುರುವಿನ ಪಾದಕ್ಕೆರಗಿದಂ ||೫೦||

ಪಾದಕೆರಗಿದಾ ಸಿದ್ಧಬೀರನಂ ಪಿಡಿದೆತ್ತಿ
ಪದುಮಾಕ್ಷ ಕನ್ನಿಕಾಮಾಲಿಯಂ ಕರೆದು ಸಂ
ಮುದದೋಳಿರ್ವರಿಗೆ ಸುರಿಗೆಯ ಸುತ್ತಿ ತೈಲಾರ್ಶಿನವ ಪಚ್ಚೆ ಪನ್ನೀರಿನಿಂ
ಸದಮಲ ಸ್ನಾನಮಂಗೈಸಿ ಕಣಕಣಗಟ್ಟಿ
ಮದನಾರಿಯಂ ಸ್ಮರಿಸಿ ಭಸಿತಮಂ ತಳೆದು ಚಂ
ದ್ರದ ಬೊಟ್ಟನಿಟ್ಟು ಮಂಗಲಸೂತ್ರಮಂ ಧರಿಸಿ ಶಾಸಿಯದಳಿಯಿಸಿದ ದಯೆಯೊಳು ||೫೧||

ಎಲೆಮಗನೆ ಪಂಚವರ್ಣದ ಹಯವು ನಿನಗಾಗಿ
ಮಲಹರಂ ನಿನ್ನ ಮಾವನ ಮನೆಗೆ ಕಳಿಸಿರುವೆ
ತಿಳಿ ತೀವ್ರ ನೀಂ ಪೋಗಿ ಯುಕ್ತಿಯಿಂದ ತಕ್ಕೊಂಡು ಕನ್ನಿಕಾಮಾಲಿಯನ್ನು
ಸಲೆಗೂಡಿ ಕರವಿಡಿದು ಸರ್ವರರಿವಂತೆ ಭುಜ
ಬಲದಿಂದ ಕೃಷ್ಣನಂ ಗೆದ್ದು ಪೋಗೆಂದುಸುರಿ
ನಿಲಯಮಂ ಬಿಟ್ಟು ಸಿದ್ಧೇಂದ್ರ ಸುರರನು ಕೂಡಿ ಪೋದ ಭೂಸಂಚಾರಕೆ ||೫೨||

ಮೋಹದಿಂ ಸತಿಗೆ ಮುಂದಿನ ಸೂಚನೆಯಂ ತಿಳಿಸಿ
ರಾಹುತನ ವೇಷಮಂ ಧರಿಸಿ ಪಟುಭರ ಸಂ
ದೋಹದೋಳ್ ಸಿಂಹಾಸನಾರೂಢನಾಗಿ ಕೂತಿರ್ದ ಹರಿಯೆಡೆಗೆ ಬಂದು
ಬಾಹುಯುಗಮಂ ಮುಗಿದು ಕೇಳಿದಂ ಮೀರಿದ ಮ
ಹಾ ಹಯವ ನಾನೇರಬಲ್ಲೆ ಮಲತವರನತಿ
ಸಾಹಸದೊಳಿರಿದು ಕೊಲ್ಲಲ್ಬಲ್ಲೆನದರಿಂದ ತಮ್ಮೊಳಿರ ಬಂದೆನೆನಲು ||೫೩||

ಹರಿಯಿವನ ರೂಪರೇಖಂಗಳ ಕಂಡು ನೀ
ನಿರುಯಮ್ಮೊಳೆಂದಭಯವಿತ್ತು ಚರನಂ ಕರೆದು
ತುರಗಮಂ ತರಿಸಲದು ಸಿದ್ಧಬೀರನಂ ಕಂಡು ಹೇಂಕರಿಸಿ ಪ್ರೇಮದಿಂದೆ
ಖುರಪುಟದಿ ನೆಲಗೆದರುತಡಿಗಡಿಗುಸುರ್ಬಿಡುತ
ಶಿರವನೊನೆಯುತ ಬರಲ್ಕಾತ ಕಡಿವಾಣಮಂ
ಕರದಿ ತಕ್ಕೊಂಡು ಪುಟನೆಗೆದು ಮೇಲೇರಿ ನಡಸಿದ ಸೂರ್ಯವೀಧಿಯೊಳಗೆ ||೫೪||

ಅಕ್ಕರದೊಳಿತ್ತತ್ತ ತಿರುಗಿಸತ್ತಂತರಿ
ಕ್ಷಕ್ಕೆ ಹಾರಿಸಿ ಮಹಾಸೌಧಾಗ್ರದೊಳ್ನಿಂದ
ಸೊಕ್ಕು ಜವ್ವನ ಸತಿಯ ಪಿಡಿದೆತ್ತಿ ಮುಂದೆ ಕೂಡ್ರಿಸಿಕೊಂಡು ಹಯವ ನಡಿಸುತ
ಚಕ್ಕನಲ್ಲಿಂದ ಹರಿಯೆಡೆಗೆ ಬಂದೊರೆದ ಸಮ
ರಕ್ಕಿದಿರ್ನಿದವರ ಗಂಡರಿಪುಗಳ ಮಿಂಡ
ದಿಕ್ಕಿನೊಳ್ಬಲ್ಲಿದಂ ಬರ್ಮಭೂಪನ ಸುತಂ ನಾನೊಯ್ವೆ ನಿನ್ನ ಸುತೆಯ ||೫೫||

ಪುಂಡರೀಕಾಕ್ಷ ಕೇಳುತತ್ಯಧಿಕ ಕೋಪದಿಂ
ಪುಂಡಖಳರನು ಕಳಿಸಲವರೋಡಿ ಬಂದೆಲವೋ

ಭಂಡಮನುಜನೆ ಕನ್ನಿಕಾಮಾಲಿಯನು ಕದ್ದುಕೊಂಡು ಪೋಗುವದುಚಿತವೇ
ತೊಂಡೆದುಟಿಯಳ ಬಿಟ್ಟು ಹಯವಿಳಿದು ಬಂದೆಮಗೆ
ಮಂಡೆ ಬಾಗಿದೊಡೆ ನಿನ್ನ ಸೆರೆ ಬಿಟ್ಟು ಪೊರೆವುವೆವು
ಖಂಡಿತದ ನುಡಿಗಳಂ ಮನದೊಳರಿದರಿದು ನೀಂ ಪಾರಾಗೆನಲ್ಬೀರನು ||೫೬||

ರಕ್ಕಸರೆ ನಿಮ್ಮಯ ಮನಕ್ಕೆ ಬಂದಂತೆನಗೆ
ಬಿಕ್ಕಲದ ನುಡಿಗಳಿಂ ಠಕ್ಕಿಸುವದುತ್ತಮವೆ
ಮುಕ್ಕನೊರೆಸುತಂ ಮಿಕ್ಕವರಗಂಜುವನೆ ಸೊಕ್ಕಿದ ಗಜನವನು
ಪೊಕ್ಕಂತೆ ನಾನೀಗ ಲೆಕ್ಕಿಸದೆ ನಿಮ್ಮ ಪ್ರಾ
ಣಕ್ಕತಿ ತವಕದಿಂದೆ ಧಕ್ಕೆ ಮಾಡುವೆನು ಬಿಡೆನು
ಸಿಕ್ಕು ಸಾಯ್ವುದಕ್ಕಿಂತ ದಿಕ್ಕಿಲ್ಲ ನಮಗೆಂದುರಕ್ಕರದಿ ಪೊರೆವೆನೆಂದ ||೫೭||

ಕ್ರೂರರಕ್ಕಸರವನ ನುಡಿಗೇಳಿ ತವಕದಿಂ
ಹಾರಿ ಗಗನಕೆ ಬೆನ್ನು ಹತ್ತಿ ಪೋಗಲ್ಕವಂ
ಭೂರಿ ಕೋಪದಿ ಹಯವನೊತ್ತಿ ಅಂತರದಿಂದೆ ಧೈರ್ಯಪರನಾಗಿ ಮುಂದೆ
ಸಾರಿದನವರ ಕರಕೆ ಸಿಗದೆ ಬೆಳ್ಳಿಯಗುತ್ತಿ
ದ್ವಾರಂ ಪೊಕ್ಕು ನಿಜಭವನಕ್ಕೆ ಬರೆ ಖಳರು
ಮೀರಿದ ಮಹಿಮನೆಂದು ತಿರುಗಿದರು ಹಿಂದಕ್ಕೆ ಬಂದರಾ ಕೃಷ್ಣನೆಡೆಗೆ ||೫೮||

ದೇವ ಚಿತ್ರೈಸು ತಮ್ಮಾಜ್ಞೆಯಂತೆ ಕಪಟ
ಬಾವ ಬೀರನಂ ಪಿಡಿಯಬೇಕೆಂದು ಪೋಗಲವ
ತೀವಿದ ಸುಶಕ್ತಿಯಿಂ ಹಯವ ನಡಿಸುತ್ತ ಪಾರಾದನೆಂದೊರೆದರಾಗ
ಕಾವನ ಜನಕ ಮೌನವರಿಸಿ ಮುಂದಿದಕೆ ಮ
ತ್ತಾವಗತಿಯೆಂದು ಮನದಲಿ ಚಿಂತಿಸುತಲಿ ಬಹು
ಸಾವಧಾನದಲಿ ವೈಕುಂಠಪುರಮಂ ಸದಾ ಪರಿಪಾಲಿಸುತಿರ್ದನು ||೫೯||

ಆನಂದದಿಂದಿತ್ತ ಸಿದ್ಧಬೀರಂ ಶಿವನ
ಧ್ಯಾನಮಂಗೈದು ದಿನಗಳೆಯುತ್ತಿರಲ್ಕಾಹಾ
ದಾನಿ ಹಿರಿಕುರುಬ ಹೇಮಣ್ಣ ಸತಿ ಮೋಹದ ಸುಸೂನು ಮೃತಿಗೊಂಡನಾಗ
ಮೌನದಿಂ ಬೀರೇಶನೆಡೆಗೆ ತರಲಾತ ಗುರು
ಧ್ಯಾನಮಂಗೈದು ಭಸಿತವ ತಳಿಯವನೆದ್ದು
ಸಾನುರಾಗದೊಳಡಿಗೆರಗಲಲ್ಲಿ ನೆರದಿರ್ದ ಜನರು ಕಂಡು ಬೆರಗಾದರು ||೬೦||

ಹಿರಿಕುರುಬ ಹೇಮಣ್ಣ ಭಯಭಕ್ತಿಯಿಂದ ಸ
ಚ್ಚರಿತ್ರನೆಂದೊಂದಿಸುತ್ತಂದನವ ಹಿಂದೋರ್ವ
ತರುಳ ಗೋವಣ್ಣನಂ ಕೊಟ್ಟಿರುವೆನೀಗಲೀ ಮಲ್ಲನಂ ಕೊಡುವೆನೆಂದನು
ಸ್ಥಿರದಿಂದ ಪೇಳಿ ಪಾದಕೆ ಹಾಕಿ ಪೋಗಲ್ಕೆ

ಗುರುಸಿದ್ಧ ಬೀರನವನಂ ತನ್ನ ಸೇವಕ್ಕೆ
ಕರುಣದಿಂದಿರಿಸಿಗೊಂಡಮಿತ ವೈಭವದಿಂದೆ ಪೂಜ್ಯನೆನಿಸಿದ ಮಹಿಮೆಯೊಳು ||೬೦||

ಮತ್ತೋರ್ವ ಕುಡುವಕ್ಕಲಿಗರ ಮುದ್ದಣ್ಣ ತಾ
ಸತ್ತ ಸುಕುಮಾರ ಬುಳ್ಳಯ್ಯನಂ ದುಃಖದಿಂ
ಹೊತ್ತುಕೊಂಡಾ ಸಿದ್ಧಬೀರನೆಲ್ಲಿಗೆ ಬಂದು ಬಾಲನಿಗೆ ಪ್ರಾಣವನ್ನು
ಇತ್ತು ಸಲಹೆಂದು ಮೊರೆಯಿಟ್ಟು ನುತಿಸಲ್ನಿಮಿಷ
ಹೊತ್ತಿನೊಳು ಗುರುವಿನಾಧಾರ ತಳೆದೆಬ್ಬಿಸ
ಲ್ವೆತ್ತ ಮಾತೆಯರ್ತಮ್ಮ ಸುತನಂ ಮಠಕೆ ಕೊಟ್ಟು ಪೋದರು ಗೃಹಕ್ಕೆ ||೬೧||

ಚಂಡೇಶನೆಂಬೋರ್ವ ಮುಗ್ಧ ಭಕುತನು ಭುವನ
ಮಂಡಲದಿ ಪುಟ್ಟಿ ಪಿತನಾಜ್ಞೆಯಂತನುದಿನದಿ
ಹಿಂಡು ತುರುಗಳ ಕಾಯ್ದು ಪಾಲ್ಗರೆದು ಸೈಕತದ ಲಿಂಗಮಂಗೈದೆರೆಯುತ
ಖಂಡ ಶಶಿಶೇಖರನ ಪೂಜಿಸುವದಂನುಪಿತ
ಕಂಡು ನಿಂದಿಸಲವನ ಕೊಲ್ಲಿ ಬಿಡಲಾಗುಮೆಯ
ಗಂಡ ಪ್ರಾಣವನಿತ್ತುದರಿದಿರ್ದೆವದಕಿಂದಧಿಕವಿದೆಂದರು ಕೆಲವರು ||೬೩||

ಮಲ್ಲಣ್ಣ ಮೇಣಾ ಬುಳ್ಳರಾಯರಿಂ ಸೇವ್ಯಗೊಂ
ಡುಲ್ಲಸಿತ ಶಂಕರನ ಸ್ಮರಿಸುತ್ತ ಸಿದ್ಧೇಶ
ನಲ್ಲಿ ಮನವಿಟ್ಟು ಬೀರೇಶ ಕೆಲಕಾಲವಿರಲೀರ್ವ ಸೇವಕರು ಕೂಡಿ
ಇಲ್ಲಿರ್ದು ಸೇವಿಸುವದಾಗದೆಂ ಮುಂದಿದ
ಕೊಲ್ಲೆಂದು ತಂತಮ್ಮ ನಿಲಯಕ್ಕೆ ಪೊಗಲಿ
ನ್ನೆಲ್ಲಿ ಶಿಷ್ಯರನು ಶೋಧಿಸಲೆಂದು ಭುವನಮಂ ಬಿಟ್ಟು ಶಿವಪುರಿಗೈದಿದಿಂ ||೬೪||

ಈ ಸುಚಾರಿತ್ರಮಂ ಬರದೋದಿದರ್ಗೆ ಮೇಣ್
ಲೇಸಾಗಿ ಯಿದರರ್ಥವಾಧ್ಯಾಂತ ಪೇಳ್ದರ್ಗೆ
ಬೇಸರಿಯದುರೆ ಭಕ್ತಿಯಿಂದ ಕೇಳಿದವರ್ಗೆ ಪದುಳದಿಂ ಪಠಿಸಿದರ್ಗೆ
ಭಾಸಿತ ಸಕಲ ಭೋಗಭಾಗ್ಯಮೋಕ್ಷಂಗಳ ವಿ
ಲಾಸದಿಂದಿತ್ತುದುರಿತೌಘಮಂ ಸಂಹರಿಸಿ
ವಾಸ ರಸ್ತಾಪುರ ಶ್ರೀ ಶರಭಲಿಂಗೇಂದ್ರ ರಕ್ಷಿಸುವನಿಹಪರದೊಳು ||೬೫||

ಇಂತೆಬಲ್ಲಿಗೆ ಶರಭೇಶ್ವರ ಪಾದಾಬ್ಜಭೃಂಗನು
ವಿಶಿಷ್ಠವಿದ್ವಜ್ಜನ ವಿಧೇಯನು ಆದ ಭೀಮನಾಯಕ
ಕವಿಯಿಂ ಪ್ರಣೀತಮಪ್ಪ ಹಾಲ್ಮತೋತ್ತೇಜಕ ಪುರಾಣದಲ್ಲಿ
ಅಂತು ಸಂಧಿ ಲಕ್ಕಂ ಪದನು ೪೩೫ಕ್ಕೆ ಮಂಗಲಂ ಮಹಾಶ್ರೀಶ್ರೀಶ್ರೀ

# ಸಂಧಿ ೯-ಶಿವಸಿದ್ಧ ಬೀರೇಶ್ವರನ ಚರಿತ್ರೆ

ಸೂಚನೆ ||

ಹರನೊರದಿ ಮಾಳಿಂಗನಂ ತಂದು ಸುಖಿಸುತಿರೆ
ಗುರುಸಿದ್ಧನೈತಂದು ಮತ ವಿಚಾರವ ತಿಳಿಸಿ
ವರಸೋಮ ಲಿಂಗೈಕ್ಯನಾಗಲಿತ್ತಾ ಬೀರ ಪೋಗುವನು ಕೈಲಾಸಕೆ

ಸ್ವರ್ಗಪತಿನುತ ಪಾದ ಸರೋಜ ಸುರಭೂಜ ಮುನಿ
ವರ್ಗನುತ ಭಕ್ತ ಸುವಿಲಾಸ ಕೈಲಾಸಪುರ
ದುರ್ಗನಿಲಯ ಪ್ರಮಥಸೇವ್ಯ ಸಂಭಾವ್ಯ ವರಭವ್ಯತನು ಸುಜನ ಪೋಷ
ದುರ್ಗತಿ ವಿನಾಶ ಭಯಲೋಪ ಗಿರಿಚಾಪ ಶಿವ
ಭರ್ಗ ಬಾಳಂಬಕ ನಿರಂಗ ಪುರಭಂಗ ವರ
ದುರ್ಗಿಯರಸನುಪಮೋದಾರ ವೃಷದೇರ ಭವದೂರನೆಮ್ಮಂ ಪೊರೆಯಲಿ ||೧||

ಸ್ವರ್ಗದಲಿ ವಾಸವಾಗಿರ್ಪ ವಿದ್ಯಾಧರರ
ವರ್ಗಮಂ ನೋಡ್ದು ಕೈಲಾಸಪುರಿಯಂ ಪೊಕ್ಕು
ದುರ್ಗಾಸಹಿತನಾಗಿ ಪದಿನಾಲ್ಕು ಲೋಕಂ ಬಿಡದೆ ಪರಿಪಾಲಿಸುತಿಹ
ಭಾರ್ಗನ ಬಳಿಗೆ ಸಿದ್ಧಬೀರೇಂದ್ರ ಪೋಗುತ್ತೆ
ದಿರ್ಗನಿಂದಭಿನಮಿಸಲಾ ಪರಮ ಸಾಂಬ ಪ್ರಮ
ಥರ್ಗೊರೆದನೆನ್ನ ಸುಕುಮಾರ ಬಂದಿಹನವಗೆ ಸತ್ಕಾರ ಮಾಳ್ಪುದೆಂದಾ ||೨||

ಹರನಾಜ್ಞೆಯಂತೆ ಪ್ರಮಥರು ಸಿದ್ಧಬೀರನಂ
ಕರೆದು ಕೂಡ್ರಿಸಲಂ ಭವಭೂಲೋಕಮಂ ಬಿಟ್ಟು
ಭರದೊಳಿಲ್ಲಿಗೆ ಬಂದ ಕಾರ್ಯಾರ್ಥವೇನೆಂದು ಪ್ರೀತಿಯಿಂ ಬೆಸಗೊಳಲ್ಕೆ
ವರದೆನೆನ್ನನು ಸೇವಿಸುವದಕ್ಕೆ ಶಿಷ್ಯನಂ
ತ್ವರಿತದಿ ಕಳಿಸುವೆನೆಂದು ಪೇಳಿಯನ್ನೋರ್ವನಂ
ಧರೆಗೆ ಕಳಿಸುತ್ತ ಕಷ್ಟಕೆ ಗುರಿಯ ಮಾಡಿ ಕಣ್ಣಿಲಿ ನೋಳ್ಪುದಿದು ನ್ಯಾಯವೇ ||೩||

ಹರನೇ ಭೂತಲ ಮಧ್ಯದಿರಲೆಂತು ನಾನೋರ್ವನೇ
ಪರಮ ಶಿಷ್ಯನಂ ಕಳಿಸಿಕೊಡುವದೆಂದುತ್ಸವದಿ
ಪರಿಪರಿಯೊಳುರೆ ಧ್ಯಾನಿಸಲ್ಕೆ ಶಂಕರ ಪೇಳ್ದನೇಳ್ಸಮುದ್ರಗಳಾಚೆಗೆ
ಮೆರೆವ ಬ್ರಾಹ್ಮೀದೇವಿಯಿರ್ಪಳಲ್ಲಿಗೆ ಪೋಗಿ
ಮೊರೆಯಿಡಲ್ನಿನಗೆ ಶಿಷ್ಯನಂ ತೋರಿಸುವಳು ಬಂ
ಧುರದಿಂದೆ ಪೋಗುಪೋಗಾ ಲೋಚನೆಯನಾಂತು ಬೋಳಾಗಬೇಡೆಂದನು ||೪||

ಕಂದುಗೊರಳನೆ ಯನ್ನ ಜತೆಗೋರ್ವನನ್ನು ಕಳಿ
ಸೆಂದು ಕೇಳಲ್ಕೆ ಕಳಿಸಿದನು ಗಂಧರ್ವನಂ
ಚಂದದಿಂದವ ಬಂದು ಪಥ ತೋರಿಸುತ ತಿರುಗಿ ಪೋದ ಕೈಲಾಸಪುರಿಗೆ
ಮುಂದೆ ಬೀರೇಶನುತ್ತುಂಗ ಬಲದಿಂ ಧೈರ್ಯ
ಗುಂದದೆ ಸಮುದ್ರತಟಕ್ಕೆತಂದು ಸದ್ಭಾವ
ದಿಂದ ಪೂಜಿಸುತಂತರಿಕ್ಷದೋಳೇಳ್ಸಮುದ್ರವ ದಾಂಟಿದಂ ಭರದೊಳು ||೫||

ಪೆಬ್ಬುಲಿಗಳಿರ್ಪ ಕಾಂತರದೋಳ್ ಬೀರೇಶ
ನಬ್ಬರದಿ ಬರುವದ ಕಂಡು ರಕ್ಕಸರೆಮಗೆ
ಹಬ್ಬವಾಯಿತೆಂದಾರ್ಭಟಿಸುತಸರ್ಬಿಡುತಖಿಳ ನಿಬ್ಬಣವ ಕಟ್ಟಿಕೊಂಡು
ಕಬ್ಬನೆ ಕವಿದು ಭೀಕರವ ತೋರಿ ಪಲ್ಗರಿದು
ಬೊಬ್ಬಿಡುತ ಬಾಯ್ದೆರೆದು ಬರುತಿರಲು ಸುತ್ತಮು
ತ್ತಬ್ಬರಿಸಿ ಸಿದ್ಧಬೀರಂ ಸಿದ್ಧರೇವಣನ ಸ್ಮರಿಸುತವನಿಂತೆಂದನು ||೬||

ಭಂಡರಕ್ಕಸರೇ ಮುಂಕೊಂಡು ಹರುಷದಿ ನಿಮ್ಮ
ತಂಡಮಂ ತ್ವರಕೂಡಿಕೊಂಡು ಬಾಯ್ದೆರೆಯುತಲಿ
ಕಂಡೋರ್ವನೆಂದೆನ್ನಖಂಡಮಂ ಕತ್ತರಿಸಿ ತೊಂಡೆಗರುಳನ್ನು ತೆಗೆದು
ಕೆಂಟಕಿಟ್ಟದು ತಿಂದು ಹೆಂಡಗುಡಿವೆವುಯಂದು
ಭಂಡ ಮಾತುಗಳಿಂದ ಭಂಡು ಮಾಡುವರೆ ಶಿರ
ಖಂಡಿಸದೆ ಬಿಡೆನು ಖಂಡಿತ ತಿಳಿರಿ ಖಳರೆ ಗಂಡನೆಂದರಿಯಂದನು ||೭||

ಭೀಕರಕೆ ಬೆದರಿ ಪೋಗುವ ನಾನಲ್ಲ ಪುಸಿಯಲ್ಲ
ಸಾಕು ಸುಮ್ಮನೆ ನಡೆಯಿರಿ ಬ್ರಾಹ್ಮಿಯಳ ಪುತ್ರ ಸುರ
ಲೋಕದಿಂ ಬಂದ ಬೀರೇಶನೆಂಬುವ ಗುರ್ತುವರಿಯದೆ ದುರಾಶೆಯಿಂದ
ಯಾಕೆನ್ನ ಕಾಡುವಿರೆನಲ್ಕೆ ದನುಜರು ಬೆದರಿ
ಭೀಕರವ ಬಿಟ್ವೊಂದಿಸುತ ಮಾರ್ಗಬಿಡಲಂ
ಸಾಕಾರದಿಂದಲಾ ಬಾವಿ ಮೇಲೆಸೆವ ದೇವಿಯ ನಿಲಯಕೈತಂದನು ||೮||

ಬೇಗದಿಂ ಪೋಗಿ ಗುಡಿಬಾಗಿಲೋಳ್ನಿಲ್ಲಲ್ಕೆ
ಬೀಗ ಕತ್ತರಿಸಿ ಬೀಳಲ್ಕೊಳಗೆ ಪೊಕ್ಕು ವರ
ಯೋಗದೋಳ್ಕೂತಿರ್ದ ಬ್ರಾಹ್ಮೀಸುದೇವಿಯಂ ಕಂಡು ಭಯಭಕುತಿಯಿಂದ
ಬಾಗಿ ನಮಿಸಲ್ಯಾಕೆ ಕಣ್ದೆರೆದು ಪುತ್ರನ
ರಾಗದಿಂ ಪಿಡಿದೆತ್ತಿ ನೀ ಬಂದ ಕಾರ್ಯ
ಪ್ರಭಾಗಮಂ ಪೇಳೆಂದು ಮುದ್ದಿಟ್ಟು ಕೇಳಲ್ಕೆ ಪೇಳುವದಕನುವಾದನು ||೯||

ಎನ್ನ ಸೇವಕ್ಕೋರ್ವ ಶಿಷ್ಯನಂ ಬೇಕೆಂದು
ಪನ್ನಂಗಧರನಂ ಕೇಳಿದೊಡಿತ್ತ ಕಳಿಸಿದಂ

ನಿನ್ನ ಬಾಲಕನ ನುತಿಗೋಪ್ಪಿ ಸೇವಕನನ್ನು ಕರುಣಿಸೆಂದನು ತವಕದಿ
ಮನ್ನಿಸುತ ಮಗನ ನುಡಿ ಮೋಹದಿಂ ಕೇಳಿದಳು
ನಿನ್ನ ಸೇವಕ್ಕಾಗಿ ವೀರ ಮಾಳಿಂಗನನಂ
ಮುನ್ನ ಕಳಿಸಿರುವೆನಾತಂ ಬೆಳೆದು ಗುರುವಿಲ್ಲವೆಂದು ಯೋಚಿಪನೆಂದಳು ||೧೦||

ವರದೇವಿ ನುಡಿಗೇಳಿ ಸಿದ್ಧಬೀರನು ಉಭಯ
ಕರಮುಗಿದು ವೀರಮಾಳಿಂಗನಿತಿಹಾಸಮಂ
ಸರಸದಿಂ ಪೇಳೆನಲ್ಕಾಗಲಾ ದೇವಿ ತಿಳಿಸುವುದಕ್ಕೆ ಸಿದ್ಧಾದಳು
ತರುಳ ಕೇಳ್ಬಿಲ್ವಾಡಪುರದರಸು ತುಕ್ಕಪ್ಪ
ಧರೆಯೊಳಿರುತಿರಲವನಗಜ ತುರಗ ಪಶುಗಳಂ
ಚರರು ಕಾಯ್ದರೆ ನಾಶವಾಗಿ ಪೋಗುವವೆಂದು ಮನದೊಳಾಲೋಚಿಸುತಲಿ ||೧೧||

ಸರಸದಿಂ ತನ್ನನುಜ ಸೋಮರಾಯನಂ ಕರೆದು-
ಪರಿಪರಿಯೊಳವಗೆ ಬೋಧಿಸುತ ಪಶುರಕ್ಷಣೆಗೆ
ಗಿರಿಗಂಹರದಿ ಪೋಗಿ ಕಾಲಕಾಲಕೆ ಹುಲ್ಲುತಿನಿಸಿ ನೀರ್ಗುಡಿಸೆಂದನು
ಜರಿಯದಾಗ್ರಜನ ನುಡಿಗೊಪ್ಪುತಾ ಸೋಮೇಶ
ನಿರದೆ ಹಿಂಡಂಗೂಡಿಕೊಂಡು ಕಾಂತರಕ್ಕೆ
ಚರಿಸಿ ಮಂಚ್ಚಿಗೆ ಕಟ್ಟಿ ಮನೆಮಾಡಿ ಕೆಲಗಾಲ ಸಂತೋಷದಿಂದಿರ್ದನು ||೧೨||

ಮತ್ತಾ ವಿಪಿನದೊಳಗೆ ಗೌಳಿಗರು ಮಹಿಷಿ ಮೇ
ಣೆತ್ತು ಕೋಣಗಳ ಕಾಯ್ದುಕೊಂಡಿರಲ್ಕವರು
ಅತ್ತೊಂದು ಶಿಶುವನ್ನು ಕದ್ದುಕೊಂಡ್ಯೆತಂದು ತಮ್ಮ ನಿಜನಿಲಯದೊಳಗೆ
ವತ್ತರದಿ ಸರ್ವರೊಂದಾಗಿ ಕುಲದೇವತೆಗೆ
ತತ್ತರುಳನಂ ಕೊಂದು ಬಲಿಗೊಟ್ಟು ರಾತ್ರಿ ನಡು
ಹೊತ್ತಿನಲಿ ಪೂಜಿಸುತ್ತಿರೆ ಕೆಲವು ಮಹಿಷಿಗಳು ತುಡುಗಾಗಿ ಹೊರಬಿದ್ದವು ||೧೩||

ಸೋಮರಾಯನ ಮಂಚಿಗೆಯು ತಿಕ್ಕಿ ಕೆಡಿಸಲವ
ನಾ ಮಹಿಷಿಗಳ ಮುಂದೆ ಮಾಡಿಕೊಂಡ್ಯೆತರಲು
ಧಾಮದೋಳ್ಗೌಳಿಗರು ಪೂಜಿಸುತ ಕೂತಿರಲು ಭರದಿಂದ ಪೋದನು ಒಳಗೆ
ಕೋಮಲ ಸುಬಾಲಕನ ಶಿರ ನೋಡಲಾಕ್ಷಣದಿ
ಭೂಮಿಯೊಳ್ಕೆಂಗುರಿಯ ರೂಪದಾಳಲ್ಕೆ ಸು
ಪ್ರೇಮದಿಂ ಕೂತೆನ್ನ ವೀಳ್ಯತಾರೆಂದು ಪೇಳಿದನಾಗ ಗೌಳಿಗರ್ಗೆ ||೧೪||

ಯನಲವರು ನಾಲ್ಕರೊಲ್ಲಂದು ಭಾಗಮಂ ಪೂಜೆ
ಯನು ಮಾಡುವದಕಿಟ್ಟ ಧನಕನಕಮಂ ಕೊಟ್ಟು
ಸನುಮತೆಯೊಳಾತನಂ ಕಳಿಸಲ್ಕೆ ಆ ದೇವಿ ಬೆನ್ನುಹತ್ತಿದಳು ಬಿಡದೆ
ಜನಪನಾಲಯಕೆ ಬಂದಮಿತ ಕೆಡಕಂ ತೋರಿ

ದಿನದಿನಕೆ ಸಕಲ ಸಂಪದವನತಿಗಳೆದು ಭೂ
ಪನು ದುಃಖಸಾಗರದಿ ಮುಳುಗಿಸುತ ವಿಧವಿಧದಿ ಕಾಡಿ ಕಷ್ಟವನಿತ್ತಳು ‖೧೫‖

ಅತಿರಥ ಮಹಾರಥರ್ಸಚಿವ ಕಾಲಾಳುಗಳು
ಕ್ಷಿತಿಪನಂ ಬಿಟ್ಟು ತೆರಳ್ಕಾತನನತ್ಯಧಿಕ
ಮತಿಶೂನ್ಯನಂತೆ ದಾರಿದ್ರತಾಪದಿ ನೊಂದು ಅನುಜನಿಹ ಕಾನನಕ್ಕೆ
ಗತಿಸಿ ಬಂದಾ ದಿನದಿ ರಾತ್ರಿಯೊಳ್ನಿದ್ರಿಸಿರೆ
ಶತಜನರು ಕಳ್ಳಿಕೋಟೆಯ ಕಿರಾತರು ಬಂದು
ಖತಿಗೊಂಡು ಖಡ್ಗದಿಂ ತುಕ್ಕಪ್ಪರಾಜನಂ ಕಡಿದು ಪ್ರಾಣವ ತೆಗೆದರು ‖೧೬‖

ಹಟ್ಟಿಯೊಳಗಿರ್ಪ ಪಶುಗಳಂ ತಿರುವಿಕೊಂಡು ನಿಜ
ಪಟ್ಟಣಕೆ ಪೋಗಿ ಬೇರೊಂದು ಸ್ಥಲದೊಳಗವರು
ಕಟ್ಟಿ ಸುಖದಿಂದಿರಲ್ಕಿತ್ತ ಭೂವರ ಮಡಿದುದಂ ನೋಡಿ ಸೋಮರಾಯ
ಕೆಟ್ಟೆನಯ್ಯಯ್ಯೋಯನ್ನಾಗ್ರಜನಂ ಕೊಲ್ಲಿ ಬಹು
ದಿಟ್ಟತನದಲಿ ಪಶುಗಳಂ ಕೊಂಡು ಪೋಗಿಹರು
ಬೆಟ್ಟದೋಳಾನೋರ್ವ ಮಾಡಲಿನ್ನೇನೆಂದು ಕೊಳಲವನೂದಿದ ದುಃಖದಿ ‖೧೭‖

ಖೂಳರ ವಶದೊಳಗಿರ್ಪ ಪಶುಗಳು ಕೊಳಲ ನಾದ
ಕೇಳುತತಿಕೋಪದಿಂ ಹಟ್ಟಿಯಂ ಹಾರಿ ಹೊರ
ಬೀಳಾ ಬೇಡರೊಂದಾಗಿತಿರುವಲ್ಕವರನಿರಿದೋಡಿ ಬೆಟ್ಟದೆಡೆಗೆ
ಮೇಳದಿಂದೊಂದೊಂದುಸುರ್ಬಿಡುತ ಭರದಿ ಬಂ
ದೇಳಿಗೆಯ ದುಃಖದೊಳಗಿರ್ಪ ತಮ್ಮೊಡೆಯನ ನಿ
ರಾಳ ಮನದಿಂ ನೋಡಿ ನಿಂದಿರಲು ಸೋಮರಾಯಂ ಹಟ್ಟಿ ಪೊಗಸಿ ಬಿಟ್ಟಂ ‖೧೮‖

ಧರಣಿಪನ ಮುಂದಿಟ್ಟುಕೊಂಡು ರೋಧಿಸುತಿರ
ಲ್ಕರುಣದಿಂದವರ ಮನೆದೇವ ಗೋರಕನಾಥ
ವರ ಸೊನ್ನಲಿಗೆ ಸಿದ್ಧಭೈರವನಂ ಕೂಡಿಕೊಂಡಲ್ಲಿಗೈತಂದು ಮುದದಿ
ವರೆದನಾ ಸೋಮರಾಯಂಗೆ ಶೋಕವ ಮಾಡ
ದಿರು ಹಿಂದೆ ನೋ ಪೋಗಿ ಗೌಳಿಗರ ಧನಕನಕ
ಹಿರಿದು ತಂದುದಕವರ ಮನೆದೇವಿ ಬಂದು ಪರಿಪರಿ ಕಾಡುತಿಹಳು ‖೧೯‖

ಭಾವಶುದ್ಧದಿ ನಿಮ್ಮ ಮನೆಯೊಳಗೆ ಸಂಭ್ರಮದಿ
ದೇವಿಯಂ ಪೂಜಿಸಿ ಮಹಾಶಾಂತಿ ಮಾಡಿದೊಡೆ
ಭೂವಲಯದಲಿ ಪೂರ್ವಿಗಿಂದಲಿಮ್ಮಡಿಯಾಗಿ ಧನಕನಕ ವಸ್ತ್ರ ಮತ್ತಂ
ತೀವಿದ ಸುಭಾಗ್ಯದಿಂ ಜನಪದತ್ವವ ನಿಮಗೆ
ದೇವಿ ಸಂಪ್ರೀತಿಯಿಂ ಕೊಟ್ಟು ಮುಂದವನಿಯೊಳಾ
ಗುವ ಕಂಟಕಮಿಲ್ಲದನುದಿನದಿ ಪರಿಪಾಲಿಸುವಳೆಂದು ಬೋಧಿಸಿದನು ‖೨೦‖

ಸ್ವಾಮಿ ಗೋರಖನಾಥ ನುಡಿಗಳು ಕೇಳಿ
ಸೋಮರಾಯನು ಒಪ್ಪಲಾಗಲಾ ಗುರು ಮಹಾ
ಪ್ರೇಮದಿಂದೆದ್ದು ಪಂಚಾಕ್ಷರೀ ಮಂತ್ರಮಂ ಪಠಿಸಿ ಭಸಿತವನು ಕೊಂಡು
ಭೂಮಿಯೊಳ್ಬಿದ್ದಿರುವ ತುಕ್ಕಪ್ಪನಂಗದೊಳು
ನೇಮದಿಂ ತಳೆಯಲಾತಂ ತವಕದಿಂದೆ ಶಿವ
ನಾಮಮಂ ಸ್ಮರಿಸುತ್ತ ನಿದ್ರೆಯಿಂದೆಚ್ಚರಿಪನಂತೆದ್ದು ಕೂತನಾಗ ॥೧೧॥

ಭೂಪ ತುಕ್ಕಪ್ಪನ ಮಡದಿ ಕಾನಾಬಾಯಿ ಬಂ
ದಾ ಪರಮ ಗುರುವರನ ಪಾದಕೆರಗಲಾತ ನಿ
ಷ್ಕಾಪಟ್ಯದಿಂದೊಂದು ಮಾಣಿಕವನಿತ್ತಿದು ತೊಳೆದುದಕ ಸೇವಿಸಲ್ಕೆ
ತಾಪತ್ರಯಂಗಳಂ ಕಳೆದು ನಿನಗೋರ್ವ ಕುಲ
ದೀಪ ಸುತನುದಯಿಸುವ ನಿನ್ನ ಮನದೊಳಗಿಹ ನಿ
ಜಾಪೇಕ್ಷ ತೀರಿಸಿದೆನಾ ಬಾಲಕಗೆ ವೀರ ಮಾಳಿಂಗನೆಂಬ ಪೆಸರು ॥೧೨॥

ಸೋಮರಾಯನ ಸತಿ ರಮಾಬಾಯಿ ಗುರುಪಾದ
ತಾಮರಸಗಳ ಪಿಡಿದು ಬೇಡಿಕೊಳ್ಳಲ್ಕೆ ಸು
ಪ್ರೇಮದಿಂ ಜಪಮಣಿಯನಿತ್ತು ಪೇಳಿದನಿದಂ ನಿನ್ನಕ್ಕನಂತೆ ಸವಿಯೇ
ಭೂಮಿಯೊಳ್ಬಸರಾದ ಪುತ್ರ ಪುಟ್ಟುವನವನ
ನಾಮ ಜಕ್ಕಪ್ಪನೆಂದಿಟ್ಟು ಪಾಲಿಪುದೆಂದು
ಸ್ವಾಮಿ ಗೋರಖನಾಥ ಸೊನ್ನಲಿಗೆ ಸಿದ್ಧಭೈರವರು ಪೋದರು ಬೇಗನೆ ॥೧೩॥

ಇತ್ತು ಭಯ ಸ್ತ್ರೀಯರವರರುಹಿಂದಂದುಕದೊಳ್
ಚಿತ್ತ ಪರಿಪಾಕದಿಂ ಸೇವಿಸಲು ಗರ್ಭಕಳೆ
ವೆತ್ತು ಶೋಭಿಸುತಿರಲ್ಕಾಗೆ ತುಕ್ಕಪ್ಪ ಸರ್ವರು ಕೂಡಿ ಮನೆಗೆ ಬಂದು
ವತ್ತರದ ವೈಭವದಿ ದೇವಿಯಂ ಪೂಜಿಸಲು
ವಿತ್ತ ಕನಕಾದಿ ಸೌಭಾಗ್ಯಮಂ ಪಡೆದು ಮಣಿ
ಕೆತ್ತಿಸಿದ ಸಿಂಹಪೀಠದಿ ಕುಳಿತು ರಾಜಭೋಗದಲಿ ಮೆರೆಯುತ್ತಿದ್ದನು ॥೧೪॥

ಇರುತಿರುತ್ತಾ ಉಭಯ ಸ್ತ್ರೀಯರಿಗೆ ನವಮಾಸ
ನೆರೆತುಂಬಿಸನ್ಮುಹೂರ್ತದಿ ಪಡೆಯಲಾಗರವರು
ವರವೀರಮಾಳಿಂಗ ಜಕ್ಕಪ್ಪನೆಂಬುಭಯ ಪೆಸರಿಟ್ಟು ಪೋಷಿಸಲ್ಕೆ
ತರುಳರೀರ್ವರು ಬೆಳೆದು ಪ್ರಯದವರಾಗಿಹರು
ಭರದಿಂದೆ ಬಿಲ್ವಾಡಪುರಕೆ ನೀಂ ಪೋಗಿ ಬಂ
ಧುರ ವೀರ ಮಾಳಿಂಗನನ್ನು ಕರೆದೊಯ್ವುದೆಂದಾ ದೇವಿ ಪೇಳ್ದಳ್ಗಡ ॥೧೫॥

ಆಗಲಾ ಸಿದ್ಧಬೀರಂ ದೇವಿಗೊಂದಿಸುತ
ಬೇಗದಿಂ ವರಪಡೆದು ಮರಳಿ ಹಿಂದಕೆ ಸಪ್ತ

ಸಾಗರಂಗಳ ದಾಟಿ ಬಿಲ್ಆಡ ಪಟ್ಟಣಕೆ ಬಂದು ಜಲಮಾಯಿ ಕೆರೆಯ
ಭಾಗದಲಿ ಕೂತು ಶಿವಧ್ಯಾನಮಂಗೈದು ವರ
ಯೋಗಮಂ ಬಲಿಸಿ ಬಾಲಕನ ರೂಪವದೊಟ್ಟು
ರಾಗದಿಂದಿರುತಿರ್ದನಿತರರಿಗೆ ತೋರದಂತದೃಶ್ಯನಾಗೀ ಭವನದಿ ‖೧೬‖

ಕುರುಬರರಜ ಕುರಿಗಳಂ ಕಾಯ್ದುಕೊಂಡವಸರದಿ
ಚರಿಸಿ ಬಂದಾ ಕೆರೆಯಾ ನೀರು ಕುಡಿಸುತ್ತಿರಲು
ವರಸಿದ್ಧ ಬೀರಂ ಕುರಿಗಳನು ಕೊಂಡು ಜಲದೊಳಗೆ ಹಾರಿದನು ಬೇಗದಿಂದ
ಇರುತಖಿಳ ದಿನವ ಬಿಡದೀ ಪರಿಯ ಮಾಡಲಾ
ಕುರುಬರೊಂದಾಗಿ ಭೂಪಾಲ ತುಕ್ಕಪ್ಪಂಗೆ
ಕುರಿಪೋದ ಸಂಗತಿಯಂ ವೆಸನ ಮಾನಸರಾಗಿ ಪೇಳಿದರು ವಿನಯದಿಂದ ‖೧೭‖

ತುಂಗತುಕ್ಕಪ್ಪ ತನ್ನಾತ್ಮಭವನಾದ ಮಾ
ಳಿಂಗನಂ ಕರೆದು ಕುರುಬರರ್ತನಗೆ ಪೇಳಿದ ನಿಜ
ಸಂಗತಿಯಂ ತಿಳಿಸಲವ ಚತುರಂಗ ಬಲಗೂಡಿ ಜಲಮಾಯಿ ಕೆರೆಗೆ ಬಂದು
ಕಂಗೊಳಿಪ ಗಿಡಗಂಟಿ ಮರೆಯೊಳಗೆ ಹುಡುಕುತ್ತು
ತ್ತುಂಗ ಶ್ರಮೆಯಿಂದ ಹಯಮಿಳಿದು ನೀರ್ಗುಡಿತಿರ
ಲ್ಮಂಗಲಾತ್ಮಕ ಬೀರ ಜಲದಿಂದೆ ಪುಟನೆಗೆದು ಮಾಳನಂ ಪಿಡಿದೊಯ್ದನು ‖೧೮‖

ಚತುರಂಗಬಲ ನಿಂತು ಬೆರಗಾಗುತಿರಲಾಗ
ಚತುರ ಬೀರೇಶ ಮಾಳಿಂಗನು ಕರೆದುಕೊಂಡು
ಹಿತದಿಂದಲಲ್ಲಿಂದ ಕೈಲಾಸನಗರಕ್ಕೆ ಪೋಗಿ ಶಂಕರನ ಪಾದಕ್ಕೆ
ಅತಿಭಕ್ತಿಯಿಂ ನಮಿಸಿ ಪೇಳಿದಂ ನಾಂ ಪೋಗಿ
ವಿತತಮಾಗಿರ್ಪೇಳ್ಸಮುದ್ರಗಳ ದಾಂಟಿ ಸ
ನ್ನುತಿಸಿ ಬ್ರಾಹ್ಮೀದೇವಿಯಂನ್ನೊಲಿಸಿ ಶಿಷ್ಯನಂ ತಂದಿರುವೆ ನೋಡೆಂದನು ‖೧೯‖

ಪರಶಿವಂ ಸಿದ್ಧಬೀರನ ಸಾಹಸಕ್ಕೊಲಿದು
ಧರೆಯೊಳಗೆ ಮರೆಯೆಂದು ವೀರಮಾಳಿಂಗನಂ
ಕರೆದು ಪೇಳಿದನು ಸುಜ್ಞಾನಿಯುತನಾಗು ಮೇಣಾಳುಗಳಿಗರಸನಾಗು
ವರಸಿದ್ಧಬೀರಂಗೆ ಸಚ್ಛಿಷ್ಯನಾಗು ನೀ
ನೊರೆದದ್ದು ದಿಟವಾಗಲೆಂದವನ ಶಿರದ ಮೇ
ಲ್ಕರಳವಿಟ್ಟು ಬೋಳೈಸುತೀರ್ವರ ಜತೆಗೆ ಜಟ್ಟಿಗಳನಿತ್ತು ಕಳಿಸಲವರು ‖೨೦‖

ಭವನಕ್ಕೆ ಬಂದು ಸಂಚರಿಸುತಿರಲಲ್ಲೊಂದು
ತವೆ ಬೆಳೆದ ಕೋಣ ಕೆಕ್ಕರಿಸಿ ಕಣ್ದೆರಿವಿ ರೌ
ದ್ರವ ತಾಳಿ ಸಿದ್ಧಬೀರನ ಮೇಲೆ ಬರಲಾತನೊದ್ದು ಕೊಲ್ಲಿದ ನಿಮಿಷದಿ
ಶಿವನ ಧ್ಯಾನಿಸಿ ಕೋಣನಸವಳಿದ ಸ್ಥಲದಿ ಮಿರು

ಗುವ ಕೋಣನೂರು ಮೇಣಾ ಮುಂಡ ಬಿದ್ದಿರ್ದ ಸ್ಥಲ
ಮವನಿಯೋಳ್ಮೆರೆವ ಮುಂಡಗನೂರು ಸ್ಥಿರವಾಗಲೆಂದರಿಕೆಗೊಟ್ಟು ನಡೆದ ॥೩೦॥

ಗುರು ರೇವಣನ ಧ್ಯಾನಗೈಯುತ್ತ ಬೀರೇಶ
ನಿರಲಾಗಲಾ ಸಿದ್ಧ ಕುಲನಾಥನೈ ತಂದು
ಸ್ಮರಿಸಿದುದದೇವಂ ಪುಸಿಯನೆಣಿಸದೆನ್ನೋಳ್ಸಾರನೆಲ್ಕಲಾ ಸಿದ್ಧಬೀರಂ
ಪರಮ ಶ್ರೀಗುರುವೆ ನಾಂ ಶಂಕರನ ಮೆಚ್ಚಿಸುವ
ತರುಳ ಮಾಳಿಂಗನಂ ತಂದಿರುವೆ ತವಕದಿಂ
ನೆರೆನೋಡಿ ಯಮ್ಮೀರ್ವರನ್ನು ಪೊರೆಯೆಂದು ಸಾಷ್ಟಾಂಗಗೈದನು ವಿಭವದಿ ॥೩೧॥

ಕರುಣದಿಂ ಗುರುಸಿದ್ಧ ಪಿಡಿದೆತ್ತಿ ಬೋಳೈಸಿ
ಪರತರ ಮಹಿಮವನ್ನು ತೋರು ಈ ಭುವನದೊಳು
ತರುಳ ಲಾಲಿಸು ಕಡೆಗೆ ಕೈಲಾಸಗಿರಿಗೆ ಬಾರೆಂದು ಪೇಳಲ್ಕೆ ಬೀರಂ
ಕರಯುಗಳ ಮುಗಿದು ನಯಭಯಭಕ್ತಿಯಿಂದೆ ಸ
ದ್ಗುರುವೆಯನ್ನಂನುದ್ಧರಿಸಿದಿರಿ ಪಾಲ್ಮತೋತ್ಪತ್ತ್ಯ
ಪರಿಯನೆಲ್ಲವನು ಮತ್ತೀ ಮತೋದ್ಭವರ ಸಚ್ಚರಿತಮಂ ಪೇಳೆಂದನು ॥೩೩॥

ಸುತನೆ ಕೇಳ್ ಬ್ರಹ್ಮಾಂಡ ಸುಪುರಾಣದೋಳ್ವ್ಯಾಸ
ರತಿಶೈಸಿ ಪೇಳ್ದ ಸಿದ್ಧಾಂತಮಂ ನಿನಗೊರೆವೆ
ಸಿತಿಕಂಠನೊಂದು ದಿನ ಕೈಲಾಸದಲಿ ಸಭಾವೆರಸಿ ಕೂತಿರೆ ನಂದಿಯು
ಕ್ಷಿತಜನರ ಮತಭೇದಗಳ ತಿಳಿಸೆನಲ್ಕಾಗ
ಲತಿ ಮುದದಿ ಸಕಲ ಕುಲ ಮೂಲಮಂ ಪೇಳ್ದು ಸಂ
ಮತಿಸುತ್ತ ನಂತರ ಕುರುಬ ಕುಡವಕ್ಕಲಿಗರ ಜನನವ ಕೇಳ್ದನು ॥೩೪॥

ಆಗಲಾ ವೃಷಭಂಗೆ ಪ್ರೀತಿಯಿಂದೊರೆದ ಕೆಲ
ಭಾಗಮಂ ವಿಸ್ತರಿಸಿ ನಿನಗುಸುರ್ವೆ ಭಕ್ತಿಪರ
ನಾಗಿ ಕೇಳೀಂದ್ರ ಸುತರಾದ ದೇವೇಂದ್ರ ಶೂದ್ರಂ ಶಕ್ರಶೂದ್ರರುಗಳು
ಬೇಗದಿಂ ಪಂಚಶತಕೋಟಿ ಯೋಜನ ಕ್ಷಿತಿಗೆ
ನೇಗಲೆಯ ಪೂಡಿಸಾಗಿಸಲಗ್ನಿಪುರದ ನಿಜ
ಬಾಗಿಲವು ತೆರೆಯಲ್ಕವಂಗೆ ವಾಹನಮಾದ ಮೇಷವಾರ್ಭಟಿಸಿತು ಕಣಾ ॥೩೫॥

ಧ್ವನಿಯೊಳುದಿಸಿದವಸಿತಸಿತ ಕೆಂಪು ಮಾಸಾಳ
ಮಿನುಗುತಿಹ ಪಸರು ಪಳದಿಂದ್ರನೀಲೆಂಬಾರು
ಘನಬಣ್ಣದಿಂದೆ ಕುರಿ ಪೊರಡಲ್ಕದಕ್ಕೆ ಪನ್ನೆರಡು ವರ್ಣದ ಕುರಿಗಳು
ಘನಬಣ್ಣದಿಂದೆ ರಕ್ಷಿಸುತ ಶಕ್ರಶೂದ್ರ ಕಾ
ನನದಿ ಸಂಚರಿಸುತ ಹಿಡಂಬಿಯೆಂಬ ಸುರೆಯಂ
ಮನವೊಪ್ಪಿ ಮದುವೆಯಂ ಮಾಡಿಕೊಳಲಾಗ ದನುಗರನೆಂಬ ಪೆಸರಾದುದು ॥೩೬॥

ದನುಗರಗೆ ವೀರಗೊಲ್ಲಾಳುಣ್ಣಿಕಂಕಣಸು
ದನುಗರ ಬೀರಂಗೆ ಬಿಳಿಯ ಕಂಕಣವೆಂದು
ಜನಿಸಿದವು ಪಂಚಕುಲವದಕತ್ತಿ ಕಕ್ಕರದ ಕಂಕಣ ಕರಿಯ ಕಂಕಣ
ಘನಹಣಬಗಾರನಾರ್ಗಂಕಣಳೆಗಾರ ಮೇಣಾ
ಮಿನುಗುತಿಹ ಕಕ್ಕರದ ಕಂಕಣಂ ಹಟ್ಟಿಗಾ
ರೆನಿಪ ಕುಲವೇಳದಕೆ ತುರುಗಾರ ತೆಲುಗಾರ ಹುಲ್ಲೆ ಮಸಣಿಗಳಾದವು ||೩೭||

ತರುಳ ಕೇಳಸುರೆಯಂ ಪದಿನಾರು ಕುಲಮಾದ
ವರಿ ನಿನ್ನ ಮನದೊಳಾ ಶಕ್ರಶೂದ್ರ ಪ್ರಥಮ
ತರುಣೀಸುಮಾಲಿ ಸಂಗದೊಳು ಕುಡುವಕ್ಕಲಿಗ ಸರವೂರು ಮಂಕಮತ್ತಂ
ಮೆರೆವ ಬರಡಾವಿನ ಕಪಿಲಗೌರಿ ಸೋಮದೇ
ವರ ಜೋತಿ ನವನಾಥ ಸಿದ್ಧಮವ ಕುರುಬ ಮೇಣಾ
ವರ ಕಪಿಲ ಕಂಪಲಗಳೆಂಬೇಳು ಕುಲ ಮೊದಲು ಜನಿಸಿ ರಂಜಿಸುತಿರ್ದವು ||೩೮||

ಧರಣಿಯೊಳಗೆಣಿಸಲಿಪ್ಪತ್ತು ಮೂರ್ಕುಲಗಳೀ
ಕುರುಬರಿಗೆ ಹವ್ಯಗೋತ್ರಂ ಭೂಮಿವೃತ್ತಿ ಮೇಣ
ಕುರಿಹಿಂಡು ಕುಳವಾಡಿಹಟ್ಟಿಮಠ ಕಕುಲದೇವ ಗೋಲಗೇರಿಯ ಲಿಂಗನು
ಅರಿಯದರ ಶಾಖೆ ಮಾರಾಂಕ ಬೀರೇಶ್ವರಂ
ನಿರುತದಲಿ ನಂಬಿ ಕುಲದೇವರಂ ಸ್ಮರಿಪ ಭ
ಕ್ತರಿಗೆ ಸೌಭಾಗ್ಯಮುಂಟಾಗಿಸು ಕ್ಷೇಮದಿಂ ಬಾಳುವರು ಅನುದಿನದಲಿ ||೩೯||

ಮತ್ತೊರೆವೆನಾಲಿಸ್ಯೆ ದ್ವಾಪಾರ ಯುಗಾಂತ್ಯದೋಳ್
ಚಿತ್ತಜಾಮತಕನೊಂದು ದಿನ ಪತ್ನಿ ಪ್ರಮಥಗಣ
ಮೊತ್ತದಿಂ ನಂದಿವಾಹನನಾಗಿ ಜಯಜಯಧ್ವನಿಯಿಂ ಹಿಮಾಚಲಕ್ಕೆ
ವತ್ತರದೊಳೈತರಲ್ಕನಿತರೋಳ್ ಗಿರಿರಾಜ
ನುತ್ತುಂಗ ವಿಭವದೊಳಿದಿರ್ಗೊಂಡು ಕರದೊಯ್ದು
ಚಿತ್ತರದಭವನದೋಳಿರಿಸಿ ಕುಳಲ ಪ್ರಶ್ನೆಗೈದು ಸಂತೋಷಿಸಿದನು ||೪೦||

ಆ ಸಮಯದಲಿ ಭೃಗುಭಾರದ್ವಜ ಕೌಂಡಿನ್ಯ
ವಸಿಷ್ಟಕಶ್ಯಪಸುಕೌರಬಾದಿಗಳೆಂಬ ಭಾಸುರ ಮು
ನೇಶ್ವರರು ಶಿವನ ಪರಿವೇಷ್ಟಿಸುತ ವೇದಮಂತ್ರಂಗಳನ್ನು
ಘೋಷಿಸುತ್ತ ಹಜಹರಿಗಳೊಡನೆ ಬರುತಿಗೆ ಮುಂದೆ
ವಾಸ ವಾದ್ಯಮರಗಣವಂದಿಸುತ್ತಿರೆ ಹಿಮವು
ಆ ಸಕಲ ಮುನಿಸುರರ್ಗತಿ ಬಾಧೆಗಯ್ಯುಲವರುಧಟ ಮೆಲ್ಲನೆ ಸರಿದುದು ||೪೧||

**ಪ್ರಮಾಣ – ಭವಿಷ್ಯೋತ್ತರ ಪುರಾಣ**

**ಶ್ಲೋಕ ||**

ಹಿಮವತ್ಪರ್ವತೇ ದೇವಾಃ - ಸೀತಾಭಾಧಾ ಭಿ ಪೀಡಿತಾಃ
ನಿಸ್ಸಂಶಯಂತದಾಜಗ್ಮುಃ - ಶರಣಂ ಲೋಕಶಂಕರಂ
ಹಿಮಾನ್ಯೂನಾಃಮಹಾದೇವ - ಭೃಶಂವೈಪೀಡಿತಾಃಪ್ರಭೋ
ರಕ್ಷಸ್ವಕೃಪಾಸಮುದ್ರ - ದೇವಾನ್ ಸರ್ಷಿಗರ್ಣಾಸದಾ ॥೧॥

ಸುರಮುನಿಗಳೊಂದಾಗಿ ಶಂಕರನ ಸ್ಮರಿಸಿ ಪೇ
ಳ್ದರು ತುಹಿನ ತಾಪಕ್ಕೆತಡವರಿಸುತಿಹೆವು ನೀಂ
ಪೊರೆಯೆಂದು ಪರಿಪರಿಯೊಳರ್ಚಿಸಿ ಕರಗಳಂ ಮುಗಿದು ಮರೆಹೊಕ್ಕರತಿ ಭರದಲಿ
ಪರಮೇಶ್ವರಂ ತನ್ನ ಪಾಲಾಕ್ಷದಿಂದಗ್ನಿ
ಭರದಿಂದಲುಂಟುಗೈದ ವ್ಯಾಜಭಾವದಿಂ
ದುರೆ ಸೀತಬಾಧೆಯಂ ನಿರ್ಹರಣ ಮಾಡಿ ಸಂರಕ್ಷಿಸಿದನಾ ಸುರರನು ॥೪೨॥

**ಪ್ರಮಾಣ – ಭವಿಷ್ಯೋತ್ತರ ಈಶಾನ್ಯಸಂಹಿತಾ**

**ಶ್ಲೋಕ ||**

ಪ್ರಾಜ್ಞಸ್ತ್ವಂ ಸರ್ವಧರ್ಮಜ್ಞ - ಸರ್ವಕಾರ್ಯವಿಶಾರದಾ
ವಸ್ತ್ರಕುರುಮಹಾಭಾಗ - ಸೀತಬಾಧಾ ನಿವೃತ್ತಯೇ
ತೇನದೇವಾ ಸದಾವೃಷ್ಟಾಃ - ಭವಿಷ್ಯಂತಿಮಹಾಮುನಿಃ ॥೨॥

ಮರಳಿ ಮೃಡಕೌರಬ ಮಹಾಮುನಿಪನಂ ನೋಡ್ದು
ಸರಸದಿಂದೊರೆದ ನಿನ್ನಿಂದ ಮುನಿಗಣ
ಸುರನಿಕರವ ಪೊರೆವುದಕಾಗಿ ಸೀತಬಾಧಾನಿವರ್ತಕಮಾದ ವಸ್ತ್ರಗಳು
ವಿರಚಿಸುತ್ತ ಭವಿಷ್ಯಕಲದೊಳಗೀವುದೆನೆ
ಕುರರೀಮೃಗದ ರೋಮಗಳ ತಂದು ವಿಲಸಿತಾಂ
ಬರಗೈದು ಸುಮನಸರ್ಗೊಲಿದಿತ್ತು ರಕ್ಷಿಸಿದ ಯೋಗದ ಸುಮಹಿಮೆಯಿಂದೆ ॥೪೩॥

**ಪ್ರಮಾಣ – ಆಗ್ನೇಯ ಪುರಾಣ**

**ಶ್ಲೋಕ ||**

ಕುರರೀಮೃಗವಸ್ತ್ರಾಣಿ - ಕೃತ್ವಾವೈಕೌರಭೋರುಷಿಃ
ತನ್ನಾಮಸಾರ್ಥಕಂಚಕ್ರೇ - ದೇವನಾಂ ಹಿತಕಾಮ್ಯಯಾ ॥೩॥

ಆಗಲಾ ಮುನಿಸುಪರ್ವಾಣ ದಿಕ್ಪತಿಗಳೊಂ
ದಾಗಿ ಕೌರಬಮಹಮುನಿವರೇಣ್ಯಂಗೆ ಶಿರ

ಬಾಗಿ ವಂದಿಸುತ ವಿಧವಿಧದಿಂದೆ ಸ್ತುತಿಸಿ ಜಯಜಯ ಘೋಣಸಂಗ್ಯೈಯಲು
ನಾಗಭೂಣನಂ ಕುರಿತಗಜಾತೆ ನುಡಿದಳಜ
ಸಾಗರಸುತೆಯ ಪತಿ ಸುರಪ ಮುಖ್ಯದೇವತೆ
ಗೀಗಲೀ ಹಿಮವು ಸಂತಾಪದೋರಿತು ಭುವನ ಯೋಗಿಗಳಿಗೇಗೈವುದ ||೪೪||

**ಪ್ರಮಾಣ – ಇತಿಹಾಸ ಮಂಜರಿ ೨೪ನೇ ಆದ್ಯಾಯ – ೩ನೆಯ ಗ್ರಂಥ**

**ಶ್ಲೋಕ ||**

ಪಾರ್ವತೀ ಮುದಿತಾತತ್ರ - ಶಂಕರಂ ಲೋಕ ಶಂಕರರ
ಪ್ರವಚ್ಛ ಗೌರೀಸಂತುಷ್ಟ - ಲೋಕಾನಾಂ ಹಿತಕಾಮ್ಯಯಾ
ಶಂಭೋಸರ್ವಜ್ಞದೇವೇಶ - ಕೌರಭಃ ಪ್ರಾಪ್ಯಸತ್ವರಂ
ಸಂತತಿಂಕಾರಯಾಮಾಸ - ಕೌರರ್ಬಾಲೋಕಸಮ್ಮ ರ್ತಾ
ತೇವೈಧರ್ಮಾದಿಯುಕ್ತಾಶ್ಚ _ ಭವಿಷ್ಯಂತಿ ಕಲೌಯುಗೇ ||೪||

ಕೌರಭಮಾರುಷಿಃ ತಪಃಪ್ರಭಾವದಿ ಮೆರೆವ
ಗೌರವದೊಳಾತನಿಂ ಸಕಲಭೂಮಂಡಲದಿ
ತಾರತಮ್ಯದಿ ಕುರುಬರಂ ಸೃಜಿಸುತವರಿಂದೆ ರೋಮವಸ್ತ್ರಗಳೈಸಿ
ಧಾರುಣಿಯೊಳಿಹ ತಪಸ್ವಿಗಳಿಗವುಗಳ ಕೊಡಿಸಿ
ಭೂರಿಯ್ಯೆ ಕಿಲಮಂ ಕಳೆದು ನಿರಂತರದಿ ಸುಖ
ಸಾರದಿಂ ಪರಿಪಾಲಿಸೆಂದು ದಕ್ಷಪ್ರಜಾಪತಿ ಸುತೆ ಪತಿಗೆ ಪೇಳ್ದಳು ||೪೫||

**ಪ್ರಮಾಣ-ಇತಿಹಾಸ ಮಂಜರಿ ೨೪ನೇ ಅಧ್ಯಾಯ-೩ನೆಯ ಗ್ರಂಥ**

**ಶ್ಲೋಕ ||**

ಸಾದುವೃಷ್ಟಂ ಮಹಾದೇವಿ - ಲೋಕಾನುಗ್ರಹಕಾಂಕ್ಷಸಯಾಃ
ತಥಾಕರೋಮಿ ಸರ್ವಜ್ಞೆ - ಕೌರಬಾತೇರುಷಿ ಸಪ್ತಮಾತೆ ||೫||

ಸತಿ ನುಡಿಗೆ ಶಂಕರಂ ಮೆಚ್ಚಿ ಕೌರಬನೆಂಬ
ಯತಿವರೇಣ್ಯನ ಕರೆದು ಪೇಳಿದಂ ಸಪ್ತವಿಂ
ಶತಿ ಮಹಾ ನಕ್ಷತ್ರಗಳ ಸಹಾಯದಿ ನೀನು
ಕ್ಷಿತಿಗಿಳಿದು ಮಹಿಮೆಯಿಂದೆ ಮತಿಮಾನರಾದ ಕೌರಬರಂ ಸೃಜಿಸುತತ್ಕು
ಲತತಿ ಪ್ರಶಸ್ತ ಪ್ರಕಾಶವಹುದೆನಲಾ ವಿ
ರತಯೋಗಿಯೊಪ್ಪಿ ಭೂಮಂಡಲಕ್ಕೈತಂದನೇನೆಂಬೆನಚ್ಚರಿಯನು ||೪೬||

ವರಹಿಮಗಿರಿಯ ಪ್ರಾಂತದೋಳ್ಕುಳಿತು ಯೋಗಮಂ
ನೆರೆಗೈದು ತನ್ನ ಕೃಷ್ಣಾಜಿನದಿ ಸೃಜಿಸಿದಂ
ಪರಮೇಶ್ವರನ ಪಾದಯುಗ್ಮಗಳ ನೆನೆನೆನೆದು ಕಾಂಪಿಲ್ಯಪೃಥಕ ಶೃಣಿಯು

ವರಮಹಾಬಲಗಣ ಕವಿಣಭ್ರಾಜಿತಂ ಕುಶಲ
ಮೆರೆವ ಪ್ರಭಾವಂತಕರುಣ ಪ್ರಬಲಿ ಮತ್ತ
ನಿರುಪಮ ವಿಭಾಗರೆಂದೆಂಬ ಪನ್ನೊಂದು ನಾಮದ ಕೌರಬೀಯರನ್ನು ॥೪೭॥

**ಪ್ರಮಾಣ – ರೈವತಖಂಡ ಅನ್ವಯ ಖಂಡೆ ಸ್ಕಾಂದದಲ್ಲಿ ೧೮ನೆಯ ಶ್ಲೋಕ ॥**

ಕಾಂಪಿಲ್ಯಸ್ಯ ಮಹಾಬಾಹೋ - ಚಿತ್ರಾಶ್ವಶ್ಚ ಪರಂತಪಃ
ತಸ್ಯಪೂರ್ಣಿಸ್ಸುತೋಜ್ಞಾತಃ - ತತ್ಸೂನುಶ್ಚಂದ್ರಶೇಖರಃ
ತತ್ಸೂನುಶ್ಚ ಮಹಾಜ್ಞೇಯಃ - ಸವೈಹರಕಲಸ್ಮೃತಃ
ತಸ್ಯಪುತ್ರೋವಿಶಾಲಾಕ್ಷಃ - ವಿದ್ವೇಷೋಮುನಿಸಮ್ಮತಃ
ತತ್ಪುತ್ರಸ್ಸುಭಗೋಜಾತಃ - ವಿಜ್ಞಾತಾವೈಶಾರದಸ್ಮೃತಃ
ಧರ್ಪೂತ್ಮಸತ್ಯಸಂಧಶ್ಚ - ವಿಜ್ಞಾತಾಶೃತಿವಾದರ್ವಾ
ರೋಮವಸ್ತ್ರ ಪ್ರಣೀತಾಚ - ತಪಸ್ವೀವಾಗ್ವಿದಾಂವರಃ ॥೭॥

ಮರಳಿ ಕಾಂಪಿಲ್ಯಂಗೆ ಚಿತ್ರಾಶ್ವ ಮತ್ತವಗೆ
ವರಪೂರ್ಣಿಯಾತಂಗೆ ಚಂದ್ರಶೇಖರನವಗೆ
ಹರಕಲಿಯು ಮೇಣವಗೆ ವಿಧ್ವೇಕ್ಷನಾತಗೆ ವಿಶಾರದನೆನಿಪ ಮಹಿಮನು
ಧರೆಯೊಳುದ್ಭವಿಸಿ ಧರ್ಮಗರಿಷ್ಟನಾಗಿ ಸುಂ
ದರಿ ಕಲಾವತಿಯಂಬ ಸತಿಗೂಡಿ ಸತತ ಸ
ಚ್ಚರಿತದಿಂ ಜಪತಪವ್ರತಾದಿ ಸತ್ಕ್ರೀಯ್ಯದೋಳ್ಸತ್ಯನಾಗಿರುತಿರ್ದನು ॥೪೮॥

ಮೃಗಶೃಂಗನೆಂಬ ಮುನಿ ಹಿಮತಾಪಕೊಳಗಾಗಿ
ದುಗುಡದಿಂದಾ ವಿಶಾರದನೆಡೆಗೆ ಬಂದು ಹಲ
ಬಗೆಯಿಂದ ವಲ್ಕಲಾಂಬರ ಬೇಡೆ ತತ್ತಾಪಸಂಗೆವಲಿದೀಯಲಾತಂ
ಮಿಗೆ ಹರುಷದಿಂದೆ ಬೇಡಿದ ವರವನಿತ್ತು ನಸು
ನಗುತೆ ತೆರಳಲ್ವಿಶಾರದ ಮತವನುದ್ಧರಿಸಿ
ಜಗದೋಳ್ ಪ್ರಸಿದ್ಧಿಯಂ ಪಡೆದಂತ್ಯ ಕಾಲದೋಳ್ಕೈಲಾಸಗಿರಿ ಸೇರ್ದನು ॥೪೯॥

ಇಳೆಯೊಳಿದು ಕಾಂಪಿಲ್ಯಗೋತ್ರಮಾಯಿತು ಮತ್ತೆ
ತಿಳಿ ಮುಂದೆ ವಿಸ್ತರಿಪೆ ಪೃಥಕಗೆ ವಿಶಾಲಾಕ್ಷ
ಬಳಿಕವಗೆ ಸುಮತಿಯಾತಗೆ ಪುಂಡರೀಕನವನಿಗೆ ವ್ಯಾಳನವಗೆ ಕಪಿಲ
ವಿಳಸಿತಾನನದಿಂದಲುದಿಸಿರಲ್ಕಾತಂಗೆ
ಕಳೆವೆತ್ತ ಸರ್ವಜ್ಞನೆಂಬ ಮಹಿಮಂ ಪುಟ್ಟಿ
ಬೆಳೆದು ಕೆಲಕಾಲ ಪ್ರಾಪಂಚ ವಿಷಯದಿ ಸಿಲ್ಕಿ ಪರಿಶೋಭಿಸುತಿರ್ದನು ॥೫೦॥

**ಪ್ರಮಾಣ – ಲೈಂಗ ಪುರಾಣ (ಸ್ಕಾಂದ) ಗಾರ್ಗ್ಯೆ ಸಂಹಿತ ೧೩ನೆಯ ಅಧ್ಯಾಯ ೫೩ನೆಯ ಶ್ಲೋಕ ||**

ಪೃಥುಕಸ್ಯ ವಿಶಾಲಾಕ್ಷ - ತಸ್ಯವೈ ಸುಮತಿಸ್ಸುತಃ
ತದಾತ್ಮಜಃ ಪುಂಡರೀಕಃ ತತ್ಸುತೋವ್ಯಾಶಕಸ್ಮೃತಃ
ತಸ್ಮಾಚ್ಚಕಪಿಲೋಜ್ಞೇ - ಸರ್ವಜ್ಞಶ್ಚತತಾವರಂ
ಗೋತ್ರಕರ್ತ ಮಹಾಭಾಗಃ - ಕೀರ್ತಿರ್ಮಾಭಕ್ತತತ್ಸರಃ
ಗಿರಿಜಾಪರಮೇಶೌಚ - ತೋಷಯಿತ್ವಾತಪೋಬಲಾತಿ
ವೃಷ್ಟಿಂಸಂಪ್ರಾಪ್ತವರ್ವಾ ಚಿತ್ರಾಂ - ದೈವರಪಿದುರಾಸದಾಂ ||೭||

ಆ ದೇಶದೊಳಗ ನಾ ವೃಷ್ಟಿಯುಂಟಾಗಲಾ
ಮೋದವಿಲ್ಲದೇ ಜನರು ಮರುಗುತಿರಲದು ಕಂಡು
ಭೇದಭಾವವಳಿದು ಸರ್ವಜ್ಞನೆಂಬ ಮಹಿಮಂ ಮಹಾತಪವಗೈದು
ವೇದನುತಗಿರೀಶ ಗಿರಿಜಾತೆಯರ ಮೆಚ್ಚಿಸುತ
ಮೇದಿನಿಯೊಳಿಚ್ಚೆಸಿದ ಸ್ಥಲದಿ ವರ್ಷಿಸುವವೋ
ಲಾದರದಿ ವರ ಪಡೆದು ಕ್ಷಾಮಬಾಧೆಯನಳಿದು ಪ್ರಜೆಯರಂ ಸಂರಕ್ಷಿಸಿದನು ||೫೧||

ಆ ಮೊದಲ್ಗೊಂಡಿದು ಮಹಾ ಪೃಥಕಗೋತ್ರವೆಂ
ದೀ ಮಹಿತಲದಿ ಪ್ರಖ್ಯಾತಗೊಂಡಿತು ಮರಳಿ
ಕೋಮಲ ಶರೀರ ಶೃಣಿಯೆಂಬ ಮಹಿಮಾಂಕ ನಿಸ್ಸಂತಾನನಾಗಿ ಕಡೆಗೆ
ಹೇಮಾದ್ರಿ ತಟದಿ ಕಟುಗ್ರ ತಪಮಂಗೈದು
ವಾಮದೇವನಂ ಮೆಚ್ಚಿಸಲ್ಕೆ ತದ್ದೇವಘನ
ಪ್ರೇಮಮಂ ತಾಳ್ದು ನಿನಗೋರ್ವ ಪುತ್ರಂ ಜನಿಪ ಸುಖದುಃಖ ಸಮವೆಂದನು ||೫೨||

**ಪ್ರಮಾಣ – ತ್ರಿಪುರ ಸಿದ್ಧಾಂತ (ವಿಷ್ಣು ಪುರಾಣ) ಯಮಳ ಪ್ರಕರಣ ೮೨ನೆಯ ಶ್ಲೋಕ ||**

ಬಹುಕಾಲಮಂ ಮಹಾತ್ಮಸೌ - ಧರ್ಮಪತ್ನಿ ಸಮನ್ವಿತಃ
ಅನಿಪತ್ಯೋ ಭವದ್ರಾಜ - ನಿಷ್ಪಲಾಢ್ಯಯಿವದ್ರುಮಃ
ತ ಧ್ರೋಕಾತ್ಸಹುತಪ್ತಃ - ತಪಸ್ತೇಪೆ ಪರಂತಪಃ
ಗಿರಿಶಸ್ತಪ್ತವಾಂತತ್ರ - ಪುತ್ರಂ ಪ್ರದಾತ್ಸುಣಾನ್ವಿತಂ
ತೇನದುಃಖಂ ಚ ಮೋದಂ ಚ - ಪ್ರಾಪ್ತವರ್ವಾ ಜನಕಸ್ತುತಃ ||೮||

ಸುಮಶರಹರಂ ಪೇಳ್ದ ತೆರದಿ ಸೃಣುವಿನ ಪತ್ನಿ
ಭ್ರಮರಾಂಬಿಕೆಯು ಗರ್ಭವತಿಯಾಗಿ ನವಮಾಸ
ಸುಮುಹೂರ್ತದೋಳ್ಪುತ್ರನಂ ಪಡೆದು ಸತಿಪತಿಗಳುತ್ಸವದಿ ವರ್ತಿಸುತಿರೆ
ವಿಮಲತತ್ತನೆಯ ಸರ್ಪಂದಷ್ಟನಾಗಿ ವಿ

ಕ್ರಮಗುಂದಿ ದುರ್ಮರಣ ಹೊಂದಲಾ ಸೃಣಿಯು ಮ
ತ್ತಮಿತ ತಪಗೈದು ತನ್ನಯ ಕಂಠ ಕೊರೆದು ಶಿರಮುಪಹಾರಗೈದ ಶಿವಗೆ ||೫೩||

ದೇವದೇವಂ ತುಷ್ಟಿ ಹೊಂದಿ ಮೃತದೇಹವ ಸ
ಜೀವನಂಗೈದು ಭಯರಂ ಪಾಲಿಸುತ ಕಡೆಗೆ
ಕೈವಲ್ಯನಿತ್ತನದು ಮೊದಲಿಂದ ಸೃಣಿಗೋತ್ರವೆಂದು ಪೆಸರಾದುದಿದಕೆ
ಭಾವಶುದ್ಧದಿ ಕೇಳು ಇನ್ನೊರೆವೆ ಪದುಳದಿಂ
ದೀ ವಿಮಲ ಸೃಣಿಪೃಥುಕ ಗೋತ್ರಂಗಳಿಗೆ ವಿವಾಹ
ಭೂವಲಯದಲಿ ಜರುಗುತಿಹವು ಕಾಂಪಿಲ್ಯಗೋತ್ರಕ್ಕೆ ಸಂಬಂಧವಿಲ್ಲ ||೫೪||

ತಿಪ್ಪೇಶನನುಜನಾದಂಗ ದೇವೇಶನಿಂ
ದೊಪ್ಪುಗೊಂಡಿತು ವಂಶಮಿದಕೆ ಕುವಲಯದೊಳೆನು
ತಿರ್ಪರು ಗಣಕಗೋತ್ರ ತಿಳಿ ನಿನ್ನ ಮನಕೊನೆಯೊಳಿಂನೊರೆವೆನಾಲಿಸೆಂದ
ಮುಪ್ಪುರಾಂತಕನೊರವ ಪಡೆದು ವಿಭ್ರಾಜಿತಂ
ತಪ್ಪದೆ ನಿರಂತರದಿ ಕ್ಷತ್ರಿಮತಕನುಸಾರ
ಮಪ್ಪ ನಡತೆಯೊಳಿರಲ್ ನಿಯತಾದಿ ಚತುರ ಸುತರುದ್ಭವಿಸಿದರು ಬೇಗದಿ ||೬೩||

**ಪ್ರಮಾಣ – ಬ್ರಹ್ಮಕೈವರ್ತ ಪುರಾಣ್ಮನೆ ಅಧ್ಯಾಯರುಷಿ ಬ್ರಹ್ಮಸಂವಾದದಲ್ಲಿ**
**ಶ್ಲೋಕ ||**

ವಿಭ್ರಾಜಿತೋ ಕೌರಬೀಯಃ - ಚತ್ವಾರಸ್ಸುಕ್ಷುವೇಸುತಾ
ತೇಕ್ಷಾರ್ತ್ರ ವೈಸಮಾಶ್ರಿತ್ಯ - ನಿಹತಾ ಯುದ್ಧಭೂತಲೇ
ತಸ್ಮಾತ್ತದ್ಧರ್ಮನ್ಯಸಂಸ್ಥಾನಂ - ಮನುಷ್ಯಾಣಾಮಯುಕ್ತದಂ
ತದ್ಗೋತ್ರಂ ಚ ವಿನಾಂ ವೈ - ಪ್ರಾಪ್ತ ಸತ್ವರಮೇವತತ್
ಮೃತಗೋತ್ರಸ್ಯ ವಿಜ್ಞಾನಾತ್ - ನಷ್ಟಿಗೋತ್ರಯಿಮೆಸ್ಮೃತಾಃ ||೧೧||

ಸ್ವಮತದಾಚಾರ ಬಿಟ್ಟನ್ಯ ಧರ್ಮಕೆ ಸಿಲ್ಕ
ಲಮಿತದೋಷಮಿದೆಂದು ತಿಳಿಯದೆ ಸುಶಾ
ಸ್ತ್ರಮಂ ಕ್ರಮದಿಂದೆ ನೋಡದಲೆ ನಿಯತಾದಿ ಕೌರಬಿಯರಿರದೆ ಕ್ಷತ್ರಿಯರ ತೆರದಿ
ಸಮರಮಂಗೈದು ಮೃತರಾಗಲದರಿಂದಿದಕೆ
ಕಮಲಜಾಂಡದೊಳು ವೃತಿಗೋತ್ರಮಾಯ್ತು
ರಿ ಮತ್ತೆ ವಿಮಲ ಮಾನಸನಾಗಿ ಲಾಲಿಸ್ಕೆ ಮುನ್ನುಳಿದ ಗೋತ್ರಂಗಳಂ ಪೇಳ್ವೆನು ||೬೪||

ಕೌರಬಿ ರುಷಿಯ ಸಪ್ತಮಾತ್ಮಜ ಕುಶಲನೆಂಬ
ಸಾರಮಹಿಮಗೆ ಮಹಾವೀರನಾತಂಗೆ ಗಂ
ಭೀರ ಸಂಜಯನವಗೆ ಕಲ್ಯಾಣನುದ್ಭವಿಸಿ ಕ್ಷಾತ್ರ ಧರ್ಮಾಚಾರಕೆ
ಸೇರಿ ಸೌಖ್ಯದಿ ರಾಜಪಾಲನೆಯ ಮಾಡುತ್ತ

ಮಾರಹರನಂ ಸ್ಮರಿಸಿ ದ್ವಿಜರಿಂದೆ ಹಯಮೇಧ
ಭೂರಿಯಾಗವಗೈಸಿ ಬೇಡಿದ ಪದಾರ್ಥಮಂ ಕೊಡುತಿರ್ದ ಭೂಸುರರ್ಗೆ ||೬೫||

ಭೂಸುರೌಷದಿ ಕೆಲರು ಕಪಟಮನವಾಂತು ಪ್ರ
ಯಾಸಮಿಲ್ಲದೆ ಸಕಲ ರಾಜ್ಯಮಂ ಕೊಡುವದೆಂ
ದಾ ಸುಮತಿ ಕಲ್ಯಾಣ ಭೂಪತಿಗೆ ಬೇಡಲವ ಜನಪದತ್ವವನು ಕೊಟ್ಟು
ಮೋಸವಿಲ್ಲದೆ ನಟ್ಟಡವಿಗೈದು ಕೆಲವು ದಿನ
ಮೀಸಲ ಮನದೊಳುಗ್ರ ತಪಗೈಯ್ಯಲಾಕ್ಷಣದಿ
ವಾಸವಾರ್ಚಿತ ಶಿವಂ ಸನ್ನುತಿಗೆ ಮೆಚ್ಚಿ ಪ್ರತ್ಯಕ್ಷನಾದಂ ಮುದದೊಳು ||೬೬||

**ಪ್ರಮಾಣ – ಶೇಷಭಾರತೇಭವಿಷದ್ರಾಜೇತಿಹಾಸವರ್ಣನೆ ತೃತಿಯಾಧ್ಯಾಯ ೯೭ನೆಯ ಶ್ಲೋಕ ||**

ಸಂಜಯಸ್ಯತು ಕಲ್ಯಾಣಃ ಸೋಭುಲ್ಲಕ್ಷಣವೇದಿಕಾಃ
ಅಧ್ವರಾನ್ ಕಾರಯಾಮಾಸ ಅಶ್ವಮೇಧಾದಿಕಾನ್ ನೃಪಃ
ರಾಜ್ಯಂ ಬ್ರಾಹ್ಮಣಹಸ್ತೇ ಚ ದತ್ತವಾನ್ ದಾನತತ್ಪರಃ
ಬ್ರಾಹ್ಮಣಾರಾಜಯುಕ್ತಾವ್ಯೆ ತಂರಾಜಾತ್ಕೃತಾಭವಾನ್
ಪ್ರಜಾಪ್ರಾರ್ಥನಯಾರಾಜ್ಯಂ ಬ್ರಾಹ್ಮಣಾನಾಂತಧೈವಚ
ಗೃಷ್ಯರಾಜ್ಯಂಶಸಾಸಾದೌ ಸರ್ವದೇವಾದಿ ಪೂಜಿತಃ ||೧೨||

ಪ್ರತ್ಯಕ್ಷನಾದ ಪರಮೇಶಂ ಪೇಳ್ದಂ ನಿನ್ನ
ಸತ್ಯಕ್ಕೆ ಮೆಚ್ಚಿ ವರವಿತ್ತಿರುವೆ ನೀ ಕಲಿಯುಗದಿ
ವ್ಯತ್ಯಾಸವಿಲ್ಲದೆ ವೃಕ್ಷೇಂದ್ರನಂತೆ ಭೂರ್ತನಾಗುತದ್ವೃಷಭ ಮುಂದೆ
ಅತ್ಯಧಿಕ ಭಕ್ತಿಯಿಂ ಭೂತಲದೊಳುದಿಸುವನು
ಸತ್ಯವೆಂದರಿಯನಲ್ಕಾಗಲಾ ಕಲ್ಯಾಣ
ನಿತ್ಯದಲಿ ಶಂಕರನ ಧ್ಯಾನಮಂಗೈದು ಕೆಲಕಾಲ ಕಾನನದಿರುತಿರೆ ||೬೭||

ಭೂಸುರರು ರಾಜ್ಯಪಾಲನೆಯಗೈವದಕೆ ಕಡು
ಬೇಸತ್ತು ಮರಳಿ ಕಲ್ಯಾಣ ಭೂಪಾಲನ ನಿ
ವಾಸಕ್ಕೆ ತೆರಳಿ ನಿನ್ನಯ ಸಕಲ ರಾಜ್ಯಮಂ ನೀನೆ ಪರಿಪಾಲಿಸೆಂದು
ಮೋಸವಿಲ್ಲದೆ ಪೇಳಿ ಪ್ರಾರ್ಥಿಸಲ್ಕಾ ಜನಪ
ಮೀಸಲ ಮನದಿ ಬಂದು ಭೂಪಾಲಸುತ ಕಡೆಗೆ
ಭಾಸುರ ವೃಕ್ಷೇಂದ್ರನಂತೆ ಭೂರ್ತನಾಗಿ ಮಹಿಮಗಳನ್ನು ತೋರ್ದನಿಹದಿ ||೬೮||

ಇದೆ ಕುಶಾಲಗೋತ್ರವೆಂದತಿ ಖ್ಯಾತಿಗೊಂಡಿಹುದು
ಮುದದಿ ತಿಳಿ ಬಳಿಕ ಪ್ರಭಾವನೆಂಬಸಮಬ
ಲ್ಲಿದ ಕೌರಬನು ಪ್ರಣವಪಂಚಾಕ್ಷರಂಗಳಂಗುರ್ವಾಜ್ಞೆಯಿಂದ ತಿಳಿದು

ಸದಮಲ ಜ್ಞಾನದಿಂ ಧ್ಯಾನಮಂಗೈದು ಸುಖ
ಸದನ ಭೂತೇಶನಂನೊಲಿಸುತ ಸುರತ್ನ ಪಡೆ
ದದರ ಮಹಿಮೆಯೊಳಾದ ಕನ್ನಿಕೆಯ ಪಾಣಿಗ್ರಹಣಗೈದು ಕೀರ್ತಿವೆತ್ತ ॥೬೯॥

**ಪ್ರಮಾಣ – ಕೌಮದಿ ಸಿದ್ಧಾಂತ (ಸೂರ್ಯಕೃತ) ೩ನೆಯ ಸ್ತಬಕ ೪೮ನೆಯ ಶ್ಲೋಕ ॥**

ಪ್ರಭಾವೋ ಕೌರಬೀಯಸ್ಯ ಪ್ರಭಾವಂವೇತ್ತುಮಕ್ಷಮಾಃ
ಕುಶಲಃ ಸರ್ವಕಾರ್ಯೇಷು ಪ್ರಾಪ ಮಹೇಶ್ವರಾತ್ ಧ್ರುವಂ

ತಾತ ಚಿತ್ತೈಸು ತಿಳಿಸುವೆನೊಂದುದಹರಣ
ಭೂತಲದಿಂ ಧನಮಿಲ್ಲದರ್ಗೆ ಜನಿಸದು ಧರ್ಮ
ನೀ ತಿಳಿಸರಾಗದಿಂ ತದ್ಧರ್ಮಮಿಲ್ಲದಿರೆ ಮೋಕ್ಷವಿಲ್ಲಾದ್ದರಿಂದೆ
ನಾ ತವಕದಿಂದರಣ್ಯಕೆ ಪೋಗಿ ತಪದಿಂದೆ
ಭೂತೇಶನಂನೊಲಿಸಿ ನಿಮ್ಮಗೊದಗಿದ ಕಷ್ಟ
ವ್ರತಮಂ ಕತ್ತರಿಸಿ ಧನವಂತರನ್ನಾಗಿಸುವೆಂದು ಬಿನ್ನೈಸಿದಂ ॥೭೭॥

ಸುತನೆ ಕೇಳಮಗೆ ದಾರಿದ್ರವೆಂಬುದಿರಲಿ
ಸತತ ಗೃಹದೆಡೆಗತಿಥಿಗಳ್ಬಿಡದೆ ಬರಲಿ ಸ
ನ್ನುತ ಸದಾಶಿವ ನಿನ್ನನಾವಗಂ ರಕ್ಷಿಸಲಿ ಸರಸಿರುಹಜಾಂಡದೊಳಗೆ
ವಿತತಾಶಯಿಂದರಣ್ಯಕೆ ಪೋಪೆನೆಂದು ನೀ
ನತಿಶೈಶಿ ನುಡಿವದಿದು ಯೋಗ್ಯಮಲ್ಲೆಂದು ನಿಜ
ಪಿತ ಪೇಳಲನಿತರೋಳ್ ಭಯಮಿಲ್ಲ ಕಳಿಸೆನುತ್ತಾಕಾಶವಾಣಿ ನುಡಿಯೆ ॥೭೮॥

**ಪ್ರಮಾಣ – ಮೌನಾಧಿಕರಣ ಇತಿಹಾಸ ದೀಪಿಕಾ (ವರಹ ಪುರಾಣ) ಶ್ಲೋಕ ॥**

ಅಯಂಚ ಭಗವಾನ್ನಂದೀ ಶಾಪಗ್ರಸ್ತೋಭವತ್ಕತಾ
ತಸ್ಮಾಧ್ವೋಭಯ ಮೇನಾಸ್ತಿ ಶ್ರಣಿ ಧ್ವಂಸು ಸಮಾಹಿತಾಃ ॥೧೩॥

ಲೋಕೋಯಂ ರಕ್ಷಿತೌಯೋಮೇ ಸತ್ಕಾರ್ಯೈಃ ಧನದಾಪನ್ನೈಃ
ಸುವರ್ಣ್ವರ್ಷದಾನೇನ ಲೋಕಾವ್ ರಕ್ಷಸ್ವಮೇ ಪ್ರಭೋ ॥೧೭॥

ನುಡಿಗೊಪ್ಪಿ ನೈಮಿಷಂ ಪದ್ಮನಂ ಕಳಿಸಲವ
ತಡಿಯದೆಡವಿಗೆ ಪೋಗಿ ಯೋದಭ್ಯಾಸಮಂ
ನಡಿಸುತ ನಿರಾಲಂಬನಾಗಿ ಮತ್ತೂರ್ಧ್ವಬಾಹುಕನಾಗಿ ನಿರುತದಲ್ಲಿ
ಜಡಭಾವವಂನಳಿದು ವಾಯುಭಕ್ಷಕನಾಗಿ

ಬಿಡದೆ ದೃಢದಿಂ ತಪಗೈಯಲ್ಕೆ ಶಂಕರಂ
ಕಡುಪ್ರೇಮದಿಂದೆ ಪ್ರತ್ಯಕ್ಷನಾಗುತ್ತವನಪೇಕ್ಷೆಯಂ ತೀರಿಸಿದನು ||೭೯||

ಹರಪದ್ಮನತಿ ಭರದಿ ಸ್ವಗೃಹಕ್ಕೈತಂದು
ಕರುಣ ಮಾನಸನಾಗಿ ಪಿತಮಾತೆಯರಿಗೊರೆದ
ಧರಣಿಯೋಳ್ನಿಮ್ಮಗೊದಗಿದ ದರಿದ್ರತ್ವಮಂ ಪರಿಹರಿಪುದಕ್ಕೆ ನಾನು
ಪರಮಾತ್ಮನಿಂದೆ ವರಪಡೆದು ಬಂದೆನು ವೃಥಾ
ಮರುಗಬೇಡರಿಯಿಂದಿನಿಂದೆ ಸುಕ್ಷೇಮದಿಂ
ದಿರುವದೆನಲಾ ಜನನಿ ಜನಕರವನಿಗೆ ಮರಳಿ ಪೇಳಿದರಂತೆಂದೊಡೆ ||೮೦||

**ಪ್ರಮಾಣ – ಗರುಡ ಮಹಾತ್ಮೆ**

**ಶ್ಲೋಕ ||**

ಲೋಕೋಯಂ ರಕ್ಷಿತೌಯೋಮೇ ಸತ್ಕಾರ್ಯೈಃಧನಾದಾಪನಾಃ
ಸುವರ್ಣವರ್ಷದಾನೇನ ಲೋಕಾನ್ ರಕ್ಷಸ್ವಮೇ ಪ್ರಭೋ ||೧೮||

ಈಗೆಮ್ಮ ದೇಶಕ್ಕೆ ಕ್ಷಾಮಕಾಲವು ಪ್ರಾಪ್ತ
ಮಾಗಿ ಸಕಲರು ಕಷ್ಟಪಡುವರವರಂ ನೋಡ
ಲಾಗುವದಧಿಕ ತಾಪ ನಾವು ಸುಖದಿಂದಿರುವದನ್ಯಾಯವೆಂದು ನುಡಿಯೆ
ಆಗ ಪದ್ಮಂ ದೀರ್ಘವೆಸನದಿಂ ಮರಳಿ ವರ
ನಾಗಭೂಷಣ ಮೆಚ್ಚಿಸಿ ತನ್ನ ದೇಶದೋಳ್
ಬೇಗದಿಂ ಮೂರುವರೆ ಘಳಿಗೆವರಿಗೆ ಸುವರ್ಣವೃಷ್ಟಿಯನ್ನೆರಗರಿಸಿದಂ ||೮೧||

ಲೋಕಮೆಲ್ಲವನುದ್ಧರಿಸಿ ಪ್ರೇಮದಿಂದ ಕ
ನ್ಯಾಕುಬ್ಜ ಪುರಿವಾಸಿ ನೀಲಾಂಬಿಕೆಯಳನ್ನು
ಏಕಮನದಿಂ ವಿವಾಹವಾಗಿ ಕೌಲೇಯ ವೀರೇಶಮೇಣಾಕಲಟರೆಂಬ
ಸೌಕುರದಿಂ ಪೋದನದು ಮೊದಲ್ಗೊಂಡಿದ
ಕ್ಕೀ ಕಲಿಯುಗದೊನುತ್ತಿಪ್ಪರು ಸುವರ್ಣಗೋತ್ರವುಯಂದು ಕೌರಬೀಯರು ||೮೨||

ಪ್ರೀತಿಯಿಂದಾಲಿಸು ವಿಭಾಗಗೆ ಪ್ರಶಾಂಚ ಮೇ
ಣಾತಗೆ ಕನಕನವಗೆ ಮಂದಾರನುದ್ಭವಿಸಿ
ಭೂತಲದೊಳಿರಲಿತ್ತ ಭಿಲ್ಲನೆಂಬುವ ರಕ್ಕಸನು ಪಾರ್ವತಿಯನು ಕುರಿತು
ತಾತ ತವಕದಿಂದುಗ್ರ ತಪಗೈದು ವರಪಡೆದು
ಭೀತಿಗೊಳ್ಳದೆ ವಿಭುದರಂ ಪಿಡಿಯಲವರು ಗಿ
ರಿಜಾತೆಯರಸನ ಶರಣು ಹೊಂದಲಾತಂ ವೀರಭದ್ರನ ಮುಖವನೋಡ್ಡನು ||೮೩||

**ಪ್ರಮಾಣ – ಸ್ಕಂದ ಪುರಾಣ ಅಗಸ್ತ್ಯ ಸಂಹಿತೆಯ ೬೬ನೆಯ ಅಧ್ಯಾಯ ೧೦ನೆಯ ಶ್ಲೋಕ ||**

ಪುರಾಕೈಲಾಸ ಶಿಖರೇ ದೈತ್ಯೋಭೂತ್ಕ್ರೂರ ರಾಕ್ಷಸಃ
ಪಾರ್ವಚೀಂಚ ತಪಸ್ತಪ್ತ್ವ ವರಂಲೇಭೇತಿದಾರುಣಂ
ತೇನಮತ್ತೋಜಗತ್ಸರ್ವ ಬಾಧಯಾಮಾಸ ರಾಕ್ಷಸಃ
ತದ್ಭಾಧಾ ಶಮನಾರ್ಥಮಂವೈ ವೀರಭದ್ರೋ ಶಿವಾಕೃತಿಃ
ವೀರೇಶ್ವರಯತಿಖ್ಯಾತಃಕೌರಭೋಭೂತ್ಮಹಾಶಯಃ
ತಮೇವ ದೇವತಾಂಕೃತ್ವಾ ಕೌರಬಾ ಭಕ್ತಿತತ್ಪರಾಃ
ಅರ್ಚಯಂತಿ ಮಹಾತ್ಮನಾಂ ಬೀರೇಶ್ವರ ಮಹಾತ್ಮನಂ ||೧೯||

ಹಿಂಸಯಾ ಮಾನಸ ಕ್ರೋಧಾತ್ ಶಶಾಪಸುಮಹತ್ತರಂ
ಅಸ್ಮನ್ ಮೃಗಜಿಘೇರ್ಷತ್ವಂ ಪಾವನಾನ್ ಹರಿಣಾನ್ ಹರನ್
ಇತಃಪೂರ್ವಂ ಅಜಾಹಿಂಸನ್ ರೋಮಣೀಥ್ಥಮಕಾರಯಾ ||೨೦||

ಯನಲು ರೇವಣಸಿದ್ಧನಡಿಗೆರಗಿ ಸಿದ್ಧಬೀ
ರನು ಕೇಳ್ದನೀ ಕುರಿಗಳೆಂತು ಪುಟ್ಟಿದವು ಮೇಣಾ
ಮುನಿ ನಾರದನ ಶಾಪವೆಂತಾಯ್ತು ವಿಸ್ತರಿಸಿ ಪೇಳೆಂದು ಕರವ ಮುಗಿದನು
ತನಯನೀ ಚಿತೈಸು ವಿಂಧ್ಯಾದ್ರಿ ಪ್ರಾಂತದೋಳ್
ದನುಜಾತರಾದ ರಾಕ್ಷಸರೆಲ್ಲರೊಂದಾಗಿ
ಮುನಿಗೋದ್ವಿಜರ ಹಿಂಸೆಗೈಯುತ್ತ ಬರಲಾಗ ನಾರದ ಮುನೀಶ ನೋಡ್ದು ||೯೨||

ಕಡುಕೋಪಮಂ ತಾಳುತಜಮೇಷ ರೂಪವ ತಾಳಿ
ಪೊಡವಿಗವತರಿಸರೀಗಳೆ ಮ್ಲೇಂಚ ಜನರು
ಕಡಿಕಡಿದು ಕತ್ತರಿಸಿ ಸ್ವೀಕರಿಸಲೆಂದನುದಿನದಿ ಶಾಪವಿತ್ತನು ಜವದಲಿ
ವಡನೆ ಶಾಪಗ್ರಸ್ತರಾದ ಕೆಲ ರಾಕ್ಷಸರು
ಬಿಡದೆ ಅಜಮೇಷ ರೂಪವಧರಿಸಿ ಪುಟ್ಟಿದರು
ನುಡಿಸತ್ಯಮೆಂದು ತಿಳಿಯಿದನು ವರ್ತಿಸೈ ಮಗನೆ ಯೋಚನೆಯ ಕಳಿಯಂದನು ||೯೩||

**ಪ್ರಮಾಣ – ಸೂರ್ಯಸಿದ್ಧಾಂತೆ ಮನುದೀಪಿಕಾಯಾಂ ಯಜ್ಞಪುಸ್ತಾವೆ ದ್ವಿತೀಯ ಖಂಡೆ ಶ್ಲೋಕ ||**

ವಿಂಧ್ಯಾದ್ರಿ ಪ್ರಾಂತ ಭೂಮೌವೈ ಮೃಗಾಃ ಸಂಚಾರ ಮಾಪ್ನವಾನ್
ತದಾಶ್ರೀ ನಾರದಾಯೋಗಿ ಪರ್ಯಟನ್ ವಿವಿಧಾನ್ ವಧಾನ್
ತತ್ರಾಸಂಪ್ರೇಕ್ಷಯಾ ಮಾಸಾ ದನುಜಾನ್ ಕೋಟಿಸಾತ್ಕೃತಾನ್
ಹಾಸ್ಯಮಾನ್ ದ್ವಿಜಾನ್ ಚೈವ ಭಕ್ಷಮಾನಾನ್ ಪೃಥಕ್ ಪೃಥಕ್
ತಾನ್ ದೃಷ್ಟ್ವಾ ಯಧಯಾಯುಕ್ತಃ ಶಶಾಪಧರಣೀತಲೆ ಅಜಾ

ಕಾರಾಃಭವೇದ್ಯೋಯಂ ಭವಂತೋಹಿಂಸಯಿಷ್ಯಥಾ
ಯಾವನಾಶ್ಚಕಿರಾತಾಶ್ಚ ಪುಳಿಂದಾಃಕ್ರೂರರಾಕ್ಷಸಾಹಃ ॥೨೧॥

ಬೀರ ಕೇಳ್ವೀರ ಗೊಲ್ಲಾಳನ ಕಥೆಯ ನಿನಗೆ
ಸಾರುವೆನು ಶುದ್ಧಮನದಿಂದೆ ತಿಳಿಯೊಂದು ದಿನ
ವೀರಸ್ಯೆವೋತ್ತಮರು ಕೂಡಿ ಪಡಿವೆರಸಿ ಕಾವಡಿ ಪೊತ್ತು ಸಂಭ್ರಮದಲಿ
ಮಾರಾಂತಕನ ನಾಮನೆನದುಘೇಯಂದು ಗಂ
ಭೀರದಿಂ ಪೋಗುತಿರಲಾ ಪಥದಿ ಗೊಲ್ಲಾಳ
ಭೂರಿಕುರಿಗಳ ಪಾಲಿಸುತ್ತನಿಂತಿರಲವಂ ಪರುಷೆಯವರಂ ನೋಡ್ದನು ॥೯೪॥

ಅವರೊಳೊಬ್ಬನಂ ತಡೆದು ವೈಭವದೊಳೆತ್ತ ಪೋ
ಗುವಿರೆಂದು ಕೇಳಲ್ಕೆ ಶ್ರೀಮಹಾಗಿರಿಗೆ ಚರಿಸು
ವೆವು ಎನಗೆ ಪಾದರಕ್ಷೆಗಳಿಲ್ಲದತಿ ಕಷ್ಟಪಡುವೆ ಬಿಸಿಲಿನ ತಾಪಕೆ
ತವಕದಿಂ ಕೊಟ್ಟು ಸುಖಗೊಳಿಸಿದರೆ ನಿನಗೆ ನಾಂ
ಶಿವಲಿಂಗವನು ತಂದು ಕೊಡುವೆನುಮ್ಮಳಿಸಬೇ
ಡ ವಿರತಂ ನಿನ್ನನತಿ ಪ್ರೇಮದೊಳು ಪಾಲಿಸುವ ಗುರುಚನ್ನಮಲ್ಲೇಶನು ॥೯೫॥

ಎನಲು ಗೊಲ್ಲಾಳನುರೆ ಭಕ್ತಿಪೂರಿತನಾಗಿ
ಘನವೃದ್ಧ ಚರಗೊರೆದನೆನಗಾ ಮಹಲಿಂಗ
ವನು ತಂದು ಕೊಡಲು ನಾ ನಿನಗೆ ಬಿಂದಿಗೆ ಪೊನ್ನು ಪಾದರಕ್ಷೆಯ ಕೊಡುವೆನು
ಅನುಮಾನ ಬಿಡು ಬೇಡಲಶ್ರಾವ್ಯಮಪ್ಪುದೆಂ
ದನುವಾಗಿ ಪೇಳ್ದ ನುಡಿ ಕೇಳ್ದು ಚರವೃದ್ಧನಾ
ತನ ಮಾತಿಗೊಪ್ಪಿ ಪೊನ್ನಿತು ಕಳುಪೆನ್ನ ತಡವ್ಯಾಕೆ ನಡೆ ಮನೆಗೆಂದನು ॥೯೬॥

ದಿಟ್ಟಗೊಲ್ಲಾಳ ದೃಢಭಕ್ತಿಯಿಂ ಚರನ ಕುರಿ
ಹಟ್ಟಿಗೆ ಕರೆದು ನೆಲದ ಮರೆಯೊಳಗೆ ತಂದೆ ಹೂ
ಳಿಟ್ಟ ಪೊನ್ನಿನ ಬಿಂದಿಗೆಯಂ ಕಿತ್ತಿಕೊಟ್ಟು ನಿಜಪಥದೆಡೆಗೆ ಬಂದು ನಿಂತು
ಅಟ್ಟಹಾಸದಿ ಕುರಿಯ ನಟ್ಟಡವಿಗೊಡೆದೂಟ
ಬಿಟ್ಟು ಬೀಸ್ಗೋಲ್ಗೆಗದ್ದವಿಟ್ಟು ಕಂಬಳಿಯಂ ಪೊದ್ದು
ಬೆಟ್ಟ ಬಟ್ಟೆಗೆ ದೃಷ್ಟಿಯಿಟ್ಟು ನಿರ್ಭಯದಿ ಫಣದೊಟ್ಟು ನೋಡುತಲಿರ್ದನು ॥೯೭॥

ಅತ್ತ ಚರವೃದ್ಧ ಶ್ರೀಶೈಲಕ್ಕೆ ಪೋಗಿ ದೃಢ
ಚಿತ್ತದಿಂ ಗಣತೃಪ್ತಿಗೈಸಿ ಸತ್ಕೀರ್ತಿಯಂ
ಪೆತ್ತು ವೈಭವದೊಡನೆ ಲಿಂಗಮಂ ಮರೆತು ಹಿಂದಿರುಗಿ ಬರುತಿರೆ ಪಥದೊಳು
ನೆತ್ತಿಯೊಳ್ಕಂಬಳಿಯ ಪೊದ್ದು ನಿಂತಿರ್ದ ಭ
ಕ್ತೋತ್ತಮ ದನುಗರನನ್ನೋಡುತೆದೆಗುಂದಿ ತನು
ತತ್ತರಿಸುತವಸರದಿ ಚರಣದಂಗುಲದಿ ಕುರಿಹಿಕ್ಕಿಯಂ ಕೈಕೊಂಡನು ॥೯೮॥

ಗೊಲ್ಲಾಳ ಪರುಷೆಯವರಂ ಕಂಡು ತನ್ನ ಮನ
ದುಲ್ಲಾಸ ಪೆಗ್ಗಳಿಸಿ ಪೊನ್ನೊಯ್ದು ಚರನ ಪಾದ
ಪಲ್ಲವಕ್ಕೆರಗಿ ಶಿವಲಿಂಗಮಂ ತಾರೆನಲ್ಕಾಗ ಜಂಗಮಜವದೊಳು
ತಲ್ಲಣವ ಬಿಟ್ಟು ಕರದೋಳ್ಪಿಡಿದ ಹಿಕ್ಕೆಯಾ
ಗೊಲ್ಲನಿಗೆ ಕೊಟ್ಟು ಗೌಪ್ಯದೊಳಿದಂ ನಿರಿಸು ನೀ
ನೆಲ್ಲಿ ಮತ್ತಾರಿಗಿದು ತೋರಿಸದೆ ಭಕ್ತಿಯಿಂದನುದಿನದಿ ಪೂಜಿಸೆಂದ ॥೯೯॥

ಹೆಂಡ ದೇವಮ್ಮನಿಗೆ ಹೊನ್ನಿನವಾಳಗೆಂದು
ಖಂಡಿತದಿ ನುಡಿಪೇಳಿ ಬಂದನವಳಿಂಗೆ ಭೂ
ಮಂಡಲ ಪೊನ್ನಿತ್ತು ಪೊರೆಯಂದು ವಿಧವಿಧದಿ ಬೇಡಿಕೊಳ್ಳಲ್ಕೆ ಬೀರಂ
ಕಂಡುಕಾಣದೆ ಭಕ್ತಿಹೀನಳ ಮನೆಯೊಳೆನ್ನ
ಕೊಂಡು ವರವಿತ್ತು ಬರ್ಪುರೇ ಮೂಢನಂದದಲಿ
ಖಂಡಶಶಿಶೇಖರನ ಭಜನೆಯಂ ಬಿಟ್ಟು ಈ ಪರಿ ಮಾಡ್ದ ಬಗೆಯೇನೆನೆ ॥೧೧೦॥

ವೀರಮಾಳಿಂಗನಚ್ಚರಿಗೊಂಡು ಗುರುಸಿದ್ಧ
ಬೀರನ ಪಾದಕ್ಕೆರಗಿ ನಾ ಕೊಟ್ಟ ವಚನಮಂ
ಪೂರೈಸಬೇಕೆಂದು ಪೇಳಲಾ ದೇವಮ್ಮಗೆ ಪರವ ಪಾಲಿಸಿ ಮುಂದಕೆ
ಸಾರಿದರು ಗುರುಶಿಷ್ಯರೊಂದಾಗಿ ಬೆಟ್ಟ ಕಂ
ಡೇರಿದರು ಮೇಕ್ಕೆ ನೋಡಿದರು ಮೃಗತಿಯ
ಸೇರಿದರು ಕಾನನವ ಕೆಲದಿನಕೆ ಮರಳಿ ಹಾಲ್ಬಾವಿಗೈತಂದರವರು ॥೧೧೧॥

ಭರದಿಂದೆ ಶಿಷ್ಯನಂ ಕರೆದು ಪೇಳಿದನಾಗ
ಪುರದೊಳಗೆ ಪೊಕ್ಕು ದೇವಮ್ಮನ ಮನೆಗೆ ಪೋಗಿ
ಪರಮಾನ್ನವನು ಕೊಂಡು ಬಾರೆಂದು ಕಳಿಸಲ್ಕೆ ವೀರಮಾಳಿಂಗ ತಾನು
ಗುರುಪೇಳ್ದ ತೆರದಿ ಪೋಗುತ್ತ ಭಿಕ್ಷವನು ಬಾ
ಯ್ದೆರೆದು ಬೇಡಲ್ಕವಳು ಕಡುಗೋಪದಾಳಿ ಛೀ
ತಿರುಕ ನಡಿ ನಡಿ ನಿಲ್ಲಬೇಡೆಮ್ಮ ಮನೆಯಬಿಟ್ಟೆಂದು ನಿಂದಿಸಿ ನುಡಿದಳು ॥ ೧೧೨ ॥

ತಿರುಗಿದಂ ನಿಂದೆ ನುಡಿಗಳ ಕೇಳಿ ಯುಕ್ತಿಯಿಂ
ಜರುಗಿದಂ ಮನದೊಳಗೆ ನುಡಿನೆನಸಿ ಮರಮರನೆ
ಮರುಗಿದಂ ಕಳವಳದಿ ಕೂಡಿ ಹುಚ್ಚನ ತೆರದಿ ನಾನೇಕೆ ಬಂದೆನೆಂದು
ಸೊರಗಿದಂ ಬರಬರುತ್ತ ಮನನೊಂದು ತಾಪದಿಂ
ಕೊರಗಿದಂ ನಾಚಿಕೆಯೋಳ್ಕೈತಂದು ಗುರುಪಾದ
ಕ್ಕೆರಗಿದಂ ಭಕ್ತಿಭಾವದೊಳು ತನಗಾದ ಸಂಗತಿಯನೆಲ್ಲವ ಪೇಳ್ದಳು ॥೧೧೩॥

ಬೀರೇಂದ್ರ ಕೇಳಿ ಕಡುಗೋಪದಿಂ ಘುಡಿಘುಡಿಸಿ
ಭೂತರಿತಾಪದೊಳು ಹೊನ್ನೆಲ್ಲ ನೀಗಲಿ ಹಿಂದೆ

ತೋರಿ ಕರೆಯುತ್ತಿರುವ ಹೆಂಡದೇವಮ್ಮನೆಂಬುವದು ನಿಜಮಾಲೆಂದು
ಮೀರಿದುಗ್ರದಿ ಶಾಪವೀಯಲಾಕೆಯ ಭಾಗ್ಯ
ತೀರಿದುರ್ಭಾವದಿಂ ಬಡತನದ ಬಲೆಯೊಳಗೆ
ಸೇರಿ ಮಿಡುಕಿದಳು ಸಿದ್ಧರವಾಕ್ಯ ಸಟೆಯುಪ್ಪುದೇ ಧರಾವಲಯದೊಳಗೆ ||೧೧೪||

ಹಾಲಭಾವಿಯ ಬಿಟ್ಟು ಗುರುಶಿಷ್ಯರೊಂದಾಗಿ
ಮೇಲೆಸೆವ ಕುಂತಳ ಕಳಿಂಗಾಂವಂಗ
ಮಲೆಯಾಳ ನೇಪಾಳ ಕೇರಳ ಮುಖ್ಯದೇಶಗಳ ನೋಡುತ್ತ ಬೆಟ್ಟದೊಳಗೆ
ತೋಳಪುಲಿಸಿಂಗ ಮಾತಂಗಾದಿ ಭೀಕರ ಮೃ
ಗಾಳಿಗಳ ಜೈಸಿ ನದಿಯೊಳು ಸ್ನಾನಮಂಗೈದು ಸ
ಮ್ಮೇಳದಿಂ ಸುಕ್ಷೇತ್ರ ನೋಡುತ್ತ ಬೆಳ್ಳಗುತ್ತಿಯ ಪುರಕ್ಕೈತಂದರು ||೧೧೫||

ತ್ವರದಿಂದಲನುಜ ಬರಲಕ್ಕಮ್ಮ ನೋಡ್ದು ತಾ
ನಿರದೆ ಮನೆಯೊಳು ಪೋಗಿ ಕಲಶಮಂ ತಕ್ಕೊಂಡು
ಸರಸದಿಂದಾರತಿಯ ಬೆಳಗಿ ನೀನಿದುವರಿಗೆ ಪೋದ ಸಂಗತಿ ಪೇಳೆಂದಳು
ಸುರಲೋಕಕನುವಿನಂ ಪೋಗಿ ಪರಮೇಶ್ವರನ
ಸ್ಮರಿಸಿಯನ್ನಯ ಸೇವಕ್ಕಾಗಿ ಮಾಳಿಂಗನಂ
ಕರೆದುಕೊಂಡಿತ್ತ ಬಂದೆನು ಪಾಲಿಸೆಂದು ಪೇಳಿದನಕ್ಕರದೊಳಕ್ಕಗೆ ||೧೧೬||

ವರಸಿದ್ಧ ಬೀರಮಾಳಿಂಗರಿವರಕ್ಕನೊಳ್
ಸರಸದಿಂದೊಂದೆರಡು ದಿನಗಳೆದು ಪುರಬಿಟ್ಟು
ತೆರಳಿದರು ಮೂವ್ವರೊಂದಾಗಿ ಪಶ್ಚಿಮದೆಶೆಗೆ ಸುಕ್ಷೇತ್ರಂಗಳಂ ನೋಡುತ
ಧರೆಯೊಳುರೆ ಮೆರೆವ ಬಂಕಾಪುರಕೆ ಬಂ
ಧುರಬಾಗಿ ಬಂಕಣ್ಣನರಮನೆಯ ಪೊಕ್ಕೆಲ್ಲ
ಪರಿವಿಡಿದ ನೋಡುತ್ತೈತರಲಾಗಲಾ ಬಂಕಣ್ಣನಕ್ಕನ ಸೆರಗಂ ಪಿಡಿದನು ||೧೧೭||

ಬೀರೇಶಂ ಕಂಡವನ ಖಂಡೆಯಂ ಪೊಡೆದು
ಶಿರಹಾರಿಸಿ ಮಹಾರೌದ್ರದಿಂದೊಳಗೆ ಪೊಕ್ಕು ತಾಂ
ವೀರಪದ್ಮವತಾರದಿ ರಕ್ಕಸಿಯ ಕೊಂದು ಮಾಡ್ದ ಬಿರಿದಂಗಳನ್ನು
ತಾರತಮ್ಯದೊಳು ತೆಗೆದೊಂದೊಂದು ಶಿಷ್ಯಂಗೆ
ತೋರಿಸುತ ಬಾವಾನ್ನ ಬಿರುದುಗಳಣೆಸಿ ಗಂ
ಭೀರದಿಂ ತಕ್ಕೊಂಡು ತಿರುಗಿದರು ಪೂರ್ವಕ್ಕೆ ಮೀರಿದಾ ಮೋದದಿಂದೆ ||೧೧೮||

ಮೆಲ್ಲಮೆಲ್ಲನೆ ಮುಂದಡಿಗಳನಿಡುತ್ತ ರಂಜಿಸುವ
ಕೊಲ್ಲಿಪಾಕಿಗೆ ಬಂದು ಸೇರಲಾಪುರದೊಳಗೆ
ಬಲ್ಲಿದನೆನಿಪ ಭೂತಗಣಗಳಿಂ ಕೂಡಿ ಭೂತಾಳ ಸಿದ್ಧೇಂದ್ರನೆಂದು
ಎಲ್ಲ ಕುರುಬರಿಗೊಡೆಯನಾಗಿ ನಿತ್ಯದೊಳು ಸುಖ

ದಲ್ಲಿರಲವನ ಪುತ್ರನಸುವಳಿಯಲೆದೆಗುಂದಿ
ತಲ್ಲಣಿಸುತಾ ಹೆಣವ ತಂದು ಹಾಕಿದರಾಗ ಸಿದ್ಧಬೀರನ ಪಾದಕ್ಕೆ ॥೧೧೯॥

ಕರುಣದಿಂದಾ ಸಿದ್ಧಬೀರ ಗುರುಮಂತ್ರಮಂ
ಸ್ಮರಿಸಿ ಭಸಿತವ ತಳೆದು ಪ್ರಾಣಪ್ರತಿಷ್ಠೆಯಂ
ವಿರಚಿಸುತ ತಾಂ ತಂದ ಬಿರುದುಗಳನೊಂದೊಂದುನೆಣಿಸಿ ತೆಗದಿಟ್ಟು ಮುದದಿ
ಕರೆದು ದೇವಣ್ಣನಿಗೆ ಡೊಳ್ಳು ಜಗದೇವಂಗೆ
ಬುರುಗು ಬುಳ್ಳಗೆ ತಾಳ ದಿಲ್ಲಿರಾಯಗೆಕರ್ನಿ
ಮೆರವ ಕಾಳಿಂಗನಿಗೆ ಕೊಳಲು ಕಲ್ಲಯ್ಯಂಗೆ ಕಾಳಿ ಲಿಂಗಗೆ ಜಾಗಟಿ ॥೧೨೦॥

ಸಂಗನಿಗೆ ಜಗಜಂಪು ಮಲ್ಲನಿಗೆ ಕೊಡೆ ಸೋಮ
ಲಿಂಗನಿಗೆ ಡಂಕಾ ನಿಶಾನಿ ಮಡಿವಾಳನಿಗೆ
ಲಿಂಗಬಸಪ್ಪನಿಗೆ ಚಿನ್ನಕಾಳಿಯಕೊಟ್ಟು ವೈಭವದಿ ಕೂಡಿಕೊಂಡು
ತುಂಗಬಾವಾನ್ನ ಬಿರಿದುಗಳ ಮೆರೆಸುತ್ತ ಮಾ
ಳಿಂಗನಂ ಕರವ ಪಿಡಿದು ಚಂದ್ರಸೂರ್ಯನ ತೆರದೊ
ಳಂಗಜಾಂತಕನ ಸ್ಮರಿಸುತ್ತ ಭೂತಾಳಸಿದ್ಧನ ನಿಲಯಕ್ಕೆತಂದರು ॥೧೨೧॥

ಮೃಷ್ಟಾನ್ನವನು ಸವಿದು ಸಂತಸದಿ ಭಕ್ತಜನ
ಕಿಷ್ಟಾರ್ಥ ಕೊಟ್ಟು ಬಾವಾನ್ನ ಬಿರಿದಂಗಳಿಗೆ
ಅಷ್ಟವಿಧ ಪೂಜೆಯಂಗೈಸಿ ಮತ್ತವುಗಳಂ ತಕ್ಕಂಡು ಸ್ಥಲಬಿಟ್ಟರು
ಸೃಷ್ಟಿಯೊಳು ಶೋಭಿಸು ಸುಕ್ಷೇತ್ರ ನೋಡುತ್ತ
ದುಷ್ಟರಂ ಪರಿಹರಿಸಿ ಶಿಷ್ಟರಂ ಪಾಲಿಸುತ
ಶ್ರೇಷ್ಟಮೆನಿಸುವ ಹೂವ್ವಿನೂರೆಂಬ ಗ್ರಾಮಕ್ಕೆ ಬಂದರತಿ ಭರದಲಿ ॥೧೨೨॥

ಆ ನಗರದರಸು ಭೋಜೇಂದ್ರನೆಂಬುವನ ನಿಜ
ಸೂನು ಮೃತಿಹೊಂದಿದಕ್ಕೂರ್ಜನರು ಮರುಗುತಿರೆ
ದೀನರಕ್ಷಕದೇವ ಸಿದ್ಧಬೀರಂ ಕೇಳಿ ರಾಜನಾಲಯಕೆ ಬಂದು
ಮೀನಕೇತನ ಹರನ ಸ್ಮರಿಸಿ ಭಸಿತವತಳಿಯ
ಲಾ ನಿಮಿಷದೊಳ್ಬಾಲನೆದ್ದು ಕೂಡ್ರಲ್ಕೆ ಜನರು
ಮಾನವನ ವೇಷಮಂ ಧರಿಸಿ ಬಂದಿರ್ಪಸುರನೆಂದು ಕೊಂಡಾಡ್ದರವರು ॥೧೨೩॥

ರಾಜಬೋಜೇಂದ್ರ ಶಿವಸಿದ್ಧ ಬೀರನ ಪಾದ ಸ
ರೋಜಕ್ಕೆ ನಮಿಸಿ ಏಕೋಬಾವದಿಂ ಸತತ
ಪೂಜಿಸಿ ಮಠವನು ಕಟ್ಟಿಸಿ ಕೊಡಲ್ಕವರಲ್ಲಿ ನಿಂದು ಶ್ರೀಗುರು ರೇವಣಸಿದ್ಧನ
ಮಾಜದೆ ನಿರಂತರದಿ ಬಿಡದೆ ಮನದೊಳು ಭಜಿಸಿ
ರಾಜಶೇಖರನವರ ನಾಮಾವಳಿಗಳಂ ಸ
ದಾ ಜಪಿಸುತತಿ ವಿಲಾಸದಿ ಮಾಳಿಂಗನಿಂದ ಸೇವ್ಯಗೊಂಬುತ್ತ ಮೆರದಿರ್ದನು ॥೧೨೪॥

ವೀರಮಾಳಿಂಗ ನಿಜಭಕ್ತಿಯಿಂ ಗುರುಸಿದ್ಧ
ಬೀರನಂಸ್ಮರಿಸುತ್ತಲಿರಲಿದಕೊಪ್ಪದೆ ಕೃ
ಪಾರಹಿತನಾಗಿ ಶಿಷ್ಯಗೆ ಪೇಳ್ದ ಕಪ್ಪೆಕಲಕದ ಜಲಮಂ ಪುಳಮುಟ್ಟದ
ಸಾರಪುಷ್ಪಂಗಳಂ ತಂದೆನ್ನ ಪೂಜಿಪುದೆನಲ್
ಮೀರದಾ ಮಾಳಿಗನೆದ್ದು ರೇವಣನಾ
ಧಾರಮಂ ತಕ್ಕೊಂಡು ಹೂಜಿಯಂ ಪಿಡಿದು ಕಂಬಳಿಯಂ ಕಾಸಿಯಂ ಕಟ್ಟಿ ನಡೆದ ॥೧೨೫॥

ಅನಿತರೊಳಾ ಸಿದ್ಧಬೀರ ಮಾಸಿದ ರೂಪ
ವನು ಧರಿಸಿ ಮಾಳಿಂಗರಾಯನೈತರುವ ಪಥ
ಕೊನೆಯೊಳಗೆ ನಿಂತು ಕೇಳಿದ ನೆಲವೋ ನೀನಾರು ಪೆಸರೇನು ಪೋಗ್ವದೆತ್ತ
ಯನಲವಂ ಪೇಳ್ದ ವರಸಿದ್ಧ ಬೀರನ ಶಿಷ್ಯ
ಎನಗೆ ಮಾಳಿಂಗನೆಂಬಿ ಅಭಿದಾನ ನಾನೀಗ
ಮಿನುಗುತಿಹ ಪುಷ್ಪೋದಕಗಳ ತರುವದಕೆ ಪೋಗುವೆ ಪಾಂಡ್ರಕೋಟಿ ಪುರಕೆ ॥೧೨೬॥

ಎಲವೋ ನೀನೆಂತಹ ಮರುಳ ಮಹಾ ಮಹಿಮಂಗೆ
ನಿಲುಕದ ಕೆಲಸಕೆ ಪೋಗುವರೆ ಬಿಡುಬಿಡು ನಿನ್ನ
ಗೊಳಿತಲ್ಲ ನಿನ್ನಂ ಕೊಲ್ಲಿಪುದಕಾಗಿ ಗುರು ಕಳಿಸಿಕೊಟ್ಟಂತೆ ತೋರುವದೆನ್ನಗೆ
ಹುಲುಮನುಜ ಹಿಂದಕ್ಕೆ ತಿರುಗು ಪಥದೊಳಗಿರ್ಪ
ಖಿಲ ದಾನವರ ಬಳಗ ಕಂಡರತಿ ಪ್ರೀತಿಯಿಂ
ಸುಲಿದು ತಿಂಬದೆ ಬಿಡರು ಪೋಗಿ ಸಾಯಲಿಬೇಡ ನಿಲ್ಲೆಂದು ಕರಮುಗಿದನು ॥೧೨೭॥

ಆ ಕಪಟ ಬೀರನಂ ಜರಿದು ಗುರ್ವಾರ್ಚನೆಗೆ
ಬೇಕಾದ ಪುಷ್ಪೋದಕಂಗಳಂ ತರುವದಕೆ
ಸಾಕಾರದಿಂದೆ ಮುಂದಕ್ಕೆ ಪೋಗಲ್ಕಲ್ಲಿ ಕಾವಲಿಯೊಳಿರ್ದ ಖಳರು
ಭೀಕರದಿ ಬಾಯ್ದೆರೆದು ಬರಲವರು ಬೆದರದೆ ನಿ
ರಾಕರಸಿ ಸಿದ್ಧೇಂದ್ರನಾಧಾರ ತಳಿಯಲ್ವಿ
ವೇಕದಿಂ ಪತಗೊಟ್ಟು ಕಳಿಸಲ್ಕೆ ಮಾಳಿಂಗ ಪಾಂಡ್ರಕೋಟೆಗೆ ಪೋದನು ॥೧೨೮॥

ಆದಿಶೇಷನ ಕಾವಲಿಯಂ ದಾಂಟಿ ಪೋಗಿ ಜಲ ಪು
ಷ್ಪೋದಕಂಗಳಂ ಕೊಂಡು ಹಿಂದಕ್ಕೆ ತಿರುಗಿ ಜಗ
ದಾದಿ ಮೂರ್ತಿಯಂ ಧ್ಯಾನಗೈಯ್ಯುತ್ತ ಹುವ್ವಿನೂರಿನ ಸಮೀಪಕ್ಕೆ ಬರಲು
ಮೋದದಿಂ ಜಡೆಸಿದ್ಧರೊಂದಾಗಿ ಮಠದಿ ಸುಖ
ನಾದದನ ಪೂರಿ ಹೆಗ್ಗಾಳಿ ಜಾಗಟಿ ಕೊಳಲ
ನೂದಿ ಡೊಳ್ಳಿನ ಶಬ್ದ ಘನಮಾಡಿ ಬಾವಾನ್ನ ಬಿರುದುಗಳ ಪಿಡಿದಿದ್ದರು ॥೧೨೯॥

ವೀರಮಾಳಿಂಗನೈ ತರುವದಂ ಕಂಡು ವರ
ಬೀರೇಶ ಮಾಯಾರೂಪವ ತಾಳಿ ಮಠಬಿಟ್ಟು

ದೂರದೋಳ್ಪೋಗಲಾ ಮಾಳಿಂಗನ್ನೈ ತಂದು ಗುರುವಿಲ್ಲದಂ ತಿಳಿದನು
ಭಾರಿಭಾರಿಗೆ ಡೊಳ್ಳಿನೋಲಗ ಮಾಳ್ಪ ಜಡೆ
ಗಾರರಂ ಕರೆದೊರೆದು ದೇವರಿಲ್ಲ ಗುಡಿಯ
ಸೇರಿ ಪೂಜಿಸುತಿಹರೆ ಬಿಡಿರೆಂದು ಭರದಿ ಗುರುವಿನಂ ಶೋಧಿಪುದಕೆ ಪೋದಂ ||೧೩೦||

ನಂಬಿಗೆಯ ಭಾವದಿಂದತ್ತಿತ್ತ ಶೋಧಿಸ
ಲ್ಕಿಂಬಾದ ಸ್ಥಲದಿ ಗುರು ಕೂತಿರಲು ಮಾಳಿಂಗ
ಬೆಂಬಿಡದೆ ಬರುವದಂ ತಿಳಿದು ಸರ್ಪಾಗಿ ಹುತ್ತಿನ ಮಧ್ಯದೊಳು ಪೊಕ್ಕನು
ಕಂಬಳಿಯ ಬೀಸುತ್ತ ಕರಕರೆದು ಬೇಸರದೊ
ಳಂಬಿಕಾ ವಲ್ಲಭನನೆನಿಸುತ್ತ ವೃಕ್ಷನಿ ಕು
ರುಂಬಮಂ ದಾಂಟಿ ಹುತ್ತಿಗೆ ಬಂದು ನಿಂತು ವನ ಸೇರಿರ್ದುದಂ ತಿಳಿದನು ||೧೩೧||

ಪರಮಪರಿಪೂರಿತ ಬಾ ಬರ್ಮನಸುಜಾತೆ ಬಾ
ಧರೆಯೊಳುರೆ ಖ್ಯಾತ ಬಾ ಎನ್ನ ಪ್ರೀಯ ತಾತ ಬಾ
ಸ್ಥಿರಕರ ಪುನೀತ ಬಾ ಇಷ್ಟಪ್ರದಾತ ಬಾ ಮಹಿಮ ಸಂಕೇತ ಬಾರೋ ಬಾಬಾ
ದುರಿತೌಘದೂರ ಬಾ ದೇವವತಾರ ಬಾ
ಕರುಣಪರಿಪೂರ ಬಾ ಭುವನಗಂಭೀರ ಬಾ
ಶರಣಸುವಿಚಾರ ಬಾ ಶಿವಸಿದ್ಧ ಬೀರ ಬಾರೆಂದು ಕೂಗಿದಲಿ ಪ್ರೇಮದಿಂದ ||೧೩೨||

ಕರಿಸಿಂಹಗಳಿರಾ ಕುರಣಾತ್ಮನಂ ಕಂಡಿರಾ
ಮರುಗುಲ್ಮಗಳಿರಾ ಮಹಿಮಾಂಕನಂ ಕಂಡಿರಾ
ಹರಿಣವೃಕಗಳಿರಾ ಹರನೊರಸುತನಂ ಕಂಡಿರಾ ಶುಕಪಿಕ ಬಕಾಳಿಗಳಿರಾ
ಬಿರಿದಂಕಸಿದ್ಧ ಬೀರೇಂದ್ರನಂ ಕಂಡಿರಾ
ಪರಿಪರಿಯೊಳುರೆ ನೊಂದು ಪರಮದುಃಖದೋಳೀಗ
ತರಹರಿಸುತಿರ್ಪ ತರುಳಗೆ ತಿಳಿಸಿ ರಕ್ಷಿಸೆಂದೆಡಬಲಕೆ ಬಾಯ್ಬಿಟ್ಟನು ||೧೩೩||

ಎನ್ನ ಕರದಿಂ ಸೇವ್ಯಗೊಂಬುವದು ಬಿಟ್ಟು ಮ
ತ್ತಿನ್ನೆಲ್ಲಿ ಸೇರಿರುವಿ ಪರಿಪರಿಯಿಂದ ಕರೆದರೂ
ನಿನ್ನದಭಿಲಾಷೆವೇನದು ಎನಗೆ ಪೇಳಿ ರಕ್ಷಿಸದಿರ್ದರೀ ಕಾಯವ
ನಿನ್ನ ಪಾದಕ್ಕರನಿಮಿಷದೊಳೊಪ್ಪಿಸದಿರ್ದ
ಡೆನ್ನಯಿಳೆಯೊಳು ವೀರಮಾಳಿಂಗನೆಂಬ ಪೆಸ
ರಿನ್ನೇಕೆ ಸಲ್ಲದೆಂದಾಯುಧವ ತೆಗೆದಿರಿದುಕೊಳ್ಳುವದಕನುವಾದನು ||೧೩೪||

ತನುಮನಸು ಭಕ್ತಿಯಿಂ ನೋಡಬೇಕೆಂದು ಹು
ತ್ತಿನೊಳಿರ್ಪ ಬೀರನಹಿರೂಪದಿಂ ಪುಟನೆಗೆದು
ಘನಭಯಂಕರದಿ ಮೇಲಕೆ ಬರಲ್ಕಾ ವೀರಮಾಳಿಂಗ ನೋಡಿ ತನ್ನ
ಜನಕನಿವನೆಂದು ಜವದಿಂ ತಿಳಿದು ನುಡಿದ ಮುಂ

ದೆನಗೀ ಕಪಟರೂಪ ತೋರಿದರೆ ಬೆದರುವನೆ
ಮನಸಿಜಾಂತಕನು ಚರಭೈರವ ರ ವೇಷಮಂ ಧರಿಸಿ ಭುವನಕ್ಕೆ ಬರಲು ॥೧೩೫॥

ಹರನಿಗಂಬರವಿತ್ತ ದಾಸಯ್ಯ ಯವ್ವನವ
ನೆರ ಪಡೆದ ಕುಂಬಾರಗುಂಡಯ್ಯ ಸತಿಯ ಶಂ
ಕರಗಿತ್ತ ಸಿಂಧುಬಲ್ಲಾಳ ಶಿವವ್ರತಕಾಗಿ ತನ್ನ ಸುಕುಮಾರನನ್ನು
ಭರದು ಮುಸಲದಿ ಪೊಡೆದು ಕೊಲ್ಲಿರ್ದ ನಿಂಬೆಕ್ಕ
ತರುಳನಂ ಕೊರೆದು ಜಗದೀಶಗರ್ಪಿಸಿದ ವರ
ಸಿರಿಯಾಳ ಮೃಡನ ಮಗನಂ ಮಾಡಿಕೊಂಡ ಅಮ್ಮವ್ವೆ ಮುಖ್ಯ ಸುಭಕ್ತರು ॥೧೩೬॥

ಕಪಟರೂಪವ ಕಂಡು ನಿಂದಿಸದೆ ಮನದೊಳಗೆ
ಕುಪಿತರಾಗದೆ ಶಂಕರೀಶನೆಂದರಿದು ಸ
ತ್ಕೃಪೆಗೆ ನೆಲೆಯಾಗಿ ಶಿವಲೋಕಮಂ ಸೇರಲಿಲ್ಲವೇ ಸಿದ್ಧಬೀರೇಂದ್ರನೇ
ಅಪರಾಧಮೇನೆನ್ನದಿಹುದದಂ ಪೇಳು ನೀ
ನಪರಮಿತ ಭೀಕರವ ತೋರಿದೆಡೆ ಬೆದರಿದನಾ
ನಪಹಾಸ್ಯಕೀಡಾಗಿ ಬಾಳ್ದಪೆನೆ ಮತ್ತೊರೆವನೇಕಚಿತ್ತದೋಳಾಲಿಸು ॥೧೩೭॥

ಧರೆಯೊಳೆಣೆಯಿಲ್ಲದಷ್ಟೈಶ್ವರ್ಯ ಸುಖಭೋಗ
ವೆರಸಿ ಭೂಪತ್ವಮಂ ಧರಸಿ ಗುರುಲಿಂಗಾದಿ
ಚರಭಕ್ತಿಯಿಂದೆ ವೈರಾಗ್ಯಮಂ ತಾಳಿ ಶ್ರೀಶೈಲಕ್ಕೆ ಸಿದ್ಧನಾಗಿ
ಚರಿಸುತಿರಲಾತನ ಸುಭಕ್ತಿಯಿಂ ನಿಜವಾಗಿ
ಪರೀಕ್ಷಿಸುವಕ್ಕೆ ಶಿವ ಶ್ರವರೂಪವನು ತಾ
ಧರಿಸಿ ಪಥಕಡ್ಡಾಗಿರಲ್ಗಭವನೆಂದರಿಯಲಿಲ್ಲವೇ ಸಕಳೇಶನು ॥೧೩೮॥

ಅನಘ ಶಿವಸಿದ್ಧಬೀರೇಶ್ವನೆ ನೀನೀಗ
ಲನುಪಮಸ್ಯರೂಪಮಮ್ಮರೆ ಮಾಜಕಾಪಟ್ಯ
ಮನದಿಂದೆ ಉರಗರೂಪವತಾಳಿ ಎನ್ನಂ ಪರೀಕ್ಷಿಸುವದಕ್ಕೆ ಬಂದೆ
ಘನಭಯಂಕರತೋರ್ದರಂಜುವನೆ ನೋಡೆಂದು
ಅನುವಿನಿಂದಾ ಸರ್ಪನನ್ನು ಪಿಡಿಯಲ್ಕೆ ನಿಜ
ವನು ತೋರಲಾ ಗುರುವರೇಣ್ಯನಂ ಕೊಂಡು ಮನೆಗೈತಂದು ವಿಭವದಿಂದೆ ॥೧೩೯॥

ಏಕಚಿತ್ತದಿ ಸದ್ಗುರುವಿನ ಪಾದಕಮೃತಾಭಿ
ಷೇಕಮಂಗೈದು ತಾಂಣ ತಂದುದಕ ಮಜ್ಜನವ
ಸಾಕಾರದಿಂಗೊಳಿಸಿ ಪುಳ ಮುಟ್ಟದಿರ್ದ ಪುಷ್ಪಂಗಳಂ ಧರಿಸಿ ನುತಿಸಿ
ಬೇಕಾದ ಪತ್ರಿಗಳನಿಟ್ಟು ಘಮಘಮಿಸುವ ಧೂಪ
ಹಾಕಿ ಜಯಜಯವೆಂದು ದೀಪಕರ್ಪೂರ ಬೆಳಗ
ಲಾ ಕನಕಜಡೆಯ ಗುರುಸಿದ್ಧಬೀರಂ ವೀರಮಾಳಿಂಗಗೊಲಿದು ಪೊರೆದ ॥೧೪೦॥

ಗುರುವಿನಂದಪ್ಪಣೆಯ ಪಡೆದು ಮಾಳಿಂಗ ಸಂ
ಚರಿಸಿದನು ಸುಕ್ಷೇತ್ರಂಗಳಂ ನೋಡುತ್ತ ಕಲ್ಯಾಣ
ಪುರಕೆ ಬರಲಲ್ಲಿ ಮೃತಿಹೊಂದಿದ್ದ ವೃಷಭನನ್ನು ಮೆರಿಸುತಿರಲದನು ಕಂಡು
ಮರುಳರಿಹರೆಂದಿ ವರಮುಖ ಭಂಗಿತವ ಮಾಳ್ಪ
ತೆರನಾವುದೆಂದು ಯೋಚಿಸಿ ಸತ್ತ ಕುರಿಯಂ ಪೊತ್ತು
ಭರದೊಳು ಮಹಾದ್ವಾರಕ್ಕೆತಂದು ವಿಶ್ರಮಿಪುದಕೆ ನಿಂದನಿತ್ತೆ ||೧೪೦||

ಮಡಿವಾಳ ಮಾಚಯ್ಯ ಕಿನ್ನರಿ ಬ್ರಹ್ಮಯ್ಯ
ವಡೆಹಲ್ಲು ಬಂಕಯ್ಯ ಮೋಳಿಗೀ ಮಾರಯ್ಯ
ಕಡುವಿಸುಪ ಕಲಿಕೇತ ಬ್ರಹ್ಮಯ್ಯ ಮೇದಾರ ಕೇತಯ್ಯರೆಲ್ಲರು ಕೂಡಿ
ಸಡಗರದಿ ನಿರ್ಜೀವ ನಂದಿಯಂ ಶೃಂಗರಿಸಿ
ಮೃಡನ ಸ್ಮರಿಸುತ ಗಂಧಪರಿಮಳಂಗಳಂ ಧರಿಸಿ
ನಡುಬೀದಿಯಲ್ಲಿ ಮೆರೆಸುತ್ತ ಉಘೇಚಾಂಗುಯಂದಡಿಗಡಿಗೆ ಘೋಷಿಸುತಿರೆ ||೧೪೧||

ಲಿಂಗವಿಲ್ಲದ ಭವಿಯು ಹಸುವಳಿದ ಕುರಿಯ ತ
ನ್ನಂಗದೋಳ್ಪೊತ್ತಿತ್ತಲ್ಕೆ ತರುವನೀಗಲಾ
ಮಂಗನಂ ಬಡಿದು ಶಿವಿಡಿದತ್ತ ದಬ್ಬಿಬಿಡಿರೆಂದು ಬಂದರು ಮುಂದಕೆ
ಸಿಂಗಾರದೊಚ್ಛವಂ ಕಣ್ಗೆದೋರದೆ ನಮ್ಮ
ರಂಗುಬೀದಿಯೊಳ್ಕೈತರುವರೆ ಛೀಯೆಂದು ಮುಖ
ಭಂಗಿತವ ಮಾಡಲಾ ಮಾಳನಚ್ಚರಿಗೊಂಡು ಬಯ್ಯುವದೇಕೆನಗೆಂದನು ||೧೪೩||

ಎಲವೋ ನೀನಾರ್ನಿನ್ನ ಪೆಸರೇನು ಪೇಳು ಪುರ
ನಿಲಯದೋಳ್ಪರಬೇಡ ನಿಲ್ಲು ನಿಲ್ಲೆಲೊ ನಿನ್ನ
ಕುಲಮೂಲಮಂ ತಿಳಿಸು ಲಿಂಗಿಗಳ ಮುಖನೋಡಲಾಗದೆಂದೊರೆದರವಗೆ
ಕುಲಕಲ ನಗುತಮಾಳ ಪೇಳ್ದನವರಿಂಗೆ ಈ
ಇಳೆಯೊಳಗೆ ಸಿದ್ಧರೇವಣನ ನಿಜಪೌತ್ರನಿಂ
ಮ್ಕೊಳು ತಿಳಿರಿ ಲಿಂಗಾಂಗಿ ನಾನಿರುವೆನೆನಲದಂ ತೋರೆಂದು ಕೇಳ್ದರವರು ||೧೪೪||

ಹರಭಕ್ತನಾದರೀ ಸತ್ತ ಕುರಿಯಂ ಪೊತ್ತು
ಬರುತಿರ್ಪರೇ ಮರುಳ ಸಾಕು ಸುಮ್ಮನೇ ನಡಿಯೋ
ಹರಕಾತಿಗ್ಯೆವದಕ್ಕೆ ಸರಿಸರಿಯನುತ ನೂಕಿಬಿಟ್ಟರು ಚಾರರು
ತ್ವರದಿಂದಲಾಕುರಿಯ ಧರೆಗಿಳಿಸಿ ಮಾಳಿಂಗ
ಕರಮುಗಿದು ಕೇಳ್ದ ನಿಮ್ಮುತ್ಸವದ ಸಂಗತಿಯ
ನೊರೆದರೀಗಳೆ ನಾನು ಲಿಂಗಮಂ ತೋರುವೆನು ಬರಿದೆಯೋಚನೆಯಾತಕೆ ||೧೪೫||

ಮಂದಭಾಗ್ಯನೇ ನಮ್ಮ ಪುರನಿಲಯದೊಳ
ಗೊಂದು ನಂದಿ ಮೃತಿಹೊಂದಿರಲದಂ ಚಂದ

ದಿಂದ ರಥಮಂದಿರೊಳಿಟ್ಟು ಶೃಂಗರಿಸಿ ಮೆರೆಸುತ್ತಿರುವೆವೆಂದು ಪೇಳ್ದರು ಚಾರರು
ಇಂದು ಮೃತಿಹೊಂದಿದ ಕುರಿಯತಂದರೆನಗೀಗ
ನಿಂದಿಸುವಿರೊಳ್ಳಿತವೆ ಅಸುವಳಿದ ನಂದಿಯಂ ನೀವು
ಚಂದದಿಂ ಮೆರೆಸುವದು ನಿಮ್ಮಗಿದು ಧರ್ಮವೇ ಪೇಳೆಂದ ಮಾಳಿಂಗನು ‖೧೪೬‖

ಅಲ್ಲನಡಿಯೆಂದರಿಷ್ಟೇಕೆ ನಿನ್ನಗೆ ಛಲವು
ಸಲ್ಲದಿದು ಸುಮ್ಮನಿರು ಯಲ್ಲಿ ಕಲಿತೀ ನುಡಿಯು
ಹಲ್ಲು ಮುರಿಸುವೆವು ಪುರದಲ್ಲಿರುವದುಚಿತಮಲ್ಲೆಂದು ನಿಂದಿಸಿ ನುಡಿದರು
ಮೆಲ್ಲಮೆಲ್ಲನೆ ನುಡಿದ ಭಟರ್ಗೆ ಮಾಳಿಂಗ ನಿ
ಮ್ಮಲ್ಲಿರ್ಪ ಲಿಂಗದ ಮಹಿಮೆಯಿಂದ ನಂದಿಯಂ
ಯಲ್ಲರರಿವಂತೆ ಪ್ರಾಣಪ್ರತಿಷ್ಟೆಯಂ ಮಾಡಿ ತೋರ್ವದೆಂದನು ತವಕದಿ ‖೧೪೭‖

ನುಡಿದರಾ ಚಾರರಸುವಳಿದ ನಿನ್ನಯ ಕುರಿಯ
ಕಡು ತವಕದಿಂದೆ ಪ್ರಾಣಪ್ರತಿಷ್ಠೆಯ ಮಾಡಿ
ದಡೆ ನೀನು ಗುರುಸಿದ್ಧ ರೇವಣನ ಪೌತ್ರನಹುದೆನಲಾಗ ಮಾಳಿಂಗನು
ಮೃಡನ ಮನದೊಳು ಧ್ಯಾನಿಸುತ ಮಹಾಭಸಿತವನು
ಪಿಡಿದು ಕರದಿಂದದರ ತನುವಿನೋಳ್ತಳಿಯಲ್ಕೆ
ತಡಿಯದೆದ್ದಾ ಮಾಳನಂ ನೋಡಿ ಕುಣಿದಾಡಲಿಕ್ಕೆ ಪ್ರಾರಂಭವಾಯ್ತು ‖೧೪೮‖

ಚರರು ಬಂದಾ ಮೇಷನಂ ನಿಲ್ಲಿಸುತ್ತದರ
ಶಿರಚರಣಗಳ ಪಿಡಿದು ನಿಲ್ಲಿಸಲ್ಕಾ ಮಾಳ
ಶಿರವಿಡದವಗೆ ಟಗರಜೋಗಿಯಾಗೆಂದು ಹಿಂಗಾಲಿಡಿದೆಳೆದೆ ಭಟನಿಗೆ
ನಿರುತದಲಿ ಕಟಗನಾಗೆಂದು ಮನದೋಳ್ಕೋಪ
ವೆರಿಸಿ ಪಲ್ಗರಿದು ಶಾಪವ ಕೊಡಲ್ಕಾ ಭಟರು
ಮರುಗುತಾತ್ಮದೊಳು ಮುಂದಿದಕೆಮಗುಚಿತಗತಿಯಂ ಪೇಳಿ ರಕ್ಷಿಪುದೆಂದರು ‖೧೪೯‖

ವರಮಾಳ್ದ ಪೇಳ್ದ ನನ್ನಯ ಶಾಪಕೆ ವಿಶ್ಯಾಪ
ಪರಿಯಾವುದಿಲ್ಲಿ ನಿಮಗೊಂದೊಂದು ಮೇಷ ಉಡು
ಗೊರೆಯಾಗಿ ಕೊಡುವೆನೆಂದೊರೆದು ಕರದೊಯ್ಯುನಿತರೊಳಗೋರ್ವ ಪರಿಚಾರಕಂ
ಭರದಿಂದೆ ಬಂದು ಮಾಳಿಂಗನ ಮಹತ್ವವನು
ಸರಿದನಾಲೆ ಬಸವನಲ್ಲಿಗೈತಂದಾತ
ಕರಸಿ ಕೊಂಡತಿ ಮುದದಿ ಕಲ್ಯಾಣಪುರದಿ ಚಂದನಗೇರಿಯಂಬ ಸ್ಥಲದಿ ‖೧೫೦‖

ಮನಗೊಟ್ಟು ಸತ್ತ ಕುರಿ ಪೊತ್ತು ಮಾರೆಂದಾಜ್ಞೆ
ಯನು ಪೇಳಿ ವರಸಿ ಮೈದಡವಿ ಕಳಿಸಲ್ಕೆ ಬಂ
ದನು ಚರರ ಕರೆದುಕೊಂಡವಸರದಿ ಪಥಗೂಡಿ ಮೇಷವಾಸಸ್ಥಾನಕ್ಕೆ
ಘನಮೋದದಿಂದಲಾ ಶಾಪಗ್ರಸ್ಥರಿಗೆ ಕುರಿ

ಯನು ಕೊಡಿಸಿ ಹಾಲ್ಮತದ ಬಿರಿದುಗಳನುರೆ ಪೊಗಳಿ
ದಿನಗಳೆಯರೆಂದೊರೆದು ಗುರುಸಿದ್ಧ ಬೀರನಿಹಸ್ಥಾನಕ್ಕೆ ಬಂದ ಭರದಿ ||೧೫೧||

ಗುರುಶಿಷ್ಯರೊಂದಾಗಿ ಮಠದೊಳಿರುತಿರಲತ್ತ
ನೆರೆದ ಜಡೆಸಿದ್ಧರೆಲ್ಲರು ಕೂಡಿ ಕಪಟದಿಂ
ವರವೀರ ಮಾಳಿಂಗನಂ ಕೊಲ್ಲಬೇಕೆಂದು ಕೋಣನೂರಿನ ಸ್ಥಲದೊಳು
ಕರಿದೇವರುತ್ಸವವ ಮಾಳ್ಪೆವೆಂದವರೋರ್ವ
ಚರನ ಕಳಿಸಲ್ಕವ ವಿಭೂತಿಯಂ ತಂದುಭಯ
ಚರಣಕ್ಕೆ ಧರಿಸಲಿದು ಬಂದನಾ ಕಾಲಯೆಂದಾತ್ಮದೋಳ್ತಿಳಿದುಕೊಂಡೆ ||೧೫೨||

ಬಂದ ಚರನಂ ನಿಲಿಸಿ ಬರುವೆನೆಂದಭಯಮಂ
ಚಂದದಿಂ ಕೊಟ್ಟು ಗುರುವಿನ ವಿಮಲ ಪಾದಾರ
ವಿಂದಮಂ ಪೂಜೆಗೈದತಿಭರದಿ ಕೋಣನೂರಿನ ಮಾರ್ಗಮಂ ಪಿಡಿದನು
ಮುಂದಡಿಯಿಡುತ್ತೈತರಲ್ಕಿತ್ತ ಜಡೆಸಿದ್ಧ
ರೊಂದಾಗಿ ಮಾಳಿಂಗನಂ ಕೊಲ್ಲುವದ ಕೇಳು
ಮಂದಿಯಂ ಮಧ್ಯ ಪಥದೋಳ್ಗುಪ್ತದಿಂ ಕೂಡ್ರಿಸಿಲರಲಲ್ಲಿಗೈ ತಂದನು ||೧೫೩||

ಬಪ್ಪುದಂ ಕಂಡು ನೀನಾರೆಲ್ಲವೋ ನಿಲ್ಲು ಕ
ಣ್ದಪ್ಪಿ ಪೋಗುವದುಚಿತವಲ್ಲ ಪೆಸರೇನು ನಿ
ನ್ನಪ್ಪನಾವನು ಎಮಗೆ ಪೇಳಿ ಪಾರಾಗೆಂದು ನುಡಿಯಲವನಿಂತೆಂದನು
ಒಪ್ಪಿತ ನುಡಿಗಳಿಂದೆ ಕೇಳದೆನ್ನಗೆ ಕ್ರೋಧ
ಮಪ್ಪಂತೆ ದುರ್ನುಡಿಗಳು ಸುರಿದರೆ ಬೆದರುವನೆ
ಮುಪ್ಪುರಾಂತಕನರದೊಳುದ್ಭವಿಸಿ ಮೆರೆವ ಗುರು ಬೀರೇಂದ್ರ ಪೊರೆವನೆನ್ನಂ ||೧೫೪||

ಎಂದು ಮಾಳಿಂಗನವರಿಗೆ ಸಿಗದೆ ಯುಕ್ತಿಯಿಂ
ಮುಂದಕ್ಕೆ ನಡೆದು ಬಂದನು ಕೋಣನೂರಿಗತಿ
ಚಂದದಿಂದೆಡೆ ಬಲವನೀಕ್ಷಿಸದೆ ಜಿಗಿದು ಹಾರಿದನಗ್ನಿಕುಂಡದೊಳಗೆ
ನಂದಿತುರಿ ತಕ್ಷಣದಿ ಸರ್ವಜನ ನೋಡುತಿರೆ
ಹಿಂದಕ್ಕೆ ಹಾರಿ ತೆರಳುತ್ತಧಿಕ ತೀವ್ರದಿಂ
ತಂದೆ ಬೀರೇಂದ್ರನಿಹ ಹುವ್ವಿನೂರಿಗೆ ಪೋಗಿ ಪೇಳ್ದನೀ ವೃತ್ತಾಂತವ ||೧೫೫||

ಖೂಳಸಿದ್ಧರು ಮಾಡ್ದ ಕಪಟಕಾರ್ಯಂಗಳಂ
ಕೇಳಿ ಬೀರೇಂದ್ರ ಕಡುಗೋಪದಿಂದಾ ವೀರ
ಮಾಳಿಂಗನಿಗೆ ಮರಳಿ ಪೇಳಿದಂ ನೀಂ ಪೋಗಿ ನಂದಿದಗ್ನಿಯಂ ಕುಂಡದಿ
ಭಾಳಾಕ್ಷಣಂ ಸ್ಮರಿಸುತದರೊಳಗೆ ಹಾರಿ ಉರಿ
ಯೇಳುವಂದದಿ ಮಾಡಿಬಂದೆಡೆನ್ನಯ ಶಿಷ್ಯ
ತಾಳುಧೈರ್ಯವ ಮಗುಳಿ ಕೋಣನೂರಿಗೆ ತ್ವರದಿ ಪೋಗೆಂದನುಜ್ಞವಿತ್ತಂ ||೧೫೬||

ಗುರುಪೇಳ್ದಕೊಪ್ಪಿ ಕೋಣನೂರಿಗೆ ಬರಲ್
ನೆರೆದ ಜಡೆಸಿದ್ಧರೊಂದಾಗಿ ಮಾಳಿಂಗನಂ
ಸ್ಮರಿಸಿ ಸ್ವಭಕ್ತಿಯಿಂ ನಂದಿದುರಿಯಂ ಯೆಬ್ಬಿಸುತ್ತೆಮ್ಮನನುದಿನದಲಿ
ಪರಿಪೋಷಿಸೆಂದು ಬಿನ್ನೈಸಲಾತಂ ದಯಾ
ಪರನಾಗಿ ನಂದಿದಗ್ನಿಯೊಳು ಪಾದವನಿಡ
ಲ್ಭುರಿಯು ಧಗ್ಗೆಂದು ಆಕಾಶಕ್ಕಡರಲಾಗ ಜಯವೆಂದರಖಿಳ ಜನರೆಲ್ಲರು ||೧೫೭||

ಜಡೆಸಿದ್ಧರಂ ಪೊರೆದು ವೀರಮಾಳಿಂಗ ಬಹು
ದಿಡಿಗಿನಿಂ ಬೀರೇಂದ್ರನೆಡೆಗೆ ಬಂದಾತುರದಿ
ದೃಢಸಂಗತಿಯ ಪೇಳಲಾಗಲಾತಂ ಪರಮಸಂತೋಷಯುಕ್ತನಾಗಿ
ಅಡಿಗೆರಗಿದಾ ಶಿಷ್ಯ ವೀರಮಾಳಿಂಗನಂ
ಪಿಡಿದೆತ್ತಿ ಪುಳಕದಿಂದಾಶೀರ್ವಚನವಿತ್ತು
ಪೊಡವಿಯೊಳಿನ್ನಸಮ ಸೇವಕನು ಪುಟ್ಟುವದು ದೌರ್ಲಭ್ಯವೆಂದು ನುಡಿದ ||೧೫೮||

ತನಯ ಕೇಳ್ಭೂಲೋಕ ಸುಖಸಾಕು ಸತಿಪುತ್ರ
ರನು ಕೂಡಿ ನಾವೀರ್ವರೊಂದಾಗಿ ಶಿವಪುರಿಗೆ
ಘನಮೋದದಿಂದೆ ಪೋಗುವ ಬನ್ನಿರೆಂದು ಸಿದ್ಧಾಗಲಲ್ಲಿಯ ಭಕ್ತರು
ತನಯರಂಬಿಟ್ಟು ಪೋದರೆ ಮುಂದೆ ಭು
ವನುದೆಮ್ಮನು ಪೊರೆವರಾರೆನಲ್ಕೆನ್ನನುಂ
ಧ್ಯಾನಿಸಿರಿ ಮಿನುಗುತಿಹ ಬಿರ್ದಾವಳಿಗಳನ್ನು ಧರಿಸಿ ಅನುದಿನ ಸೇವಿಪರ್ಗೆ ನಾನು ||೧೫೯||

ಬಯಸಿದ ಫಲಗಳಂ ಕೊಟ್ಟು ಪಾಲಿಸುವೆ ನಿ
ಶ್ಚಯವೆಂದು ತಿಳಿರಿ ನಾಂ ಗುಪ್ತದೊಳಿರುವೆನಿ
ಳೆಯೊಳಗೆ ಭಯಮಂ ಕಳಿರಿ ವೀರಶೈವದ ಸುಶಕ್ತಿಯಂ ಕೊಡುವೆ ಪೂಜಿಸುವ ಜನಕೆ
ಭಯಭರಿತ ಭಕ್ತಿಯಿಂ ಬಾಳ್ವ ಮನುಜರ್ಗೆ ಗುರು
ದಯವಿಟ್ಟು ಪೋಷಿಸುವನೆಂದು ಭಕ್ತರ್ಗೆ ನಿ
ರ್ಭಯ ಪೇಳಿ ಶಿವನಾಜ್ಞೆಯಂತೆ ನಾಲ್ವರು ಕೂಡಿ ಕೈಲಾಸಪಥವಿಡಿದರು ||೧೬೦||

ಆ ಮಹಾ ಪಥನದಿಸಲೆ ವಿರಾಜಿಸುವ ಭವ
ಭೀಮನ ಸುಭಕ್ತರಂ ಕರಕರದವರ ಮನೋ
ಕಾಮಿತ ಫಲವನಿತ್ತು ಕಾರುಣ್ಯದಿಂದೆ ಪರಿಪಾಲಿಸುತ ಗುರುಸಿದ್ಧನು
ನಾಮಗಳ ನೆನೆಯುತ್ತ ಸರ್ವರು ಉಘೇಯೆನುತಿರೆ
ಲ್ಕಾ ಮಹಿಮ ಬೀರೇಶ ಸತಿಪುತ್ರಶಿಷ್ಯರಂ
ನಾಮೋದದಿಂ ಕೂಡಿ ಭೂತಲವ ಬಿಟ್ಟು ಗಡಪೋದರು ಕೈಲಾಸಪುರಕ್ಕೆ ||೧೬೧||

ಮುದವಿಟ್ಟು ಲಾಲಿಸಿರಿ ಶಾಲಿವಾಹನ ಶಕದ
ಪದಿನೆಂಟುನೂರ ಮೂವತ್ತು ನಾಲ್ಕನೆಯ ಸೇ

ರಿದ ಮಹಾಪರಿಧಾವಿ ನಾಮಸಂವತ್ಸರಾಶ್ವೀಜ ಶುಕ್ಲಪಕ್ಷದಶಮಿ
ಸದಮಲಾದಿತ್ಯ ವಾರಕ್ಕೆ ಬಹುಸಾಂಗದಿಂ
ದಿದು ಪೇಳಿ ಮುಗಿಸಿದಂ ಭೂಮಿಯೊಳು ರಸ್ತಾಪು
ರದ ಶರಭಲಿಂಗನ ಪಾದಾಬ್ಜಷಟ್ಚರಣೋಪಮಾನ ಕವಿಭೀಮಾಖ್ಯನು ||೧೬೨||

ಈ ಸುಚಾರಿತ್ರಮಂ ಬರದೋದಿದರ್ಗೆ ಮೇಣ್
ಲೇಸಾಗಿ ಯಿದರರ್ಥವಾಧ್ಯಾಂತ ಪೇಳ್ದರ್ಗೆ
ಬೇಸರಿಯದುರೆ ಭಕ್ತಿಯಿಂದ ಕೇಳಿದವರ್ಗೆ ಪದುಳದಿಂ ಪಠಿಸಿದರ್ಗೆ
ಭಾಸಿತ ಸಕಲ ಭೋಗಭಾಗ್ಯಮೋಕ್ಷಂಗಳ ವಿ
ಲಾಸದಿಂದಿತ್ತುದುರಿತೌಘಮಂ ಸಂಹರಿಸಿ
ವಾಸ ರಸ್ತಾಪುರ ಶ್ರೀ ಶರಭಲಿಂಗೇಂದ್ರ ರಕ್ಷಿಸುವನಿಹಪರದೊಳು ||೧೬೩||

ಇಂತೆಬಲ್ಲಿಗೆ ಶರಭೇಶ್ವರ ಪಾದಾಬ್ಜಭೃಂಗನು
ವಿಶಿಷ್ಠವಿದ್ವಜ್ಜನ ವಿಧೇಯನು ಆದ ಭೀಮನಾಯಕ
ಕವಿಯಿಂ ಪ್ರಣೀತಮಪ್ಪ ಹಾಲ್ಮತೋತ್ತೇಜಕ ಪುರಾಣದಲ್ಲಿ
ಅಂತು ಸಂಧಿ ೯ಕ್ಕಂ ಪದನು ೫೯೮ಕ್ಕೆ ಮಂಗಲಂ ಮಹಾಶ್ರೀಶ್ರೀಶ್ರೀ

## ಅನುಬಂಧಗಳು-

## ೧. ಪದ್ಯಗಳ ಅಕಾರಾದಿ

ಅಂಗನಾಮಣಿ ಗರ್ಭವಂ ೩-೩೮
ಅಂಗಜಹರನ ಸ್ಮರಿಸಿ ೮-೧೪
ಅಂಚತಲ್ಪಕ ಸಿದ್ಧಗೊಳಿಸಿ ೮-೪೧
ಅಂಚತಲ್ಪಕಯುಕ್ತಮಾಗಿ ೬-೩೭
ಅಂಬೆಗಾಲಗಳಿಡುವ ಮಾತೆ ೪-೨೩
ಅಂದ ನುಡಿಗಳು ಗ್ರಹಿಸಿ ೪-೩೭
ಅಂದ ನುಡಿಗಳ್ಕೇಳಲಂಧ ೯-೧೦೦
ಅಂದಿಗಾ ಚುಂಚಲೆಗೆ ೩-೪೨
ಅಂದಿಗಾ ಶಿವಪದ್ಮ ೪-೨೬
ಅಕಳಂಕ ಭಕ್ತಿಯಿಂ ೭-೩೪
ಅಕ್ಕನೊಳು ನಾನು ೮-೩೫
ಅಕ್ಕರದೊಳಿತ್ತತ್ತ ೮-೫೫
ಅಕ್ಕಮ್ಮನತಿ ಶೀಘ್ರ ೮-೮
ಅಕ್ಕಮ್ಮನತ್ಯಧಿಕ ೮-೨
ಅಗರು ಚಂದನ ೬-೩೮
ಅಗ್ರಜರೆ ಪಿತನ ೫-೪೩

ಅಜಹರಿಗಳಿಗೆ ೫-೨೪
ಅತಿರಥ ಮಹಾರಥ ೯-೧೬
ಅತ್ತ ಜಾಬಾಲಮುನಿ ೫-೧೭
ಅತ್ತ ಚರವೃದ್ಧ ೯-೯೮
ಅತ್ತ ಶಂಕರನು ೭-೪೬
ಅತ್ತ ಶಂಕರನು ೭-೬೯
ಅತ್ಯಧಿಕ ಪ್ರೀತಿಯಿಂ ೩-೨೫
ಅದರಂತೆ ಗಂಧರ್ವನಾರಿ ೮-೭
ಅದರಿಂದಲೀ ಮತಕ್ಕೆ ೯-೮೭
ಅನಘ ಶಿವಸಿದ್ಧ ೯-೧೩೯
ಅನಿತರಲಿ ಚುಂಚಲೆಯು ೪-೨
ಅನಿತರೊಳಾ ಸಿದ್ಧಬೀರ ೯-೧೨೬
ಅನಿತರೋಳ್ರೋಗದಿಂದ ೮-೨೭
ಅನುಜಕರಾಗ್ರ ಪೀಡಿದ ೮-೨೫
ಅನುಜ ಕೇಳ್ನೀನು ಪುಟ್ಟ ೮-೩೪
ಅಲ್ಲನಡಿಯೆಂದರಿಷ್ಟೇಕೆ ೯-೧೪೭
ಅಲ್ಲಿ ಕೆಲದಿನವಿರ್ದು ೨-೩೫
ಅಲ್ಲಿರ್ಪ ಕುಟಿನ ನಾಟಕ ೨-೩೨
ಅವತರಿಸಿ ಬಂದ ೩-೧೫
ಅವರಿರುವದಕ್ಕೆ ೮-೨೮
ಅವರೈವರಕ್ಕತಂಗಿಯ ೭-೮೬
ಅವರೊಳೊಬ್ಬನಂ ತಡೆದು ೯-೯೫
ಅವರಂದ ನುಡಿಗಾತ ೪-೨೮
ಅವಸರದಿ ದ್ವಾರಕೈತ ೭-೬೨
ಅವಸರದೊಳಾ ಶಿಷ್ಯನಂ ೪-೪೪
ಅಸುರನಾಡಿದ ನುಡಿಗೆ ೨-೨೮
ಅಷ್ಟರಲಿ ಜಾಯ್ಗೊಂಡ ೫-೪೮
ಅಳನು ಆಕಳಿಸನುಸರಿಡನು ೪-೧೦
ಆ ಕನ್ನಿಕಾಮಾಲಿ ೮-೩೯
ಆ ಕಪಟ ಬೀರನಂ ೯-೧೨೮
ಆಗ ಮಂತ್ರಿಯ ಕರೆದು ೫-೧೮
ಆಗಲಾ ಗುರುಸಿದ್ಧ ೭-೨೪
ಆಗಲಾ ದುಷ್ಟರೊಂದಾಗಿ ೫-೫೦
ಆಗಲಾತನ ಮಾತಿಗೊಪ್ಪಿ ೬-೨೮
ಆಗಲಾ ಸಚಿವನೆದ್ದು ೬-೧೨
ಆಗಲಾ ದಾನವಂ ೨-೨೪

ಆಗಲಾ ಮುನಿಸುಪರ್ವಾಣ ೯-೪೪
ಆಗಲಾ ವೃಷಭಂಗೆ ೯-೩೫
ಆಗಲಾ ಶಂಕರಂ ೬-೫
ಆಗಲಾ ಸಿದ್ಧಬೀರಂ ೯-೮೮
ಆಗಲಾ ಸುರನಾರಿ ಬೆದರಿ ೮-೬
ಆದಿಗೊಂಡನೆ ಕೇಳು ೪-೨೭
ಆದಿಗೊಂಡನು ನಿದ್ರೆ ೪-೪
ಆದಿಶೇಷನ ಕಾವಲಿಯಂ ೯-೧೨೯
ಆಧಾರವನು ಮಂತ್ರ ೫-೩೨
ಆನಂದದಿಂದಿತ್ತ ಸಿದ್ಧಬೀರಂ ೮-೬೦
ಆಲಿಸಿರೀ ಗಂಧರ್ವರುಗಳೆ ೩-೭
ಆಗ್ರಜರ ನುಡಿಗೆ ೭-೧೨
ಆ ಚರಂ ವೈಕುಂಠಪುರಿಗೆ ೭-೬೦
ಆ ತರುಣಿಯಂ ಪದ್ಮ ೬-೩೨
ಆ ದೇಶದೊಳಗೆ ನಾ ೯-೫೧
ಆ ನಗರದರಸು ೯-೧೨೩
ಆ ಪುರಕ್ಕಸಾದ ೨-೯
ಆ ಪುರದೊಳಿರುವ ೨-೪೨
ಆ ಮಹಾ ಪಥನದಿಸಲೆ ೯-೧೬೧
ಆ ಮಹಾಪುತ್ರನುದಿಸಲೆ ೯-೧೦೭
ಆ ಮಹಾ ಬಿರಿದುಗಳ ೭-೫
ಆ ಮೊದಲ್ಗೊಂಡಿದು ೯-೫೨
ಆ ರಕ್ಕಸನಂ ಕೊಂದು ೨-೪೫
ಆ ವಚನ ಕೇಳಲಾ ೭-೩೮
ಆ ಸಮಯದಲ್ಲಿ ೯-೪೧
ಆ ಸುಕನ್ಯಾರತ್ನಮಂ ೨-೩೬
ಆ ಸುರಾವತಿಯ ೭-೬೧
ಆ ವೃಕ್ಷಕ್ಕೆ ವರವಿತ್ತು ೭-೮೧
ಇತ್ತಗೃಹದೊಳಗವನ ೫-೪೬
ಇತ್ತ ಕಲಿಯುಗದ ೯-೭೩
ಇತ್ತ ಕೆಲಬಾಲರೊಂದಾಗಿ ೮-೧೬
ಇತ್ತ ಬರ್ಮನ ೭-೬೩
ಇತ್ತಬಿಜ್ಜಳ ಮಾಸನೂರಿನ ೨-೩೪
ಇತ್ತ ರಕ್ಕಸಿ ಮಧ್ಯರಾತ್ರಿ ೬-೨೯
ಇತ್ತ ಲಂಕಾಪುರದೊಳು ೨-೨೩
ಇತ್ತ ಶ್ರೀಗುರು ೪-೩೨

ಇತ್ತುಭಯ ಸ್ತ್ರೀಯರ ೦-೨೪
ಇದರಂತೆ ಪನ್ನೆರಡು ೬-೨೦
ಇದು ಕೇಳುತಾದಿಗೊಂಡನು ೪-೮
ಇದೆ ಕುಶಲಗೋತ್ರವೆದಂತಿ ೯-೬೯
ಇರುತಿರುತ್ತಸುರ ೨-೨೬
ಇರುತಿರುತ್ತಾ ೬-೫೯
ಇರುತಿರುತ್ತಾ ಉಭಯ ೯-೨೫
ಇಲ್ಲಿಟ್ಟು ಪೋಗುವ ೪-೩೯
ಇಲ್ಲಿರಲು ಮುಂದೆ ೮-೨೧
ಇಳೆಯೊಳಿದು ಕಾಂಪಿಲ್ಯ ೯-೫೦
ಇಳೆಯೊಳೆಸದಿರ್ಪ ೯-೭೨
ಇಂತು ಯೋಗೀಶ ತಾ ೩-೧೧
ಇಂತು ಪುರ ವರ್ಣಿಸುತ ೩೫
ಇಂದಿಗೆಣೆಸಲ್ಕಾಯ್ತು ೬-೨೯
ಇಂದು ಗಿರುಪುರದ ೮-೪೪
ಇಂದುಧರ ಪದ್ಮನಿಗೆ ೭-೫೪
ಇಂದುಧರ ಮೆಚ್ಚಿ ೭-೫೪
ಇಂದುಧರ ನಿನಗೀ ೭-೮
ಈಗಲೀ ಸುತನುತ್ತ ೫-೧೦
ಈಗುಸುರ್ವೆನೊಂದು ೭-೨೫
ಈಗೆಮ್ಮ ದೇಶಕ್ಕೆ ೯-೮೧
ಈರೇಳು ಲೋಕದೋಳ್ ೪-೩೩
ಈ ತೆರದಿ ಕುರಿಗಳಂ ೫-೨೦
ಈ ಪರಿಯೊಳವನು ೮-೯
ಈ ರೀತಿ ಬಳಲಿಸುವದಿದು ೫-೪೧
ಈ ರೀತಿಯಾಗಿ ನಾಲ್ವರು ೫-೫೧
ಈ ವಿಧದಿ ೭-೪೯
ಈ ಸುಚಾರಿತ್ರಮಂ ೬-೬೨
ಈ ಸುಚಾರಿತ್ರಮಂ ೯-೧೬೩
ಈ ಸುಚಾರಿತ್ರಮಂ೪-೫೧
ಈ ಸುಚಾರಿತ್ರಮಂ ೭-೯೦
ಈ ಸುಚಾರಿತ್ರಮಂ ೩-೪೯
ಈ ಸುಚಾರಿತ್ರಮಂ ೫-೫೭
ಈ ಸುಚಾರಿತ್ರಮಂ ೨-೪೭
ಈ ಸುಚಾರಿತ್ರಮಂ ೮-೬೫
ಉನ್ನತೋತನ್ನಮಾದ ೪-೩೪

ಉಂಡಾಡು ಮನೆಯೊಳಗೆ ೮-೧೧
ಎಂದು ಗದ್ಗದ ೭-೪೧
ಎಂದು ನಯಭಯ ೬-೪೭
ಎಂದು ಪತಿ ಪೇಳಲ್ಕೆ ೪-೬
ಎಂದು ಪೇಳಲ್ಕೆ ೫-೪೦
ಎಂದು ಪೇಳಭವಸುತ ೫-೩೬
ಎಂದು ಮಾಳಿಂಗನವರಿಗೆ ೯-೧೫೫
ಎಂದು ರೇವಣಸಿದ್ಧಗುರು ೩-೨೭
ಎಂದು ವನಜಾಕ್ಷಿ ೬-೫೬
ಎಂದು ವಲ್ಲಭನ ೩-೨೨
ಎಚ್ಚತ್ತು ಎದ್ದು ೪-೩
ಎನಲು ಗೊಲ್ಲಾಳನುರೆ ೯-೯೬
ಎನಲು ನೈಮಿಷ ೯-೭೬
ಎನಲು ಮುನಿನಾಥ ೩-೩೬
ಎನ್ನ ಕರದಿಂ ೯-೧೩೪
ಎನ್ನ ಸೇವಕ್ಕೋರ್ವ ೯-೧೦
ಎಲವೋ ನೀನಾರ್ನಿನ್ನ ೯-೧೪೪
ಎಲವೋ ನೀನೆಂತಹ ೯-೧೨೭
ಎಲೆ ಭಕ್ತಕೇಳ ೭-೮೦
ಎಲವೋ ಭಕ್ತಾಗ್ರಣ್ಯನೆ ೯-೫೮
ಎಲೆಮಗನೆ ಪಂಚವರ್ಣದ ೮-೫೨
ಎಲೆ ರಮಣಿ ಕೇಳೀ ೬-೪೪
ಎಲೆ ಸುತರೆ ಎಮ್ಮ ೫-೩೯
ಎಲೆ ಸುರಾವತಿ ೭-೬೬
ಎಷ್ಟು ವಿಧದಿಂ ೭-೧೮
ಎಳೆ ತೃಣವ ೫-೨೯
ಏಕಚಿತ್ತದಿ ಸದ್ಗುರುವಿನ ೯-೧೪೦
ಒಂದು ದಿನ ತ್ರಿಪುರಾಂತಕಂ ೬-೬
ಒಂದು ದಿನ ಹರನು ೩-೨
ಕಂದುಗೊರಳನೆ ಯನ್ನ ೯-೫
ಕಂಜಾಕ್ಷಿ ತರತರದ ೭-೫೮
ಕಟ್ಟುಗ್ರದಿಂದ ಫಣತೊಟ್ಟು ೧-೬
ಕಡುಕೋಪಮಂ ೯-೯೩
ಕಪಟರೂಪವ ಕಂಡು ೯-೧೩೭
ಕರದೃತ ಕಪಾಲ ಫಣಿಮಾಲ ೬-೧
ಕರಳು ಕಿರಿಗೆಜ್ಜೆ ೬-೬೧

ಕರಸಿದಂ ಮಂತ್ರಿ ೬-೧೧

ಕರಿವದನ ತಾತ ೭-೧

ಕರಿಸಿಂಗಳಿರಾ ೯-೧೩೩

ಕರುಣದಿಂ ಗುರುಸಿದ್ಧ ೯-೩೩

ಕರುಣದಿಂ ತುರು ೬-೩೧

ಕರುಣದಿಂದಾ ಸಿದ್ಧಬೀರ ೯-೧೨೦

ಕಸ್ತೂರಿಯ ಸಾರಣೆಯು ೪-೨೯

ಕಳಿಸಲ್ಕೈತಂದವರ್ಗೆ ೬-೧೬

ಕುಡಿನಯನ ಕಾಡಿಗಿನಯನ ೪-೧೫

ಕುರಿಗಳಂ ಕಾಯ್ದು ನಾಂ ೬-೪

ಕುರಿಗಳಂ ನೋಡಿದಳು ೫-೨೮

ಕುರಿಗಾಯ್ದು ಮನೆಗೆ ೯-೧೦೧

ಕುರುಬರರಜಕುರಿಗಳಂ ೯-೨೭

ಕುಂಜರ ಗಮನೆ ೮-೪೫

ಕೃತ್ತಿವಾಸನು ಪೇಳುವಾಗ ೩-೧೪

ಕೃತಿವಾಸನು ಪೇಳ್ದನೆಲೋ ೭-೨೪

ಕೃತಿವೆಸರು ಹಾಲ್ಮತೋತ್ಪತ್ಯ ೧-೧

ಕ್ರೂರರಕ್ಕಸರವನ ೮-೫೮

ಕ್ರೂರರೂಪದಿ ೬-೫೪

ಕೂಸಿನ ಶಿರವ ಕಂಡು ೫-೧೪

ಕೆದರಿದ ಜಡಯ ಹರಿದ ೨-೧೭

ಕೆಲಕಾಲ ಕಳೆದಾದಿನೊಂಡನಿಗೆ ೩-೧೮

ಕೆಲಕಾಲ ಕಳೆದು ತನ ೮-೩೦

ಕೆಲವು ದಿನಲ್ಲಿರ್ದು ೨-೮

ಕೆಲವು ದಿನಮಲ್ಲಿರ್ದು ೨-೧೨

ಕೆಸರಿನೊಳು ಕಮಲ ೬-೩೩

ಕೇಳಿ ಶಿವಪದ್ಮ ೫-೫೨

ಕೇಳಿಪುತ್ರನ ಮಹಿಮೆ ೭-೪

ಕೈಲಾಸಪುಟಭೇನಾಲಯ ೩-೧

ಕೊನೆಗೆ ಜನಪಗೆ ೬-೧೪

ಕೊಲ್ಲಿಪಾಕಿಯ ಪುರದಿ ೨-೫

ಕೊಲ್ಲಿದ ದುರಾತ್ಮನ್ನೈ ತಂದ ೮-೧೮

ಕೊಲ್ಲಿಪಾಕಿಯಂ ಬಿಟ್ಟು ೯-೧೦೮

ಕೋಲು ಕರದಲಿ ಪಿಡಿದು ೮-೪೦

ಕೌರಭಮಹಾರುಷಿಃ ತವಃ ೯-೪೫

ಕೌರಬಿ ರುಷಿಯ ೯-೬೫

ಕೊಂದು ದನುಜೆಯಳ ೭-೨೩

ಕಾಕನಾ ಪದ್ಮನಂ ೬-೫೭

ಕಾಂತನಾಡಿನ ನುಡಿಗಳಾಲಿ ೭-೪೦

ಖಂಡ ಶಶಿಧರನ ೧-೭

ಖೂಳಸಿದ್ಧರು ಮಾಡ್ದ ೯-೧೮

ಖೇಚರನು ಶಾಪದಿಂದಾ ೫-೪

ಗಣತೃಪ್ತಿಗೈಸುವೆನು ೬-೩೦

ಗದಗದನೆ ನಡುಗಿ ೬-೭

ಗಿರಿಜಾತೆ ಕೂಸಿನಂ ೩-೪೫

ಗುರುಪೇಳ್ದಕೊಪ್ಪಿ ೯-೧೫೭

ಗುರು ರೇವಣನ ೯-೩೨

ಗುರುವರನ ಪಾದಕ್ಕೆರಗಿ ೭-೨೨

ಗುರುವಿನಂದಪ್ಪಣೆಯ ೯-೧೪೧

ಗುರುವೆ ಕಳೆನ್ನ ಪತ್ನಿಯು ೫-೩೫

ಗುರುಶಿಷ್ಯರೊಂದಾಗಿ ೯-೧೫೨

ಗುರುಸಿದ್ಧನಲ್ಲಿಂದಗ್ಯಾಶ್ರಮಕೆ ೨-೭

ಗುರ್ವಾಜ್ಞೆಕನುಸರಿಸಿ ೭-೪೭

ಗೊಲ್ಲಾಳ ರೋದಿಸುತ ೨-೩೩

ಮನಮುದ್ದುಗೊಂಡನ ೩-೧೭

ಚತುರಂಗಬಲ ನಿಂತ್ತು ೯-೨೯

ಚದುರೆ ಗಂಗಾದೇವಿ ೪-೪೧

ಚನ್ನಯ್ಯ ಸಾಷ್ಟಾಂಗ ಗೈದೆದ್ದು ೭-೭೭

ಚರನಾಗ ಚಂದ್ರಾಯುಧವ ೫-೧೬

ಚರಮೂರ್ತಿ ನುಡಿಗೊಪ್ಪಿ ೭-೧೯

ಚರರು ಬಂದಾ ಮೇಷನಂ ೯-೧೪೯

ಚರಿಸುತ್ತ ರೋಮವಸ್ತ್ರಗಳನ್ನು ೯-೮೯

ಚಿತ್ತೈಸು ದೇವ ೭-೪೨

ಚಿತ್ತೈಸು ಸುತನೆ ೯-೧೦೬

ಚಿದ್ರೂಪ ಚಿನ್ಮಯ ನಿರಂಗ ೮೮-೧

ಚಂಡೇಶನೆಂಬೋರ್ವ ೮-೬೩

ಚುಂಚಲೆಯು ಬೆದರಿ ೩-೨೮

ಚುಂಚಲೆಯು ತಗ್ರಹವ ೪-೧೨

ಚುಂಚಲೆಯು ಬಂದು ೪-೪೭

ಜಗದೀಶ್ವರಂ ನೃಪನ ೭-೭೬

ಜಡನೆಂದು ಬಂಧಿರನೆಂದಳನೆಂದು ೩-೩೧

ಜಡೆಸಿದ್ಧರಂ ಪೊರೆದು ೯-೧೫೮

ಜನನಿ ಕೇಳ್ನೀನಿಲ್ಲದಿರು ೬-೪೮
ಜನನಿಯಂಬುವ ೭-೧೫
ಜನನಿಯಾಡಿದ ನುಡಿಗಳಂ ೬-೫೧
ಜನಿಸಲಾರ್ಭಕವು ೫-೨
ಜಾಣೆ ಕೇಳ್ನಿನ್ನಣ್ಣನಾದ ೭-೩೯
ಜಾತಂಗೆ ನರರ ೭-೪೫
ಜೋ ಜೊ ಹರನ ೩-೪೬
ಜಂಭದಲಖಿಳರ ೧-೪
ತ್ವರಿತದಿಂದಾ ಶಿರವ ೫-೯
ತ್ವರದಿಂದಲನುಜ ೯-೧೧೬
ತ್ವರ ಮನೋವೇಂಗದಿಂದೈ ೬-೫೮
ತ್ರಿದೇವೇಶ ವರನಾದ್ದ ೯-೫೬
ತಂದೆ ಕೇಳಿನ್ನು ನಿನ್ನನು ೪-೫೦
ತಡಮಾಡದೆನಗೆ ೬-೨೭
ತನುಮನಸು ಭಕ್ತಿಯಿಂ ೯-೧೩೫
ತನಯ ಕೇಳ್ಭೂಲೋಕ ೯-೧೫೯
ತಮ್ಮ ನೀನಿಷ್ಟುದಿನಮಲ್ಲಿ ೭-೧೧
ತಮ್ಮನ ಸುಬಾಲಲೀಲೆಗಳು ೮-೪
ತಮ್ಮಂಗೆ ಕೈ ಮುಗಿದು ೮-೩೭
ತರಿಸಿದರು ದುಂಡಗಂಬಳಿಯನಂ ೫-೧೯
ತರುಣಿಗೊದಗಿರ್ಪ ಗರ್ಭದ ೫-೩೪
ತರುಣಿ ತವಕದಿ ಬಂದು ೯-೫೯
ತರುಣಿಯರು ನವಮಾಸದಲ್ಲಿ ೩-೩೫
ತರುಳ ಕೇಳಸುರೆಯಂ ೯-೩೮
ತಾಪಸೋತ್ತಮರಂ ನಿಂದಿಸಿ ೩-೫
ತಾಪಸೇಂದ್ರನು ತತ್ಫಲವನು ೯-೭೪
ತಾತ ಚಿತ್ತೈಸು ೯-೭೭
ತಿನ್ನದೆ ಬಿಡಳು ೬-೪೧
ತಿಪ್ಪೇಶನನುಜನಾದಂಗ ೯-೬೩
ತಿರುಗಿದನಾ ಹುಲ್ಲು ೫-೨೨
ತಿರುಗಿದಂ ನಿಂದೆ ೯-೧೧೩
ತುರುಗಳ ಪಾಲಿಸುತ್ತುಲ್ಲಾಸದಿಂದ ೨-೧೩
ತೆರದಿತು ಹರನರಾಣಿ ೫-೫೪
ತೆರಳಿದರು ತಮ್ಮ ೫-೨೧
ತುಂಗತುಕ್ಕಪ್ಪತನ್ನಾತ್ಮ ೯-೨೮
ದನುಗರಗೆ ವೀರಗೊಲ್ಲಾಳುಣ್ಣಿ ೯-೩೭

ದಾನವಿಯು ದಯಾಹೃದ ೬-೫೦

ದಾರುಕನ ಸಂತೈಸಿ ೨-೩

ದಾಸೇಯನತಿ ಭ ೯-೯೧

ದಿನದಿನಕೆ ಘನವಾಗಿ ೪-೨೦

ದಿಟ್ಟಗೊಲ್ಲಾಳ ದೃಢ ೯-೯೭

ದೇವಗಣ ಕೊಂಡಾಡುತರಳೆ ೩-೬

ದೇವಚಿತ್ರೈಸು ಸಮ್ಮಾಜ್ಞೆ ೮-೫೯

ದೇವದೇವನು ಹರಿಯ ೭-೩೭

ದೇವ ದೇವಂತುಷ್ಟಿ ಹೊಂದಿ ೯-೫೪

ದೇವಾಂಗ ನಾಮದಿಂ ೧-೨

ಧನುಜನತಿಭರದಿಂದ ಸಿದ್ಧ ೨-೨೫

ಧರಣಿಯಲ್ಲವ ಸುತ್ತಿ ೬-೬

ಧರಣಿಪನ ಮುಂದಿಟ್ಟು ೯-೧೯

ಧರಣಿಯೊಳಗೆಣಿ ೯-೩೯

ಧರ್ಮಾಜ್ಞ ನರಕ ೯-೭೧

ಧರೆಯೊಳೆಣೆಯಿಲ್ಲ ೯-೧೩೮

ಧಾರುಣಿಯೋಳುರೆ ಮೆರೆವ ೧-೧೪

ಧೂಪದೀಪವ ಬೆಳಗಿ ೪-೩೮

ಧ್ವನಿಯೊಳುದಿಸಿದವಸಿತಸಿತ ೯-೩೬

ಧ್ವನಿಗೇಳಿ ಶಿವಪದ್ಮ ೫-೪೭

ದ್ವಾದಶ ದಿನದಿ ೫-೩೮

ನಂದಿರೂಢನು ಘನಾನಂದದಿ ೭-೭೩

ನಂಬಿಗೆಯ ಭಾವದಿಂ ೯-೧೦೯

ನಂಬಿಗೆಯ ಭಾವದಿಂದತ್ತಿತ್ತ ೯-೧೩೧

ನಂಬಿಗೆಯನಿಟ್ಟು ಚನ್ನಯ್ಯ ೭-೭೮

ನಿಂತು ತಾಂಡವನಾಡಿ ೩-೨೩

ನಿಂದಿಸಿದ ನುಡಿಗಳ ೮-೩೩

ನಿಂದು ನೋಡಿದನವಳ ೬-೨೪

ನಗೆಮುಖದ ನಸುದೆರೆದ ೮-೨೪

ನಡೆನಡೆದು ಬೇಸತ್ತು ೫-೨೫

ನದಿಯ ತಟದಲಿ ಹಟ್ಟಿ ೭-೮೩

ನೃಪನಪ್ಪಣೆಯನೊಪ್ಪಿ ೫-೧೨

ನೃಪವರನು ಬೆರಗಾಗಿ ೨-೩೧

ನಾಗಭೂಷಣನೊಂದು ೫-೩

ನಾನರಿನೆಂದವಳ ೬-೨೬

ನಾನೊಂದು ಕಾರ್ಯಾರ್ಥಿಯಾಗಿ ೯-೫೭

ನಾರದ ಮುನೀಶ್ವರಂ ೨-೩
ನಾರಿನಾಗಲೆ ಬಂದು ೩-೩೪
ನಾರಿಮಣಿ ಮರೆಗೆ ೬-೨೩
ನಾರಿಯೋ ಮದನ ೬-೨೫
ನಿರ್ಜರರ ಸ್ತೋತ್ರಕ್ಕೆ ೯-೬೦
ನಿತ್ಯ ಶಿಪದ್ಮನುದಯದೊಳೆದ್ದು ೪-೨೫
ನಿನ್ನಯ ಸಹೋದರಿ ೨-೩೦
ನಿನ್ನಾಜ್ಞೆಕನುಸಾರಳಾಗಿ ೬-೫೫
ನೀಲಕುಂತಳಿಯೆ ೭-೪೩
ನಿಲಯದೊಳಗಾರಿರುವಿರೆನ್ನ ೬-೨೧
ನೀಳಾದ ಕಾಂಚಾಲ ೬-೧೭
ನುಡಿದರಾಚಾರರಸುವಳಿದ ೯-೧೪೮
ನುಡಿದಂತೆ ಕೃಷ್ಣ ೭-೩೧
ನುಡಿಗೊಪ್ಪಿ ನೈಮಿಷಂ ೯-೭೯
ನುಡಿಯಲಾಪತಿಗೆ ೩-೪೧
ನುತಿಗೆ ಜಗದೀಶ್ವರಂ ೩-೧೦
ನಮಿಸಿದರು ಮುನಿವರನ ೩-೬
ನೆರದ ಜನರೆಲ್ಲ ೮-೧೯
ನೆರೆತೆರೆಗಳಡಗಿ ತರುಣತ್ವದ ೩-೩೭
ನೆರೆದ ಜನರೊಳಗೋರ್ವ ೮-೨೬
ನೆರೆದ ಸುರಗನ್ನೆಯರು ೩-೪೮
ನೇಗಲೆಯ ತಕ್ಕೊಂಡು ೫-೪೪
ನೊಂದರುಭಯರು ನಿಟ್ಟು ೩-೬
ನೋಡ್ದಳಲ್ಲೊಂದು ಘನ ೫-೩೧
ನೋಡಿದಂ ಯೋಗಿಯ ೫-೧೫
ನೋಡಿದರು ಗಂಧರ್ವರಾಗ ೩-೪
ನೋಡಿದಂ ಬೀರೇಶ ೮-೧೫
ಪಟ್ಟಣದ ವನಿತೆಯರು ೪-೧೭
ಪತಿಯೇ ಪರಿಹಾಸಕದ ೩-೩೯
ಪದುಳದಿಂದಿಟ್ಟು ೭-೨೦
ಪದ್ಮಾಸನದಿ ಕೂತು ೪-೨೪
ಪನ್ನೆರಡು ದಿನ ೪-೧೧
ಪರಕಿಸಲ ಸೀತೋಷ್ಣಮಿಲ್ಲ ೪-೧೮
ಪರಮ ಕಾಂಚಾಲ ೬-೪೦
ಪರಮ ಪರಿಪೂರಿತ ಬಾ ೯-೧೩೨
ಪರಮೇಶ್ವರನಂ ೯-೧೦೪

ಪರರಿತ್ತ ಧನಮೆಲ್ಲ ೪-೪೦
ಪರಶಿವಂ ಸಿದ್ಧಬೀರನ ೯-೩೦
ಪರಿಣಯವನೆಸಗಿ ೪-೩೧
ಪರಿಮಳದರಳನಳಿಯು ೨-೪
ಪಕ್ಷಿವಾಹನನೊಪ್ಪಿ ಬಂದನೀ ೫-೨೩
ಪಾದಕೆರಗಿದಾ ಖೇಚರನ ೫-೫
ಪಾದಕೆರಗಿದಾ ಸಿದ್ಧ ಬೀರನಂ ಲ-೫೧
ಪ್ರಾಚೀನ ಕಬ್ಬಿಗೆರ್ಪ್ಪೇಳ್ದದ ೧-೧೨
ಪ್ರಾಣಪ್ರಿಯನೆ ಪ್ರೇಮ ದೊರೆದು ೬-೩೬
ಪುಟ್ಟಶಾಲೆಯೊಳು ೭-೬೫
ಪಿತಮಾತೆಯರು ಕೇಳಿ ಲ-೩
ಪ್ರಿಯನ ದುಃಖವ ೬-೧೫
ಪ್ರೀತಿಯಿಂದಾಲಿಸು ವಿಭಾಗಗೆ ೯-ಲ೩
ಪುಲ್ಲ ನೇತ್ರಿಯೆ ನಿನ್ನಗಿದು ಲ-೪೩
ಪುಂಡರೀಕಾಕ್ಷ ಲ-೫೬
ಪ್ರತ್ಯಕ್ಷನಾದ ಪರಮೇಶಂ ೯-೬೭
ಪುತ್ರನೇ ಭಾ ೭-೧೪
ಪುತ್ರೆಯ ಚಮತ್ಕಾರ ೬-೫೨
ಪುರಜನರು ಮರುಗಿ ೬-೧೩
ಪುಲ್ಲಾಕ್ಷ ಮರಳಿ ೭-೩೬
ಪುಳಕದಿಂ ಮುನಿವರನು ೩-೨೯
ಪುಂಡ ಆಯುಗೊಂಡ ೩-೧೯
ಪೆಬ್ಬುಲಿಗಳಿರ್ಪ ಕಾಂತರ ೯-೬
ಪೇಳವನ ಬಳಿಗೆ ೪-೪೬
ಪಂಚಶರನಂ ಪೊಳೆವ ೩-೪೩
ಪಂಚಾಮೃತವ ಸವಿದು ೫-೫೩
ಬಗೆ ಬಗೆಯೊಳೂರೆದರವ ಲ-೩೧
ಬಟ್ಟ ಮುಖನಿಡುಯಸಳ್ಗ ಲ-೪೨
ಬಪ್ಪುದಂ ಕಂಡು ೯-೧೫೪
ಬರ್ಮದೇವನೆ ನಿನ್ನ ೭-೩೩
ಬಯಸಿದ ಫಲಗಳಂ ೯-೧೬೦
ಬರದಿ ಬೈಲಿಗೆ ಲ-೩೨
ಬರುಬರುತ್ತಾತ್ಮದೊಳು ಲ-೩ಲ
ಬಲುಭರದಿ ತೊಟ್ಟಿಲನ ೭-೬ಲ
ಬಳಿಕ ಶಿವಪದ್ಮಂ ೭-೫೭
ಬಳಿಕ ಹರಿ ೭-೨೬

ಬಳಿಕ ತ್ರಿಪುರಾಂತಕಂ ೭-೫೦

ಬಳಿಕಲಾ ಜನನಿತನಯನೇ ೭-೧೭

ಬಾಲಕನ ವಿಕ್ರಮಕೆ ೭-೧೬

ಬಾಲಲೀಲೆಯೊಳಾದಿಗೊಂಡನಿಗೆ ೩-೧೬

ಬಿಟ್ಟನೂಟವನಾದಿಗೊಂಡನಿಗೆ ೩-೧೬

ಬಿಟ್ಟುಮುಂದಕೆ ಪೋಗಿ ೪-೨೨

ಬಿಜ್ಜಳನೃಪಾಲನ ಹಜಾರಮಂ ೨-೩೦

ಬೀರಕೇಳ್ವೀರ ಗೊಲ್ಲಾಳನ ೯-೯೪

ಬೀರನೆಂಬುವ ಹುಡುಗ ೮-೧೭

ಬೀರೇಂದ್ರ ಕೇಳಿ ೯-೧೧೪

ಬೀರೇಶಂ ಕಂಡವನ ೯-೧೧೮

ಬೀರೇಶ್ವರಂ ತನ್ನ ೯-೮೬

ಬೆದರಿದವು ಎತ್ತುಗಳು ೫-೫೫

ಬೇಗದಿಂ ಪೋಗಿ ಗುಡಿಬಾಗಿ ೯-೯

ಬೇಡ ಕಂತುಕದಾಟ ೮-೧೨

ಬೇಡಿದ ಜರದ ಕುಪ್ಪಸ ೮-೪೮

ಬೇಸರಾದರೆ ನಿನಗೆ ೫-೪೨

ಬಂಕಾಪುರದೊಳಿರ್ಪ ೭-೭

ಬಂದ ಚರನಂ ನಿಲಿಸಿ ೯-೧೫೩

ಬಂದೆಮ್ಮ ಹೊಲದಡಿ ೭-೧೩

ಭರದಿಂದ ಎನ್ನೊಡನೆ ೬-೬೦

ಭರದಿಂದ ತಿಳಿಸೆಂದು ೩-೨೪

ಭರದಿಂದ ಶಿಷ್ಯನಂ ೯-೧೧೨

ಭವನಕ್ಕೆ ಬಂದು ೯-೩೧

ಭಸಿತಮಂ ತಳಿಯಲುರಿ ೫-೫೬

ಭಾರ್ಗಾ ನಾನು ೭-೨೮

ಭಾವಶುದ್ಧದಿ ನಿಮ್ಮ ೯-೨೦

ಭಾವಶುದ್ಧದಿ ನಿಂದು ೬-೩

ಭಾಸುರ ವಧುವರಂಗಳಂ ೪-೩೦

ಭಿಕ್ಷುಕಂ ಪೇಳ್ದನೀ ೯-೭೫

ಭೀಕರಕೆ ಬೆದರಿ ೯-೮

ಭೂಪ ತುಕ್ಕುಪ್ಪನ ೯-೨೨

ಭೂರಿವಿಸ್ಮಯದಿಂದಿದೇಂ ೭-೭೧

ಭೂಸುರರು ರಾಜ್ಯಪಾಲನೆಯ ೯-೬೮

ಭೂಸುಕೌಷದಿ ಕೆಲರು ೯-೬೬

ಭಂಡಧನುಜೆಯಳ ೬-೪೨

ಭಂಡ ನೀನಾವವನೆಲೊ ೭-೧೦
ಭಂಡರಕ್ಕಸರೇ ಮುಂಕೊಂಡು ೯-೭
ಮೃಗಶೃಂಗನೆಂಬ ಮುನಿ ೯-೪೯
ಮೃಡ ಮೆಚ್ಚಿ ೭-೫೬
ಮೃಡನವ್ವೈರಿಯ ಪೆರ್ಬಲವೂ ೨-೨೦
ಮೃಡನಾಜ್ಞೆಯಂತೆ ೭-೭೦
ಮೃಡನು ಬರ್ಮನ ೭-೩೫
ಮೃಡನೆಂದು ತಿಳಿಯದೀ ೯-೧೦೩
ಮೃಷ್ಟಾನ್ನವನು ಸವಿದು ೯-೧೨೨
ಮಂದಭಾಗ್ಯನೇ ನಮ್ಮ ೯-೧೪೬
ಮಂಗಲಾತ್ಮಕ ಸಿದ್ಧನಲ್ಲಿಂದ ೨-೧೮
ಮುಂದಕ್ಕೆ ಪೋಗಿ ಶಿವ ೮-೭೭
ಮಗನೆ ಬಿಡುಬಿಡುಯಂದು ೫-೪೫
ಮಗುವಿನ ಸುಲಕ್ಷಣ ೭-೮೮
ಮಡದಿ ಕೇಳ್ನಿನ್ನಸ್ತನಮೊನೆಗೇಕೆ ೩-೪೦
ಮಡಿವಾಳ ಮಾಚಯ್ಯ ೯-೧೪೨
ಮತ್ತದಕೆ ವೀರಭದ್ರನ ೫-೩೩
ಮತ್ತಮಾ ಗುರುಸಿದ್ಧತಿಲಕ ೪-೪೫
ಮತ್ತಾವಿಪಿನದೊಳಗೆ ೯-೧೩
ಮತಿಯೊಳರಿಯಲ್ಕಿದು ೯-೭೦
ಮತ್ತೋರ್ವ ಕುಡುವಕ್ಕಲಿಗರ ೮-೬೨
ಮತ್ತೊರೆವೆನಾಲಿಸ್ಕೆ ದ್ವಾಪಾರ ೯-೪೦
ಮನಗೊಟ್ಟು ಸತ್ತ ೯-೧೫೧
ಮನಮುನಿಗಾಣರ್ಚಿತ ೫-೨೭
ಮನೆಬಿಟ್ಟು ಮುಂದಕ್ಕೆ ೪-೪೩
ಮನೆಯ ಮುಂದಿನ ೬-೫೩
ಮರಳಿ ಕಾಂಪಿಲ್ಯಂಗೆ ೯-೪೮
ಮರಳಿ ತಶ್ಛವಗಳಂ ೬-೧೯
ಮರಳಿ ಮತ್ತೋರ್ವಗೆ ೬-೮
ಮರಳಿ ಮೃಡಕೌರಬ ೯-೪೩
ಮರುಗಿದಳು ಮನದೊಳಗೆ ೫-೪೯
ಮರುಳ ಕೌರಬಿಯೇ ೯-೯೦
ಮಲವಿಲ್ಲ ಮಾಸಿಲ್ಲ ೩-೩೦
ಮಲ್ಲಣ್ಣ ಮೇಣಾ ಬುಳ್ಳರಾಯ ೮-೪೬
ಮಹಿಮೋತ್ತಮನೆ ನಿನ್ನ ೩-೩೩
ಮಾತಾಪಿತರು ೭-೮೫

ಮಾತೇ ನೀ ಮಧ್ಯಮಾಂಸ ೬-೪೬
ಮಾಪತಿ ಚುತರ್ಮುಖ ೧-೮
ಮಾಯದಿಂ ಮನೆಮನೆಯ ೫-೮
ಮಾಯಾವಿದೇವಿಯ ೨-೨೨
ಮಾರನೆ ದಿನ ಕುರಿಗಳಂ ೫-೩೦
ಮಾರನೆಯ ದಿನದ ಚಿಪ್ಪಿಗ ೮-೪೬
ಮಾರನೆ ದಿನದ ರಕ್ಕಸಿಯು ೬-೧೮
ಮಾರನೆಯ ದಿನದೊಳಕಮ್ಮ ೮-೨೦
ಮಾಸು ರಕ್ತಗಳೆಂಬ ೩-೪೭
ಮುಕ್ತನಾಗುವಿ ತಚ್ಚಿಸುವಿನಿಂದ ೫-೬
ಮುತ್ತೈದೆರೆಲ್ಲರೊಂದಾಗಿ ೪-೧೯
ಮುದವಿಟ್ಟು ಲಾಲಿಸಿರಿ ೯-೧೬೨
ಮುನಿನಾಥನಾಡಿದ ಭಯದ ೩-೮
ಮೂಢ ಮೆಚ್ಚುತವನ ೯-೧೦೫
ಮೆಲ್ಲ ಮೆಲ್ಲನೆ ೯-೧೧೯
ಮೇದಿನಿವಲಯದಿಂದ ೭-೫೩
ಮೋಹದಿಂ ಸತಿಗೆ ೮-೫೩
ಯತಿವರನ ಶಾಪವಿಂದಿಗೆ ೬-೫೯
ಯತಿವೇಷ ಧರಿಸುತ ೨-೨೭
ಯನಲವರು ನಾಲ್ಕರೊಲ್ಲಂದು ೯-೧೫
ಯನಲು ರೇವಣಸಿದ್ಧ ೯-೯೨
ಯಳೆರನ್ನಪಲ್ಲ ಕೆಂಬಲ್ಲ ೪-೧೪
ಯಕ್ಷಮಿಥನವು ಯತಿಯ ೨-೧೦
ಯುವತಿಮಣಿ ಕೇಳು ೩-೩೨
ರಜತಾದ್ರಿಯೊಳ್ಮೆರೆವ ೭-೩೨
ರಕ್ಕಸರೆ ನಿಮ್ಮಯ ೮-೫೭
ರಕ್ಕಸಿಯೆ ಕೇಳೆನ್ನ ೬-೧೦
ರಮಣ ಧರೆಗುರುಳ ೩-೨೧
ರಾಗದಿಂದವಳ ಶಿರ ೪-೪೨
ರಾಜಗಂಗಾಧರಂ ಬೇರೆಗದಿಂ ೫-೧೧
ರಾಜಬೀದಿಯೊಳು ಸತಿ ೭-೭೫
ರಾಜಭೋಜೇಂದ್ರ ಶಿವಸಿದ್ಧ ೯-೧೨೪
ರೇವಣನ ತನ್ನರೂಪಂ ೨-೪೧
ರೇವಣಾಚಾರ್ಯ ಗಂಗಮ್ಮನ ೪-೩೬
ಲಲಿತದುರ್ಗಾಬಲೆಯ ಮುಖದ ೨-೧೯
ಲೋಕದೋಳ್ ೧-೧೩

ಲೋಕಮೆಲ್ಲವನುದ್ಧರಿಸಿ ೯-೮೨
ಲೋಕೋಪಕಾರಾರ್ಥ ೨-೪೦
ಲಿಂಗದೀಕ್ಷೆಯನಿತ್ತು ೨-೧೬
ಲಿಂಗಧಾರಿಗಳಲ್ಲದನ್ಯ ೨-೨೧
ಲಿಂಗವಿಲ್ಲದ ಭವಿಯು ೯-೧೪೩
ವಟವೃಕ್ಷದಗ್ರದೋಳ್ನೇತಾಡ್ವ ೭-೭೨
ವನಿತೆ ಕೇಳಿಚ್ಚೆಯಿಂ ೪-೫
ವನಿತೆ ಕೇಳ್ಕುಲಹೀನಳಾದ ೬-೩೩
ವರಕಾಳಿದಾಸ ಭವಭೂತಿ ೧-೧೦
ವರಗಿರ್ದ ನಾಗತಿಯು ೪-೭
ವರಚಂದ್ರಗಿರಿ ೭-೨೯
ವರದೇವದೇವ ಶಂಕರ ೪-೧
ವರದೇವಿ ನುಡಿಗೇಳಿ ಸಿದ್ಧ ೯-೧೧
ವರಲಿಂಬಿ ಬಣ್ಣವರೆ ೪-೧೬
ವರಸಿದ್ಧ ಬೀರಮಾಳಿಂಗ ೯-೧೧೭
ವರಮಹಾಬಲನಿತ್ತ ೯-೬೧
ವರಮಹಾಬಲನೆಂಬ ೯-೫೫
ವರಮಾಳ್ದ ಪೇಳ್ದ ೯-೧೫೦
ವರಮುನಿಗಳರುಹಿದ ೬-೯
ವರಸುರ್ವಾಣಧೇನುವಿಗೆ ೭-೭೪
ವರಹಿಮಗಿರಿಯ ೯-೪೭
ವಸುಮತೀ ಜನರಂತೆ ೩-೧೩
ವಾಣಿಫಣಿವೇಣಿ ೧-೫
ವಿರಚಿಸುತ್ತಾ ಸುರಗಿಯಂ ೨-೧೧
ವಿವರಿಸುವೆನಾಲಿಸ್ಕೆ ಗಣಕಂಗೆ ೯-೬೨
ವೀರಮಾಳಿಂಗ ೯-೧೨೫
ವೀರಮಾಳಿಂಗನಚ್ಚರಿಗೊಂಡು ೯-೧೧೧
ವೀರಮಾಳಿಂಗನೈತರುವದಂ ೯-೧೩೦
ವೇಶ್ಯಿಯಳಿಗುಭಯ ೨-೨೯
ಶಿವನ ದಯದಿಂದಲಾ ೭-೬೪
ಶಿವಪದ್ಮ ತನ್ನ ೬-೨
ಶಿವಪದ್ಮನಾಗ್ರಜರಂ ೭-೪೮
ಶಿವಸಿದ್ಧಬೀರನೆಂಬ ೭-೫೫
ಶುಭ್ರಾಂಗ ಸಚ್ಚಿದಾನಂತ ೫-೧
ಶ್ರೀ ಕನಕಗಿರಿಯೊಳನೇಕ ೫-೧೩
ಶ್ರೀಕಂಠಶಂಕರಪಿನಾಕೆ ೨-೧

ಶ್ರೀ ಗಿರೀಶನ ಫಾಲನಯದಿಂ ೧-೯
ಶ್ರೀ ವಾಗ್ವೀನುತೆಯ ೧-೧
ಸ್ಯಾತಕ್ಕೆ ಕುಂದನವನಿಟ್ಟಂಎ ೪-೪೯
ಸ್ನಾನವ ಮಾಡಿ ರೇವಣಸಿದ್ಧ ೪-೪೮
ಸ್ಮರಿಸಿದಳು ಸದ್ಗುರುವಿನಂಘ್ರಿ ೪-೪೪
ಸ್ವರ್ಗದಲಿ ವಾಸವಾಗಿರ್ಪ ೯-೨
ಸ್ವರ್ಗಪಿತಸುತಪಾದ ೯-೧
ಸ್ವಮತದಾಚಾರ ಬಿಟ್ಟನ್ಯ ೯-೭೪
ಸಚ್ಚಿದಾನಂದ ಸಿದ್ದೇಂದ್ರ ೨-೪೭
ಸಕಲ ಕುರಿಗಳ ೬-೯
ಸಡಗರದಿ ಅಕ್ಕಮ್ಮನಂದ ೮-೧೩
ಸತಿ ಪೇಳಿದಳು ತನ್ನ ೪-೯
ಸತಿ ಕೇಳಿ ಸಂತೋಷಯುಕ್ತ ೭-೪೩
ಸತಿಯೇ ಕೇಳ ಜಾಬಾಲಮನಿ ೫-೨೭
ಸತಿ ಶಾಂಭವಿಯು ೬-೮೪
ಸತಿನುಡಿಗೆ ಶಂಕರಂ ೯-೪೭
ಸತ್ತ ಕುರಿಯಂ ತಮ್ಮ ೮-೧೦
ಸರಸದಿಂ ತನ್ನನುಜ ೯-೧೨
ಸರಸಿಜಾಕ್ಷನು ತರತರನೆ ೬-೨೬
ಸಸಿರೇಖೆದುಟಿ ತೊಂಡೆವಣ್ಣದುಟಿ ೪-೧೩
ಸಾಮಜಾನನ ವಿಘ್ನರಾಜ ೧-೩
ಸ್ವಾಮಿ ಗೋರಖನಾತ ೯-೨೧
ಸಿತಕಂಠನೇ ತಮ್ಮ ೩-೧೨
ಸಿದ್ಧಗುರುವರನವನ ೨-೧೪
ಸಿದ್ಧಬೀರನ ಶಿರದೊಳಭವ ೬-೮೯
ಸಿರಿಬಾಲೆನೆನ್ನ ಜವ್ವನವ ೭-೪೯
ಸಿದ್ಧವರಗುರು ಪೇಳ್ದ ೩-೨೭
ಸಿದ್ಧಬೀರನು ಪೇಳ್ದ ೮-೫೦
ಸಿದ್ಧರೇವಣನ ಪಾದ ಸ್ಮರಿಸುತ್ತ ೫-೨
ಸುತನ ಸಲ್ಲೀಲೆಗಳ ೪-೨೧
ಸುತನೆ ಕೇಳಮಗೆ ೯-೬೮
ಸುತನೆ ಕೇಳ್ ೯-೩೪
ಸುಮಶರಹರಂ ಪೇಳ್ದ ೯-೫೩
ಸುರಪಾವಕ ಮುಖ್ಯ ೨-೨
ಸುರಮುನಿಗಳೆದ್ದು ೬-೫೧
ಸುರಮುನಿಗಳೊಂದಾಗಿ ೯-೪೨

ಸುರರ ಪುಷ್ಪದ ಮಳೆಯ ೩-೪೪
ಸುರರಿದಂ ಕಂಡೊಡೆಮ್ಮನು ೭-೮೨
ಸೋಮರಾಯನ ಮಂಚಿಗೆಯು ೯-೧೪
ಸೋಮನೊ ಲಂಕಾಪುರೀಶನಂ ೬-೨೨
ಸಂಗನಿಗೆ ಜಗಜಂಪು ೯-೧೭
ಹರಿಕಪಟಂ ೭-೬೭
ಹರಿಕರಡಿ ತನುಜೆಯಂ ೬-೩೪
ಹರನಯಡಬಲದಿರ್ದ ೩-೩
ಹರನಾಜ್ಞೆಯಂತೆ ಪ್ರಮಥರು ೯-೩
ಹರನಾಜ್ಞೆಯಂತೆ ಬೀರೇಶ್ವರಂ ೯-೮೫
ಹರನು ಚನ್ನಯ್ಯ ೭-೭೯
ಹರನು ಶ್ರೀಶೈಲದಿಂ ೯-೧೦೨
ಹರನೇ ಭೂತಲಮಧ್ಯ ೯-೪
ಹರಪದ್ಮನತಿ ೭-೫೨
ಹರಪದ್ಮ ಬಾವನ್ನ ೭-೨
ಹರಪದ್ಮನತಿ ಭರದಿ ೯-೮೦
ಹರನಿಗಂಬರವಿತ್ತ ೯-೧೩೬
ಹರಭಕ್ತನಾದರೀ ಸತ್ತ ೯-೧೪೫
ಹರಿಣಾಕ್ಷಿ ಹರುಷದಿಂ ೬-೪೫
ಹರಿಯಿವನ ರೂಪರೇಖಂಗಳ ೮-೫೪
ಹಸ್ತಿಚರ್ಮಾಂಬರಮಂ ೭-೪೪
ಹರುಷದಿಂ ಗೃಹಕೃತ್ಯಕಾರ್ಯ ೫-೩೭
ಹಾಲಭಾವಿಯ ಬಿಟ್ಟು ೯-೧೧೫
ಹಿರಿಕುರುಬ ಹೇಮಣ್ಣ ೮-೬೧
ಹುತ್ತಿನೊಳಗಿರ್ಪ ಬೀರೇಶ ೮-೨೩
ಹೇ ಕಾಂತ ಮಹಾಬಂಧ ೮-೪೯
ಹೇಮಣ್ಣನಿತ್ತ ಗೋವಣ್ಣನಂ ೮-೨೯
ಹೆಂಡ ದೇವಮ್ಮನಿಗೆ ೯-೧೧೦

## ೨. ನಾಮಸೂಚಿ

**ಸ್ಥಳನಾಮ**

ಕಾಂಚಿಪುರ ೨-೮
ಕೋಣನೂರು ೮-೩೧
ಕೈಲಾಸಪುರ ೯-೧೬೧

ಗೋಲಗೇರಿ ೮-೩೯
ಕೊಲ್ಲಿಪಾಕಿ ೨-೫
ಚಂದನಗೇರಿ ೯-೧೫೦
ಚೋಳದೇಶ ೨-೫೫
ಜಲಮಾಯಿಕೆರೆ ೮-೨೬
ಜಾಗ್ರತಾಪುರ ೨-೨೫
ಪಾಂಡ್ರಕೋಟಿಪುರ ೯-೧೨೬
ಬಿಲ್ವಾಡ ೮-೨೩
ಮಾಸನೂರಿನ ೨-೩೪
ಮಂಗಲವಾಡ ೨-೧೮
ಮುಂಡಗನೂರು ೮-೩೧
ರಸ್ತಾಪುರ ೧-೧೧
ರೇವಾಪಟ್ಟಣ ೯-೨೭
ಲಕನಾಪುರ ೧-೧೧
ವಾರಣಾಡಿ ೭-೩೧
ಶ್ರೀಶೈಲ ೮-೯೮
ಸರವೂರು ೮-೩೮
ಸೊನ್ನಲಾಪುರ ೨-೪೩
ಹಾಲ್ಬಾವಿ ೮-೧೦೮
ಹಾವಿನಹಾಳು ೨-೪೧
ಹಾಲಹೇವಲಿಹಳ್ಳ ೭-೮೫
ಹೊವ್ವಿನೂರು ೮-೧೧೨

**ವ್ಯಕ್ತಿನಾಮಗಳು**

ಅಕ್ಕಮ್ಮ ೭-೮೭
ಅಮ್ಮವ್ವೆ ೯-೧೩೯
ಆದಿಗೊಂಡ ೩-೧೬
ಕಲಿಕೇತ ಬ್ರಹ್ಮರ್ಯ ೯-೧೪೨
ಕಲ್ಲಯ್ಯ ೨-೪೨
ಕಾಳಿದಾಸ ೧-೧೦
ಕಿನ್ನರಿಬ್ರಹ್ಮಯ್ಯ ೯-೧೪೨
ಕುಂಬಾರಗುಂಡಯ್ಯ ೯-೧೩೬
ಕೆರೆಯ ಪದ್ಮರಸ ೧-೧೦
ಗೋರಕನಾಥ ೮-೧೯
ಗೋವಣ್ಣ ೮-೨೯
ಚಂಡೇಶ ೮-೬೩

ಚಾಮರಸ ೧-೧೦

ಚುಮಲಾದೇವಿ ೬-೧೪

ಚುಂಚಲೆ ೩-೧೭

ಜಕ್ಕಪ್ಪ ೮-೨೫

ಜಗಮುತ್ತಯ್ಯ ೨-೧೨

ಜಡೆಸಿದ್ಧ ೯-೧೨೯

ಜಾಯ್ಗೊಂಡ ೩-೧೯

ಜಿಂಕಾದೇವಿ ೩-೩೩

ತುಕ್ಕಪ್ಪ ೯-೧೧

ದೇವಮ್ಮ ೯-೧೦೯

ನವನಾಥ ೮-೩೮

ನಾಗರಾಣಿ ೨-೨೩

ನಿಜಗುಣಾರಾಧ್ಯ ೧-೧೦

ಪದ್ಮಣ್ಣ ೮-೧೩

ಪಾಯ್ಗೊಂಡ ೩-೧೯

ಬಸವ ೧-೨

ಬಿಜ್ಜಳ ೨-೩೦

ಬಿಲ್ಲಾಳಸೋಮ ೭-೫೬

ಭೀಮಾ ೧-೧೧

ಬುಳ್ಳಯ್ಯ ೮-೬೨

ಭೂತಾಳಸಿದ್ಧ ೯-೧೧೯

ಮಡಿವಾಳ ಮಾಚಯ್ಯ ೯-೧೪೨

ಮರಗೊಂಡ ೩-೧೯

ಮಲ್ಲಣ್ಣ ೧-೧೦

ಮಾದಿಗರ ಚನ್ನಯ್ಯ ೭-೭೬

ಮಾಯಕ್ಕ ೨-೨೧

ಮುದ್ದಣ್ಣ ೮-೬೨

ಮುದ್ದುಗೊಂಡ ೧-೧೭

ಮುನಿನಾಥ ೨-೨೫

ಮೊಗ್ಗೆಯ ಮಾಯಿದೇವ ೧-೧೦

ಮೋಳಿಗಿ ಮಾರಯ್ಯ ೯-೧೪೨

ರಮಾಬಾಯಿ ೮-೨೨

ರಾಘವಾಂಕ ೧-೧೦

ರಾಮನಾಥ ೨-೭

ರೇವಣಸಿದ್ಧ ೨-೬

ರುದ್ರಮುನಿ ೯-೧೦೬

ಲಿಂಗಬಸಪ್ಪ ಲ-೧೪

ವಡೆಹುಲ್ಲು ಬಂಕಯ್ಯ ೯-೧೪೨

ವೀರಮಾಳಿಂಗ ೭-೫೬

ವೀರಗೊಲ್ಲಾಳ ೯-೩೭

ಶಂಕರಾಚಾರ್ಯ ೧-೧೦

ಶಾಂತಮುತ್ತಯ್ಯ ೨-೧೩

ಶಿವಪದ್ಮ ೩-೩೨

ಸಂಗನಬಸವ ಲ೧೪

ಸಿದ್ಧರಾಮೇಶ್ವರ ೧-೯

ಸಿದ್ಧೇಂದ್ರ ೨-೪೨

ಸುಗ್ಗವ್ವೆ ೧-೯

ಸುರಾವತಿ ೭-೩೦

ಸುಟ್ಟಿಮುತ್ತಯ್ಯ ೨-೧೨

ಸೋಮರಾಯ ಲ-೧೭

ಷಣ್ಮುಖಿ ೧-೯

ಹನುಮಂತರೆಡ್ಡಿ ೧-೧೧

ಹೇಮಣ್ಣ ಲ-೨೭